# ಸ್ವಾತಂತ್ರ್ಯ ಚಿಂತನೆ



ಸಂಪಾದಕ
ಮೋಹನ ನಾಗಮ್ಮನವರ

ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

# ಸ್ವಾತಂತ್ರ್ಯ ಚಿಂತನೆ

(ಆಯ್ದ ಬರಹಗಳು)

ಸಂಪಾದಕ

ಆರ್. ಮೋಹನ ನಾಗಮ್ಮನವರ

ಕರ್ನಾಟಕ ವಿದ್ಯಾವರ್ಧಕ ಸಂಘ

ಧಾರವಾಡ

ಸ್ವಾತಂತ್ರ್ಯ ಚಿಂತನೆ (ಆಯ್ದ ಬರಹಗಳು)

ಸಂಪಾದಕ : ಆರ್. ಮೋಹನ ನಾಗಮ್ಮನವರ
ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

ಆರ್ಥಿಕ ನೆರವು : ಜಿಲ್ಲಾ ಪಂಚಾಯತ್, ಧಾರವಾಡ

ಬೆಲೆ : ರೂ. ೫೦/-

Swatantrya Chintane (Selected Articles)

A Kannada Book Edited by :
R. Mohana Nagammanavar

Published in 2000 by :
Prof. B. V. Gunjetti
Secretary, Karnataka Vidyavardhaka Sangha, Dharwad-580 001

© Karnataka Vidyavardhaka Sangha, Dharwad

Pages : 12 +142

Copies : 1000

Price : **Rs. 50/-**

Printed at :
Manohar Mudranalaya
Dharwad-580 001

೧೪ ಜನವರಿ ೨೦೦೦ ದಂದು

೮೦ ನೇ ವರ್ಷಕ್ಕೆ ಕಾಲಿಡುತ್ತಿರುವ

ಕರ್ನಾಟಕದ ಸಾಕ್ಷೀ ಪ್ರಜ್ಞೆ

ನಾಡೋಜ ಡಾ. ಪಾಟೀಲ ಪುಟ್ಟಪ್ಪ ನವರಿಗೆ

ಪ್ರೀತಿ, ಅಭಿಮಾನಗಳೊಂದಿಗೆ

# ಮುನ್ನುಡಿ

ಭಾರತ ಸ್ವಾತಂತ್ರ್ಯ ಸುವರ್ಣ ಮಹೋತ್ಸವ ಬಂದಿತು. ಬಂದಂತೆಯೇ ಸರಿದೂ ಹೋಯಿತು. ಸ್ವಾತಂತ್ರ್ಯದ ಕುರಿತು ಸಿನಿಕತೆಯಿಂದ ಮಾತನಾಡುವವರಿಗೆ ಅದು ರೋಮಾಂಚನವನ್ನೇನೂ ಹುಟ್ಟಿಸಲಿಲ್ಲ. 'ಸ್ವಾತಂತ್ರ್ಯದ............ ವರ್ಷಗಳ ನಂತರವೂ ಈ ಸಮಸ್ಯೆ ಹಾಗೇ ಉಳಿದಿದೆ' ಎಂದು ಭಾಷಣ ಮಾಡುವವರ ಪಾಲಿಗೆ ಮಾತ್ರ ಬಿಡಿ ವರ್ಷಗಳನ್ನು ಉಚ್ಚರಿಸುವ ಬದಲಿಗೆ 'ಸ್ವಾತಂತ್ರ್ಯದ ಅರ್ಧ ಶತಮಾನದ ನಂತರವೂ....' ಎನ್ನಲು ಕರಾರುವಾಕ್ಕಾದ ವರ್ಷವಾಯಿತು. ಅಳಿದುಳಿದವರು ಬ್ರಿಟಿಷ್ ಕಾಲದ ಸೊಗಸನ್ನೇ ನೆನಪಿಸಿಕೊಂಡರೆ ಯಥಾಪ್ರಕಾರದ ಸ್ವಾತಂತ್ರ್ಯಯೋಧರು ಸ್ವಾತಂತ್ರ್ಯಗಾಥೆಯ ಪುರವಣಿ ಬಿಚ್ಚಿಕೊಳ್ಳಲು ತಕ್ಕ ಸಮಯವಾಯಿತು. ಸ್ವಾತಂತ್ರ್ಯದ ಸುವರ್ಣಮಹೋತ್ಸವ ಎನ್ನುವುದು ಕೇವಲ ಸರ್ಕಾರದ ಕಾರ್ಯಕ್ರಮವಾಗಿ ನಿರೀಕ್ಷಿತ ಪ್ರಮಾಣದಲ್ಲಿ ಸಾರ್ವಜನಿಕರಲ್ಲಿ ಸಂವೇದನೆಗಳೇನನ್ನೂ ಹುಟ್ಟಿಸಲಿಲ್ಲ.

ಬದುಕುವುದೇ ಬಲು ಪ್ರಯಾಸದ ಮಾತಾಗಿರುವ ವರ್ತಮಾನದಲ್ಲಿ ಹಿಡಿಜೀವ ಹಿಡಿದುಕೊಂಡು ಬದುಕನ್ನು ಬದುಕಿಸಿಕೊಳ್ಳುವುದೇ ಬಹುಮುಖ್ಯ ಸಂಗತಿಯಾದ ಭಾರತದ ಬಡ ಬೋರೇಗೌಡನೆಂದೂ ಸುವರ್ಣ ಸ್ವಾತಂತ್ರ್ಯದೆಡೆಗೆ ತಲೆಹಾಕಲೇ ಇಲ್ಲ. ಇತಿಹಾಸದ ಪುಟಗಳುದ್ದಕ್ಕೂ ಆಯಾ ಕಾಲದ ರಾಜಸತ್ತೆಯ ನೋಡುತ್ತ ಬದಲಾವಣೆಗಳಿಗೆ ಬದುಕನ್ನೊಡ್ಡಿಕೊಳ್ಳುತ್ತ ಕೇವಲ ಬದುಕುವುದೇ ಮಹತ್ವದ ಸಂಗತಿಯಾಗಿದ್ದು, ಬಡ ಭಾರತೀಯ ಭಾರತೀಯ ಸ್ವಾತಂತ್ರ್ಯ ಹೋರಾಟವೊಂದನ್ನು ಹೊರತುಪಡಿಸಿದರೆ ಮತ್ತೆಲ್ಲಿಯೂ ಸಮಗ್ರವಾಗಿ ಪರಾಕ್ರಮಿಯಂತೆ ಕಾಣಿಸಿಕೊಳ್ಳಲೇ ಇಲ್ಲ.

'ಯಾರ ರಾಜ್ಯ ಬಂದರೇನು ರಾಗಿ ಬೀಸುವುದು ತಪ್ಪೀತೇ' ಎಂಬ ಉದಾಸೀನವೋ, 'ತನ್ನ ಪಾಲಿಗೊದಗಿದ್ದು ದೈವ ನಿರ್ಣಿತ' ಎಂಬ ಕರ್ಮಸಿದ್ಧಾಂತದ ಮೇಲಿನ ಅಚಲ ನಂಬುಗೆಯೋ ಒಟ್ಟಿನಲ್ಲಿ ಸದಾಕಾಲ ನಿರ್ಲಿಪ್ತ ನೋಟಕ್ಕಂಟಿಕೊಂಡು ಉಳಿದು ಬಂದ ಅವನಿಂದ ತಾನೇ ಏನು ನಿರೀಕ್ಷಿಸಬಹುದು ? ವೇಷ, ಭಾಷೆ, ಪ್ರಾಂತ, ಪಂಗಡ, ಜಾತಿ, ಧರ್ಮಗಳ ಹೆಸರಿನಡಿ ಹಂಚಿಹೋದ ಭಾರತೀಯ ಚೈತನ್ಯ

ಹೊರಹೊಮ್ಮಿ ಗರ್ಜಿಸಿದ್ದೇ ಇಲ್ಲ. ವೈಚಾರಿಕತೆಯ ಹೆಜ್ಜೆಗಳು ಮೂಡತೊಡಗಿದ ಪ್ರಾರಂಭ ಕಾಲದಿಂದ ಇಂದಿನವರೆಗೂ ಎಲ್ಲ ಪ್ರಗತಿಶೀಲತೆಯ ಪ್ರಯತ್ನಗಳು ನಿರೀಕ್ಷಿತ ಪರಿಣಾಮ ಸಾಧಿಸಲೇ ಇಲ್ಲ. ಆದಾಗ್ಯೂ ಆಗಿರುವ ಬದಲಾವಣೆಗಳೆಲ್ಲ ಈ ವೈಚಾರಿಕರ ಪ್ರಯತ್ನಗಳೇ ಆಗಿವೆ.

ಪ್ರಾಂತವೊಂದರಲ್ಲಿ ಒಪ್ಪಿತ ಸೂತ್ರ, ಸಿದ್ಧಾಂತಗಳು ಮತ್ತೊಂದು ಭಾಗದಲ್ಲಿ ತಿರಸ್ಕಾರಕ್ಕೀಡಾಗುತ್ತ. ತಿರಸ್ಕೃತ ನೆಲದಲ್ಲಿ ಅದರ ವಿರುದ್ಧ ಸೂತ್ರಗಳೇ ಒಪ್ಪಿತವಾಗುತ್ತ ಬಂದ ಈ ದೇಶದ ವಿಶಾಲತೆಯೇ ಅದರ ಅಖಂಡತೆಗೆ ಮಾರಕವಾಗುತ್ತ ಬಂದಾಗಲೂ ನಾವು ವಾಸ್ತವವನ್ನೆದುರಿಸದೆ ಐಕ್ಯದ ಭ್ರಮೆಗಳನ್ನೇ ಹಾಡಿಕೊಳ್ಳುತ್ತ ಬಂದಿದ್ದೇವೆ. 'ಪರಕೀಯರು' ಎಂಬ ವಾದವೇ ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಸ್ವದೇಶೀಯರನ್ನು ಒಂದುಗೂಡಿಸಿತ್ತು. ಅದಕ್ಕೆಂದೇ ಬಹುಶಃ ಯುದ್ಧ ಕಾಲದಲ್ಲಿ ಕಾಣುವ ಭಾರತೀಯತೆ ಮತ್ತುಳಿದ ಕಾಲದಲ್ಲಿ ಕಾಣುವುದೇ ಇಲ್ಲ. ಈ ನಿಟ್ಟಿನಲ್ಲಿ ಸ್ವಾತಂತ್ರ್ಯದ ಬಗ್ಗೆ ಎಲ್ಲ ವರ್ಗದ ಜನತೆಯ ಅಭಿಪ್ರಾಯವೇನೆಂದು ತಿಳಿಯುವ ಹಾಗೂ ಎಲ್ಲ ಜನತೆಯ ಅನಿಸಿಕೆಗಳಿಗೊಂದು ವೇದಿಕೆ ಕಲ್ಪಿಸುವ ಪ್ರಯತ್ನವಾಗಿ ಪತ್ರಿಕೆಗಳ ಮೂಲಕ ಅಭಿಪ್ರಾಯ ಶೇಖರಿಸಲಾಯಿತು.

ಸಂಗ್ರಹಿಸಿದ ಅಭಿಪ್ರಾಯಗಳಲ್ಲಿ ಮೂಲ ಆಶಯಕ್ಕೆ ಧಕ್ಕೆ ಬಾರದಂತೆ ಆಯ್ದು ಸಂಕಲಿಸಿ 'ಸ್ವಾತಂತ್ರ್ಯ ಚಿಂತನೆ' ಎಂಬ ಕಿರುಹೊತ್ತಿಗೆಯನ್ನು ನಿಮ್ಮ ಕೈಗಿಡುತ್ತಿದ್ದೇವೆ. ವರ್ಷ ಮೊದಲೇ ಪ್ರಕಟಗೊಳ್ಳಬೇಕಿದ್ದ ಈ ಪುಸ್ತಕ ಅನಿವಾರ್ಯ ಕಾರಣಗಳಿಂದ ಪ್ರಕಟಣೆಯಲ್ಲಿ ವಿಳಂಬ ಕಂಡದ್ದಕ್ಕೆ ಕ್ಷಮೆ ಇರಲಿ. ಇಲ್ಲಿನ ಪ್ರಕಟಿತ ಬರಹಗಳು ಆಯಾ ಲೇಖಕನ ಸ್ವಂತದ ಅಭಿಪ್ರಾಯಗಳಾಗಿರುತ್ತವೆ. ಸಂಸ್ಥೆಯೊಂದರ ಪರವಾಗಿ ಪುಸ್ತಕ ಸಂಪಾದಿಸಹೊರಟಾಗ ಅರಿವಾಗುವ ಮಿತಿ – ವಿಶೇಷವಾಗಿ ದೇಶ, ಸ್ವಾತಂತ್ರ್ಯದಂತಹ ವಿಷಯಗಳನ್ನು ವಿಶ್ಲೇಷಿಸುವಾಗಿನ ಸೂಕ್ಷ್ಮತೆಗಳ ಎಚ್ಚರದ ನಡುವೆಯೂ ವರ್ತಮಾನದ ತೀವ್ರತೆಯನ್ನು ಪ್ರಕಟಿಸುವ, ಪ್ರಚುರಪಡಿಸುವ ಪ್ರಯತ್ನವನ್ನಂತೂ ಮಾಡಲಾಗಿದೆ. ಹಾಗೆಯೇ ತೀರ ಬೌದ್ಧಿಕ ಕಸರತ್ತಾಗದಂತೆಯೂ ನೋಡಲಾಗಿದೆ. ಬೌದ್ಧಿಕ ಕಸರತ್ತಿಗೆಂದು ವಿಷಯವೊದಗಿಸಲಾಗಿದೆ.

ಇಲ್ಲಿನ ಬರಹಗಳಲ್ಲಿ ಸಿನಿಕತೆ ಇದೆ. ದುರುಪಯೋಗವಾದ ಸ್ವಾತಂತ್ರ್ಯದ ಬಗ್ಗೆ ಆಕ್ರೋಶವಿದೆ. ಆದದ್ದಾಯಿತು ಮುಂದೇನು ಎಂಬ ಬಗ್ಗೆ ಕೆಲವರು ಹೇಳುವ ನಿಖರ ಪ್ರಗತಿ ಸೂತ್ರಗಳಿವೆ. ಎಲ್ಲ ಬರಹಗಳಲ್ಲಿ ರಾಜಕಾರಣಿಗಳ ಬಗೆಗೆ ಒಕ್ಕೊರಲಿನ ಅಸಹನೆ ಇದೆ. ಸ್ವಾತಂತ್ರ್ಯದ ಕುರಿತು ಸಮಕಾಲೀನರ ಅನಿಸಿಕೆಗಳನ್ನು ಇಲ್ಲಿ ಪ್ರಕಟಿಸುವುದಷ್ಟೇ ನನ್ನ ಆಶಯ. ಇಲ್ಲಿರುವ ಬರಹಗಳ ಮೇಲೆ ಬರೆದವರು ನಂಬಿಕೊಂಡ ಸಿದ್ಧಾಂತಗಳ ಛಾಯೆಯೂ ಇದೆ. ಇಲ್ಲಿ ಇಂತಹುದೇ ಸಿದ್ಧಾಂತಕ್ಕೆ, ಆಲೋಚನಾ ಕ್ರಮಕ್ಕೆ ಜೋತುಬಿದ್ದವರ ಬರಹಗಳನ್ನಷ್ಟೇ ಪ್ರಕಟಿಸಬೇಕೆಂಬುದು

ನನ್ನ ಆಶಯವಲ್ಲ. ಬರೆದವರು ನಂಬಿಕೊಂಡ ಸಿದ್ಧಾಂತ, ಅವರನ್ನು ಪ್ರಭಾವಿತಗೊಳಿಸಿದ ವೈಚಾರಿಕತೆ ಹೇಗೆಯೇ ಪ್ರೇರೇಪಿಸಲಿ, ಅದನ್ನೆಲ್ಲ ಈ ಪುಸ್ತಕ ಕೈಗೆತ್ತಿಕೊಂಡ ಪಂಡಿತರು ಪರಾಮರ್ಶಿಸಲಿ ಎಂಬುದೇ ಮುಖ್ಯ ಉದ್ದೇಶ. ಸ್ವಾತಂತ್ರ್ಯದ ಕುರಿತು ಸಾರ್ವಜನಿಕ ಅನಿಸಿಕೆಗಳಿಗೆ ಕೈಗನ್ನಡಿ ಹಿಡಿದು ಅಭಿಪ್ರಾಯ ಸಂಗ್ರಹಣೆಯ ದಿಕ್ಕಿನಲ್ಲಿ ಈ ಪುಸ್ತಕ ಕಿರು ಪ್ರಯತ್ನ.

ಹಿರಿಯ ಸ್ವಾತಂತ್ರ್ಯಯೋಧ ಮಹಾತ್ಮಾ ಗಾಂಧೀಜಿಯವರ ಒಡನಾಡಿ ನರಸಿಂಹ ದಾಬಡೆ ಸ್ವಾತಂತ್ರ್ಯ ಹೋರಾಟದಲ್ಲಿ ನೇರವಾಗಿ ಭಾಗಿಯಾದವರು, ಮುಂದಾಳತ್ವ ವಹಿಸಿದವರು. ಸುದೀರ್ಘ ಅವಧಿಯ ಜೈಲು ಶಿಕ್ಷೆಯನ್ನು ಅನುಭವಿಸಿದವರು. ಸ್ವಾತಂತ್ರ್ಯಾನಂತರದ ಬಗೆಗೆ ಅನೇಕ ಕನಸುಗಳನ್ನೂ ಕಂಡವರು. ಆದರೆ, ಕಣ್ಣೆದುರಿನ ಅರ್ಧಶತಮಾನದ ಸ್ವಾತಂತ್ರ್ಯದ ಬಗ್ಗೆ ಅವರಿಗೆ ಭ್ರಮನಿರಸನವಾಗಿದೆ. ಅವರ ಬರಹದುದ್ದಕ್ಕೂ ಆದರ್ಶ ರಾಜ್ಯವೊಂದರ ಕಲ್ಪನೆ ಹುಸಿಯಾಗಿದ್ದು ತಟ್ಟುತ್ತದೆ.

ಸ್ವಾತಂತ್ರ್ಯ ಹೋರಾಟವನ್ನೇ ನೋಡದ ಹೊಸ ತಲೆಮಾರಿನ ಪ್ರಕಾಶ ಪತ್ತಾರ ಹಿಂದಿನ ತಪ್ಪುಗಳನ್ನು ತಿದ್ದಿಕೊಂಡು ಪುನಃ ಜಾಗೃತರಾಗುವ ದೇಶ ಕಟ್ಟುವ ಮಾತನಾಡಿ, ನಿರಾಶೆಯ ನಡುವೆಯೂ ಆಶಾವಾದಿಯಾಗಿ ಕಾಣುತ್ತಾರೆ. ಹಿರಿಯ ಸಾಹಿತಿ ಎನ್ಕೆ ತೋರಿಕೆಯಲ್ಲಿ ಮೃದು ಮಾತಿನವರು. ಅಂಥ ಮೃದು ಸ್ವಭಾವಿ ಕೂಡ ಸ್ವಾತಂತ್ರ್ಯದ ಕುರಿತು ವಿಶ್ಲೇಷಿಸುವಾಗ ಕಾಣುವ ಆಕ್ರೋಶ, ಸ್ಫೋಟಗೊಳ್ಳುವ ರೀತಿ, ಸಾತ್ವಿಕ ಆಕ್ರೋಶದ ಪರಿಚಯ ಜಡಗಟ್ಟಿದಂತೆ ಇದ್ದುದರಲ್ಲಿ ಸಂಚಲನೆ ಮೂಡಿಸುತ್ತದೆ.

ಲೋಕಶಿಕ್ಷಣ ಟ್ರಸ್ಟಿನ ಸದಸ್ಯ ಜಿ. ಎಂ. ಪಾಟೀಲ 'ಗಾಂಧೀಜಿಯವರ ಸ್ವದೇಶಿ ಹಾಗೂ ಸ್ವಾವಲಂಬನೆ ಗುರಿಯಾಗಬೇಕು. ಭಿಕ್ಷಾಪಾತ್ರೆ ಹಿಡಿದು ನಾವು ಶಸ್ತ್ರಾಗಾರದಲ್ಲಿ ಅಣುಬಾಂಬ್ ಇಟ್ಟುಕೊಂಡ ಮಾತ್ರಕ್ಕೆ ಸಮಸ್ಯೆ ಪರಿಹಾರವಾಗಲಾರದು. ಆತ್ಮರಕ್ಷಣೆ ಆದ್ಯ ಕರ್ತವ್ಯ ನಿಜ. ಆದರೆ ಅದು ಅತಿರೇಕಕ್ಕೆ ಮುಟ್ಟಿದರೆ ಭಾರತವಷ್ಟೇ ಅಲ್ಲ ನೆರೆಹೊರೆಯ ರಾಷ್ಟ್ರಗಳೂ ನಾಶವಾಗುತ್ತವೆ. ಆರ್ಥಿಕ ಸ್ವಾತಂತ್ರ್ಯವಿರದಿದ್ದರೆ, ಕೇವಲ ರಾಜಕೀಯ ಸ್ವಾತಂತ್ರ್ಯಕ್ಕೆ ಬೆಲೆ ಇಲ್ಲ. ಅಣ್ವಸ್ತ್ರಗಳ ಪೈಪೋಟಿ ಆರಂಭವಾದರೆ ಆರ್ಥಿಕ ಅಭಿವೃದ್ಧಿ ಕನಸಿನ ಮಾತಾಗುತ್ತದೆ. ಯಾವ ಬೆಲೆ ತೆತ್ತಾದರೂ ಮತೀಯ ಸಾಮರಸ್ಯ ಮತ್ತು ನೆರೆಹೊರೆಯವರೊಡನೆ ಮಧುರ ಬಾಂಧವ್ಯ ಕಾಯ್ದುಕೊಳ್ಳಬೇಕಿದೆ' ಎಂದು ಹೇಳುತ್ತಾರೆ. ಈ ಮಾತಿನ ಜಾಡಿನಲ್ಲಿಯೇ ಮುಂದುವರೆದರೆ ನಮ್ಮ ಪೋಖ್ರಾನ್ ಅಣುಪರೀಕ್ಷೆ ನಂತರದ ಕಾರ್ಗಿಲ್ ಯುದ್ಧಗಳು ನೆನಪಾಗುತ್ತವೆ.

ಭಾರತದಂತಹ ರಾಷ್ಟ್ರದಲ್ಲಿ ಹಳ್ಳಿಯ ಎಷ್ಟೋ ಮಹಿಳೆಯರು, ಕೆಲವು ಪಟ್ಟಣವಾಸಿ ಹಿಂದುಳಿದ ಜನಾಂಗದ ಸ್ತ್ರೀಯರೂ ಸ್ವಾತಂತ್ರ್ಯದ ಪರಿಕಲ್ಪನೆಯೇ ಇಲ್ಲದೆ ಅಮಾಯಕರಾಗಿರುವುದು ಸರ್ಕಾರ, ಸಾಕ್ಷರತೆಗಳೆಂದರೇನೆಂದೂ ತಿಳಿಯದ

ಸ್ಥಿತಿ ಇದೆ. ಆ ದಿಕ್ಕಿನಲ್ಲಿ ಪ್ರಜ್ಞೆ ಮೂಡಿಸುವ ಕಾರ್ಯ ನಡೆಯಬೇಕಿದೆ ಎಂದು ಡಿ. ಬಿ. ರಜಿಯಾ ಹೇಳುತ್ತಾರೆ. ಡಾ. ಎಸ್. ವ್ಹಿ. ಪ್ರಭಾವತಿ 'ಈ ದೇಶದಲ್ಲಿ ಮೊದಲು ಧರ್ಮಕ್ಕಿದ್ದ ಸ್ಥಾನವು ಕ್ರಮೇಣ ರಾಜಕೀಯಕ್ಕೆ ಹೋಗಿ ಇದೀಗ ವಾಣಿಜ್ಯವು ಆ ಸ್ಥಾನವನ್ನು ಆಕ್ರಮಿಸಿದೆ. ಈ ವಾಣಿಜ್ಯ ಪ್ರವಾಹದಲ್ಲಿ ನಮ್ಮ ಮೌಲ್ಯಗಳೆಲ್ಲ ಕೊಚ್ಚಿ ಹೋಗಿ ನಾವು ಪೂರ್ತಿಯಾಗಿ ಮುಳುಗುವ ಮೊದಲು ನಮ್ಮ ಆತ್ಮಶಕ್ತಿ ಎಚ್ಚರವಾಗಲಾರದೆ' ಎಂದು ಪರಿತಪಿಸುತ್ತಾರೆ.

'೫೦ ವರ್ಷಗಳಿಂದ ಹದಗೆಡುತ್ತ ಬಂದಿರುವ ಪರಿಸ್ಥಿತಿ ಧಿಡೀರನೇ ಸುಧಾರಿಸಬೇಕೆಂದು ನಿರೀಕ್ಷಿಸುವದು ಸಾಧ್ಯವಿಲ್ಲ. ಸಾಧುವೂ ಅಲ್ಲ. ಪ್ರಾಮಾಣಿಕ ಮನಸ್ಸಿನಿಂದ ನಾವೇ ಈ ಪರಿಸ್ಥಿತಿ ಸುಧಾರಿಸುವ ನಿಟ್ಟಿನಲ್ಲಿ ಶ್ರಮಿಸಿದರೆ ಸ್ವಾತಂತ್ರ್ಯದ ವಜ್ರಮಹೋತ್ಸವದ ಹೊತ್ತಿಗಾದರೂ ಪರಿಹಾರ ಕಂಡುಕೊಳ್ಳುವಲ್ಲಿ ಯಶಸ್ವಿಯಾದೇವು' ಎಂದು ಆನಂದತೀರ್ಥ ಪ್ಯಾಟಿ ಆಶಾವಾದ ತೋರಿದರೆ, ರವಿ ತುಂಬರಗುದ್ದಿ, 'ಸಾಮ್ರಾಜ್ಯಶಾಹಿ ವ್ಯವಸ್ಥೆಯಲ್ಲಿ ನಲುಗಿದ ಭಾರತ ಒಂದು ಮಧ್ಯರಾತ್ರಿಯಂದು ಭಾರತೀಯ ಬಂಡವಾಳಶಾಹಿಗಳ ಕೈಗೆ ಹಸ್ತಾಂತರಗೊಂಡಿತು' ಎಂದು ಹೇಳುತ್ತಾರೆ. ಮಹಾತ್ಮಾಗಾಂಧೀಜಿ ಸಾಮ್ರಾಜ್ಯಶಾಹಿ ಹಾಗೂ ಬಂಡವಾಳಶಾಹಿ ವ್ಯವಸ್ಥೆಯ 'ಚೇಲಾ' ಆಗಿದ್ದರು ಎನ್ನುತ್ತಾರೆ. ಅಹಿಂಸಾವಾದ ಹಾಗೂ ರಾಮರಾಜ್ಯದ ಮೂರ್ಖ ಕಲ್ಪನೆಗಳು ವೈಜ್ಞಾನಿಕ ಚಿಂತನಾಶಕ್ತಿಯನ್ನೇ ನಾಶ ಮಾಡಿತೆನ್ನುತ್ತಾರೆ. ಆದರೆ, ವೈ. ಆರ್. ಪಂಕಜಾರದ್ದು ನಮ್ಮ ದೇಶ ಸಮಸ್ಯೆಗಳೊಂದಿಗೆ ಸೆಣಸುತ್ತಲೇ ಪ್ರಗತಿಯತ್ತ ದಾಪುಗಾಲು ಹಾಕುತ್ತಿರುವ ಅಭಿವೃದ್ಧಿಶೀಲ ರಾಷ್ಟ್ರವಾಗಿದೆ ಎನ್ನುವ ನಿಶ್ಚಿತ ಅಭಿಪ್ರಾಯ. ಕೆ. ಜಿ. ಹತ್ತಳ್ಳಿಯವರಿಗೆ ಇನ್ನಾದರೂ ಟೊಂಕ ಕಟ್ಟಿ ನಿಂತರೆ ಪ್ರಗತಿ ನಿಶ್ಚಿತ ಎಂಬ ಅಚಲ ನಂಬುಗೆ ಇದೆ.

ಹೀಗೆ ಇಲ್ಲಿ ಪ್ರಶ್ನೆಗಳಿವೆ. ಪಕ್ಕದಲ್ಲಿಯೇ ಪರಿಹಾರಗಳೂ ಇವೆ. ಪಂಚವಾರ್ಷಿಕ ಯೋಜನೆಗಳಿಂದ ಗ್ರಾಮೀಣ ವಿದ್ಯಾರ್ಥಿಗಳ ಕೃಪಾಂಕದವರೆಗೆ ಎಲ್ಲವೂ ಒಂದಲ್ಲ ಒಂದು ರೀತಿಯಲ್ಲಿ ಪ್ರಸ್ತಾಪಗೊಂಡಿವೆ. ಇಲ್ಲಿನ ಹೊಸಬರು ಪ್ರಕಾಂಡ ಪಂಡಿತರಲ್ಲದೇ ಹೋದರೂ ಪಂಡಿತರುಗಳ ಸ್ಥಾಪಿತ ಸಿದ್ಧ ಸೂತ್ರಗಳ ಬುಡಕ್ಕೆ ಕೈಹಚ್ಚಿದ್ದಾರೆ. ಹೀಗೆ ಎಲ್ಲ ದಿಕ್ಕಿನಲ್ಲಿ ವಿಚಾರಗಳನ್ನೂ ಚಿಂತನೆಗಳನ್ನೂ ಹೇಳಿಕೆಗಳನ್ನೂ ಒಂದೆಡೆ ಸಂಕಲಿಸುವ ಅವಕಾಶ ದೊರೆತದ್ದು ನನ್ನ ಪಾಲಿಗೆ ಸಂತಸದ ಸಂಗತಿ. ಎಲ್ಲ ಬರಹಗಳೂ ದೇಶದ ಬಗೆಗಿನ ಕಾಳಜಿಯನ್ನು ಪ್ರದರ್ಶಿಸುವ ಅಪ್ಪಟ ದೇಶಾಭಿಮಾನದ ಬರಹಗಳಾಗಿವೆಯೆಂದು ನಾನಿಲ್ಲಿ ಹೇಳಬಲ್ಲೆ. ಇಲ್ಲಿ ಕ್ರೋಢೀಕರಿಸಿದ ಎಲ್ಲ ಕಾಳಜಿಗಳು, ವಿಚಾರಗಳು ಪ್ರಾಜ್ಞರಿಂದ ವಿಮರ್ಶಿಸಲ್ಪಡಲಿ.

ಗತಿಗಳೆಲ್ಲ ಗರ ಬಡಿದು, ಸ್ಥಿತಿಗಳೆಲ್ಲ ಜಡವಾಗಿ ಮಡುಗಟ್ಟಿ ಕೊಳಚೆಯೇರ್ಪಟ್ಟಂತಹ ವರ್ತಮಾನದಲ್ಲಿ ನಾವೆಲ್ಲ ಸಿಕ್ಕುಬಿದ್ದಿರುವಾಗ ನಾವು ತೊಡಗಿಕೊಳ್ಳುವ ವೈಚಾರಿಕ ಸಂಘರ್ಷ ಮಾತ್ರ ನಮ್ಮನ್ನು ಪಾರುಗಾಣಿಸಬಲ್ಲದು.

ಸ್ವಾತಂತ್ರ್ಯ ನಮಗೆ ಸ್ವರ್ಗ ಸೃಷ್ಟಿ ಮಾಡಿಕೊಟ್ಟಿರಲಿಕ್ಕಿಲ್ಲ. ಆದರೆ ನಡೆದಿರುವ ಬದಲಾವಣೆಗಳನ್ನು ಮಾತ್ರ ತಳ್ಳಿಹಾಕುವಂತಿಲ್ಲ. ಯಾರಿಗೆ ಬಂತು ಎಲ್ಲಿಗೆ ಬಂತು ನಲವತ್ತೇಳರ ಸ್ವಾತಂತ್ರ್ಯ ಎಂದು ಯಾರೋ ಕೇಳಬಹುದು. ಆದರೆ, ಹಾಗೆ ಕೇಳಿದವರು ಹಾಗೇ ಕೇಳುವಂತಹ ಸ್ಥಿತಿ ಒದಗಿದ್ದೇ ಸ್ವಾತಂತ್ರ್ಯದಿಂದ. ಈ ದೇಶದ ಐದು ಸಾವಿರ ವರ್ಷಗಳು ಕಲ್ಪಿಸಲಾರದ ಸಮಾನತೆಯ ಅಂಶವೊಂದು ಸಾಬೀತಾಗಿದ್ದೇ ಈ ಅರ್ಧ ಶತಮಾನದಲ್ಲಿ..

ಈ ಸಂಕಲನ ತರುವಲ್ಲಿ ನೆರವಾದ ಧಾರವಾಡ ಜಿಲ್ಲಾ ಪಂಚಾಯತ್, ಕರ್ನಾಟಕ ವಿದ್ಯಾವರ್ಧಕ ಸಂಘದ ಪದಾಧಿಕಾರಿಗಳು, ಸಿಬ್ಬಂದಿ, ನೆರವಾದ ಗೆಳೆಯರಾದ ರವಿ ಕುಲಕರ್ಣಿ, ಆರ್. ವಿ. ಕಟ್ಟೀಮನಿ ತಡಕಲ್, ಚಂದ್ರು ತುರ್ವಿಹಾಳ, ಎನ್. ಎಸ್. ಕಾಶಪ್ಪನವರ, ಪತ್ರಿಕೆಗಳ ಪ್ರಕಟಣೆಗಳಿಗೆ ಸ್ಪಂದಿಸಿದ ಎಲ್ಲ ಮಿತ್ರರಿಗೆ, ಅಂದವಾಗಿ ಮುದ್ರಿಸಿಕೊಟ್ಟ ಮನೋಹರ ಮುದ್ರಣಾಲಯದ ಆಕಳವಾಡಿ ಸಹೋದರರಿಗೆ ನನ್ನ ತುಂಬು ಹೃದಯದ ಕೃತಜ್ಞತೆಗಳು.

೩, ಜನೆವರಿ ೨೦೦೦

**ಮೋಹನ ನಾಗಮ್ಮನವರ**

# ಪರಿವಿಡಿ


೧. ಭಾರತ ಸ್ವಾತಂತ್ರ್ಯ ಸಂಗ್ರಾಮ ಕನಸು ಕಂಡದ್ದೇನು? ನನಸಾದದ್ದೇನು?
—ನರಸಿಂಹ ದಾಬಡೆ ... ೧

೨. ಸ್ವಾತಂತ್ರ್ಯ ಮತ್ತು ಹೋರಾಟ
—ಎನ್ಕೆ ... ೭

೩. ಚಿರಂತನ ಜಾಗೃತಿಯೇ ಸ್ವಾತಂತ್ರ್ಯದ ನಿಜವಾದ ಬೆಲೆ
—ಪ್ರೊ.ಆರ್.ವ್ಹಿ. ಹೊರಡಿ ... ೧೪

೪. ಭಾರತ ಸ್ವಾತಂತ್ರ್ಯ ಸ್ವರ್ಣಮಹೋತ್ಸವ (ಒಂದು ಚಿಂತನೆ)
—ಜಿ. ಎಂ. ಪಾಟೀಲ ... ೧೮

೫. ಭಾರತದ ಸ್ವಾತಂತ್ರ್ಯ ಹೋರಾಟಗಾರ್ತಿಯರು
—ಡಾ. ಚೆನ್ನಕ್ಕ ಪಾವಟೆ ... ೨೩

೬. ಸ್ವಾತಂತ್ರ್ಯ ಚಿಂತನೆ —ರಜಿಯಾ ಡಿ. ಬಿ. ... ೨೯

೭. ಸ್ವಾತಂತ್ರ್ಯೋತ್ತರ ಭಾರತದ ಐವತ್ತು ವರ್ಷ
—ಡಾ. ಎಸ್.ವಿ. ಪ್ರಭಾವತಿ ... ೩೨

೮. ಸ್ವಾತಂತ್ರ್ಯ ಹೋರಾಟದ ಸಾಹಿತ್ಯ
—ವೈ. ಕೆ. ತಿಮ್ಮರಸಯ್ಯ ... ೩೪

೯. ಸ್ವಾತಂತ್ರ್ಯ ಚಿಂತನ —ಬಿ. ಎಂ. ಬಡಿಗೇರ ... ೩೯

೧೦. ಅರ್ಥಶಾಸ್ತ್ರ (ನಾನು ಕಂಡಂತೆ)
—ಡಾ. ಮಹಾದೇವ ಮುರಕಟ್ಟಿ ... ೪೨

೧೧. ಭಾರತೀಯ ಸ್ವಾತಂತ್ರ್ಯ ಮತ್ತು ಕೋಮುವಾದ
—ಲಿಂಗರಾಜು ... ೪೮

೧೨. ಆಗಬೇಕಿದೆ ಭಾರತಕ್ಕೆ ಕಾಯಕಲ್ಪ
—ಬಸವರಾಜ ಲಕ್ಷ್ಮೇಶ್ವರ ... ೫೦

೧೩. ಸ್ವಾತಂತ್ರ್ಯ ಚಿಂತನೆ —ಆನಂದತೀರ್ಥ ಪ್ಯಾಟಿ ... ೫೩

೧೪. ಮಧ್ಯರಾತ್ರಿ ಸ್ವಾತಂತ್ರ್ಯದ ಐವತ್ತನೆಯ ಉತ್ಸವ
—ರವಿ ತುಂಬರಗುದ್ದಿ ... ೫೫

೧೫. ಸಮಸ್ಯೆಗಳ ಸುಳಿಗೆ ಸಿಲುಕಿರುವ ದೇಶ
—ಟಿ.ಪಿ. ರವಿಕುಮಾರ ... ೫೬
೧೬. ಸ್ವಾತಂತ್ರ್ಯವೆಂಬುದು ಸ್ವೇಚ್ಛೆಯಲ್ಲ
—ಎಂ. ಭಾರತಿ ರಘುಪತಿ ... ೫೮
೧೭. ಒಂದು ಕಪ್ಪು ಬಣ್ಣ ಸುಂದರ ಚಿತ್ರ ಮಲಿನಗೊಳಿಸಿದಂತೆ
—ಅನಂತ ಚಿಂತಾಮಣಿ ಜ್ಯೋತಿಷಿ ... ೬೦
೧೮. ಓಟಿಗಾಗಿ ಬಳಕೆಯಾಗುತ್ತಿರುವ ಭಾರತೀಯ
—ಇಮಾಮಸಾಬ ಖಾ. ಮುಲ್ಲಾ ... ೬೨
೧೯. ನಿಜವಾದ ಸ್ವಾತಂತ್ರ್ಯ ಲಭಿಸಿದೆಯೆ?
—ಎಸ್. ಆನಂದ ಅಡಾನ್ ... ೬೪
೨೦. ಸ್ವಾತಂತ್ರ್ಯದ ಪರಿಭ್ರಮಣೆ
—ಶ್ರೀಮತಿ ಚಂಚಲಾ ಶ್ರೀಕಂಠಯ್ಯ ... ೬೬
೨೧. ಜಾತಿ ರಾಜಕಾರಣ ನಿಲ್ಲಿಸಿ ! ಭ್ರಷ್ಟತೆಯನ್ನು ಧಿಕ್ಕರಿಸಿ !
—ಪ್ರಕಾಶ ಎಸ್. ಪತ್ತಾರ ... ೬೯
೨೨. ಸಾರೆ ಜಹಾಂಸೆ ಲುಚ್ಚಾ ಹಮಾರಾ ಹಿಂದುಸ್ತಾನ್ ಆಗದಿರಲಿ
—ಎ. ಆರ್. ರಶ್ಮಿ ... ೭೧
೨೩. ಐವತ್ತು ವರ್ಷಗಳ ನಂತರವೂ ಸಮಸ್ಯೆಯಿಂದ ಮುಕ್ತವಾಗದ ಭಾರತ
—ವೈ. ಆರ್. ಪಂಕಜಾ ... ೭೩
೨೪. ಟೊಂಕಕಟ್ಟಿ ನಿಂತರೆ ಪ್ರಗತಿ ನಿಶ್ಚಿತ
—ಕೆ. ಜಿ. ಹತ್ತಳ್ಳಿ ... ೭೬
೨೫. ತೆವಳುತ್ತಿರುವ ಅರಾಜಕ ಸ್ಥಿತಿಯಲ್ಲಿ ಭಾರತ
—ಮಹಾಂತೇಶ ಈ. ಕರಿಂಡಿ ... ೭೮
೨೬. ಸ್ವಾತಂತ್ರ್ಯ ಸಾರ್ಥಕವಾಗಲಿ
—ನಾ. ಕು. ಗಣೇಶ ... ೮೧
೨೭. ದೇಶದ ಪ್ರಗತಿ ಮರೆತು ಅಧಿಕಾರಕ್ಕೆ ಜೋತು ಬಿದ್ದ ಪಕ್ಷಗಳು
—ಎಸ್. ಸಿದ್ದೇಶ ಕುರ್ಕಿ ... ೮೩
೨೮. ದೇಶ ಉಳಿದರೆ ನಮ್ಮ ಪುಣ್ಯ
—ಲೀಲಾ ... ೮೫
೨೯. ನಿರಕ್ಷರಿಗಳೆಂಬ ನಿರಾಶಾಭಾವ
—ಜಿ. ಶೀನಪ್ಪ ... ೮೭
೩೦. ಭ್ರಷ್ಟಾಚಾರದಲ್ಲಿ ರಾಜಕಾರಣಿಗಳು; ಕ್ರಿಕೆಟ್ಟಿನಲ್ಲಿ ಮೈಮರೆತ ಯುವಕರು
—ಪ್ರವೀಣ ಅಕ್ಕಿಶೆಟ್ಟಿ ... ೮೮

೩೧. ಓಟು ಕೊಟ್ಟವನು ಕೋಡಂಗಿ ! ಗೆದ್ದವರು ವೀರಭದ್ರರು !
—ಬಿ. ಎಸ್. ಗೋಪಾಲಕೃಷ್ಣ ... ೮೯
೩೨. ಸ್ವಾತಂತ್ರ್ಯ ಮತ್ತು ಪ್ರಾದೇಶಿಕ ಮೀಸಲಾತಿ
—ಗುರುಪ್ರಸಾದ ಈ. ... ೯೧
೩೩. ಪ್ರಗತಿ ಆಗಿದೆ —ಎಂ. ಬಿ. ಮೇಟಿ ... ೯೫
೩೪. ಸ್ವಾತಂತ್ರ್ಯ – ಮಹಾಪ್ರಯತ್ನದ ಉತ್ಕೃಷ್ಟ ಫಲ
—ತಪೋಮನ್ ... ೯೬
೩೫. ಕುಸಿಯುತ್ತಿರುವ ಮೌಲ್ಯಗಳು
—'ಸುಭುವಿ' ಎಂ. ವೀರೇಶ್ ... ೯೮
೩೬. ಭ್ರಷ್ಟಾಚಾರದಲ್ಲಿ ಪೈಪೋಟಿ
—ರಾಮಚಂದ್ರ ಪಿ. ಶಾಸ್ತ್ರಿ ... ೧೦೦
೩೭. ಗೊತ್ತು ಗುರಿಯಿಲ್ಲದ ರಾಜಕಾರಣ
—ಶರಣಪ್ಪ ಬಾಚಲಾಪೂರ ... ೧೦೩
೩೮. ೫೦ ವರ್ಷದ ಸ್ವಾತಂತ್ರ್ಯದ ನೆನಪುಗಳು
—ಡಿಸೋಜ ಆಲ್ಬರ್ಟ್ ... ೧೦೭
೩೯. ದೇಶಕ್ಕಾಗಿ ನಾವೇನು ಮಾಡಿದೆವು?
—ವಿ. ಬಿ. ಕರಿಶೆಟ್ರ ... ೧೧೦
೪೦. ನೈತಿಕ ಶಿಕ್ಷಣದ ಅವಶ್ಯಕತೆ
—ಗಣೇಶ ವಿ. ... ೧೧೨
೪೧. ಮಂತ್ರಿಪದವಿ, ಪ್ರತಿಷ್ಠೆಗಳೇ ರಾಜಕಾರಣಿಗಳ ಆಶಯ
—ಡಿ. ಮೆಹಬೂಬ ಅಲಿ ... ೧೧೪
೪೨. ಸರ್ವಾಧಿಕಾರಿಯಾದ ಶಾಸಕ
—ಸಿದ್ದಪ್ಪ ಜಮ್ಮಾಳ ... ೧೧೬
೪೩. ಇದು ಭಾರತದಲ್ಲಿ ಮಾತ್ರ ಸಾಧ್ಯ !
—ಆರ್. ವಿ. ಕಟ್ಟೀಮನಿ ... ೧೧೯
೪೪. ಕಂದಾಚಾರಕ್ಕೆ ಹೊರತಾದ ಭಾರತೀಯರಾಗಬೇಕು
—ಮೋಹನ ನಾಗಮ್ಮನವರ ... ೧೨೬

**ಅನುಬಂಧ**

೧. ಕನ್ನಡದ ಸಾಂಸ್ಕೃತಿಕ ಸಂಸ್ಥೆ : ಕರ್ನಾಟಕ ವಿದ್ಯಾವರ್ಧಕ ಸಂಘ
—ಡಾ. ಜಿ. ಎಂ. ಹೆಗಡೆ ... ೧೨೯
೨. ನಮ್ಮ ಲೇಖಕರು ... ೧೩೨

# ಭಾರತ ಸ್ವಾತಂತ್ರ್ಯ ಸಂಗ್ರಾಮ
# ಕನಸು ಕಂಡದ್ದೇನು? ನನಸಾದದ್ದೇನು?

• ನರಸಿಂಹ ದಾಬಡೆ

ಪ್ರತಿಯೊಂದು ದೇಶದ ಸ್ವಾತಂತ್ರ್ಯ ಸಂಗ್ರಾಮವು ಅತ್ಯಂತ ರೋಚಕವಾಗಿರುವಂತೆ ಭಾರತದ ಸ್ವಾತಂತ್ರ್ಯ ಸಂಗ್ರಾಮವು ರೋಚಕವಷ್ಟೇ ಅಲ್ಲ, ಅತ್ಯಂತ ವೈಶಿಷ್ಟ್ಯಪೂರ್ಣವೂ ಆಗಿತ್ತು. ಇಡೀ ಜಗತ್ತಿಗೆ ಹೊಸ ಮಾರ್ಗವನ್ನು ತೋರಿದ ಶ್ರೇಯಸ್ಸು ಭಾರತಕ್ಕೆ ಸಲ್ಲುವುದು. ಸತ್ಯ, ಅಹಿಂಸೆ, ಸತ್ಯಾಗ್ರಹ, ಆತ್ಮ ಬಲಿದಾನ ಇವುಗಳಿಂದ ಅತ್ಯಂತ ಬಲಾಢ್ಯವಾದ ಸಂಘಟನೆಯ ಸಂಗಡ ಯುದ್ಧಮಾಡಿ ಹೇಗೆ ಜಯಗಳಿಸಬಹುದೆಂಬುದನ್ನು ಭಾರತವು ಇಡೀ ಜಗತ್ತಿಗೇ ತೋರಿಸಿಕೊಟ್ಟಿದೆ. ಇದನ್ನು ಹುಟ್ಟು ಹಾಕಿದವರೇ ಮಹಾತ್ಮಾ ಗಾಂಧಿ ಅವರು.

ಭಾರತ ಸ್ವಾತಂತ್ರ್ಯದ ಪ್ರಪ್ರಥಮ ಗುಂಡು ಹಾರಿದ್ದು ಕರ್ನಾಟಕದ ಧಾರವಾಡ ಜಿಲ್ಲೆಯ ಮುಂಡರಗಿ ಗ್ರಾಮದಲ್ಲಿ. ಕಾಲ ೧೮೦೦ನೇ ಇಸವಿ. ಅದರ ಶ್ರೇಯಸ್ಸು ಪ್ರಥಮ ಹುತಾತ್ಮ ಡಂಬಳ ಕೋಟೆಯ ಶ್ರೀನಿವಾಸ ವೆಂಕಟೇಶ ಬಹಾದ್ದೂರ ದೇಸಾಯಿ ಅವರಿಗೆ ಸಲ್ಲುತ್ತದೆ. ಮುಂದೆ ವೀರರಾಣಿ ಕಿತ್ತೂರ ಚನ್ನಮ್ಮ, ನರಗುಂದ ಬಾಬಾಸಾಹೇಬ, ಟೀಪು ಸುಲ್ತಾನ ಇವರೇ ಮೊದಲಾದವರು ಬ್ರಿಟಿಷರ ವಿರುದ್ಧ ಹೋರಾಡಿದರು. ಹಾಗೆ ೧೮೫೭ ನೇ ಇಸವಿಯಲ್ಲಿ ನಡೆಯಿತೆಂದು ಹೇಳಲಾದ 'ಸಿಪಾಯಿಗಳ ದಂಗೆ'ಯೇ ಭಾರತದ 'ಪ್ರಥಮ ಸ್ವಾತಂತ್ರ್ಯ ಸಂಗ್ರಾಮ. ಅದು ಯಶಸ್ವಿಯಾಗಿದ್ದರೆ ಭಾರತದ ಇತಿಹಾಸವೇ ಬೇರೆಯಾಗುತ್ತಿತ್ತು. ಮುಂದೆ ಕ್ರಾಂತಿಕಾರ ತರುಣರಾದ ಭಗತ್‌ಸಿಂಗ್, ಸುಖದೇವ, ರಾಜಗುರು, ಚಂದ್ರಶೇಖರ ಆಜಾದ್ ಮೊದಲಾದವರು ತಮ್ಮ ನೆತ್ತರವನ್ನೇ ಭಾರತ ಸ್ವಾತಂತ್ರ್ಯ ಸಂಗ್ರಾಮದ ಅಗ್ನಿ ಕುಂಡದಲ್ಲಿ ಹಾಕಿದರು. ಅವರ ತ್ಯಾಗವು ಅವಿಸ್ಮರಣೀಯ. ಇವರೆಲ್ಲ ಭಾರತ ಸ್ವಾತಂತ್ರ್ಯ ಸಂಗ್ರಾಮದ ಹುತಾತ್ಮರು. ಅವರಿಗೆ ನಾವು ಗೌರವಪೂರ್ವಕ ವಂದನೆಗಳನ್ನು ಅರ್ಪಿಸಬೇಕು. ಸುಮಾರು ಅದೇ ಸಮಯಕ್ಕೆ ಏಕಾಏಕಿಯಾಗಿ ಅತ್ಯಂತ ಧೈರ್ಯದಿಂದ ಮುಂದೆ ಬಂದು ಸಾರ್ವಜನಿಕವಾಗಿ "ಸ್ವರಾಜ್ಯವೇ ನನ್ನ ಜನ್ಮಸಿದ್ಧ ಹಕ್ಕು ಮತ್ತು ಅದನ್ನು ನಾನು ಗಳಿಸಿಯೇ ತೀರುವೆ" ಎಂದು ಘಂಟಾಘೋಷವಾಗಿ ಸಾರಿ ಸುಶಿಕ್ಷಿತ ತರುಣರನ್ನು ಬಡಿದೆಬ್ಬಿಸಿದವರೇ ಲೋಕಮಾನ್ಯ ಬಾಲ ಗಂಗಾಧರ ಟಿಳಕರವರು. ಅವರು ಧೈರ್ಯವಾಗಿ ಕಲಿತನದಿಂದ ಹೋರಾಡಿದ ಬಂಟರು. ಆಗ ಅವರಿಗೆ ಆರು ವರುಷ ಶಿಕ್ಷೆವಿಧಿಸಿ ಬ್ರಹ್ಮದೇಶದ ಮಂಡಾಲಿ ಕಾರಾಗೃಹದಲ್ಲಿಟ್ಟಿದ್ದರು. ಇಷ್ಟಾದರೂ ಬಿಡುಗಡೆಯಾಗಿ ಬಂದ ಕೂಡಲೇ 'ಪುಣಶ್ಚ ಹರಿ ಓಂ' ಎಂದು ಹೋರಾಟಕ್ಕೆ ಇಳಿದರು. ಆ್ಯನಿ ಬೆಸೆಂಟರೊಡನೆ

ಹೋಮ್‌ರೂಲ್ ಲೀಗ್ ಎಂಬ ಸಂಘಟನೆಯನ್ನು ನಿರ್ಮಾಣ ಮಾಡಿ ದೇಶದ ತರುಣರನ್ನು ಬಡಿದೆಬ್ಬಿಸಿದ ಕೀರ್ತಿ ಅವರದು. ೧೯೨೦ರಲ್ಲಿ ಅವರು ಕಾಲವಾದ ನಂತರ ಭಾರತದ ಕ್ಷಿತಿಜದ ಮೇಲೆ ಬಂದವರೇ ಮಹಾತ್ಮಾ ಗಾಂಧಿ. ಅವರು ೧೯೨೦ ರಿಂದ ೧೯೪೮ರವರೆಗೆ ಸಂಗ್ರಾಮದ ನಾಯಕತ್ವವನ್ನು ವಹಿಸಿ, ೧೯೨೦ ರ ಅಸಹಕಾರ ಚಳುವಳಿ, ೧೯೩೦ ರ ಸವಿನಯ ಕಾಯಿದೆ ಭಂಗ ಅಥವಾ ಉಪ್ಪಿನ ಸತ್ಯಾಗ್ರಹ, ೧೯೩೨ ರ ಜಂಗಲ್ ಸತ್ಯಾಗ್ರಹ, ಕರ ನಿರಾಕರಣೆ, ಮುಂದೆ ೧೯೪೦ ರ ವೈಯಕ್ತಿಕ ಸತ್ಯಾಗ್ರಹ, ಕೊನೆಯದಾಗಿ ೧೯೪೨ ರ ಕ್ವಿಟ್ ಇಂಡಿಯಾ ಅಥವಾ 'ಭಾರತದಿಂದ ತೊಲಗಿ' ಮುಂತಾದ ಸತ್ಯಾಗ್ರಹಗಳನ್ನು ಸಂಘಟಿಸಿ ದೇಶವನ್ನು ಸ್ವಾತಂತ್ರ್ಯ ಮಂದಿರದ ಮುಂದೆಯೇ ಒಯ್ದು ನಿಲ್ಲಿಸಿದರು. ಈ ಸಮಯದಲ್ಲಿ ಭಾರತದ ತರುಣರ ತ್ಯಾಗ, ಬಲಿದಾನ ಸ್ಮರಣೀಯ ಕೆಲವರು ತಮ್ಮ ಪ್ರಾಣಪಕ್ಷಿಯನ್ನು ಭಾರತದ ಸ್ವಾತಂತ್ರ್ಯಕ್ಕೆ ಅರ್ಪಿಸಿದರು. ಕೆಲವರು ಬ್ರಿಟಿಷರ ಗುಂಡಿಗೆ ಬಲಿಯಾದರೆ ಬೇರೆ ಕೆಲವರು ಉಗ್ರ ಶಿಕ್ಷೆಗೆ ಒಳಗಾಗಿ ೧೦-೧೫ ವರುಷ ಶಿಕ್ಷೆ ಅನುಭವಿಸಿದರು. ಇನ್ನೂ ಕೆಲವರು ತಮ್ಮ ಮನೆ ಹೊಲ ಆಸ್ತಿ ಎಲ್ಲವನ್ನೂ ಕಳೆದುಕೊಂಡು ನಿರ್ಗತಿಕರಾದರು. ಸತ್ಯಾಗ್ರಹಿಯು ತಾನು ಪಡಬಾರದ ಕಷ್ಟ-ನಷ್ಟಗಳನ್ನು ಅನುಭವಿಸಿ ಎದುರಾಳಿಗೆ ಹಿಂಸೆ ಮಾಡದೇ ಆತ್ಮಶಕ್ತಿಯಿಂದ ಹೋರಾಡುವುದೇ ಸತ್ಯಾಗ್ರಹದ ವೈಶಿಷ್ಟ್ಯ. ಈ ಸಂಗ್ರಾಮದಲ್ಲಿ ಕರ್ನಾಟಕದ ಪಾತ್ರ ಹಿರಿಯದು. ಮಹಾತ್ಮರ ಎಲ್ಲ ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ತನ್ನ ಪಾಲಿನ ಕರ್ತವ್ಯವನ್ನು ನಿಷ್ಠೆಯಿಂದ ಮಾಡಿದೆ ಎಂದೇ ಧಾರಾಳವಾಗಿ ಹೇಳಬಹುದು. ೧೯೨೩ ರ ಅಸಹಕಾರ ಆಂದೋಲನದಲ್ಲಿ ಧಾರವಾಡದಲ್ಲಿಯೇ ಜರುಗಿದ ಗೋಳಿಬಾರಿನಲ್ಲಿ ಮೂವರು ತರುಣರು ತಮ್ಮ ರಕ್ತವನ್ನು ಚೆಲ್ಲಿ ಹುತಾತ್ಮರಾದರು. ೧೯೩೦ ರ ಉಪ್ಪಿನ ಸತ್ಯಾಗ್ರಹದಲ್ಲಿಯೂ ಗಣನೀಯ ಪಾತ್ರ ವಹಿಸಿತ್ತಲ್ಲದೆ ಆಗ ಉತ್ತರ ಕನ್ನಡ ಜಿಲ್ಲೆಯಲ್ಲಿ ನಡೆದ ಕರನಿರಾಕರಣೆಯ ಚಳುವಳಿಯು ಇಡೀ ಭಾರತಕ್ಕೆ ಕೀರ್ತಿ ತರುವಂತಹದಾಗಿತ್ತು. ಸಾಮಾನ್ಯ ರೈತರು, ದೊಡ್ಡವರು, ಚಿಕ್ಕವರು ತಮ್ಮ ಹೊಲ-ಮನೆ, ಆಸ್ತಿಪಾಸ್ತಿ ಎಲ್ಲವನ್ನೂ ಕಳೆದುಕೊಂಡು ನಿರ್ಗತಿಕರಾಗಿ ನಾನಾ ಬಗೆಯ ಕಷ್ಟನಷ್ಟಗಳನ್ನೂ ಜೇಲುವಾಸವನ್ನೂ ಅನುಭವಿಸಿದರು.

೧೯೪೦ ರ ವೈಯಕ್ತಿಕ ಸತ್ಯಾಗ್ರಹದಲ್ಲಿ, ೧೯೪೨ ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಕೂಡ ಕರ್ನಾಟಕದ ಪಾತ್ರ ಅವಿಸ್ಮರಣೀಯ. ಅಂದಿನ ಚಳುವಳಿಯ ಮುಖಂಡರಾದ ಜಯಪ್ರಕಾಶ ನಾರಾಯಣ ಅವರು ಮನಸಾರೆ ಅಭಿನಂದಿಸಿ ಅದನ್ನು ಸಂಘಟಿಸಿದ ಕಾರ್ಯಕರ್ತರಿಗೂ, ಜನತೆಗೂ ಧನ್ಯವಾದಗಳನ್ನು ಇತ್ತಿದ್ದಾರೆ. ಅವರು ಮುಂದುವರಿದು, "ಈ ಪ್ರಕಾರ 'ಕರ್ನಾಟಕ ಪ್ಯಾಟರ್ನ್' ಎಂದೇ ಪ್ರಸಿದ್ಧವಾದ ಚಳುವಳಿಯು ಭಾರತದಾದ್ಯಂತ ನಡೆದಿದ್ದಾದರೆ ಭಾರತದ ಇತಿಹಾಸವೇ ಬೇರೆಯಾಗುತ್ತಿತ್ತು" ಎಂದು ಹೊಗಳಿದ್ದಾರೆ. ಈ ಸಂಗ್ರಾಮದ ಪೂರ್ಣಾಹುತಿ ೧-೪-೧೯೪೩ ರಂದು ಧಾರವಾಡ ಜಿಲ್ಲೆ ಹೊಸರಿತ್ತಿ ಗ್ರಾಮದ ಬಸವಣ್ಣದೇವರ ಗುಡಿಯಲ್ಲಿ ನಡೆಯಿತು. ಅವರಲ್ಲಿ ಮಹಾದೇವ ಮೈಲಾರ, ತಿರಕಪ್ಪ ಮಡಿವಾಳರ, ವೀರಯ್ಯಾ ಹಿರೇಮಠ ಇವರು ಪೋಲೀಸರ ಗುಂಡಿಗೆ ಆಹುತಿಯಾಗಿ ಹುತಾತ್ಮರಾದರು. ಇದು ಈ ಚಳುವಳಿಯ ಪೂರ್ಣಾಹುತಿ. ನನ್ನ ದೃಷ್ಟಿಯಲ್ಲಿ ಮಹಾದೇವ ಮೈಲಾರ ಮತ್ತು ಆತನ ಇಬ್ಬರು ಸಂಗಡಿಗರು ರಣಾಂಗಣದಲ್ಲಿ ಶೂರತನದಿಂದ ಹೋರಾಡಿ ಹುತಾತ್ಮರಾದ ವೀರ ಅಭಿಮನ್ಯುಗಳು. ಮಹಾತ್ಮರ ಕಟ್ಟಾ ಅನುಯಾಯಿಯಾಗಿದ್ದ ಮಹಾದೇವ ೧೯೩೦ ರ ದಂಡಿ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಇಲ್ಲಿ

ಒಂದು ಸ್ಮರಣೀಯ ಘಟನೆ ಹೇಳಲೇಬೇಕು. ಮಹಾದೇವನ ಎದೆಗೆ ಗುಂಡು ಬಡಿದು ಉರುಳಿದಾಗ ಆತನ ಕೆಲ ಅನುಯಾಯಿಗಳು ತಮ್ಮ ಹತ್ತಿರ ಇದ್ದ ಬಂದೂಕು ತೆಗೆದುಕೊಂಡು ಸಿದ್ಧರಾದಾಗ್ಗೆ ಮರಣಶಯ್ಯೆಯಲ್ಲಿ ಬಿದ್ದಿದ್ದ ಆತ, 'ಬೇಡ ನಾವು ಅಹಿಂಸಾವಾದಿಗಳು' ಎಂದು ಹೇಳಿ ಪ್ರಾಣಬಿಟ್ಟನು. ಹೀಗೆ ಮಹಾತ್ಮರ ಎಲ್ಲ ಚಳುವಳಿಗಳಲ್ಲಿ ಮತ್ತು ಅವರ ವಿಧಾಯಕ ಕಾರ್ಯಗಳಲ್ಲಿ ಕರ್ನಾಟಕವು ಅತ್ಯಂತ ನಿಷ್ಠೆಯಿಂದ ತನ್ನ ಪಾತ್ರವನ್ನು ವಹಿಸಿದೆ ಎಂದು ಧಾರಾಳವಾಗಿ ಹೇಳಬಹುದು. ಈ ಮಹಾಯಜ್ಞದಲ್ಲಿ ಕರ್ನಾಟಕವು ಸುಮಾರು ಹತ್ತು ಸಾವಿರಕ್ಕೂ ಮಿಕ್ಕಿ ಸತ್ಯಾಗ್ರಹಿಗಳನ್ನು ಕಳಿಸಿದ್ದುಂಟು.

೧೯೪೨ ರ 'ಕ್ವಿಟ್ ಇಂಡಿಯಾ' ಚಳುವಳಿಯ ಸಮಯದಲ್ಲಿ ಹೋರಾಟಗಾರರ ಭಾವನೆಗಳು ಹೇಗಿದ್ದವು? ಆಗ ಅವರ ಲಕ್ಷ್ಯ ತ್ಯಾಗ, ಬಲಿದಾನದ ಕಡೆಗೇ ಹೆಚ್ಚಾಗಿ ಇತ್ತು. ಹೆಚ್ಚು ತ್ಯಾಗ ಮಾಡಿ ಹೆಚ್ಚು ಕಷ್ಟ ಅನುಭವಿಸಿದವರ ಬಗ್ಗೆ ಅತ್ಯಂತ ಅಭಿಮಾನ ಪಡುತ್ತಿದ್ದರು. ಅದರಂತೆಯೇ ಶ್ರೀ ಸಾಮಾನ್ಯನೂ ಸಹ ಇವರ ಬಗ್ಗೆ ಅತ್ಯಂತ ಗೌರವವನ್ನು ಪ್ರದರ್ಶಿಸುತ್ತಿದ್ದನು. ಸ್ವರಾಜ್ಯ ಇಷ್ಟು ಬೇಗ ಸಿಕ್ಕೀತೆಂದು ಯಾರ ಕನಸುಮನಸಿನಲ್ಲಿಯೂ ಇರಲಿಲ್ಲ. 'ನಾವು ಹೀಗೇ ಕೊನೆಯವರೆಗೆ ಜೈಲಿನಲ್ಲಿಯೇ ಕೊಳೆಯಬೇಕಾದೀತು' ಎಂಬ ಭಾವನೆ ಇತ್ತು. ಆದರೆ ಸ್ವರಾಜ್ಯ ಬಂದರೆ ಆಗ ನಮ್ಮ ದೇಶ ಹೇಗೆ ಆಗಬಹುದು ಎಂಬ ಚಿತ್ರದ ಕನಸನ್ನು ಧಾರಾಳವಾಗಿ ಕಾಣುತ್ತಲಿದ್ದರು. ಭಾರತಕ್ಕೆ ಸ್ವಾತಂತ್ರ್ಯ ಬಂದರೆ ಮಹಾತ್ಮರ ಕನಸಿನ ರಾಮರಾಜ್ಯ ಅಥವಾ ಜೆ. ಪಿ. ಯವರ ಗ್ರಾಮಸ್ವರಾಜ್ಯ ಪ್ರತ್ಯಕ್ಷ ಕಾರ್ಯರೂಪದಲ್ಲಿ ಬಂದು ತಂತಾನೇ ಎಲ್ಲವೂ ಸರಿಯಾಗುವುದು; ದೇಶದಲ್ಲಿಯ ಬಡತನ, ನಿರುದ್ಯೋಗ, ಅರೆ ಉದ್ಯೋಗ ಅಳಿದು ಬಡತನ ರೇಖೆಯ ಕೆಳಗೆ ಜನರೇ ಉಳಿಯುವುದಿಲ್ಲ; ಜನರೆಲ್ಲ ಉಂಡುಟ್ಟು ಸುಖದಿಂದ ಬಾಳುವರು; ಶೆರೆ, ಸಿಂದಿ, ಗಾಂಜಾ, ಅಫೀಮು, ಮುಂತಾದ ಮಾದಕ ವಸ್ತುಗಳು ಕಾಣೆಯಾಗುತ್ತವೆ; ಗ್ರಾಮಗಳಲ್ಲಿ ಚಿಕ್ಕ ಪುಟ್ಟ ಉದ್ಯೋಗ, ಖಾದಿ ಗ್ರಾಮೋದ್ಯೋಗಗಳು ಪ್ರಾರಂಭವಾಗಿ ಅನ್ನ ವಸ್ತ್ರಗಳ ಬಗ್ಗೆ ಗ್ರಾಮವು ಸಂಪೂರ್ಣ ಸ್ವಾವಲಂಬಿಯಾಗುವುದು; ಊರಲ್ಲಿಯ ನ್ಯಾಯಗಳು ಕೋರ್ಟ್, ಕಚೇರಿ ಕಟ್ಟೆ ಹತ್ತದೆ ಊರಲ್ಲಿಯೇ ನಿರ್ಣಯ ಮಾಡಲ್ಪಡುವವು. ಊರು ಹಸನಕಟ್ಟಾಗಿದ್ದು, ಬಡಿದಾಟವಿಲ್ಲದೆ ಜನರು ನೆಮ್ಮದಿಯಿಂದ ಬಾಳುವರು; ಅವರು ಸಂಪೂರ್ಣ ವ್ಯಸನ ಮುಕ್ತರಾಗುವರು; ಗಾಂಧೀಜಿಯವರು 'ನನ್ನ ಭಾರತ ಗ್ರಾಮಗಳಲ್ಲಿದೆ' ಎಂದೇ ಸಾರಿ ಹೇಳುತ್ತಿದ್ದರು. ಹೀಗೆ ಗ್ರಾಮಗಳ ಸುಧಾರಣೆಯಾದರೆ ಸ್ವಾಭಾವಿಕವಾಗಿ ಅದರ ಪ್ರಭಾವ ಪಟ್ಟಣಗಳ ಮೇಲೆ ಬೀಳುವದುಂಟು. ಹೀಗೆ ಇಡೀ ದೇಶವೇ ಸಮೃದ್ಧವಾದೀತು; ಜನರೆಲ್ಲ ಸ್ವದೇಶಿ ವಸ್ತುಗಳನ್ನೇ ಉಪಯೋಗಿಸಿ ಬಹುರಾಷ್ಟ್ರೀಯ ಕಂಪನಿಗಳ ವಸ್ತುಗಳನ್ನು ಬಹಿಷ್ಕರಿಸುವರು. ಆಗ ಭಾರತವು ನೆರೆ ಹೊರೆಯ ರಾಷ್ಟ್ರದೊಡನೆ ಅತ್ಯಂತ ಸೌಹಾರ್ದ ಭಾವನೆಯಿಂದ ಇದ್ದು ಯಾರ ವೈರತ್ವವನ್ನೂ ಕಟ್ಟಿಕೊಳ್ಳದೆ ಎಲ್ಲ ರಾಷ್ಟ್ರಗಳೊಡನೆ ಮಿತ್ರಭಾವದಿಂದಲೇ ಇದ್ದೀತು; ಗ್ರಾಮಗಳಲ್ಲಿ ಯಾವುದೇ ಚುನಾವಣೆ ಒಮ್ಮತದಿಂದಲೇ ಆದೀತೇ ವಿನಃ ಮತ ಹಾಕುವ ಪ್ರಸಂಗವೇ ಬರಲಿಕ್ಕಿಲ್ಲ... ಹೀಗೆ ಸ್ವಾತಂತ್ರ್ಯಯೋಧರು ಏನೇನೋ ಕನಸು ಕಾಣುತ್ತಲಿದ್ದರು. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಗಾಂಧೀಜಿಯ ಕನಸಿನ ರಾಮರಾಜ್ಯ ಪ್ರತ್ಯಕ್ಷವಾದೀತು ಎನ್ನುವ ಭ್ರಮೆಯಲ್ಲಿದ್ದರು.

ಗಾಂಧಿಯವರಿಗೆ ಮಾತ್ರ ಸ್ವರಾಜ್ಯದ ಬಗ್ಗೆ ಅತ್ಯಂತ ಸ್ಪಷ್ಟ ಕಲ್ಪನೆ ಇತ್ತು. ೧೯೪೫ರಲ್ಲಿ ಅವರ ಬಿಡುಗಡೆಯಾದ ನಂತರ ಮದ್ರಾಸಿನಲ್ಲಿ ಸೇರಿದ ವಿಧಾಯಕ ಕಾರ್ಯಕರ್ತರ ಸಭೆಯಲ್ಲಿ ಅವರು ಮಾತನಾಡುತ್ತ– "ಸ್ವರಾಜ್ಯ ಇಳಿದು ಬರುತ್ತಿರುವುದನ್ನು ನಾನು ಕಾಣುತ್ತೇನೆ. ಆದರೆ ಅದು ಬಂದ ನಂತರ ಅದನ್ನು ನಮ್ಮ ಜನ ಹೇಗೆ ಸಂಭಾಳಿಸಿಕೊಂಡು ಹೋಗುವವರೆಂಬ ಚಿಂತೆ ನನಗಿದೆ" ಎಂದು ಹೇಳಿದ್ದರು. ಅವರಿಗೆ ಸ್ವರಾಜ್ಯದ ಬಗ್ಗೆ ಪೂರ್ತಿ ಕಲ್ಪನೆಯಿತ್ತು. ಅವರು ೧೯೧೫ರಲ್ಲಿ ಈ ಬಗ್ಗೆ ಹೇಳಿದ್ದು ಹೀಗೆ–

"ಸ್ವಾತಂತ್ರ್ಯವೆಂದರೆ ಸ್ವೈರಾಚಾರವಲ್ಲ; ಸ್ವ-ನಿಯಂತ್ರಿತದಲ್ಲಿರುವುದು. ನಮ್ಮನ್ನು ನಾವೇ ನಿಯಂತ್ರಣದಲ್ಲಿ ಇಟ್ಟುಕೊಳ್ಳಬೇಕು. ಈ ಕಾರ್ಯವನ್ನು ನೀತಿಪೂರ್ಣದಿಂದ ನಡೆಯುವವನೇ ಮಾಡಬಲ್ಲ. ಆತ ಪರರಿಗೆ ಮೋಸ ಮಾಡುವದಿಲ್ಲ. ಸತ್ಯ ಮಾರ್ಗವನ್ನು ಬಿಡುವುದಿಲ್ಲ. ಆತ ತನ್ನ ಹೆಂಡರು, ಮಕ್ಕಳು, ಆಳುಕಾಳು, ನೆರೆ-ಹೊರೆ– ಇವರ ಬಗ್ಗೆ ತನ್ನ ಕರ್ತವ್ಯವನ್ನು ನಿಷ್ಠೆಯಿಂದ ಮಾಡುವ ಅಂಥ ಗೃಹಸ್ಥರ ಸಂಖ್ಯೆ ಹೆಚ್ಚಿದ್ದರೆ ಅದೇ ಸ್ವರಾಜ್ಯ. ಸ್ವಾರ್ಥಿಗಳ ಕೈಯಲ್ಲಿ ದೇಶವು ಸಿಕ್ಕರೆ ಅವರು ಅದನ್ನು ಲೂಟಿ ಮಾಡುವರು."

ಇಂದು ನಮ್ಮ ರಾಷ್ಟ್ರಕ್ಕೆ ಸ್ವಾತಂತ್ರ್ಯ ಸಿಕ್ಕು ಐದು ದಶಕಗಳೇ ಉರುಳಿದವು. ಈಗ ನಾವು ಅದರ ಸುವರ್ಣ ಮಹೋತ್ಸವವನ್ನು ಅದ್ದೂರಿಯಿಂದ ಆಚರಿಸುತ್ತಲಿದ್ದೇವೆ. ಆದರೆ ಈಗ ನಮ್ಮ ಸ್ಥಿತಿ ಏನಾಗಿದೆ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ನಮ್ಮ ಆಶೆ-ಆಕಾಂಕ್ಷೆಗಳೆಲ್ಲ ನುಚ್ಚು ನೂರು ಆಗಿವೆ.

ಗಾಂಧೀಜಿಯವರ ರಾಮರಾಜ್ಯವಾಗಲಿ, ಜೆ. ಪಿ. ಯವರ ಗ್ರಾಮ ಸ್ವರಾಜ್ಯವಾಗಲಿ ಬಂದಿತೆ? ದೇಶದ ಬಡತನ, ನಿರುದ್ಯೋಗ ನಿವಾರಣೆಯಾಗಿ ಬಡತನ ರೇಖೆಯ ಕೆಳಗೆ ಯಾರೂ ಉಳಿಯದಂತಾಯಿತೆ? ಬ್ರಿಟಿಷರ ಆಳಿಕೆಯಲ್ಲಿ ಶೆರೆ, ಶಿಂದಿ ಬಂದಾಗಬೇಕೆಂದು ಪಿಕೆಟಿಂಗ್ ಮಾಡಿ ಅನೇಕರು ಪ್ರಾಣಾರ್ಪಣ ಮಾಡಿದ್ದರು. ಮತ್ತೆ ಶೆರೆ, ಶಿಂದಿ ಬಂದಾಯಿತೆ? ಗ್ರಾಮಗಳು ಅನ್ನ, ವಸ್ತ್ರಗಳಲ್ಲಿ ಸ್ವಾವಲಂಬಿಯಾದವೆ? ಚಿಕ್ಕಪುಟ್ಟ ಉದ್ಯೋಗ, ಖಾದಿ ಗ್ರಾಮೋದ್ಯೋಗ ಬೆಳೆದವೆ? ಭ್ರಷ್ಟಾಚಾರ ನಿರ್ಮೂಲನವಾಯಿತೆ ? ಜನತೆ ನೀತಿವಂತರಾಗಿ ವ್ಯಸನಮುಕ್ತರಾದರೆ? ಜನತೆ ಎಲ್ಲ ಉಂಡುಟ್ಟು ಸುಖದಿಂದ ಇರುವರೆ? ಸದ್ಯದ ಮುಖಂಡರೆನ್ನುವರು ನೀತಿವಂತರಾಗಿ, ಸ್ವಾರ್ಥತ್ಯಾಗ ಮಾಡಿ ಜನತೆಯ ಕಲ್ಯಾಣಕ್ಕಾಗಿ ಹೋರಾಡುತ್ತಿರುವರೆ? ಇವಕ್ಕೆಲ್ಲ ಒಂದೇ ಉತ್ತರ- 'ಇಲ್ಲ' ಎಂಬುದು. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ನಮ್ಮ ಕನಸು ನನಸಾಗದೆ ವಿಪರೀತ ಪರಿಸ್ಥಿತಿಯು ಉಂಟಾಗಿದೆ. ಶ್ರೀಸಾಮಾನ್ಯನ ಯಾವ ಕೆಲಸವೂ ಸುಲಭವಾಗಿ ಆಗುವುದಿಲ್ಲ. ಭ್ರಷ್ಟಾಚಾರ ತೀರ ಬಹಿರಂಗವಾಗಿಯೇ ನಡೆದಿದೆ. ಮುಖಂಡರೆನ್ನುವವರು ಸಹ ದುಡ್ಡು, ಅಧಿಕಾರದ ಬೆನ್ನುಹತ್ತಿ ಸೇವೆ, ತ್ಯಾಗ, ಗಾಂಧೀಮಾರ್ಗವನ್ನು ಸಂಪೂರ್ಣ ಮರೆತಿದ್ದಾರೆ. ಯಾವ ರಾಜಕೀಯ ಪಕ್ಷವೂ ಇದನ್ನು ಸುಧಾರಿಸಲಾರದೇನೋ? ಇಡೀ ಸಮಾಜ ಕಲುಷಿತಗೊಂಡಿದ್ದು ಅವು ಒಂದೇ ಶಗಣೆಯ ಬೇರೆ ಬೇರೆ ಗುಂಪುಗಳಂತೆ ಇವೆ ಎಂದು ನಮ್ಮ ಹಿರಿಯ ಸ್ವಾತಂತ್ರ್ಯಯೋಧ ವೆಂಕರಡ್ಡಿ ಹೇಳುತ್ತಿದ್ದರು. ಅನೇಕ ಆತ್ಮೀಯ ಮಿತ್ರರು ಈಗಲೂ ಕೇಳುವ ಪ್ರಶ್ನೆ ಎಂದರೆ– "ಇಷ್ಟೊಂದು ಕಷ್ಟಪಟ್ಟು ಇಂಥ ಸ್ವರಾಜ್ಯವನ್ನು ಯಾಕೆ ತಂದಿರಿ?"

ಈ ಸಂದರ್ಭದಲ್ಲಿ ನಾವು ನಿರಾಶರಾಗಬೇಕಾಗಿಲ್ಲ. ಇಂದಿನ ಈ ಪರಿಸ್ಥಿತಿಯನ್ನು ಸುಧಾರಿಸಲು ಗಾಂಧೀಮಾರ್ಗ ಒಂದೇ ತಾರಕವಾಗಬಲ್ಲದು. ಇಂದಿನ ಮುಖಂಡರೆಂದು ಹೇಳಿಕೊಳ್ಳುವವರು ಮಹಾತ್ಮರ ಜನ್ಮದಿನದಂದು ಅವರ ಭಾವಚಿತ್ರಕ್ಕೆ ಪೂಜೆ ಮಾಡಿ ಮನಸಾರೆ ಹೊಗಳುತ್ತಾರೆ. ಆದರೆ ಅವರು ಹೇಳಿದ ಒಂದೇ ಒಂದು ಮಾತನ್ನೂ ಕಾರ್ಯರೂಪದಲ್ಲಿ ತರುವದಿಲ್ಲ. ಅದಕ್ಕೇ ಇಂಥ ವಿಪರೀತ ಪರಿಸ್ಥಿತಿ ನಿರ್ಮಾಣವಾಗಿದೆ.

"ನನ್ನ ಭಾರತ ಗ್ರಾಮಾಂತರದಲ್ಲಿದೆ" ಎಂದು ಹೇಳುತ್ತಿದ್ದರು ಗಾಂಧೀಜಿ. ಆದುದರಿಂದ ನಾವು ಮೊಟ್ಟಮೊದಲು ಕೈಕೊಳ್ಳಬೇಕಾದ ಕಾರ್ಯವೆಂದರೆ ಗ್ರಾಮಜೀವನದ ಸುಧಾರಣೆ. ಗ್ರಾಮದ ಪ್ರಗತಿ ಎಂದರೆ ಊರಲ್ಲಿ ಡಾಂಬರ್ ರಸ್ತೆ, ವಿದ್ಯುತ್, ಹಿಟ್ಟಿನ ಗಿರಣಿ, ವಾಹನ ಸೌಕರ್ಯ, ದೊಡ್ಡ ಕಂಪನಿಗಳ ಸ್ಥಾಪನೆ, 'ಬಾರ್'ಗಳ ಪ್ರಾರಂಭ ...ಇಂಥದು ಖಂಡಿತ ಪ್ರಗತಿ ಅಲ್ಲ. ಊರ ನೀತಿಮಟ್ಟ ಸುಧಾರಿಸಬೇಕು. ಊರಲ್ಲಿ ಎಲ್ಲರಿಗೂ ಉದ್ಯೋಗ ಸಿಕ್ಕು ಬಡತನ ನಿವಾರಣೆಯಾಗಬೇಕು. ಊರು ಅನ್ನ, ವಸ್ತ್ರಕ್ಕೆ ಸಂಪೂರ್ಣ ಸ್ವಾವಲಂಬಿಯಾಗಬೇಕು; ಶೆರೆ, ಶಿಂದಿ ತೊಲಗಬೇಕು; ಸಜ್ಜನರ ಸಂಘಟನೆ ಮಾಡಬೇಕು; ಅಡ್ಡದಾರಿ ಬಿದ್ದ ತರುಣರನ್ನು ಸನ್ಮಾರ್ಗಕ್ಕೆ ಹಚ್ಚಬೇಕು. ಊರು ಅತ್ಯಂತ ಹಸನಕಟ್ಟಾಗಿದ್ದು ಊರಿನ ನ್ಯಾಯಗಳು ಊರಲ್ಲಿಯೇ ತೀರ್ಮಾನವಾಗಬೇಕು; ಊರೊಳಗಿನ ಚುನಾವಣೆಗಳೆಲ್ಲ ಒಮ್ಮತದಿಂದ ಆಗಬೇಕು; ಅಸೆಂಬ್ಲಿ ಮತ್ತು ಪಾರ್ಲಿಮೆಂಟ್ ಚುನಾವಣೆಗಳಲ್ಲಿ ಊರೆಲ್ಲ ಸೇರಿ ಒಗ್ಗಟ್ಟಿನಿಂದ ನಿರ್ಣಯ ಮಾಡಿದಂತೆ ಮತದಾನ ಮಾಡಬೇಕು; ಊರ ಪರಿಸರದಲ್ಲಿ ಬಿದ್ದ ಮಳೆಯ ನೀರು ಕಿಂಚಿತ್ತೂ ಹರಿದು ಹೋಗದೆ ಅಲ್ಲಿಯೇ ಇಂಗಿ ಅಂತರ್ ಜಲ ಮಟ್ಟ ಏರಬೇಕು. ಅದರಿಂದ ಹನಿ ನೀರಾವರಿ ಕಾರ್ಯಗತವಾಗಬೇಕು.... ಇವು ಸಾಮಾನ್ಯವಾಗಿ ಆದರ್ಶ ಗ್ರಾಮದ ರೂಪರೇಷೆಗಳು. ಇಂಥ ಆದರ್ಶ ಗ್ರಾಮಗಳಿಂದ ದೇಶ ಉದ್ಧಾರವಾಗುವುದರಲ್ಲಿ ಸಂಶಯವಿಲ್ಲ.

ಇವು ಕೇವಲ ಕಲ್ಪನಾಲೋಕದ ಕಾರ್ಯಕ್ರಮಗಳಲ್ಲ. ಕೆಲವು ಕಡೆ ಇವು ಪ್ರತ್ಯಕ್ಷ ಕಾರ್ಯರೂಪದಲ್ಲಿಯೂ ಬಂದಿವೆ. ಒಂದು ಉದಾಹರಣೆ ನೋಡಿ– 'ರಾಳೇಗಣಶಿದ್ಧಿ' ಮಹಾರಾಷ್ಟ್ರದ ಒಂದು ಚಿಕ್ಕ ಗ್ರಾಮ. ಬಹುತೇಕ ಗ್ರಾಮಗಳಂತೆ ಈ ಗ್ರಾಮವೂ ಒಂದಾನೊಂದು ಕಾಲಕ್ಕೆ ಬಡತನದ ಬೀಡಾಗಿತ್ತು. ಜನರು ಕೆಲಸ ಹುಡುಕಿಕೊಂಡು ಬೇರೆ ಗ್ರಾಮಕ್ಕೆ ಹೋಗುತ್ತಲಿದ್ದರು. ಊರಲ್ಲಿ ೪೫ ಭಟ್ಟಿ ಸರಾಯಿ ಕೇಂದ್ರಗಳಿದ್ದು ಕುಡುಕರ ಸಂಖ್ಯೆ ವಿಪರೀತವಾಗಿತ್ತು. ಹಗಲು ಸಹ ಹೆಣ್ಣುಮಕ್ಕಳು ಊರಲ್ಲಿ ನಿರ್ಭೀತಿಯಿಂದ ಅಡ್ಡಾಡುವಂತಿರಲಿಲ್ಲ. ಊರ ನೀರಾವರಿ ಭೂಮಿ ಐವತ್ತು ಎಕರೆ ಮಾತ್ರ ಇತ್ತು. ಊರ ರಾಜ ಮಾರ್ಗದಲ್ಲಿ ಸಹ ಗಟಾರದ ನೀರು ಹರಿಯುತ್ತಲಿತ್ತು. ೧೫ ವರುಷಗಳ ಪೂರ್ವದಲ್ಲಿ ಓರ್ವ ತರುಣ ಈ ಗ್ರಾಮಕ್ಕೆ ಬಂದು ಸುಧಾರಣೆಗೆ ಟೊಂಕ ಕಟ್ಟಿದ. ಊರ ಸಜ್ಜನರ ಮತ್ತು ತರುಣರ ಸಂಘಟನೆ ಮಾಡಿದ. ಊರಲ್ಲಿಯ ಎಲ್ಲ ಭಟ್ಟಿ ಸರಾಯಿ ಕೇಂದ್ರಗಳು ಮುಚ್ಚಲ್ಪಟ್ಟವು. ಗ್ರಾಮದಲ್ಲಿ ಶೆರೆ, ಸಿಂದಿ, ಬೀಡಿ, ತಂಬಾಕು, ಸಿಗರೆಟ್ ದೊರೆಯದಂತಾಯ್ತು. ಊರ ತರುಣರು ವ್ಯಸನ ಮುಕ್ತರಾದರು. ಮಳೆಯ ನೀರು ಪರಿಸರದಲ್ಲಿಯೇ ಇಂಗಿ ಅಂತರ್ಜಲ ಮಟ್ಟ ಮೇಲೇರಿದ ಪರಿಣಾಮವಾಗಿ ಇಂದು ಹನಿ ನೀರಾವರಿಯಿಂದ ಒಂದು ಸಾವಿರ ಎಕರೆ ನೀರಾವರಿಯಾಗಿದೆ. ಊರಮನೆಗಳಿಗೆ ಇಂಗು ಬಚ್ಚಲ ಮಾಡಿದ್ದರಿಂದ

ರಸ್ತೆಯ ಮೇಲೆ ನೀರು ಹರಿಯುವದಿಲ್ಲ. ಊರ ನ್ಯಾಯ ಅಲ್ಲಿಯೇ ಬಗೆಹರಿಯುತ್ತದೆ. ಚುನಾವಣೆ ಒಮ್ಮತದಿಂದ ನಡೆಯುತ್ತದೆ. ಈಗದು ಆದರ್ಶ ಗ್ರಾಮ. ಈ ಸಾಧನೆಯನ್ನು ಮಾಡಿದ ತರುಣನೇ ಶ್ರೀ ಅಣ್ಣಾ ಹಜಾರೆ. ಆತ ಮಿಲಿಟರಿಯಲ್ಲಿ ಟ್ರಕ್ ಡ್ರೈವರ್ ಆಗಿದ್ದ. ವಿವೇಕಾನಂದರಿಂದ ಸ್ಫೂರ್ತಿ ಪಡೆದು ತನ್ನ ಗ್ರಾಮಕ್ಕೆ ಮರಳಿ, ಗ್ರಾಮದ ಹಾಳುಬಿದ್ದ ದೇವಾಲಯವನ್ನು ಜೀರ್ಣೋದ್ಧಾರ ಮಾಡಿ, ಅಲ್ಲಿಯೇ ಒಂದು ಕೋಣೆಯಲ್ಲಿ ವಾಸಿಸತೊಡಗಿ. ತಾನಂದುಕೊಂಡಿದ್ದ ಕಾರ್ಯಕ್ಕೆ ಕೈ ಹಾಕಿ, ಅದರಲ್ಲಿ ಯಶಸ್ವಿಯೂ ಆದ. ಈ ಸಾಧನೆಯನ್ನು ಗಮನಿಸಿದ ಮಹಾರಾಷ್ಟ್ರ ಸರಕಾರ ೩೦೦ ಗ್ರಾಮಗಳಲ್ಲಿ ಸುಧಾರಣಾ ಕಾರ್ಯಕ್ರಮಗಳನ್ನು ಜಾರಿಗೆ ತರುವಂತೆ ಅಣ್ಣಾ ಹಜಾರೆಯವರನ್ನು ಬಿನ್ನವಿಸಿಕೊಂಡಿತು. ಆ ಪ್ರಕಾರ ಕಾರ್ಯ ನಡೆದಿದೆ. ನನ್ನ ದೃಷ್ಟಿಯಲ್ಲಿ ಇದೇ ಗಾಂಧಿ ಮಾರ್ಗ. ಒಂದು ಕಡೆ ಪ್ರತ್ಯಕ್ಷ ಸಾಧ್ಯವಾದದ್ದು ಬೇರೆ ಕಡೆಗೂ ಏಕೆ ಆಗಬಾರದು? ಕರ್ನಾಟಕದಲ್ಲಿಯೂ ಕೆಲವೆಡೆ ಈ ಪ್ರಕಾರ ವಿಧಾಯಕ ಕಾರ್ಯಗಳು ನಡೆದಿವೆ. ಇಲ್ಲಿಯ ನೀಲಕಂಠ ಗಣಾಚಾರ ಎಂಬ ಕಾರ್ಯಕರ್ತರು ೪೦ ಗ್ರಾಮಗಳಲ್ಲಿ ಶೆರೆ, ಶಿಂದಿ ದೊರೆಯದಂತೆ ಮಾಡಿದ್ದಾರೆ. ತಮ್ಮ ಇಡೀ ಜೀವನವನ್ನೇ ಆಧ್ಯಾತ್ಮಕ್ಕೆ ಮುಡುಪಾಗಿಟ್ಟ ಕನ್ನೂರ ಗ್ರಾಮದ (ಜಿ. ವಿಜಾಪೂರ) ಶ್ರೀ. ಸ. ಸ. ಗಣಪತಿ ಮಹಾರಾಜ ಎನ್ನುವ ತೊಂಬತ್ತು ವರುಷದ 'ತರುಣ'ರು ಭಾರತೀಯ ಸ್ವರಾಜ್ಯ ಸಂಸ್ಥೆ ಎಂಬ ಸಂಘಟನೆಯನ್ನು ಹುಟ್ಟು ಹಾಕಿ ತಾವೇ ಮಾರ್ಗದರ್ಶನ ಮಾಡುತ್ತಲಿದ್ದಾರೆ. ಆದರ್ಶ ಗ್ರಾಮ ನಿರ್ಮಾಣವನ್ನು ಕೈಗೆತ್ತಿಕೊಂಡು ಎಡೆಬಿಡದೆ ಕಾರ್ಯಪ್ರವೃತ್ತರಾಗಿದ್ದಾರೆ.

ನಮ್ಮ ದೇಶ ಸುಧಾರಿಸಲು ಗಾಂಧೀ ಮಾರ್ಗದ ಹೊರತು ಅನ್ಯ ಉಪಾಯವಿಲ್ಲ ಎನ್ನುವುದು ನನ್ನ ಅಭಿಪ್ರಾಯ. ನಿಷ್ಠೆಯಿಂದ ಕಾರ್ಯ ಪ್ರವೃತ್ತರಾದರೆ ನಿಶ್ಚಿತವಾಗಿ ಯಶ ದೊರೆಯುವುದರಲ್ಲಿ ಸಂದೇಹವೇ ಇಲ್ಲ.

❋ ❋ ❋

# ಸ್ವಾತಂತ್ರ್ಯ ಮತ್ತು ಹೋರಾಟ

• ಎನ್ಕೆ

ಸ್ವಾತಂತ್ರ್ಯಪೂರ್ವದಲ್ಲೂ ಹೋರಾಟವಿತ್ತು. ಈಗಲೂ ಹೋರಾಟ ನಡೆದೇ ಇದೆ. ಭಾರತದ ಜನತೆಗೆ, ಶ್ರೀ ಸಾಮಾನ್ಯರಿಗೆ ಹೋರಾಟ ತಪ್ಪಲಿಲ್ಲ, ತಪ್ಪಿದ್ದೇ ಅಲ್ಲ. ಆಗ ಸ್ವಾತಂತ್ರ್ಯ ಪಡೆಯಲು ಹೋರಾಟ, ಈಗ ಸ್ವಾತಂತ್ರ್ಯ ಪಡೆದ ತಪ್ಪಿಗೆ ಹೋರಾಟ! ಬದುಕೇ ಒಂದು ಹೋರಾಟವಾಗಿದೆ. ಈಗ ೧೯೭೪ರಲ್ಲಿ ತಮ್ಮ ಜ್ಞಾನಪೀಠ ಪ್ರಶಸ್ತಿಯ ಸನ್ಮಾನದ ಕಾಲಕ್ಕೆ ಬೇಂದ್ರೆಯವರು ಬೆಂಗಳೂರು ನಗರ ಪಾಲಿಕೆಯ ವೇದಿಕೆಯಿಂದ ಹೇಳಿದ್ದರು: "ನಾವೀಗ ಸ್ವತಂತ್ರರಾಗೀವಿ. ಇನ್ನ ದೇಶ ಹಾಳಾದರ ನಮ್ಮಿಂದನ ಹಾಳಾಗಬೇಕು." ಆ ಮಾತು ನಿಜ ಎಂಬ ಅರಿವು ಈಗ ಎಲ್ಲರಲ್ಲೂ ಮೂಡಿದೆ.

ಇದೇಕೆ ಹೀಗಾಯಿತು ? ಈ ಚಿಂತನೆ ಘೋರವಾದದ್ದು. ಇದಕ್ಕೆ ಕಾರಣಗಳನ್ನು ನಮ್ಮೊಳಗೇ ಹುಡುಕಿಕೊಳ್ಳಬೇಕಾಗಿದೆ. ಬಹುಶಃ ನಾವು ಈ ಡೆಮಾಕ್ರಸಿ ಎಂಬುದಕ್ಕೆ ಇನ್ನೂ ಅರ್ಹರಾಗಿಲ್ಲ. ನಮಗೆ ಮತ ಚಲಾಯಿಸುವ ಮತಿ ಎಂಬುದಿಲ್ಲ. ನಮ್ಮ ದೇಶವನ್ನು ನಾವೇ ಕೊಳ್ಳೆ ಹೊಡೆಯುತ್ತಿದ್ದೇವೆ. ಅಂಚೆಯ ಮೇಲಿನ ಬೇಂದ್ರೆ ಎಚ್ಚರ ನುಡಿ ಮತ್ತೆ ಮತ್ತೆ ಚುಚ್ಚುತ್ತಿದೆ.

ಇಂದಿನ ನಮ್ಮ ಡೆಮಾಕ್ರಸಿ ಎಂದರೆ ಮತಗಳ ಬೇಟೆಯಾಡುವುದು, ದೇಶವನ್ನು ಲೂಟಿ ಮಾಡುವುದು. ಹೀಗೆ ನಡೆದರೆ ಹೇಗೆ ? ದೇಶ ಉಳಿದೀತೆ? ಡೆಮಾಕ್ರಸಿ ಉಳಿದೀತೆ? ನಾವು ಹತ್ತಕ್ಕೂ ಹೆಚ್ಚು ಮಹಾ ಚುನಾವಣೆಗಳನ್ನು ನಡೆಸಿದ ಪ್ರಜಾಪ್ರಭುಗಳು! ಎಂಟು ಪಂಚವಾರ್ಷಿಕ ಯೋಜನೆಗಳನ್ನು ನಡೆಸಿ ಸುಖೀ ದೇಶವನ್ನಾಗಿ ಮಾಡಹೊರಟು ಎಡವಿ ಎಡವಿ ಮತ್ತೆ ಕೊಡವಿಕೊಂಡು ಒಂಬತ್ತನೆಯ ಪಂಚವಾರ್ಷಿಕ ಯೋಜನೆ ಬೇಯುತ್ತಿದೆ. ಪ್ರತಿವರ್ಷ ಎಂಬತ್ತು ಸಾವಿರ ಕೋಟಿಗೂ ಮೇಲ್ಪಟ್ಟು ವಿದೇಶೀಯ ಸಾಲದ ಬಡ್ಡಿಯನ್ನು ತೆರುತ್ತ ಬಂದಿದ್ದೇವೆ. ನಮಗಿನ್ನೂ ಕುಡಿಯಲು ನೀರಿಲ್ಲ, ನಡೆಯಲು ರಸ್ತೆಗಳಿಲ್ಲ, ದೀಪಗಳಿಲ್ಲ, ತಲೆಯ ಮೇಲೆ ಸೂರಿಲ್ಲ, ಮೈಮೇಲೆ ಬಟ್ಟೆಯಿಲ್ಲ. ಹೀಗೆ ಬಟ್ಟೆಗೆಟ್ಟು ಹೋದ ನಮ್ಮ ದೇಶದ ಹಡಗು ಇನ್ನೂ ಮುಳುಗಿಲ್ಲ. ನಮ್ಮ ಹಿರಿಯರ ಪುಣ್ಯ ದೊಡ್ಡದು. 'ಗರೀಬಿ ಹಟಾವೋ' ಎಂದು ಮಂತ್ರ ಊದಿ ಹೋದ ಮಹಾಮಂತ್ರಿಗಳ ಪ್ರಭಾವ ದೊಡ್ಡದು.

ಮತ್ತೊಂದೆಂದರೆ ನಡೆಯುತ್ತಿರುವ ವಿನಾಶ ವಿಪ್ಲವ ವಿಚ್ಛಿದ್ರೀಕರಣ. ನಮಗೆ ಇತ್ತ ಕಡೆ ಪ್ರಜ್ಞೆಯೇ ಇಲ್ಲ. ಉರಿಯುವ ಮನೆಯ ಗಳ ಹಿರಿದುಕೊಂಡಷ್ಟೇ ಬಂತು ಅಂತ

ಅಧಿಕಾರ ಗಿಟ್ಟಿಸಿ ನಮ್ಮ ದೇಶದ ಬಿಟ್ಟಿ ಸಂಪತ್ತನ್ನು ಬಡಕಲಿಗೆ ಹಾಕುತ್ತಲಿದ್ದೇವೆ. ರಾಜಕೀಯವನ್ನು ಹೇಗೆ ಕ್ರಿಮಿನಲೈಜ್ ಮಾಡಬೇಕು ನಮಗೆ ಗೊತ್ತು. ನೀತಿ, ನೈತಿಕ ಮೌಲ್ಯಗಳು ಎಂಬ ಅರಿವೆ, ಪರಿವೆ ನಮಗಿಲ್ಲ. ಅಂತಹ ನೈತಿಕ ಮೌಲ್ಯಗಳನ್ನು ನಮ್ಮ ಶಿಕ್ಷಣ ಪದ್ಧತಿ ನಮಗೆ ಕಲಿಸಿಯೇ ಇಲ್ಲ. Secularism ಎಂಬ ಶಬ್ದದ ಅರ್ಥ ನಮಗಾಗಿಲ್ಲ. ಧರ್ಮ, ಜಾತಿಗಳ ಭೇದ ನಮಗೆ ತಿಳಿದಿಲ್ಲ. ಸಾಮಾನ್ಯ ಸಾಮಾಜಿಕ ಸಹಕಾರ, ಸಹಜೀವನವೆಂದರೇನು ಎಂಬುದನ್ನು ಅರಿಯದ ನಮಗೆ ಆಧ್ಯಾತ್ಮ ಎಂಬ ಶಬ್ದ ಆಕಾಶದಷ್ಟು ಎತ್ತರ! ಮಾನವ ಹಕ್ಕು-ಬಾಧ್ಯತೆಗಳ ಅನುಷ್ಠಾನಕ್ಕಾಗಿ ಒಂದು ರಾಷ್ಟ್ರೀಯ ನಿಗಮವೇ ಏರ್ಪಟ್ಟಿದೆ; ಅದರ ಲಾಭ ನಾವು ಪಡೆಯಬೇಕು; ಬಳಕೆದಾರರ ಹಿತರಕ್ಷಣೆಗಾಗಿ ಪ್ರತ್ಯೇಕ ವಿಚಾರಣಾ ಕಚೇರಿ ಇದೆ ಎಂಬುದಾದರೂ ಎಷ್ಟು ಜನರಿಗೆ ಗೊತ್ತಿದೆ ? ಸದ್ಯ 'ಹಿಂದುತ್ವದ ಸ್ಲೋಗನ್' ಕೇಳಿ ಬರುತ್ತಿದೆ. ಇದು ಉಚ್ಚ ಕುಲದಿಂದ ಅತಿ ಕೆಳಗಿನ ನೀಚ ಕುಲಗಳನ್ನೇ ಒಂದು ಹಿಂದೂ ಕುಲವಾಗಿ ರಚಿಸಿ ಒಗ್ಗೂಡಿಸಿದರೆ ಅದೊಂದು ವರವಾದೀತು. ಆರ್ಯ-ದ್ರಾವಿಡ ಎಂಬ ಭೇದ ನೀತಿಗೆ ಅವಕಾಶವಾದರೆ ಅದೊಂದು ಶಾಪವಾದೀತು ಎಂದೊಬ್ಬ ಚಿಂತಕರು ಎಚ್ಚರಿಸಿದ್ದಾರೆ. ಕಾದು ನೋಡೋಣ.

ಡೆಮಾಕ್ರಟಿಕ್ ರೀತಿಯಲ್ಲಿ ರಾಜ್ಯ ನಡೆಸಲು, ಸರಕಾರದ ಸೂತ್ರಗಳನ್ನು ನಿರ್ವಹಿಸಲು ನಮ್ಮ ಆಡಳಿತಗಾರರಿಗೆ ಮನಸ್ಸಿಲ್ಲವೊ, ಬುದ್ಧಿಯಿಲ್ಲವೊ ತಿಳಿಯದು. 'ಸರ್ವೇ ಜನಾಃ ಸುಖಿನೋಭವಂತು' ಎಂಬ ಮಾತು ಬಹಳ ಹಳಸಿ ಹಳೆಯದಾಗಿ ಹೋಗಿದೆ. ಇಂದಿನ ಮಾಫಿಯಾ ಜಗತ್ತಿನಲ್ಲಿ (ಇದೀಗ ಸಿನೆಮಾ ಒಂದು ನಿಯಮಬದ್ಧ ಉದ್ಯೋಗವೆನಿಸಿ ಹೆಚ್ಚಿನ ಸ್ಥಾನಮಾನ, ಸ್ವಾತಂತ್ರ್ಯ ಪಡೆದಿದೆ. ಸಂತೋಷ) ಇದು ನಮ್ಮ ದೇಶದ ಏರಿಕೆಯ ಕಾಲ. ಏರಿಕೆ ಎಂದರೆ ಮಾರುಕಟ್ಟೆಯ ಬೆಲೆಗಳ ಏರಿಕೆ. ಮಾನವೀಯ ಮೌಲ್ಯಗಳ ಉಚ್ಛ್ರಾಯವಲ್ಲ!

ನಮ್ಮಲ್ಲಿ ನಿರಕ್ಷರತೆ ಮಾತ್ರವಲ್ಲ, ಅಜ್ಞಾನ, ಅಂಧಶ್ರದ್ಧೆ, ಕುರುಡು ಕಂದಾಚಾರಗಳು ತುಂಬಿ ಹೊರಸೂಸುತ್ತಿವೆ. ನಮ್ಮ ಮಹಿಳೆಯರಷ್ಟೇ ಶೋಷಣೆಗೊಳಗಾಗಿಲ್ಲ, ಅಮಾಯಕರೂ ಶೋಷಿಸಲ್ಪಡುತ್ತಿದ್ದಾರೆ. ಗುಣವನ್ನು ಗುರುತಿಸಿ ಗೌರವಿಸುವ ಔದಾರ್ಯ ನಮ್ಮ ಸಂಸ್ಕೃತಿಯಲ್ಲಿಲ್ಲ. ಇಂದಿನ ಟಿ. ವಿ., ಸಿನೆಮಾ ಸಂಸ್ಕೃತಿಗಳು ಕೊಲೆ, ಸುಲಿಗೆ, ರಕ್ತಪಾತ, ಲೈಂಗಿಕ ದೌರ್ಜನ್ಯಗಳನ್ನೇ ಕಾಣಿಸಿ ಕಲಿಸುತ್ತಿವೆಯೇನೋ ಎನಿಸುತ್ತದೆ. ನಾವು ವಾಕ್ ಸ್ವಾತಂತ್ರ್ಯ ಬೇಡುತ್ತೇವೆ; ಆದರೆ ಸಭ್ಯ ಭಾಷೆ ನಾವರಿಯೆವು. ಶೇಕ್ಸ್‌ಪಿಯರನ "As you like it" ಎಂಬ ನಾಟಕದಲ್ಲಿ ನಾಗರಿಕತೆಯನ್ನರಿಯದ ಕಾಡುಮನುಷ್ಯ ತನಗೆ ಸಭ್ಯತೆಯನ್ನು ಕಲಿಸ ಬಂದವನಿಗೆ ಹೇಳುತ್ತಾನೆ : **"You have taught me language and I know how to curse you"** (ನೀನು ನನಗೆ ಭಾಷೆಯನ್ನು ಬೋಧಿಸಿದ್ದಿ, ಅದರಿಂದಾಗಿ ನಿನಗೆ ಹೇಗೆ ಶಾಪ ಹಾಕಬೇಕು ಎಂಬುದನ್ನು ಕಲಿತಿದ್ದೇನೆ) ಎಂದು. ನಾವು ಸಭ್ಯರಾಗಲೊಲ್ಲೆವಷ್ಟೇ ಅಲ್ಲ, ಸಭ್ಯತೆ, ಸಜ್ಜನಿಕೆ, ಒಳ್ಳೆಯತನಗಳನ್ನೇ ಒಲ್ಲದವರಾಗಿದ್ದೇವೆ. ಇಂದಿನ ಮತಾಧಿಕ್ಯ ಬಲವುಳ್ಳ ಸರಕಾರಗಳಲ್ಲಿ ಬುದ್ಧಿಜೀವಿಗಳು ಅಲ್ಪಸಂಖ್ಯಾತರಾಗಿ ಆಡಳಿತದ ಚಟುವಟಿಕೆಗಳಲ್ಲಿ ಏನೂ ಕೆಲಸ, ಅಂಗವಿಲ್ಲದವರಾಗಿ ಬಿಟ್ಟಿದ್ದಾರೆ.

ಹಾಗಾದರೆ ಪ್ರೋತ್ಸಾಹಕ್ಕೆ ಜೋಲದೆ, ನಿರಪೇಕ್ಷವಾಗಿ ನಮ್ಮ ಸಾಹಿತ್ಯ ಏನು ಮಾಡಿದೆ ? ಜನತೆಯ ಜೀವನ ಮಟ್ಟವನ್ನು ಎತ್ತರಿಸಿದೆಯೆ ? ನಮ್ಮ ಶಿಕ್ಷಣವೂ ನಮ್ಮ

ಜೀವನ ಮಟ್ಟವನ್ನು ಎತ್ತರಿಸಿಲ್ಲ, ನಮ್ಮ ಸಾಹಿತ್ಯವೂ ಅಷ್ಟೆ. ಕಾಲಕಾಲಕ್ಕೆ ಮಹಾತ್ಮರೊಬ್ಬರು ಹುಟ್ಟಿಯೇ ಇರುತ್ತಾರೆ ಮತ್ತೆ. ಗಾಂಧೀಜಿ ಎಂಬ ಮಹಾತ್ಮರೊಬ್ಬರು ಹುಟ್ಟಿದರು. ಅವರನ್ನು ಗುಂಡು ಹಾಕಿ ಕೊಂದವರು ನಾವು. ನಾವು ಸಾಮಾನ್ಯರಲ್ಲ– ಎಂದು ಹೇಳುತ್ತಾರೆ ಬೇಂದ್ರೆ:

**ಸಾಕ್ರೆಟಿಸ್‌ನ ಮಾತು ಕೇಳ್ತೀವಿ ವಿಷಾ ಹಾಕ್ತೀವಿ**
**ಪೈಗಂಬರರ ಮಾತು ಕೇಳ್ತೀವಿ ದೇಶಾಂತರಕ್ಕ ಓಡಿಸತೀವಿ**
**•ಕ್ರೈಸ್ತನ ಮಾತು ಕೇಳ್ತೀವಿ ಶಿಲುಬೆಗೆ ಏರಸ್ತೀವಿ**
**ಗಾಂಧೀ ಮಾತು ಕೇಳ್ತೀವಿ ಗುಂಡು ಹಾರಿಸ್ತೀವಿ.**

ಹೌದು. ನಾವು ಜನಾ ಸಾಮಾನ್ಯರಲ್ಲ!

ಸ್ವಾತಂತ್ರ್ಯ ಸಿಗುವ ಮೊದಲು ಹೋರಾಟ ನಡೆಯಿತು. 'ನರಬಲಿ' ಎಂಬ ಕವಿತೆ ಬರೆದ ಕವಿ ಹಿಂಡಲಗಿ ಜೇಲಿನಲ್ಲಿ, ಮುಗದದ ಹದ್ದುಬಸ್ತಿನಲ್ಲಿ ಅಂಡಲೆಯಬೇಕಾಯಿತು! ಸ್ವಾತಂತ್ರ್ಯ ಸಿಗುವ ಮೊದಲು 'ಚಲೇಜಾವ್' ಎಂದು ಬ್ರಿಟಿಷರಿಗೆ ಕರೆ ಕೊಟ್ಟೆವು. ಇದರಲ್ಲಿ ಗುಂಡಿನೇಟಿಗೆ ಪ್ರಾಣ ತೆತ್ತವರೆಷ್ಟು? 'ಜಲಿಯನ್ ವಾಲಾಬಾಗ್' ದುರ್ಘಟನೆ ಬಿಳಿಯರಿಂದ ಮಾತ್ರ ನಡೆಯಲಿಲ್ಲ. ಇನ್ನು ಪ್ರಭಾವೀ 'ಚಲೇಜಾವ್' ಚಳುವಳಿ ಕೃಷ್ಣಕುಮಾರ ಕಲ್ಲೂರರ 'ಜಾಗೃತ ರಾಷ್ಟ್ರ,' ಮಿರ್ಜಿ ಅಣ್ಣಾರಾಯರ 'ಸತ್ತಿ ಸರಕಾರ', 'ರಾಷ್ಟ್ರ ಪುರುಷ' ಕಾದಂಬರಿಗಳು, ಇನಾಂದಾರರ 'ಮೂರಾಬಟ್ಟೆ', ತತ್ಪೂರ್ವದಲ್ಲಿ, ತದನಂತರ ಬೆಟಗೇರಿ ಆನಂದಕಂದರ ಮಗಳ ಮದುವೆ, ಮಮತೆಯ ಮುಡಿಪು– ಕಾದಂಬರಿ ಮತ್ತು ಕತೆಗಳು ಸ್ವಾತಂತ್ರ್ಯ ಪೂರ್ವದ ಹೋರಾಟದ ಚಿತ್ರಣಗಳು. ಬಸವರಾಜ ಕಟ್ಟೀಮನಿ ಅವರ 'ಮಾಡಿ ಮಡಿದವರು' ಕಾದಂಬರಿಯಂತೂ 'ಚಲೇಜಾವ್' ಚಳುವಳಿಯ ಬಾವುಟದಂತಿದೆ. ಇಂದಿಗೂ ಅದರ ರುಚಿ, ಅದರ ಪರಿಣಾಮ ತೀವ್ರತೆ ಕುಂದಿಲ್ಲ, ಕಂದಿಲ್ಲ. (ಇತ್ತೀಚೆಗೆ ಆಕಾಶವಾಣಿಯಲ್ಲಿದು ಹೃದಯಸ್ಪರ್ಶಿ ಧಾರಾವಾಹಿಯಾಗಿ ಪ್ರಸಾರಗೊಂಡಿದೆ) ೧೯೨೧ ರಿಂದ ೧೯೩೦-೩೧ರ ಚಳುವಳಿಗಳಲ್ಲಿ ಪರದೇಶಿ ಬಟ್ಟೆ ಹೋಳಿ, ಜಂಗಲ್ ಸತ್ಯಾಗ್ರಹ, ಉಪ್ಪಿನ ಸತ್ಯಾಗ್ರಹ, ಕರನಿರಾಕರಣೆ, ಅಸಹಕಾರ ಮೊದಲಾದ ಚಳುವಳಿ ನನ್ನ ಬಾಲ್ಯ, ವಿದ್ಯಾರ್ಥಿ ಬದುಕಿನ ಮೇಲೆ ತೀವ್ರ ಪರಿಣಾಮ ಬೀರಿದವು. ಡಾ. ಕಬ್ಬೂರ, ಡಾ. ಹರ್ಡೀಕರ, ಹುಕ್ಕೇರಿಕರ, ಅನಂತರಾವ ಜಾಲಿಹಾಳ, ಕರಮರಕರ, ದಿವಾಕರರ ಭಾಷಣಗಳು ಅಳಿಸದ ಸ್ಫೂರ್ತಿ ಕೊಟ್ಟವು.

೧೯೪೭, ಆಗಸ್ಟ್ ೧೫. 'Tryst with destiny'ಯ ಸ್ವಾತಂತ್ರ್ಯ ಸಿಕ್ಕಿತು. ಆದದ್ದೇನು? ಶ್ರೀರಂಗರ "ಶೋಕಚಕ್ರ" ಎಂಬ ನಾಟಕದ ಜಯಣ್ಣ ಹೇಳುತ್ತಾನೆ : "ಗಾಂಧೀ ತತ್ವದ ಹಾದಿ ಹಿಡಿದವರಿಗೆ 'ಶೋಕಚಕ್ರ'; ಗಾಂಧೀ ಟೊಪ್ಪಿಗೆಯ ಬೆನ್ನು ಹತ್ತಿದವರಿಗೆ 'ಅಶೋಕ ಚಕ್ರ' ಅರ್ಥಾತ್ 'ಅಧಿಕಾರ ಚಕ್ರ'!" ಅಧಿಕಾರದ ದಾಹ, ನೌಖಾಲಿಯಲ್ಲಿ ಗಾಂಧೀಜಿ ತುಳಿಯುತ್ತಿದ್ದ ನೆಲದ ತುಂಡಿನ ಜಗಳದ ಝಳಕ್ಕಿಂತ ತೀವ್ರತರ.

ಸ್ವರಾಜ್ಯ ಸಿಕ್ಕಿತು. ಕಾಂಗ್ರೆಸ್ ಗುರಿ ಸಾಧಿಸಿತು. ಇನ್ನು ಇವನ್ನು ನಕಾಶದಂತೆ ಸುತ್ತಿಟ್ಟುಬಿಡಿರಿ; ಕೇವಲ ಹೋರಾಟದ ದಾಖಲೆಯ ನಕಾಶ ಎಂದು ಇದು ಉಳಿಯಲಿ– ಎಂದರು. ಆದರೆ ಕೇಳುವವರಾರು ? ಸ್ವತಃ ನೆಹ್ರೂ ಅವರಿಗೆ ಪ್ರಧಾನಿಪಟ್ಟದ ರುಚಿ

ತೀರಿರಲಿಲ್ಲ ಎನ್ನುವವರೂ ಇದ್ದಾರೆ. ದಾಮೋದರಕೊಳ್ಳದಂತಹ ಆಣೆಕಟ್ಟುಗಳೇ ನಮ್ಮ ದೇವಾಲಯಗಳು ಎಂದು ಸಾರಿದವರನ್ನನುಸರಿಸಿಯೆ ಜಾತೀಯತೆಯ ಕೊಳ್ಳಿದೆವ್ವ ತನ್ನ ತಾಂಡವ ನಡೆಸಿತು. ಆದರೆ ಸಮಕಾಲೀನ ಪ್ರಜ್ಞೆಗೆ ನೆಹರೂ ತ್ಯಾಗಮೂರ್ತಿಯಾಗಿಯೇ ಪೂಜ್ಯರಾಗಿ ಕಂಡರು. ಅಂತೆಯೆ ಅವರ ವಂಶ ಪರಂಪರೆಗೇ ವ್ಯಕ್ತಿಪೂಜೆ ಎಂಬುದು ಅರಸೊತ್ತಿಗೆಯ ಆಳ್ವಿಕೆಯ ಪತಾಕೆಯಂತೆ ನಡೆದುಕೊಂಡು ಬಂತು.

ರಾಜಕೀಯ ಜೀವನ ನಾಟಕಕ್ಕೆ ಬೇಸತ್ತ ಶ್ರೀರಂಗರೇ ಇನ್ನೊಂದು ನಾಟಕ ಬರೆದರು: 'ಭಾರತ ಭಾಗ್ಯ ವಿಘಾತಾ' ಎಂದು! ಯಾರು ಈ ವಿಘಾತ ? 'ನನಗೂ ನಿನಗೂ ಅಂಟಿದ ನಂಟಿನ ಕೊನೆ ಬಲ್ಲವರಾರು ಕರಿ ಕುರ್ಚಿಯೆ' ಎಂದು ಹಾಡಲು ಕಲಿತ (ಜಾತಿ) ಮತಾನ್ವೇಷಿ, ಚುನಾವಣಾಮತಾನ್ವೇಷಿ, ಮಂತ್ರಿಕುರ್ಚಿ ಅಧಿಕಾರ ಕ್ರಿಮಿ! ಮಂತ್ರಿಯಾಗಿರುವಾಗಲೆ ಮರಣ ಹೊಂದಿದರೆ ತನ್ನ ಖಾಲಿ ಕುರ್ಚಿಯನ್ನು ಚಿತೆಯಲ್ಲಿ ಹಾಕಿ ಬಿಟ್ಟು ಚಿತಾಭಸ್ಮವನ್ನು ಗಂಗಾಜಲದಲ್ಲಿ ವಿಸರ್ಜಿಸಬೇಕೆಂಬ ಅಂತಿಮ ಆಸೆ.

> **"ಮಕ್ಕಳಿವರೇನವ್ವ, ಮಕ್ಕಳಿವರೇನವ್ವ**
> **ನಾ ಪಡೆದ ಮೂವತ್ತು ಮೂರು ಕೋಟಿ"**

ಎಂದು ಹಾಡಿದ ನಮ್ಮ ತಾಯಿಗೆ "ಅಮ್ಮಾ, ನಿನ್ನ ಮಕ್ಕಳ ಸಂಖ್ಯೆ ನೂರು ಕೋಟಿಯಾಗಲಿದೆ. ಕಾಳಜಿ ಮಾಡಬೇಡ, ಚಿರಂಜೀವಿಯಾಗಿ ಬಾಳು" – ಎಂದು ಕವಿತೆಗೆ ತಿದ್ದುಪಡಿಯಾಗಿ ಹರಕೆ ಸಲ್ಲಿಸುವಂತಾಗಿದೆ.

ನಮ್ಮಲ್ಲಿ ವಿಮರ್ಶಕರು ಬೆಳೆಯುತ್ತಿದ್ದಾರೆ. ಸೃಜನಶೀಲರು ಸೊರಗುತ್ತಲಿದ್ದಾರೆ. ಬೇಕು, ವಿಮರ್ಶಕರು ಬೇಕು; 'ಗುಣಮೌನಿ'ಗಳಾಗಿ, ಗುಂಪುಗಾರಿಕೆಯನ್ನು ಪೋಷಿಸುವ ವಿಮರ್ಶಕರಿಗಿಂತ ಮೌಲ್ಯಗಳನ್ನೇ ಎತ್ತಿ ಹಿಡಿಯುವಂತಹ ಸಾಹಿತ್ಯ ವಿಮರ್ಶಕರಂತೆ ರಾಜಕೀಯ ವಿಮರ್ಶಕರೂ ಬೇಕು. ರಾಜಕೀಯ ವಿಮರ್ಶಕರು ಎಂದೊಡನೆಯೆ ಒಂದು ಪಾರ್ಟಿಯ ಮುಖಯಂತ್ರದಂತೆ ಕೆಲಸ ಮಾಡುವ ಪತ್ರಿಕೆಗಳೂ, ಪತ್ರಿಕಾ ವಿಮರ್ಶಕರಿಗಿಂತ ದೇಶದ ಹಿತ, ಜನರ ಹಿತವನ್ನು ಅರಿತುಕೊಂಡು ಸರಕಾರದ ಕಣ್ಣು ತೆರೆಯುವಂತಹ ನಿಷ್ಪಕ್ಷಪಾತ ರಾಜಕೀಯ ಪತ್ರಿಕಾ ಸಂಪಾದಕ ವಿಮರ್ಶಕರು ನಮಗೆ ಬೇಕು. ಚುನಾವಣಾ ಸುಧಾರಣೆಗಳಾಗಬೇಕು. ಅವು ಯಾವ ರೀತಿ ಆಗಬೇಕು, ಯಾಕೆ ಎಂಬ ಸ್ಪಷ್ಟೀಕರಣದೊಡನೆ ಆ ಸುಧಾರಣೆಗಳು ಅನುಷ್ಠಾನದಲ್ಲಿ ಬರಲಿಲ್ಲ ಎಂಬುದಕ್ಕೂ ಉತ್ತರ ಶೋಧದ, ಬೋಧ ನಡೆಯಬೇಕು. ಒಬ್ಬ ಶೇಷನ್ ಅಂತಹುದು ಮತದಾರರ ಐಡೆಂಟಿಟಿ ಫೋಟೋ ಬೇಕೆಂದು ಕಟ್ಟು ಹಾಕಿ ಪಟ್ಟು ಹಿಡಿದು ಕಾರ್ಯಕ್ಕೆ ಟೊಂಕ ಕಟ್ಟಿದರು. ಏನೋ ಸರಕಾರಿ ಬೊಕ್ಕಸ ಅದಕ್ಕಾಗಿ ಸ್ವಲ್ಪ ತೆರವಾದದ್ದೇ ನಿಜವಾಗಿ, ಆ ಐಡೆಂಟಿಟಿಗಳಿಲ್ಲದೆಯೆ ಮಹಾ ಚುನಾವಣೆ ನಡೆದು ಹೋಯಿತು. ಶೇಷನ್ ಕುರ್ಚಿಗೆ ಬಂದವರೇಕೆ ತುಟಿ ಮುಚ್ಚಿದರು ? ಈ ವಿಷಯವಾಗಿ ಯಾವ ಪತ್ರಿಕೆಗಳೂ ಕೂಗು ಹಾಕಿದಂತಿಲ್ಲ. ಯಾಕೆ ? ಖೈರನಾರ್ ಎಂಬ ಒಬ್ಬ ಮುಂಬಯಿ ಸಹಾಯಕ ಆಯುಕ್ತ ತನ್ನ ಪಾಲಿನ ಕರ್ತಕರ್ಮವನ್ನು ಮಾಡುವ ನಿಷ್ಕಾಮ ಕರ್ಮಯೋಗಿಯಂತೆ ಕಾರ್ಯಮಾಡಹೋಗಿ ಮೂಲೆಗುಂಪಾಗಿ ಮನೆ ಹಿಡಿದು ಕೂಡುವಂತಾಯಿತು. ನಿಷ್ಕಪಟಿ ಶ್ರೀಸಾಮಾನ್ಯರ ಸೇವಕನೆಂದು ಕಾರ್ಯತತ್ಪರನಾಗಿ ಅಮೆರಿಕೆಯ ಅಧ್ಯಕ್ಷರಿಂದ ಗೌರವ ಪಡೆದ ಅಣ್ಣಾ ಹಜಾರೆ ಅವರನ್ನು ಬೆನ್ನು ಕಟ್ಟಿ ಊರಿಗೆ

ನೂರು ಜನ ಯಾಕೆ ಎದ್ದೇಳಲೊಲ್ಲರು ? ಬಾಬಾ ಸಾಹೇಬ ಆಮ್ಟೆ ಅವರಂತಹ ನಿಃಸ್ಪೃಹಿ ಕಾರ್ಯಕರ್ತರು ನಮ್ಮಲ್ಲಿ ಯಾರು ? ನಮ್ಮ ಸಾಹಿತಿಗಳಲ್ಲೂ ಈ ಪ್ರೇರಕ ಪ್ರಜ್ಞೆ ಯಾಕೆ ಪುಟಿದೇಳಲೊಲ್ಲದು ? ಖೈರನಾರ್ ಅಂತಹ ಆಯುಕ್ತರಾಗಲಿ ಕಾರ್ಪೋರೇಟರ್‌ರಾಗಲಿ ನಮ್ಮಲ್ಲಿ ಔಷಧಕ್ಕೂ ದೊರಕುವುದಿಲ್ಲ. ನೀರು, ದಾರಿದೀಪ, ಒಳ್ಳೆಯ ರಸ್ತೆ ಇಷ್ಟಾದರೂ ಪೂರೈಸದ ಕಾರ್ಪೋರೇಶನ್‌ಗಳು; ಸುಖೀರಾಜ್ಯ, ಸುಖೀ ದೇಶ, ಸಮೃದ್ಧ ಜನತಾ ಕಲ್ಯಾಣವನ್ನು ಸಾಧಿಸದ ಸರಕಾರಗಳಿಂದೇನು ಪ್ರಯೋಜನ? 'ಸಂಪೂರ್ಣ ಕ್ರಾಂತಿ'ಯನ್ನು ಘೋಷಿಸಿದ ಜಯಪ್ರಕಾಶರಂತಹ ನಿಃಸ್ಪೃಹಿ ಜನ ಇಂದು ದೊರೆತಾರೆಯೆ? ಈ ನಿಟ್ಟಿನಲ್ಲಿ ಜೆ. ಪಿ. ಅವರ ಸಂಪೂರ್ಣ ಕ್ರಾಂತಿಯ ಕ್ರಾಂತಿಕಾರಿ ನಾಟಕ ಒಂದಾದರೂ ಕನ್ನಡಕ್ಕೆ ಬೇಡವೆ? ಕರ್ನಾಟಕದಲ್ಲೇ ಯಾಕೆ ವಿದ್ಯುತ್ ಕೊರತೆ? ಕರ್ನಾಟಕದಲ್ಲೇ ಯಾಕೆ ನೀರಿನ ವ್ಯತ್ಯಯ? ಕರ್ನಾಟಕದಲ್ಲೇ ಯಾಕೆ ಮಳೆ ಅನಿಶ್ಚಿತ ಮತ್ತು ಅಪರೂಪ ಎಂದೇನೂ ಕೇಳುವಂತಿಲ್ಲವಲ್ಲ ಸರಕಾರಕ್ಕೆ! ಮಹಾರಾಷ್ಟ್ರದ ಜನ ಇಲ್ಲಿಗೆ ಬಂದಾಗ ಈ ಅನಿಶ್ಚಿತ ದೀಪ-ನೀರುಗಳ ಅವ್ಯವಸ್ಥೆ ನೋಡಿ ಇಲ್ಲಿಯ ಕಾರ್ಪೋರೇಶನ್ ಕಾರ್ಯಕ್ಷಮತೆಗೆ ಮೂಗು ಮುರಿದು ಮತ್ತೆ ಮುಂಬಯಿಗೆ ಮರಳುತ್ತಾರೆ.

ಶ್ರೇಷ್ಠ ಆಧ್ಯಾತ್ಮಿಯೊಬ್ಬರು ವಿಜಾಪುರ ಜಿಲ್ಲೆಯ ಕನ್ನೂರು ಎಂಬ ಹಳ್ಳಿಯಲ್ಲಿದ್ದುಕೊಂಡು "ಸುರಾಜ್ಯ ಪಥ" ಎಂಬ ಒಂದು ಸಾಪ್ತಾಹಿಕವನ್ನು ನಡೆಸುತ್ತಾರೆ. ಈ ಆಧ್ಯಾತ್ಮಿಗೆ ಇರುವಷ್ಟು ವಿಧಾಯಕವಾದ ರಾಜಕೀಯ ಪ್ರಜ್ಞೆ, ವಿವರ ಮಾಹಿತಿ ಯಾವ ಮುಖ್ಯಮಂತ್ರಿಗೂ ಇದ್ದಿರಲಾರದು! ಸ್ವರಾಜ್ಯವೇನೋ ಸಿಕ್ಕಿತು, ಆದರೆ ಸುರಾಜ್ಯ ಮಾತ್ರ ಸಿಗಲಿಲ್ಲ ಎಂದುಕೊಂಡು ಈ ನಿಟ್ಟಿನಲ್ಲಿ ಸಕ್ರಿಯ ಸಂಪಾದಕೀಯ ನುಡಿಗಳನ್ನು ಬರೆಯುತ್ತಾರೆ. ಭ್ರಷ್ಟಾಚಾರ ನಿರ್ಮೂಲನೆ ಒಂದಾದರೆ ಸಾಕು, ದೇಶ ಸಮೃದ್ಧವಾಗುತ್ತದೆ ಎಂದು ಈ ಭ್ರಷ್ಟಾಸುರನ ಹಾವಳಿ ನಿಲ್ಲುವ ಹಲವಾರು ವಿಧಾಯಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಒಂದೊಂದೇ ಗ್ರಾಮವನ್ನು ದತ್ತಕ ತೆಗೆದುಕೊಂಡು ಅದನ್ನು ಆದರ್ಶ ಗ್ರಾಮವಾಗುವಂತೆ ಅಲ್ಲಿ ಪಂಚಾಯತಿಗಳನ್ನು ಸ್ಥಾಪಿಸಲು ತೊಡಗಿದ್ದಾರೆ. ನಮ್ಮ ಕಣ್ಣಿಗೆ ಕಾಣುವ, ವಿರಕ್ತ ಸನ್ಯಾಸಿಗಳೆಂದುಕೊಳ್ಳುವ ಜೊಳ್ಳು ಆಧ್ಯಾತ್ಮಿಗಳನ್ನು ಈ ನಮ್ಮ ಪೂಜ್ಯ ಗಣಪತಮಹಾರಾಜರ ಮುಂದೆ ನಿವಾಳಿಸಬೇಕು ಎಂದರೆ ಇದೇನೂ ಅತಿಶಯೋಕ್ತಿಯಾಗಲಿಕ್ಕಿಲ್ಲ. ಒಂದೊಂದು ಪಂಚವಾರ್ಷಿಕ ಯೋಜನೆಗೆ ಎಷ್ಟೆಷ್ಟು ಭ್ರಷ್ಟಾಸುರನ ಹಾವಳಿ ನಡೆಯುತ್ತದೆ, ಹೇಗೆ ಮಂಜೂರಾದ ಹಣವನ್ನು ರುಚಿಯಾದ ಮಸಾಲೆ ಶಗಣೆಯಂತೆ ನುಂಗಿ ವಿದೇಶಿ ಸಾಲಕ್ಕೆ ಕೈಯೊಡ್ಡಿ ಇದುವರೆಗೆ ಈ ಸ್ವತಂತ್ರ ದೇಶ ಸುಮಾರು ಎಂಬತ್ತು ಸಾವಿರ ಕೋಟಿಯಷ್ಟು ಬರಿ ವಾರ್ಷಿಕ ಬಡ್ಡಿಯನ್ನೇ ತೆರುತ್ತ ಬಂದಿದೆ ಎಂದು ಹೇಳಿತಲ್ಲವೆ ? ಇನ್ನು ಅಸಲು ಮುಟ್ಟಿಸುವ ಬಗೆ? ಯಾವಾಗ? ದೇವರಿಗೇ ಗೊತ್ತು!

ಸ್ವಾತಂತ್ರ್ಯಪೂರ್ವದ ಹೋರಾಟದ ತ್ಯಾಗ, ಅರ್ಪಣಗಳಲ್ಲಿದ್ದ ಸುಖ ಈಗ ಸ್ವತಂತ್ರವಾಗಿ ಐವತ್ತು ವರ್ಷಗಳಾದರೂ ದೇಶ ಐವತ್ತು ವರ್ಷಗಳ ಹಿಂದೆ ಇದ್ದಷ್ಟು ಸುಖ-ಸೋವಿ ಕಾಲವನ್ನು ಕಾಣಲು ಸಾಧ್ಯವೆ?

ಆಗ ಆ ಸ್ವಾತಂತ್ರ್ಯಪೂರ್ವ ಹೋರಾಟದ ದಿನಗಳು – ಆ ಚಳುವಳಿಯ, ಆ ಪ್ರಭಾತ ಫೇರಿಯ ಹಾಡುಗಳು, ಆ ನಗರ ಪ್ರದಕ್ಷಿಣೆ, ಕಳ್ಳಿ ತಿಪ್ಪಣ್ಣ ಶಾಸ್ತ್ರಿ, ರಾ. ಮೊ. ಕರಗುದರಿ

ಅಪರ ರಾಜಕೀಯ ಹರಿಕಥೆಗಳು, ಆ ಸತ್ಯಾಗ್ರಹದ ದಿನಗಳು, ಸೆರೆಮನೆಗೆ ಹೊರಟ ಪತಿಗೆ ಕುಂಕುಮ ಹಚ್ಚಿ ಆರತಿ ಬೆಳಗಿ ಬೀಳ್ಕೊಡುತ್ತಿದ್ದ ನಮ್ಮ ವೀರ ಗೃಹಿಣಿಯರು ನಿಜವಾಗಿಯೂ ಆಗಿನ ತರುಣ ಪೀಳಿಗೆ ಮೇಲೆ ತುಂಬ ಪ್ರಭಾವ ಬೀರಿದರು. ಸರಕಾರಿ ಶಾಲೆ ಬಿಟ್ಟು ರಾಷ್ಟ್ರೀಯ ಶಾಲೆ ಸೇರಿದರು, ವಿದ್ಯಾರ್ಥಿಗಳು. ನಮ್ಮ ವೀರರಾಣಿ ಚೆನ್ನಮ್ಮ, ನಮ್ಮ ಲಕ್ಷ್ಮೀಬಾಯಿ ರಘಾಂಸಿ ಕುಲದ ಮುತ್ತೈದೆಯರು, ಅಬಲೆಯರಲ್ಲ ಸಬಲೆಯರು ಅನಿಸಿಕೊಂಡರು. ಒಬ್ಬ ಮೈಲಾರ ಮಹಾದೇವಪ್ಪ, ಒಬ್ಬ ಕೀರ್ತಿ ಆರಘಾದ್, ಭಗತ್‌ಸಿಂಗ್, ರಾಜಗುರು, ಸುಖದೇವ, ಶ್ರೀ ಅರಬಿಂದೋ ಮತ್ತು ಸೋದರ ಇಂತಹ ವೀರಾಗ್ರಣಿಗಳು ಮತ್ತೆ ಏಕೆ ಹುಟ್ಟಲಿಲ್ಲ? ಇದರ ಪ್ರತೀಕಾರವೆಂಬಂತೆ ಎಷ್ಟೋ ಸರಕಾರಿ ನೌಕರರು ತ್ಯಾಗ ಪತ್ರ ನೀಡಿ ಸ್ವತಂತ್ರ ಖಾದೀ ಉದ್ಯೋಗ ಕೈಕೊಂಡರು. ಆಗಿನ ಆ ಜನತಾ ಪ್ರತಿಕ್ರಿಯೆ, ಪ್ರತೀಕಾರಗಳು ಇಂದಿನ ಮಾಧ್ಯಮಗಳಲ್ಲಿ ಏಕೆ ಜೋರಾಗಿ ಕೇಳಿಸುವುದಿಲ್ಲ?

ಸ್ವಾತಂತ್ರ್ಯಪೂರ್ವ ಯುಗದಲ್ಲಿ ಸ್ವಾತಂತ್ರ್ಯ ಯುದ್ಧ ತಂತ್ರವನ್ನು ಯೋಜಿಸಿ ದೇಶದ ಯುವ ಜನಾಂಗವನ್ನು ಸಚೇತನಗೊಳಿಸಿದ ಬುದ್ಧಿಜೀವಿಗಳೂ, ಶ್ರದ್ಧಾವಂತ ಜ್ಞಾನಿಗಳೂ ಆದ ಲೋಕಮಾನ್ಯ ಟಿಳಕ, ಗಾಂಧೀಜಿ, ಗೋಪಾಲಕೃಷ್ಣ ಗೋಖಲೆ, ಸರದಾರ ಪಟೇಲ್, ಲಾಲಾ ಲಜಪತರಾಯ್, ರವೀಂದ್ರನಾಥ ಟಾಗೋರ್, ವೀರಯೋಧ ನೇತಾಜಿ, ವೀರಕವಿ ಇಕ್ಬಾಲ್, ತಮಿಳು ಕವಿ ಭಾರತಿ, ಸರಹದ್ದಿನ ಗಾಂಧೀಜಿ ಎಡಗೈ ಬಲಗೈ ಅಲಿ ಸೋದರರು, ಆಜಾದ್, ರಾಜಾಜಿ, ಪೊಟ್ಟಿ ಶ್ರೀ ರಾಮುಲು, ಕಾಮರಾಜ್, ಡಾ. ರಾಧಾಕೃಷ್ಣ, ಇಂತಹ ಪ್ರಥಮ ಪಂಕ್ತಿಯ ದೂರದೃಷ್ಟಿಯ ಮೇಧಾವಿ ಶಿಲ್ಪಿಗಳು, ಅಸ್ಪೃಶ್ಯ ಸಮಾಜಕ್ಕೊದಗಿದ್ದ ಶಾಪದಿಂದ ಅವರನ್ನು ವಿಮೋಚನೆಗೊಳಿಸಿ ಭಾರತ ಸಂವಿಧಾನ ಶಿಲ್ಪಿಗಳಲ್ಲಿ ಒಬ್ಬರಾಗಿ 'ಆಧುನಿಕ ಮನು' ಎನಿಸಿದ ಏಕಮೇವ ಪೂಜ್ಯ ಬಾಬಾಸಾಹೇಬ್ ಅಂಬೇಡಕರ್ ಇಂತಹ ವೀರಶಿಶುಗಳನ್ನು ಭಾರತ ಮಾತೆ ಮತ್ತೆ ಪಡೆಯಲಿಲ್ಲ. ಈ First galaxyಯ ಸ್ವತಂತ್ರ ಪ್ರಥಮ ಕೇಂದ್ರ ಮಂತ್ರಿ ಮಂಡಲದ ಪ್ರಧಾನಿ ನೆಹರೂ ಅವರಂಥ ಕವಿಹೃದಯದ ಕಲಿ ಕಟ್ಟಾಳು ಇವರೆಲ್ಲ ಎಲ್ಲಿ ಹೋದರು? ಇವರ ಮುಂದಿನ ಸಂತಾನ ಇವರ ಹೆಸರನ್ನೆತ್ತಿ ಹಿಡಿಯದೆ, ಇವರ ಪೆಸರನ್ನು ಹಸಿರಾಗಿಡದೆ ಇವರ ಹೆಸರಿಗೇ ಕೆಸರು ಬಳಿದರು, ಈಚಿನ ಭಕ್ಷಕ ಪುಢಾರಿಗಳು.

ಕನ್ನಡದಲ್ಲೂ ಕುಲಪುರೋಹಿತ ಆಲೂರರು, ಪತ್ರಿಕಾ ಕ್ಷೇತ್ರ, ಶಿಕ್ಷಣ ಕ್ಷೇತ್ರಗಳ ನಕ್ಷತ್ರಗಳೆನಿಸಿದ ಅಂತರಾತ್ಮದರ್ಶನ ಪಡೆದ ದಿವಾಕರ ರಂಗರಾಯರು, ನಿಃಸ್ಪೃಹಿ ಹೋರಾಟಗಾರರಾದ ಡಾ. ಎನ್. ಎಸ್. ಹರ್ಡೀಕರ, ಹುಕ್ಕೇರಿಕರ, ಹರ್ಡೇಕರ ಮಂಜಪ್ಪನವರು, ಕೆ. ಸಿ. ರೆಡ್ಡಿ, ವಿಧಾನ ಸೌಧದ ಶಿಲ್ಪಿ ಕೆ. ಹನುಮಂತಯ್ಯ, ರಾಜಕೀಯ ಭೀಷ್ಮ ಶ್ರೀ ನಿಜಲಿಂಗಪ್ಪನವರು, ಅದ್ಭುತ ಪ್ರತಿಭೆಯ ಪ್ರಾಮಾಣಿಕ ತಂತ್ರಜ್ಞ ಸರ್. ಎಂ. ವಿಶ್ವೇಶ್ವರಯ್ಯ, ವಿಜ್ಞಾನ ವಿದ್ಯಾ ಕ್ಷೇತ್ರದ ಜಗದೀಶಚಂದ್ರ ಬೋಸ್, ಸರ್. ಸಿ. ವಿ. ರಾಮನ್, ಕನ್ನಡ ಪತ್ರಿಕಾ ಪ್ರಪಂಚದ ದ್ರೋಣಾಚಾರ್ಯ ಮೊಹರೆ ಹಣಮಂತರಾಯರು, ಕೌಜಲಗಿ ಹಣಮಂತರಾಯರು– ಈ ಕನ್ನಡಿಗರೆಲ್ಲ ಯೋಗ್ಯರಿದ್ದೂ ಯಾರೂ ದಿಲ್ಲಿ ಪ್ರಧಾನ ಪಟ್ಟದ ಘಟ್ಟಕ್ಕೆ ಏರಲಿಲ್ಲವಲ್ಲ? 'ಕರ್ನಾಟಕಾಂಬೆ ಧನ್ಯೆ'ಯೆನಿಸಿ ರಾಷ್ಟ್ರಮಟ್ಟದ ನಾಯಕರನ್ನು ಯಾಕೆ ತಯಾರು ಮಾಡಲಿಲ್ಲ ಕರ್ನಾಟಕಾಂಬೆ?

ಸ್ವಾತಂತ್ರ್ಯೋತ್ತರದಲ್ಲಿ ಸರ್ವತೋಮುಖವಾಗಿ ದರಿದ್ರಾವಸ್ಥೆಗಿಳಿದ ರಾಜ್ಯವೆಂದರೆ ಕರ್ನಾಟಕ! ಟಿಳಕರ ಅನುವಾದಕರು ಹುಟ್ಟಿದರು, ಟಿಳಕರು ಹುಟ್ಟಲಿಲ್ಲ. ಕರ್ನಾಟಕದ ಗಾಂಧಿ ಹುಟ್ಟಿದರು, ದಿಲ್ಲೀಶ್ವರನೆನಿಸಲಿಲ್ಲ. ಕರ್ನಾಟಕದ ವೀರ ಮಹಿಳೆಯರಲ್ಲಿ ಕೇಂದ್ರ ಮಂತ್ರಿಮಂಡಳದಲ್ಲಿ ಬೆಳಗಿದ ಮಿಂಚಿದ ಮಹಿಳೆ ಒಬ್ಬರಿಬ್ಬರೇನಾದರೂ ಎಣಿಕೆ ಮಾತ್ರಕ್ಕೆ ಸಿಗಬಹುದೇನೋ?

ಸ್ವಾತಂತ್ರ್ಯ ಪೂರ್ವದಲ್ಲಿ ಏಕೀಕರಣಕ್ಕಾಗಿ ಬಲಿದಾನ, ತ್ಯಾಗ, ಏಕತಾ ಮನೋಭಾವ ದುಡಿದವರಲ್ಲಿ ಸ್ವಾತಂತ್ರ್ಯೋತ್ತರದಲ್ಲಿ ಕರ್ನಾಟಕ ಸಮೃದ್ಧವಾಗಿ ಬೆಳೆಯಬೇಕೆಂಬ ಕನಸು ಕಟ್ಟಿದವರಿಲ್ಲವೇ ಇಲ್ಲವೇನೋ? ಒಂದಂಕಿ ಕೋಟಿಯಲ್ಲಿ ಪೂರ್ಣಗೊಳ್ಳಬೇಕಾದ ಕೃಷ್ಣಾ ಯೋಜನೆ ಈಗ ಮೇಲ್ದಂಡೆಯನ್ನು ಕಾಣದೆ ಮುಳುಗುತ್ತಲಿದೆ. ಈಗಿನ ವೆಚ್ಚ ಮೂರಂಕಿ ಕೋಟಿಯನ್ನೂ ಮಿಕ್ಕಿರಬೇಕು! ಎಂತಹ ನೀರ ಅಗಸ್ತ್ಯರಿವರು! ಅಗಸ್ತ್ಯರು ಸಮುದ್ರ ಕುಡಿದರೆ, ಆಲಮಟ್ಟಿ (ಮಂಜಪ್ಪನವರ ಕರ್ಮಭೂಮಿ)ಯ ಅಗಸ್ತ್ಯರು ಕೃಷ್ಣಾ ನದಿಯನ್ನೇ ಹಣದ ಹೊಳೆಯಾಗಿಸಿ ಆಪೋಶನಗೊಂಡರು. ಇದಕ್ಕೆ ಲೆಕ್ಕ ಪತ್ರಗಳುಂಟೆ ? ಜನಹಿತ ಕಳಕಳಿ ಇತ್ತೇ ಈ ಯೋಜಕರಲ್ಲಿ?

ಭಾರತದಲ್ಲಿ ಗುಜರಾಥವು ಪರಿಪಾಲನೆಯಲ್ಲಿ ಹಸಿರು ಬೆಳೆಯುವಲ್ಲಿ ಹೆಸರು ಮಾಡಿದೆ. ಕರ್ನಾಟಕದ ತುಂಗಭದ್ರ ಪಿಡುಗಿನ ತವರಾಗಿದೆ ಹರಿಹರದಲ್ಲಿ! ಹೀಗಿದ್ದೂ ಯಾರಿಗೂ ಏನೂ ಅನಿಸುವುದಿಲ್ಲವೆ? ಕನ್ನಡ ನಾಡು ಪ್ರಕೃತಿ ಬೀಡು, "ಮೈ ಹೊನ್ನ, ನಗೆಮಿಂಚು, ಬಾವನ್ನದುಸಿರು ನಮ್ಮ ಮೈಸೂರು" ಎಂದು ಬೇಂದ್ರೆ ಹಾಡಿದರು. ಇಂದು ಮೈಸೂರು ಅರಮನೆ ರಾಜಕೀಯ ಧರ್ಮಶಾಲೆಯಾಗಲಿದೆ. ಪ್ರಕೃತಿ ಪರಿಸರದ ಬೆಡಗಿನ ಕೊಡಗು ಯಾವ ಸ್ಥಾನ-ಮಾನ ಪಡೆದಿದೆ?

ಸ್ವಾತಂತ್ರ್ಯೋತ್ತರ ಭಾರತ ದರಿದ್ರ ನಾರಾಯಣನ ಬೀಡಾಗಿದೆ. ಸ್ವಾರ್ಥಿಗಳ, ಜಾತ್ಯಂಧರ, (ಜಾತಂಧನಾವ ದೃತರಾಷ್ಟ್ರಬೇಕು) ಹಗರಣಕಾರರ, ಹಣದಿನಿ-ಹೆಣದಿನಿಗಳ, ಪುಢಾರಿಗಳ ಜಗಳದ ಕಹಳೆಯಾಗಿದೆ. ಕನ್ನಡ ಸಾಹಿತಿಗಳು, ಕವಿಗಳು, ನಾಟಕಕಾರರು, ಕಾದಂಬರಿಕಾರರು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಕರ್ನಾಟಕ ಅತ್ಯಂತ ಊಂಭಾವಸ್ಥೆಗಿಳಿದುದನ್ನು ನೋಡುತ್ತ ಸ್ಪಂದಿಸಲಾರದೆ ಇರುವ ನಮ್ಮ ಕನ್ನಡ ಸಾಹಿತಿಗಳು ಪ್ರಸಿದ್ಧಿ-ಪ್ರಶಸ್ತಿಗಳ, ಆಮಿಷ ಹಂಬಲಗಳನ್ನು ತೊರೆದು ಕರ್ನಾಟಕ ರಾಷ್ಟ್ರೀಯ ಮಟ್ಟದಲ್ಲಿ ಯಾವ ರಾಜ್ಯಕ್ಕೂ ಸೃಜನ ಪ್ರಕಾಶನ ಶ್ರೀಯಲ್ಲಿ ಕಡಿಮೆ ಇಲ್ಲ ಎಂದು ತೋರಿಸಿಕೊಡುವರೆ?

✲ ✲ ✲

# ಚಿರಂತನ ಜಾಗೃತಿಯೇ ಸ್ವಾತಂತ್ರ್ಯದ ನಿಜವಾದ ಬೆಲೆ

• ಪ್ರೊ. ಆರ್. ವಿ. ಹೊರಡಿ

ಭಾರತವು ಇತ್ತೀಚೆಗೆ ತನ್ನ ಸ್ವಾತಂತ್ರ್ಯ ಸ್ವರ್ಣಮಹೋತ್ಸವವನ್ನು ಅತಿ ಅದ್ದೂರಿಯಿಂದ ಆಚರಿಸಿದ ನೆನಪು ಇನ್ನೂ ನಮ್ಮ ಸ್ಮೃತಿಪಟಲದಿಂದ ದೂರವಾಗಿಲ್ಲ. ಸ್ವಾತಂತ್ರ್ಯ ಎಂಬುದು ಕೇವಲ ಒಂದು ಶಬ್ದವಲ್ಲ. ಅದೊಂದು ಅದ್ಭುತ ವಿಚಾರ, ಮಹಾನ್ ಆದರ್ಶ, ದಿವ್ಯ ಮಂತ್ರ. "ನನಗೆ ಸ್ವಾತಂತ್ರ್ಯವನ್ನು ಕೊಡು, ಇಲ್ಲವೆ ಸಾವನ್ನು ಕೊಡು" ಎಂದು ಸ್ವಾತಂತ್ರ್ಯಕ್ಕಾಗಿ ಹಂಬಲಿಸಿದ ಜೀವಿಗಳು ಹಲವಾರು.

ಭಾರತದ ಸ್ವಾತಂತ್ರ್ಯಕ್ಕಾಗಿ ಅವಿರತವಾಗಿ ಹೋರಾಡಿ ಹುತಾತ್ಮರಾದ ಅಗಣಿತ ಸಂಖ್ಯೆಯ ಸ್ವಾತಂತ್ರ್ಯಯೋಧರು ಕ್ರಮಿಸಿದ ದಾರಿಗಳು ಬೇರೆ ಬೇರೆಯಾಗಿದ್ದರೂ ಅವರೆಲ್ಲರ ಗುರಿ ಮಾತ್ರ ಒಂದೇ ಆಗಿತ್ತು. ಅವರು ಬಯಸಿದ್ದು ಬರೀ ರಾಜಕೀಯ ಸ್ವಾತಂತ್ರ್ಯವಲ್ಲ. ಆರ್ಥಿಕಸತ್ವರಹಿತ ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲವೆಂಬ ಸತ್ಯವನ್ನು ಅವರು ಕಂಡುಕೊಂಡಿದ್ದರು.

ದೇಶವು ಸ್ವಾತಂತ್ರ್ಯಗಳಿಕೆಯ ಅರ್ಧಶತಕವನ್ನು ಪೂರ್ಣಗೊಳಿಸಿರುವ ಘಟನೆಯೇ ಒಂದು ಮಹಾ ಸಾಧನೆ ಎಂದು ಭಾವಿಸುವುದು ಆತ್ಮವಂಚನೆಯಾದೀತು. ರಾಷ್ಟ್ರೀಯ ಸ್ವಾತಂತ್ರ್ಯವು ಇತರ ಸ್ವಾತಂತ್ರ್ಯಗಳ ಅಡಿಪಾಯ ಎಂಬ ಮಾತನ್ನು ಒಪ್ಪಬಹುದಾದರೂ ತನ್ನ ನಾಗರಿಕರಿಗೆ ಅನ್ನ, ಅರಿವೆ, ಆಸರೆ, ಅಕ್ಷರ ಹಾಗು ಆರೋಗ್ಯವನ್ನು ಒದಗಿಸಲಾಗದ ದೇಶ ತಾನು 'ಸ್ವತಂತ್ರ'ವೆಂದು ಹೇಳಿಕೊಳ್ಳಲು ಹೆಮ್ಮೆ ಪಡಬೇಕಾಗಿಲ್ಲ. ಸ್ವಾತಂತ್ರ್ಯ ದಿನದಂದು ರಾಷ್ಟ್ರಧ್ವಜ ಹಾರಿಸಿ, 'ಜನಗಣಮನ' ಹಾಡಿ, 'ಜೈಹಿಂದ್' ಕೂಗಿಬಿಟ್ಟರೆ ನಮ್ಮ ಜವಾಬ್ದಾರಿ ಮುಗಿಯಿತೆ? ಸ್ವಾತಂತ್ರ್ಯ ಆಂದೋಲನದ ಆ ದಿನಗಳನ್ನು ನೆನೆಸಿಕೊಂಡರೆ ಮೈ ನವಿರೇಳುತ್ತದೆ. ರಾಷ್ಟ್ರ ವಿಮೋಚನೆಗಾಗಿ ಹಿರಿಯರು, ಕಿರಿಯರು, ಸ್ತ್ರೀ-ಪುರುಷರು, ಸಂಪ್ರದಾಯವಾದಿಗಳು, ಸುಧಾರಣಾವಾದಿಗಳು, ಕ್ರಾಂತಿಕಾರಿಗಳು, ಅಹಿಂಸಾವಾದಿಗಳು, ವಿಭಿನ್ನ ಜಾತಿ, ಜನಾಂಗ, ಧರ್ಮ, ಭಾಷಾ ವರ್ಗದವರು ಮನೆಮಠಗಳನ್ನಷ್ಟೇ ಅಲ್ಲ ಪ್ರಾಣತ್ಯಾಗವನ್ನೂ ಮಾಡಿದರು. ದೇಶ ಪರದಾಸ್ಯದಿಂದ ಮುಕ್ತಿ ಪಡೆಯಬೇಕು; ಭಾರತೀಯರೆಲ್ಲರ ಬಾಳಿನಲ್ಲಿ ಬೆಳ್ಳಿಗೆರೆ ಮೂಡಬೇಕು ಎಂಬ ಮಹದಾಸೆಯನ್ನು ಮನದಾಳದಲ್ಲಿರಿಸಿಕೊಂಡು ಮುನ್ನಡೆದ ನಿಷ್ಕಾಮಕರ್ಮಿಗಳು ಅವರಾಗಿದ್ದರು.

ನಾಡಿನ ಬಿಡುಗಡೆಗಾಗಿ ಸರ್ವಸ್ವವನ್ನೂ ತ್ಯಾಗಮಾಡಿದ ಸ್ವಾತಂತ್ರ್ಯವೀರರ ಇಚ್ಛೆ ಈಡೇರಿದೆಯೆ? ಅವರ ಕನಸಿನ ಭಾರತ ನಿರ್ಮಾಣವಾಗಿದೆಯೆ? 'ಕಲ್ಯಾಣ ರಾಜ್ಯ'ದ ಹೆಸರಿನಲ್ಲಿ ಆಳುವ ವರ್ಗದವರ, ಅವರ ಕೈ ಕೆಳಗಿನ ಅಧಿಕಾರಿಗಳ ಕಲ್ಯಾಣ ಮಾತ್ರ ಸಾಧ್ಯವಾಗಿದೆಯೆ? ಮಹಾತ್ಮಾ ಗಾಂಧೀಜಿಯವರನ್ನು ಮರೆತು ಅವರ ಹೆಸರಿನ 'ನಕಲಿ' 'ಗಾಂಧಿ'ಗಳನ್ನು ನಮ್ಮ ಜನ ಬೆನ್ನುಹತ್ತಿದ್ದಾರೆಯೆ? ಸ್ವಾತಂತ್ರ್ಯ ಎಂಬುದು ಒಂದು ಅರ್ಥದಲ್ಲಿ 'ಸ್ವೇಚ್ಛಾಚಾರ', ಇನ್ನೊಂದು ಅರ್ಥದಲ್ಲಿ ಕೇವಲ ಕೆಲವರಿಗೆ ಮಾತ್ರ ಮೀಸಲಾದ ವಿಚಾರ ಎಂಬಂತಾಗಿ ಬಿಟ್ಟಿದೆಯೆ? ಸ್ವತಂತ್ರ ದೇಶ ಅತಂತ್ರ ಸ್ಥಿತಿಯನ್ನು ತಲುಪಿ ದಿಕ್ಕೆಟ್ಟ ಪರಿಸ್ಥಿತಿಯನ್ನು ಎದುರಿಸುತ್ತಿದೆಯೆ? ವರ್ತಮಾನದ ಗರ್ಭದಲ್ಲಿ ಭರವಸೆಯ ಭವಿಷ್ಯ ಅಡಗಿದೆಯೆ?

ಈ ಎಲ್ಲ ಪ್ರಶ್ನೆಗಳಿಗೆ ಉತ್ತರಿಸಲು ನಾವು ಆಲೋಚನೆಯನ್ನಷ್ಟೇ ಅಲ್ಲ, ಆತ್ಮಾವಲೋಕನ ಮಾಡಿಕೊಳ್ಳಬೇಕಾದ ತುರ್ತು ಅಗತ್ಯವಿದೆ. ಕಳೆದ ಐವತ್ತು ವರ್ಷಗಳಲ್ಲಿ ಶಾಂತಿಪ್ರಿಯ ದೇಶವಾದ ಭಾರತ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಕಾಪಾಡಿಕೊಂಡು ಬಂದಿರುವುದು ನಿಜಕ್ಕೂ ಅದರ ಹೆಗ್ಗಳಿಕೆ ಎಂದು ಹೇಳಬಹುದು.

ನೆರೆಹೊರೆಯ ದೇಶಗಳಲ್ಲಿ ಪ್ರಜಾತಂತ್ರದ ಪ್ರಯೋಗ ವಿಫಲಗೊಂಡಿದ್ದರೂ ಭಾರತದಲ್ಲಿ ಅದರ ಬೇರುಗಳು ಗಟ್ಟಿಗೊಂಡಿರುವುದು ವಿಚಿತ್ರ ಆದರೂ ಸತ್ಯ ಸಂಗತಿಯಾಗಿದೆ. ಹದಿನೆಂಟು ತಿಂಗಳ ತುರ್ತು ಪರಿಸ್ಥಿತಿ ನಮ್ಮ ಜನತಂತ್ರ ವ್ಯವಸ್ಥೆಯ ದೌರ್ಬಲ್ಯವನ್ನು ದಾಖಲುಗೊಳಿಸಿದ್ದು ನೆನಪಿಡಬೇಕಾದ ಮುಖ್ಯ ಘಟನೆಯಾದರೂ, ತುರ್ತುಪರಿಸ್ಥಿತಿಗೆ ಕಾರಣರಾದವರನ್ನು ಚುನಾವಣೆಯ ಮೂಲಕ ಇತಿಹಾಸದ ಕಸದ ತಿಪ್ಪೆಗೆ ಎಸೆದ ಭಾರತದ ಸ್ವಾತಂತ್ರ್ಯಪ್ರಿಯ ಜನತೆಯ ಐತಿಹಾಸಿಕ ತೀರ್ಪು ಸಹ ಮರೆಯಲಾಗದ ಮಹತ್ವದ ಘಟನೆಯಾಗಿದೆ.

ಗಾಂಧಿ, ನೆಹರೂ, ಪಟೇಲ, ಪ್ರಸಾದ, ನೇತಾಜಿ, ರಾಜಾಜಿಯವರಂಥ ನಾಯಕರು ರಂಗಸ್ಥಳದಲ್ಲಿರುವವರೆಗೆ ದೇಶಕ್ಕೆ ಮಾನ, ಮರ್ಯಾದೆ, ಘನತೆ, ಗೌರವ, ಪ್ರಭಾವ, ಪ್ರತಿಷ್ಠೆಗಳ 'ಬರ' ಇರಲಿಲ್ಲ. 'ದೇಶಕ್ಕಾಗಿ' ನಾನು ಎನ್ನುವ ನಾಯಕರ ಸಂತತಿ ಕಡಿಮೆಯಾಗುತ್ತ 'ನನಗಾಗಿ ದೇಶ' ಎನ್ನುವ ಭ್ರಷ್ಟರ, ದುಷ್ಟರ ತ್ವರಿತ ತಳಿ ಅಭಿವೃದ್ಧಿಯಾಗತೊಡಗಿತು. ಕೃಷಿ ಪ್ರಧಾನ ದೇಶವಾದ ಭಾರತವು ಆಹಾರ ಧಾನ್ಯಕ್ಕಾಗಿ ಅಮೆರಿಕದಂಥ ದೇಶದ ಎದುರು ಭಿಕ್ಷಾಪಾತ್ರೆಯನ್ನು ಹಿಡಿದು ನಿಲ್ಲಬೇಕಾಯಿತು. ಪಂಚವಾರ್ಷಿಕ ಯೋಜನೆಗಳು ನಿರೀಕ್ಷಿತ ಮಟ್ಟದಲ್ಲಿ ಯಶಸ್ವಿಯಾಗದೆ ಸುಧಾರಣೆ, ಬೆಳವಣಿಗೆಯ ಗುರಿಯನ್ನು ತಲುಪಲು ಸಾಧ್ಯವಾಗಲಿಲ್ಲ. ಬಡವರು ಹೆಚ್ಚು ಬಡವರಾದರು. ಶ್ರೀಮಂತರು ಹೆಚ್ಚು ಶ್ರೀಮಂತರಾದರು.

ಚೀನಾದ ಆಕ್ರಮಣ, ಪಾಕಿಸ್ತಾನದೊಂದಿಗಿನ ಮೂರು ಯುದ್ಧಗಳು ನಮ್ಮ ವಿದೇಶಿ ನೀತಿಯ ಅನುಷ್ಠಾನದಲ್ಲಿನ ವೈಫಲ್ಯಗಳನ್ನು ಎತ್ತಿ ತೋರಿಸಿದವು. ಯಾವುದೇ ದೇಶಕ್ಕೆ ಶಾಶ್ವತ ಮಿತ್ರರಾಗಲಿ ಶಾಶ್ವತ ಶತ್ರುಗಳಾಗಲಿ ಇರುವುದಿಲ್ಲ. ದೇಶದ ಹಿತಾಸಕ್ತಿಗಳ ಬಗೆಗಿನ ಕಾಳಜಿ ಮಾತ್ರ ಕಾಯಂ ಆಗಿ ಇರಬೇಕಾಗುತ್ತದೆ. ಇಂಥ ವಾಸ್ತವಿಕ ನೀತಿ, ನಿಲುವನ್ನು ತಾಳದೆ ಭಾರತವು ಬಹಳಷ್ಟು ಸಲ ಪೇಚಿಗೆ ಸಿಕ್ಕಿಕೊಂಡಿದೆ. ಮುಖಭಂಗ ಅನುಭವಿಸಿದೆ. ದೇಶದ ಹಿತ ನೆರವೇರುವಂತಿದ್ದರೆ ದೆವ್ವದ ಕೂಡ ಸಹ ದೋಸ್ತಿಯ ಹಸ್ತ ಜೋಡಿಸಲು ನಾವು ಸಿದ್ಧರಿರಬೇಕಾಗುತ್ತದೆ. ಚಾಣಕ್ಯ ನೀತಿ ಅಂದರೆ ಇದೇ.

ಇವತ್ತು ಭಾರತ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ನೈತಿಕ ಬಿಕ್ಕಟ್ಟುಗಳನ್ನು ಎದುರಿಸುತ್ತಿದೆ. ಇಂಥ ಪರಿಸ್ಥಿತಿ ನಮ್ಮ ದೇಶಕ್ಕಷ್ಟೇ ಸೀಮಿತವಾಗಿಲ್ಲ. ಏಷಿಯಾ ಮತ್ತು ಯುರೋಪದ ದೇಶಗಳು ಇಂಥ ಸಮಸ್ಯೆಗಳ ಸುಳಿಯಲ್ಲಿ ಸಿಕ್ಕಿಕೊಂಡಿವೆ. ಆದರೆ ಭಾರತದ ದುರ್ದೈವ ಏನೆಂದರೆ ಸ್ವಾರ್ಥರಹಿತ ಸಮರ್ಪಣ ಭಾವದ, ಸಚ್ಚಾರಿತ್ರ್ಯ ಶೀಲದ ಸಮರ್ಥನಾಯಕರ ಕೊರತೆ. ಅಧಿಕಾರ ಸ್ಥಾನಗಳಲ್ಲಿರುವವರು ಶುದ್ಧಹಸ್ತರಾಗಿಲ್ಲ. ಶುದ್ಧಹಸ್ತರು ಅಧಿಕಾರ ಸ್ಥಾನಗಳಲ್ಲಿಲ್ಲ. ಪಕ್ಷ ಸಿದ್ಧಾಂತ, ಕಾರ್ಯಕ್ರಮಗಳು ಬೇರೆ ಬೇರೆಯಾಗಿದ್ದರೂ ಜನಮನದ ಭಾವನೆಗಳಿಗೆ ಸದಾಕಾಲ ಸ್ಪಂದಿಸುತ್ತಿದ್ದ, ಪರಿಶುದ್ಧ ಚಾರಿತ್ರ್ಯವನ್ನುಳ್ಳ, ಸೀದಾ ಸಾದಾ, ಸರಳ, ಪ್ರಾಮಾಣಿಕ ಬದುಕನ್ನು ಬಾಳಿದ ಶಾಸ್ತ್ರಿ, ನಂದಾ, ನಿಜಲಿಂಗಪ್ಪ, ಕರ್ಪೂರಿ ಠಾಕೂರ, ಅಣ್ಣಾ ದೊರೈ, ಲೋಹಿಯಾ, ನಂಬೂದ್ರಿಪಾದ್, ರಫಿಅಹ್ಮದ್ ಕಿದ್ವಾಯಿಯವರಂಥ ಆದರ್ಶ ನಾಯಕರು 'ವ್ಯಕ್ತಿ ಸಂಗ್ರಹಾಲಯ'ಗಳಾದ ಪಠ್ಯಪುಸ್ತಕಗಳಲ್ಲಿ ಮಾತ್ರ ಕಂಗೊಳಿಸಬೇಕೇ?

ಇವತ್ತು ನಮ್ಮ ದೇಶದಲ್ಲಿ ಎಲ್ಲ ರಾಜಕೀಯ ಪಕ್ಷಗಳು, ನಾಯಕರು ದಲಿತರನ್ನು, ಅಲ್ಪಸಂಖ್ಯಾತರನ್ನು, ಹಿಂದುಳಿದ ಜನವರ್ಗದವರನ್ನು ಕೇವಲ 'ವೋಟ್‌ಬ್ಯಾಂಕ್'ಗಳೆಂದು ಪರಿಗಣಿಸಿ ರಾಜಕೀಯ ಲಾಭ ಗಿಟ್ಟಿಸುವ ಎತ್ತುಗಡೆಯಲ್ಲಿ ತೊಡಗಿದ್ದಾರೆ. ಧರ್ಮ, ಧ್ವಜ, ಮೀಸಲಾತಿಯ ಹೆಸರಿನಲ್ಲಿ ಅಜ್ಞರ, ಅಸಹಾಯಕರ ಶೋಷಣೆ ನಿರಂತರವಾಗಿ ಸಾಗಿದೆ. ಸ್ತ್ರೀಯರಿಗೆ ಶೇಕಡಾ ಮೂವತ್ಮೂರರಷ್ಟು ಮೀಸಲಾತಿಯನ್ನು ಕೊಡಬೇಕೆನ್ನುವ ಕಾನೂನು ಮಾಡುವ ವಿಚಾರದಲ್ಲಿ ಏಕಾಭಿಪ್ರಾಯವಿಲ್ಲ.

ಕೇಂದ್ರ ರಾಜ್ಯಗಳಲ್ಲಿ ನಾಲ್ಕು ದಶಕಗಳ ಕಾಲ ಅಧಿಕಾರದ ಗುತ್ತೇದಾರಿಕೆಯನ್ನು ಹಿಡಿದಿದ್ದ ಕಾಂಗ್ರೆಸ್ ಪಕ್ಷ ಇವತ್ತು ಹೆಸರಿಗೆ ಮಾತ್ರ ರಾಷ್ಟ್ರೀಯ ಪಕ್ಷವಾಗಿ ಉಳಿದುಕೊಂಡಿದೆ. ಪ್ರಾದೇಶಿಕ ಪಕ್ಷಗಳು ಪ್ರಬಲಗೊಂಡಿವೆ, ಪ್ರಭಾವಿ ಭೂಮಿಕೆಯನ್ನು ಹೊಂದಿವೆ. ಕೇಂದ್ರದಲ್ಲಿ, ರಾಜ್ಯಗಳಲ್ಲಿ 'ಸಮ್ಮಿಶ್ರ' ಸರಕಾರಗಳ ಯುಗ ಪ್ರಾರಂಭವಾಗಿದೆ. ಭಾರತದಂಥ ಸಹಕಾರಿ ಸಂಯುಕ್ತ ರಾಜ್ಯ ವ್ಯವಸ್ಥೆಯನ್ನುಳ್ಳ ದೇಶದಲ್ಲಿ ಏಕೈಕ ಪಕ್ಷದ ಆಡಳಿತವಿರಬೇಕೆಂಬುದು ಸಾಧ್ಯವೂ ಇಲ್ಲ – ಅದು ಸಾಧುವೂ ಅಲ್ಲ. ಆದರೆ ಬರಿ ಅಧಿಕಾರದ ಲಾಭ ಹಂಚಿಕೊಳ್ಳಲು ಸಣ್ಣಪುಟ್ಟ ಪಕ್ಷಗಳು ಒಂದುಗೂಡಿ ಸರಕಾರ ರಚಿಸುವುದು ರಾಜಕೀಯ ಅಸ್ಥಿರತೆಗೆ ಕಾರಣವಾಗುವುದಲ್ಲದೆ ಅದು ಭ್ರಷ್ಟಾಚಾರಕ್ಕೆ ಆಸ್ಪದ ನೀಡುತ್ತದೆ. ತಮ್ಮ ರಾಜಕೀಯ ಉದ್ದೇಶ ಸಾಧನೆಗಾಗಿ ಸರಕಾರದಲ್ಲಿ ಭಾಗಿಯಾಗಿರುವ ಪಕ್ಷಗಳು 'ಬ್ಲ್ಯಾಕ್‌ಮೇಲ್' ತಂತ್ರಗಳನ್ನೂ ಅನುಸರಿಸತೊಡಗುತ್ತವೆ.

"ಸರ್ವತಂತ್ರ, ಸ್ವತಂತ್ರ, ಸಮಾಜವಾದಿ, ಜಾತ್ಯತೀತ ಪ್ರಜಾಸತ್ತಾತ್ಮಕ ಗಣರಾಜ್ಯ ತಾನೆ"ಂದು ಘೋಷಿಸಿಕೊಂಡಿರುವ ಭಾರತದಲ್ಲಿ ಸಾಮಾಜಿಕ ನ್ಯಾಯ, ಆರ್ಥಿಕ ಸಂತೃಪ್ತಿ, ರಾಜಕೀಯ ಸ್ವಾತಂತ್ರ್ಯ ಎಷ್ಟು ಜನರಿಗೆ ಲಭ್ಯವಾಗಿವೆ ? ತಮ್ಮ ರಾಜಕೀಯ ಸ್ವಾರ್ಥ ಸಾಧನೆಗಾಗಿ ಡಾ. ಅಂಬೇಡ್‌ಕರರ ಹೆಸರನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವವರು ಕಾನ್ಶೀರಾಮ್, ಮಾಯಾವತಿಯಂಥ ರಾಜಕಾರಣಿಗಳಷ್ಟೇ ಅಲ್ಲ, ಎಲ್ಲ ರಾಜಕೀಯ ಪಕ್ಷಗಳ ನಾಯಕರೂ ಇಂಥ ಕಸರತ್ತಿನಲ್ಲಿ ತೊಡಗಿದ್ದಾರೆ. ಗಾಂಧೀಜಿ, ಅಂಬೇಡ್‌ಕರರ ವಿಚಾರಗಳನ್ನು ಸಮಾಧಿ ಮಾಡಿ ಅವರ ಹೆಸರಿನ ಜಪ ಮಾಡುತ್ತ ಗೊಡ್ಡು ಆಚರಣೆಗಳಲ್ಲಿ ತೊಡಗಿರುವವರು

ಅವರ ಪ್ರತಿಮೆಗಳನ್ನು ಸ್ಥಾಪಿಸಿ, ರಸ್ತೆ, ಸೇತುವೆ, ಕಟ್ಟಡ, ಆಸ್ಪತ್ರೆ, ರೈಲು, ವಿಮಾನ ನಿಲ್ದಾಣಗಳಿಗೆ ಅವರ ಹೆಸರನ್ನಿಟ್ಟು ದಲಿತೋದ್ಧಾರದ ನಾಟಕ ಆಡುತ್ತಿದ್ದಾರೆ. ನಾನು ನಿರಾಶಾವಾದಿಯಲ್ಲ. ಪ್ರಳಯದ ಪ್ರವಾದಿಯಲ್ಲ. ಹೊಸ ಪೀಳಿಗೆಯ ಯುವಕ-ಯುವತಿಯರು ರಾಜಕಾರಣಿಗಳ ದೊಂಬರಾಟಕ್ಕೆ ಮರುಳಾಗಬಾರದು. ಸ್ವಾತಂತ್ರ್ಯದ ನಿಜವಾದ ಅರ್ಥ ಅನವಶ್ಯಕ ಪ್ರತಿಬಂಧಗಳ ನಿವಾರಣೆ ಹಾಗೂ ಎಲ್ಲ ನಾಗರಿಕರಿಗೆ ಮೂಲಭೂತ ಅಗತ್ಯಗಳ ವಿಸ್ತರಣೆ. ಎಲ್ಲ ಬಗೆಯ ಶೋಷಣೆಗಳಿಂದ ಮುಕ್ತವಾದ ಸಮೃದ್ಧ, ಸ್ವಾವಲಂಬಿ ಸಮಾಜ ನಿರ್ಮಾಣದ ಮೂಲಕ ನಿಜವಾದ ಸ್ವಾತಂತ್ರ್ಯದ ಸಾಕ್ಷಾತ್ಕಾರ ಸಾಧ್ಯ.

ಒಬ್ಬ ಸಾಮಾನ್ಯ ಭಾರತೀಯ ನಾಗರಿಕನ ದೃಷ್ಟಿಯಲ್ಲಿ ಸ್ವಾತಂತ್ರ್ಯ ಎಂದರೆ– ಕೈಗೆ ಕೆಲಸ, ಹೊಟ್ಟೆಗೆ ಹಿಟ್ಟು, ಮೈಗೆ ಬಟ್ಟೆ, ವಾಸಿಸಲು ಮನೆ, ಆರೋಗ್ಯ ರಕ್ಷಣೆ, ಅಕ್ಷರಜ್ಞಾನ. ಆದರೆ ಶ್ರೀಮಂತರು, ಉದ್ಯಮಪತಿಗಳು, ಭೂಮಾಲೀಕರು, ಅಧಿಕಾರಸ್ಥರು ಸ್ವಾತಂತ್ರ್ಯದ ಅರ್ಥವನ್ನು ತಮಗೆ ಅನುಕೂಲಕರವಾದ ರೀತಿಯಲ್ಲಿ ಬಳಸಿಕೊಳ್ಳುತ್ತಾರೆ. ಇವರು ತಮ್ಮ ಕಾರ್ಯಚಟುವಟಿಕೆಗಳ ಮೇಲೆ ಯಾವುದೇ ಬಗೆಯ ನಿಯಂತ್ರಣವನ್ನು, ಸರಕಾರಿ ಹಸ್ತಕ್ಷೇಪವನ್ನು, ಕಾನೂನಿನ ನಿರ್ಬಂಧಗಳನ್ನು ಬಯಸುವುದಿಲ್ಲ – ಸಹಿಸುವುದಿಲ್ಲ. ಇವರು ವ್ಯಕ್ತಿ ಸಿದ್ಧಾಂತದ ಪ್ರತಿಪಾದಕರು.

ಸ್ವಾತಂತ್ರ್ಯದ ಅರ್ಥವನ್ನು ನಾವು ವ್ಯಕ್ತಿನಿಷ್ಠವಾಗಿ ನೋಡದೆ ವಸ್ತುನಿಷ್ಠವಾಗಿ ನೋಡಬೇಕಾಗುತ್ತದೆ. 'ಚಿರಂತನ ಜಾಗೃತಿಯೇ ಸ್ವಾತಂತ್ರ್ಯದ ನಿಜವಾದ ಬೆಲೆ' ಎಂದು ಹೇಳಲಾಗುತ್ತದೆ. "ಸ್ತ್ರೀ-ಪುರುಷರ ಹೃದಯಾಂತರಾಳದಲ್ಲಿ ಎಲ್ಲಿಯವರೆಗೆ ಸ್ವಾತಂತ್ರ್ಯದ ಜ್ಯೋತಿ ಉರಿಯುತ್ತಿರುತ್ತದೆಯೋ ಅಲ್ಲಿಯವರೆಗೆ ಅದನ್ನು ಯಾವ ಸಂವಿಧಾನವೂ, ಯಾವ ಕಾನೂನೂ, ಯಾವ ನ್ಯಾಯಾಲಯವೂ ಅಪಹರಿಸಲು ಸಾಧ್ಯವಿಲ್ಲ. ಅದೇ ರೀತಿ ತಮ್ಮ ಹೃದಯಾಂತರಾಳದಲ್ಲಿ ಸ್ವಾತಂತ್ರ್ಯದ ಜ್ಯೋತಿಯನ್ನು ಜೀವಂತವಾಗಿರಿಸಿಕೊಳ್ಳಲಾಗದ ಜನಾಂಗವನ್ನು ಯಾವ ಸಂವಿಧಾನವೂ, ಯಾವ ಕಾನೂನೂ, ಯಾವ ನ್ಯಾಯಾಲಯವೂ ಸಂರಕ್ಷಿಸಲು ಸಾಧ್ಯವಿಲ್ಲ."

ಸ್ವಾತಂತ್ರ್ಯ ನಮಗೆ ಸಿಕ್ಕಿದೆ. ಆದರೆ ನಿಜವಾದ ಅರ್ಥದಲ್ಲಿ ಅದು ಎಲ್ಲರಿಗೂ ದಕ್ಕಿಲ್ಲ. ಈ ಕುರಿತು ಗಂಭೀರವಾದ ಚಿಂತನ, ಮಂಥನ ಈಗ ಅತ್ಯಗತ್ಯ.

❋ ❋ ❋

# ಭಾರತದ ಸ್ವಾತಂತ್ರ್ಯ ಸ್ವರ್ಣ ಮಹೋತ್ಸವ
## (ಒಂದು ಚಿಂತನೆ)

• ಜಿ. ಎಂ. ಪಾಟೀಲ

ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರೆತು ಅರ್ಧ ಶತಮಾನವೇ ಕಳೆಯಿತು. ಮಾನವನ ಜೀವನದ ಅವಧಿಯಲ್ಲಿ ಇದೊಂದು ದೀರ್ಘಕಾಲ. ಆದರೆ ದೇಶದ ದೃಷ್ಟಿಯಿಂದ ಪರಿಗಣಿಸಿದರೆ, ಅದೂ ಭಾರತದಂಥ ಬೃಹತ್ ನಾಡಿನ ದೃಷ್ಟಿಯಿಂದ ಪರಿಗಣಿಸಿದರೆ ಇದೊಂದು ಅಲ್ಪಕಾಲ. ಈ ಅವಧಿಯಲ್ಲಿ ನಾವು ಗಳಿಸಿದ್ದೇನು, ಕಳೆದುಕೊಂಡದ್ದೇನು ಎಂಬ ಹಿನ್ನೋಟ, ಮುಂದೇನು ಎಂಬ ಪ್ರಶ್ನೆ ಈ ಚಿಂತನ.

ಪ್ರಶ್ನೆಗಳಿಗೆ ಉತ್ತರಿಸುವ ಮುನ್ನ ೧೯೪೭ರ ಪೂರ್ವದ ಈ ನಾಡಿನ ಇತಿಹಾಸವನ್ನು ಸ್ಥೂಲವಾಗಿ ಅವಲೋಕಿಸುವುದು ವಿಹಿತ. ಈ ನಾಡು ಹಿಂದೆಂದೂ ಆಕ್ರಮಣಶೀಲ ನಾಡಾಗಿರಲಿಲ್ಲ. ಐದು ಸಾವಿರ ವರುಷಗಳ ಭವ್ಯ ಸಂಸ್ಕೃತಿ ಇದಕ್ಕೆ ಇದೆ. ಇಲ್ಲಿಂದ ಶಾಂತಿದೂತರು ಪರನಾಡಿಗೆ ತೆರಳಿದರು. ಅನೇಕ ಸಲ ಪರಕೀಯರ ದಾಳಿಗೆ ತುತ್ತಾದರೂ ಆತ್ಮ ಸಂರಕ್ಷಣೆಗೆ ಮಾತ್ರ ಇವರು ಸೀಮಿತರಾಗಿದ್ದರು. ಆಕ್ರಮಣಕಾರರು ಸಹ ಈ ನಾಡಿನ ನೆಲ ಜಲದಲ್ಲಿ ಒಂದಾಗಿ ಬೆರೆತು ಭಾರತೀಯರೇ ಆದರು. ಹಿಂದೂ ಎಂದರೆ ಅದೊಂದು ಜಾತಿಯಾಗಿರದೆ ಜೀವನ ವಿಧಾನವೆಂಬುದನ್ನು ಮರೆಯುವಂತಿಲ್ಲ.

ಅನೇಕ ಪರಕೀಯರು ಈ ನಾಡಿನ ಜೀವನದಿಯಲ್ಲಿ ಒಂದಾದರೂ ಆಂಗ್ಲರಿಗೆ ಅವರ ಭೌಗೋಲಿಕ ಪರಿಮಿತಿಯಿಂದಾಗಿ ಅದು ಸಾಧ್ಯವಾಗಲಿಲ್ಲ. ಆದರೆ ಹುಟ್ಟಾ ಸ್ವಾತಂತ್ರ್ಯಪ್ರಿಯರಾದ ಇವರು ಈ ನಾಡನ್ನು ಒಡೆದು ಆಳುವ ನೀತಿಯನ್ನು ಅನುಸರಿಸಿ ಕೊನೆಗೆ ಜನಾಂಗ ದ್ವೇಷ ಬಿತ್ತಿ, ಕೊನೆಗೆ ಭಾರತವನ್ನು ತುಂಡರಿಸಿಯೇ ಇಲ್ಲಿಂದ ಕಾಲ್ದೆಗೆದರು. ಗಾಂಧೀಜಿಯವರ ಕನಸಾದ, ಭಾರತ ಐಕ್ಯತೆ, ಹಿಂದೂ-ಮುಸಲ್ಮಾನರ ಒಗ್ಗಟ್ಟು ಮತ್ತು ಹರಿಜನೋದ್ಧಾರ ಕೊನೆಗೂ ಕನಸಾಗಿಯೇ ಉಳಿಯಿತು. ನಮ್ಮ ಸ್ವಾತಂತ್ರ್ಯ ಕೇವಲ ಅಹಿಂಸಾ ಹೋರಾಟದಿಂದ ಸಾಧ್ಯವಾಯಿತೆ? ಹೌದು, ಬಹುಮಟ್ಟಿಗೆ. ಆದರೆ ಅನೇಕ ಕ್ರಾಂತಿಕಾರಿಗಳು ಈ ನಾಡಿಗಾಗಿ ಜೀವ ತೆತ್ತಿದ್ದಾರೆ. ಇದಲ್ಲದೆ, ದೇಶ ವಿಭಜನೆ ಆದಾಗ ಸುಮಾರು ಅರ್ಧಕೋಟಿಗಿಂತ ಹೆಚ್ಚು ಜನರು ನಿರಾಶ್ರಿತರಾದರು. ಸಶಸ್ತ್ರ ಕ್ರಾಂತಿ ನಡೆದಿದ್ದರೂ ಇಷ್ಟು ಪ್ರಾಣಹಾನಿ, ಆಸ್ತಿಹಾನಿ ಆಗುತ್ತಿರಲಿಲ್ಲವೇನೋ!

ಒಂದು ವಿಚಿತ್ರ ಸಂಗತಿಯೆಂದರೆ ಕಳೆದ ಶತಮಾನದ ಕೊನೆಯ ಭಾಗದಲ್ಲಿ ಸ್ವಾತಂತ್ರ್ಯಪ್ರಿಯರು ಸಾವಿರ ಸಾವಿರ ಸಂಖ್ಯೆಯಲ್ಲಿ ಜನಿಸಿದರು. ಬಹುಶಃ ಈ ದೇಶದ

ಸ್ವಾತಂತ್ರ್ಯ ಹೋರಾಟಕ್ಕಾಗಿಯೇ ಇವರು ಜನಿಸಿದರೇನೋ! ಇವರು ಒಂದು ಪಕ್ಷಕ್ಕೆ ಸೀಮಿತವಾಗಿರದೆ ಎಲ್ಲ ಜನಾಂಗದಿಂದ, ಎಲ್ಲ ಪಕ್ಷಗಳಿಂದ, ಪಕ್ಷೇತರರಿಂದ ಕೂಡಿದವರಾಗಿದ್ದು, ವಿವಿಧ ಸ್ತರಗಳಿಗೆ ಸೇರಿದವರಾಗಿದ್ದರು. ಅವರ ಗುರಿ ಕೇವಲ ಈ ನಾಡಿನ ಸ್ವಾತಂತ್ರ್ಯ. ಯಾವುದೇ ಫಲಾಪೇಕ್ಷೆಯಿಲ್ಲದೆ ದುಡಿದವರು ಇವರು. ಅವರಲ್ಲಿ ಅನೇಕರು ಸ್ವಾತಂತ್ರ್ಯದ ಸೂರ್ಯೋದಯಕ್ಕೆ ಮುನ್ನವೇ ಅಸುನೀಗಿದರು.

ಮಧ್ಯರಾತ್ರಿಯಲ್ಲಿ ಉದಿಸಿದ ಈ ಸ್ವಾತಂತ್ರ್ಯ ದೇವತೆ, ಅಂದು ತಂದ ಹರುಷ ವರ್ಣನಾತೀತ! ಕಾಲೇಜ್ ವಿದ್ಯಾರ್ಥಿಯಾಗಿದ್ದ ನಾನು, ನನ್ನಂಥ ಅನೇಕ ವಿದ್ಯಾರ್ಥಿಗಳು, ಇನ್ನಿತರರ ಹರ್ಷ ಇನ್ನೆಂದೂ ಮರಳಲಾರದು. ಅಂದು ನಾವು ಕಂಡ ಕನಸು ನನಸಾಗಿದೆಯೆ ಎಂದು ಕೇಳಿದರೆ ಉತ್ತರಿಸುವುದು ಕಷ್ಟ. ಉತ್ತರದ ನಿರಾಶ್ರಿತರ ಗೋಳು ದಾಕ್ಷಿಣಾತ್ಯರಾದ ನಮಗೆ ಊಹಿಸಲೂ ಅಸಾಧ್ಯ. ಗಾಂಧೀಜಿಯವರ ಅಖಂಡ ಭಾರತದ ಕನಸು ಎಂದೆಂದಿಗೂ ಕನಸಾಗಿಯೇ ಉಳಿದು ಹೋಯಿತು. ಐದುನೂರಕ್ಕೂ ಹೆಚ್ಚು ಸಂಸ್ಥಾನಗಳ ವಿಲೀನೀಕರಣಕ್ಕೆ ಸರ್ದಾರರಂಥ ಮಹಾ ಮುತ್ಸದ್ದಿಯಿರದಿದ್ದರೆ ಇಂದಿನ ಕಾಶ್ಮೀರ ಸಮಸ್ಯೆಯಂಥ ಇನ್ನೂ ಹಲವಾರು ಸಮಸ್ಯೆಗಳು ಹಾಗೆಯೇ ಉಳಿಯುತ್ತಿದ್ದವು. ಇಂಥ ಕಠಿಣ ಕಾಲದಲ್ಲಿಯೂ ಕೂಡ ಬಲಾಢ್ಯ ಕೇಂದ್ರ ಸರಕಾರ ಮತ್ತು ಪರಿಮಿತ ಅಧಿಕಾರ ಹೊಂದಿರುವ ರಾಜ್ಯ ಸರಕಾರಗಳ ಸಾಧನೆ, ಅದೂ ಈ ಅಲ್ಪಕಾಲದಲ್ಲಿಯ ಸಾಧನೆ ಮೆಚ್ಚುವಂತಹದೇ. ಅದರಲ್ಲೂ ನೆಹರೂ ಅವರಂಥ ವೈಜ್ಞಾನಿಕಪ್ರಿಯರು ಮುಂಚೂಣಿಯಲ್ಲಿದ್ದುದು ಬಹುಮಟ್ಟಿಗೆ ಕಾರಣವಾಗಿದೆ.

## ಪ್ರಗತಿಯ ಪ್ರಕ್ಷಿನೋಟ

ಸ್ವಾತಂತ್ರ್ಯದ ಪ್ರಾರಂಭದಲ್ಲಿದ್ದ ಜನಸಂಖ್ಯೆಗಿಂತ ಇಂದು ಜನಸಂಖ್ಯೆ ಮೂರು ಪಟ್ಟಿಗಿಂತ ಅಧಿಕವಾಗಿದೆ. ನೆಲವೇನೋ ಅಷ್ಟೇ ಇದೆ. ಹಸಿರುಕ್ರಾಂತಿಯಾಗದೆ ಇದ್ದಿದ್ದರೆ ನಮಗೆ ಅರೆ ಹೊಟ್ಟೆಯೇ ಗತಿಯಾಗಬೇಕಿತ್ತು. ಜಗತ್ತೆಲ್ಲ ಬೆರಳು ಕಚ್ಚುವಂತಹ ಪ್ರಗತಿ ಇದು. ೧೯೫೦ರಲ್ಲಿ ಆಹಾರ ಧಾನ್ಯದ ಹುಟ್ಟುವಳಿ ೫೦.೮ ಮೆಟ್ರಿಕ್ ಟನ್ ಇದ್ದರೆ ಅದು ಇಂದು ೧೮೫.೧ ಮೆಟ್ರಿಕ್ ಟನ್‌ಗೆ ಏರಿದೆ. ಒಕ್ಕಲುತನದ ಆಧುನಿಕ ನೀರಾವರಿ ಸೌಲಭ್ಯ, ಸುಧಾರಿತ ಬೀಜ, ತಳಿಗಳ ಸಂಶೋಧನೆ ಇಂಥ ಮಹಾನ್ ಪ್ರಗತಿಗೆ ಕಾರಣವಾಗಿದೆ.

ನಾವು ಸಾಧಿಸಿರುವ ಔದ್ಯೋಗಿಕ ಕ್ರಾಂತಿಯೂ ಕಡಿಮೆಯೇನಿಲ್ಲ. ಉಕ್ಕು ಸ್ಥಾವರ, ವಿದ್ಯುತ್ ಉತ್ಪಾದನೆ, ಸಿಮೆಂಟ್– ರಾಸಾಯನಿಕ ಗೊಬ್ಬರ ಕಾರಖಾನೆ, ಅಷ್ಟೇ ಏಕೆ ಇನ್ನಿತರ ಒಕ್ಕಲುತನದ ಹುಟ್ಟುವಳಿಗೆ ಸಂಬಂಧಪಟ್ಟ ಕಾರಖಾನೆಗಳಲ್ಲದೆ ಪೆಟ್ರೋಲಿಯಂ ಉತ್ಪಾದನೆಯಲ್ಲೂ ಪರಿಮಿತ ಸಾಧನೆ ಹೆಮ್ಮೆ ಪಡುವಂತೆ ಇದೆ. ೧೯೫೦ರಲ್ಲಿ ಕೇವಲ ಶೇಕಡಾ ೧೮.೩ ಇದ್ದರೆ ಇಂದು ಅದು ಹದಿನೈದು ಪಟ್ಟು ಹೆಚ್ಚಿ ಶೇಕಡಾ ೨೮೩.೩ ಮಟ್ಟ ಮುಟ್ಟಿದೆ ಎಂದರೆ ಈ ಪ್ರಗತಿಯ ಅರ್ಥವಾದೀತು.

ಸಂಪರ್ಕ ವ್ಯವಸ್ಥೆ ನಮ್ಮ ಇನ್ನೊಂದು ಮಹಾಸಾಧನೆ. ನೆಲ, ಜಲ, ವಾಯು ಕ್ಷೇತ್ರದಲ್ಲಿಯ ಪ್ರಗತಿ, ಬಾಹ್ಯಾಕಾಶದ ಸಂಪರ್ಕ ಜಾಲ ಇವು ಯಾವುದೇ ಅಭಿವೃದ್ಧಿ ಹೊಂದಿದ ದೇಶಕ್ಕೆ ಕಡಿಮೆ ಇಲ್ಲದಂತೆ ಪ್ರಗತಿ ಸಾಧಿಸಿದ್ದು ದೇಶದ ಯಾವುದೇ ಮೂಲೆಗೂ ಇಂದು ಸಂಪರ್ಕ ಲಭಿಸಿದೆ.

ಶೈಕ್ಷಣಿಕ ರಂಗದ ಪ್ರಗತಿಯೂ ತಕ್ಕಮಟ್ಟಿಗಿದೆ. ೧೯೫೦ರಲ್ಲಿ ಸಾಕ್ಷರತೆ ಶೇ. ೧೬.೩ ರಷ್ಟಿದ್ದರೆ ಅದು ಇಂದು ಶೇಕಡಾ ೫೨.೨ಕ್ಕೆ ಏರಿದೆ. ಸಾಕ್ಷರತೆಯ ದೃಷ್ಟಿಯಿಂದ ಹೇಳಿಕೊಳ್ಳುವಂತಹ ಪ್ರಗತಿಯಲ್ಲವೆಂದರೂ ಭಾರತದ ಮೂಲೆ ಮೂಲೆಯಲ್ಲಿ ಇಂದು ಶಾಲೆ, ಕಾಲೇಜುಗಳಿದ್ದು ಶಿಕ್ಷಣ ಲಭ್ಯವಾಗುತ್ತಿದೆ.

ಆರೋಗ್ಯ ಕ್ರಾಂತಿಯಿಂದಾಗಿ ಇಂದು ವೈದ್ಯಕೀಯ ಸೌಲಭ್ಯ ಗಣನೀಯವಾಗಿ ಹೆಚ್ಚಿದೆ. ಸ್ವಾತಂತ್ರ್ಯಪೂರ್ವದ ಸರಾಸರಿ ಆಯುರ್ಮಾನ ೩೨.೧ ವರ್ಷ ಇದ್ದರೆ, ಅದಿಂದು ೬೦.೮ ವರ್ಷಕ್ಕೆ ಏರಿದೆ. ೧೯೫೦ರಲ್ಲಿ ಸಾವಿನ ಪ್ರಮಾಣ ಸಾವಿರಕ್ಕೆ ೨೭.೪ ರಷ್ಟಿದ್ದು ಈಗ ಕೇವಲ ಸಾವಿರಕ್ಕೆ ೯ ಮಾತ್ರ! ಇದೇನೂ ಸಣ್ಣ ಸಾಧನೆ ಅಲ್ಲ.

ಆರ್ಥಿಕವಾಗಿ ನೋಡಿದರೆ ೧೯೫೦ರಲ್ಲಿ ತಲಾ ವಾರ್ಷಿಕ ವರಮಾನ ೧೧೨೭ ರೂ. ಇದ್ದುದು ರೂ. ೨೫೭೩ ಗಳಿಗೆ ಏರಿದೆ. ಏರಿರುವ ಜನಸಂಖ್ಯೆಗೆ ಹೋಲಿಸಿದರೆ ಇದು ಪ್ರಗತಿದಾಯಕವಲ್ಲ. ಆದರೂ ಇಂದು ಬಹುತೇಕ ಪಟ್ಟಣಿಗರ ಆರ್ಥಿಕ ಸ್ಥಿತಿಯಲ್ಲಿ ಒಂದಿಷ್ಟು ಸುಧಾರಣೆ ಕಂಡು ಬಂದಿದೆ. ಮಧ್ಯಮ ವರ್ಗದವರಿಗೂ ಕೆಲವು ಮೂಲಭೂತ ಸೌಕರ್ಯಗಳು ಲಭ್ಯವಿವೆ. ಈ ನಿಟ್ಟಿನಲ್ಲಿ ಹಳ್ಳಿಗಳ ಸ್ಥಿತಿ ಹೇಳಿಕೊಳ್ಳುವಂಥದಲ್ಲ.

ಮಿಲಿಟರಿ ಸಾಮರ್ಥ್ಯ, ರಕ್ಷಣಾಪಡೆಗಳ ಸಾಮರ್ಥ್ಯದಲ್ಲಿ ಗಣನೀಯ ಪ್ರಗತಿ ಕಂಡುಬಂದು, ಏಶ್ಯಾ ಖಂಡದಲ್ಲೇ ಭಾರತದ ಭೂ ಸೇನೆ, ವಾಯುಪಡೆಗಳು ಅತ್ಯುತ್ತಮ ಎನ್ನುವ ಹೆಗ್ಗಳಿಕೆ ಪಡೆದಿವೆ. ಶಸ್ತ್ರಗಳಲ್ಲಿ ಸ್ವಾವಲಂಬನೆ ಬಹುಮಟ್ಟಿಗೆ ಸಾಧ್ಯವಾಗಿದೆ. ಇಂದು ಅಣುಶಕ್ತಿ ಪಡೆದ ಕೆಲವೇ ಅಗ್ರಗಣ್ಯ ರಾಷ್ಟ್ರಗಳಲ್ಲಿ ಭಾರತವೂ ಒಂದು. ಪರಿಮಿತ ಸಂಪನ್ಮೂಲವಿರುವ ಈ ವಿಶಾಲ ದೇಶ, ಅದೂ ಸಾಲದ ಹೊರೆಯಿಂದ ತತ್ತರಿಸುತ್ತಲಿರುವ ಈ ನಾಡು ಪ್ರಬಲ ವೈರಿ ರಾಷ್ಟ್ರಗಳನ್ನು ಬದಿಯಲ್ಲಿರಿಸಿಕೊಂಡು ನೆಮ್ಮದಿಯಿಂದ ಬಾಳುವ ಸಾಮರ್ಥ್ಯ ಪಡೆದಿರುವುದು ಹೆಮ್ಮೆಯೇ ಸರಿ. ಈ ಪ್ರಗತಿಗೆ ಕಾರಣರಾದ ನಾಯಕರು, ವಿಜ್ಞಾನಿಗಳು ಅಭಿನಂದನೆಗೆ ಅರ್ಹರು.

ಇನ್ನೊಂದು ಸಾಧನೆಯೆಂದರೆ ಭಾರತದ ವಿದೇಶಿ ನೀತಿ. ಕ್ರಿಯಾಶೀಲ ಅಲಿಪ್ತತೆ. ಭಾರತದ ಯಾವುದೇ ಸರಕಾರವೂ ಈ ನೀತಿಯಿಂದ ವಿಮುಖವಾಗಿಲ್ಲ. ಬಾಹ್ಯ ಆಕ್ರಮಣವನ್ನೆದುರಿಸುವಾಗಲೂ ಅಲಿಪ್ತ ನೀತಿಯನ್ನು ಬಿಟ್ಟುಕೊಡಲಿಲ್ಲ ನಾವು!

ರಾಜಕೀಯವಾಗಿ ನೋಡಿದರೆ ಬಲಾಢ್ಯ ಕೇಂದ್ರ ಸರಕಾರದೊಡನೆ ಪರಿಮಿತ ಪ್ರಾಂತೀಯ ಹಿತಾಸಕ್ತಿಯನ್ನು ಕಡೆಗಣಿಸದಿರುವ ನೀತಿ. ಅದರಲ್ಲೂ ಸಮ್ಮಿಶ್ರ ಸರಕಾರಗಳಿದ್ದರೂ, ನೀರು- ಗಡಿ ಸಮಸ್ಯೆಗಳಿದ್ದರೂ ಭಾರತದ ಐಕ್ಯತೆಗೆ ಭಂಗ ಬಾರದಂತೆ ಆಡಳಿತ ನಡೆದು ಬಂದಿದೆ.

ಬಹು ಭಾಷಾ ರಾಷ್ಟ್ರವಾಗಿರುವ ಭಾರತದಲ್ಲಿ ರಾಷ್ಟ್ರದ ಆಡಳಿತ ಭಾಷೆಯಾಗಿ ಹಿಂದಿಯನ್ನು ಒಪ್ಪಿಕೊಂಡಿದ್ದರೂ, ಅದನ್ನು ಒತ್ತಾಯವಾಗಿ ಹೇರದೆ ಇರುವದು ಜಾಣ್ಮೆಯ ಪ್ರತೀಕ. ಭಾಷಾ ಸಮಸ್ಯೆ ಎಂದೂ ಇಲ್ಲಿ ಉಲ್ಬಣವಾಗಿಲ್ಲ. ಅದರಂತೆ ಗಡಿ ಸಮಸ್ಯೆ ಕೂಡ ಇಂದಿಗೂ ಸಮಸ್ಯಾ ಕ್ಷೇತ್ರಕ್ಕೆ ಸೀಮಿತವಾಗಿದೆ. ಜೊತೆಗೆ ಹಲವಾರು ಧರ್ಮಗಳಿದ್ದೂ, ಧರ್ಮ ನಿರಪೇಕ್ಷತೆ ಇಲ್ಲಿನ ವೈಶಿಷ್ಟ್ಯ. ನಮ್ಮದು ಜಾತ್ಯಾತೀತ ರಾಷ್ಟ್ರ.

ಪ್ರಜಾಪ್ರಭುತ್ವ ರಕ್ಷಣೆಯಲ್ಲಂತೂ ನಮ್ಮದು ಹೆಮ್ಮೆ ಪಡುವಂಥ ಸಾಧನೆ. ಕೇಂದ್ರ-ರಾಜ್ಯಗಳ ನಡುವಿನ ಸಮಸ್ಯೆ, ಕೇಂದ್ರ ಸರಕಾರದ ಪರಮಾಧಿಕಾರಕ್ಕೆ ನ್ಯಾಯಾಂಗದ ಕಟ್ಟೆಚ್ಚರ, ಅಲ್ಲದೆ ನ್ಯಾಯಾಂಗದ ಕ್ರಿಯಾಶೀಲತೆ ಮತ್ತು ರಾಜ್ಯಘಟನೆಯ ಪಾವಿತ್ರ್ಯತೆಯನ್ನು ಕಾಯ್ದುಕೊಳ್ಳುವಲ್ಲಿ ಸರ್ವೋಚ್ಚ ನ್ಯಾಯಾಲಯದ ಪಾತ್ರ ಶ್ಲಾಘನೀಯ.

ಪಂಚವಾರ್ಷಿಕ ಯೋಜನೆಗಳಿಂದ ಅಸಂಖ್ಯಾತ ಜನಸಮೂಹಕ್ಕೆ ಅನ್ನ, ಬಟ್ಟೆ, ವಸತಿ ಏರ್ಪಡಿಸಲು ಆಯಾ ಸರಕಾರಗಳು ಶಕ್ತಿಮೀರಿ ಪ್ರಯತ್ನಿಸುತ್ತಿವೆ.

ಇನ್ನು ವೈಫಲ್ಯಗಳ ಬಗೆಗೆ ಸ್ವಲ್ಪ ಕಣ್ಣು ಹಾಯಿಸೋಣ. ಮೊದಲನೆಯ ವೈಫಲ್ಯವೆಂದರೆ ಕಳೆದ ಕೆಲ ದಶಕಗಳಿಂದ ನಮ್ಮ ರಾಜ್ಯ ನಡೆಸುವ ಬಹುಪಾಲು ಧುರೀಣರಲ್ಲಿ ಪ್ರಾಮಾಣಿಕತೆಯ ಅಭಾವ, ಭೋಗ ಲಾಲಸೆ, ದಿಢೀರ್ ಶ್ರೀಮಂತರಾಗುವ ಹುಚ್ಚು, ಸ್ವಜನ ಪಕ್ಷಪಾತ ಮುಂತಾದ ಅವಲಕ್ಷಣಗಳಿರುವುದು. ಇದಕ್ಕಿಂತ ಹೆಚ್ಚಿನ ಅಪಾಯಕಾರಿ ಪ್ರವೃತ್ತಿಯೆಂದರೆ ಜಾತೀಯತೆಯ ದ್ವೇಷವನ್ನು ಬುದ್ಧಿಪೂರ್ವಕವಾಗಿ ಬಿತ್ತುತ್ತಿರುವುದು. ಇಂದು ಜಾತೀಯ ಸಾಮರಸ್ಯತೆ ಕನಸಿನ ಮಾತಾಗಿದೆ. ಜಾತೀಯ ಸಾಮರಸ್ಯಕ್ಕಾಗಿ ಮಹಾತ್ಮಾಜಿಯವರು ಪ್ರಾಣ ತೆತ್ತರು. ಅದನ್ನೀಗ ಈ ಮಹಾ ಧುರೀಣರು ಮರೆತಿದ್ದಾರೆ. ಕೇವಲ ಚುನಾವಣೆಯನ್ನು ಗೆಲ್ಲುವುದಕ್ಕಾಗಿ ಎಂಥ ಹೀನ ಕೆಲಸಕ್ಕೂ ಕೈ ಹಾಕಲು ಇವರಿಂದು ಹಿಂಜರಿಯುತ್ತಿಲ್ಲ. ಅಂದಿನ ದೇಶಭಕ್ತರು ಇಂದು ಈ ಪರಿಸ್ಥಿತಿಯನ್ನು ಕಂಡು ಕಣ್ಣೀರಿಡುವಂತಾಗಿದೆ.

ನಮ್ಮ ಬಹು ದೊಡ್ಡ ವೈಫಲ್ಯವೆಂದರೆ ಆಡಳಿತಶಾಹಿಯಿಂದ ಈ ನಾಡು ಮುಕ್ತಿ ಪಡೆಯದಿರುವುದು. ಇಂದು ಅವರ ಮಾತೇ ಭರತ ವಾಕ್ಯ. ಜನರ ಕಷ್ಟನಷ್ಟಗಳ ಅರಿವಿಲ್ಲದ ಈ ಅಧಿಕಾರಿಗಳು, ತಮ್ಮ ಸೌಲಭ್ಯಕ್ಕಾಗಿ ಮೊದಲನೆಯ ಆದ್ಯತೆ ಕೊಡುತ್ತಿದ್ದಾರೆ. ಜನಸಾಮಾನ್ಯರು ಸಾಮಾನ್ಯ ಊಟ ಕಾಣದ ಈ ನಾಡಿನಲ್ಲಿ ಇವರೆಲ್ಲ ತಮ್ಮ ತಮ್ಮ ವೇತನವನ್ನು ಗಣನೀಯವಾಗಿ ಹೆಚ್ಚಿಸಿಕೊಂಡು ಬಿಟ್ಟರು. ಈ ವಿಷಯವಾಗಿ ರಾಜಕೀಯ ಧುರೀಣರೇನೂ ಹಿಂದೆ ಬಿದ್ದಿಲ್ಲ.

ಎಲ್ಲಕ್ಕಿಂತ ಹೆಚ್ಚಿನ ವೈಫಲ್ಯ ರೈತರ ಸಮಸ್ಯೆಗಳಿಗೆ ಸ್ಪಂದಿಸದಿರುವುದು. ಹಳ್ಳಿಗಾಡನ್ನು ಕಾಣದವರು, ಒಕ್ಕಲಿಗರ ಬಾಳನ್ನು ತಿಳಿಯದವರು ಅವರ ಉದ್ಧಾರಕ್ಕೆ ಯೋಜನೆ ಮಾಡುತ್ತಿದ್ದಾರೆ! ಅವರ ಸಾಲದ ಹೊರೆಯನ್ನು ಅಲ್ಪಮಟ್ಟಿಗೆ ಕಡಿಮೆ ಮಾಡಲು ಹಿಂಜರಿಯುವ ಸರಕಾರ, ಔದ್ಯೋಗೀಕರಣದ ಹೆಸರಿನಲ್ಲಿ ದೇಶವನ್ನು ಲೂಟಿಮಾಡುತ್ತಿರುವ ಶ್ರೀಮಂತ ವರ್ಗದ ಉದ್ಯೋಗಪತಿಗಳಿಗೆ ಕೊಡುವ ಸೌಲಭ್ಯವನ್ನು ನೆನೆಸಿಕೊಂಡರೆ, ಈ ಪಕ್ಷಪಾತದ ನೀತಿಗೆ ಕೊನೆಯೆಂದೋ ತಿಳಿಯದಾಗಿದೆ. ನೇಗಿಲಯೋಗಿ ಇಂದು ನೇಗಿಲು ಕಳೆದುಕೊಂಡು ಕೇವಲ 'ಯೋಗಿ'ಯಾಗಿ, ಅಂದರೆ ಭಿಕ್ಷೆಬೇಡುವ ಸ್ಥಿತಿಗೆ ಇಳಿದಿದ್ದಾನೆ.

ಇನ್ನೊಂದು ವೈಫಲ್ಯ, ಹೆಚ್ಚುತ್ತಿರುವ ಜನಸಂಖ್ಯೆಯನ್ನು ತಡೆಗಟ್ಟಲಾಗದ್ದು. ೧೯೫೦ರಲ್ಲಿ ಜನನ ಪ್ರಮಾಣ ಪ್ರತಿ ಸಾವಿರಕ್ಕೆ ೩೯.೪ ಇದ್ದರೆ ಇಂದು ಅದು ೨೮.೩ಕ್ಕೆ ಇಳಿದಿದೆ. ಇದೇನೂ ಗಣನೀಯವೆನ್ನುವ ಇಳಿಕೆಯೇನೂ ಅಲ್ಲ. ಇದರೊಡನೆ ಸಹಜವಾಗಿ ನಿರುದ್ಯೋಗ ಬೆಳೆದಿದೆ. ಕೇವಲ ಪ್ರಚಾರದಿಂದ ಜನಸಂಖ್ಯೆಯ ಬೆಳವಣಿಗೆಯನ್ನು ತಡೆಗಟ್ಟಲು

ಸಾಧ್ಯವಿಲ್ಲವೆಂಬ ಅಂಶವನ್ನು ನಾವಿಂದು ಮರೆತಿದ್ದೇವೆ. ಅಷ್ಟೇ ಏಕೆ, ಪ್ರಾಮಾಣಿಕ ಪ್ರಯತ್ನ ಯಾರಾದರೂ ಮಾಡ ಹೊರಟರೆ, ಅದನ್ನು ಪ್ರತಿಕೂಲ ಅಸ್ತ್ರವಾಗಿ ಬಳಸುತ್ತಿರುವ ಪ್ರವೃತ್ತಿ ಖಂಡನೀಯ.

ಅಧಿಕಾರ ಸೂತ್ರವಂತೂ ಕೆಲವೇ ಜನರ ಕೈಯಲ್ಲಿ ಕೇಂದ್ರೀಕೃತವಾಗಿದೆ. ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರ ಉದ್ಧಾರ ಭಾಷಣಕ್ಕೆ ಮಾತ್ರ ಸೀಮಿತವಾಗಿದೆ. ಇದರೊಡನೆ, ಹಿಂದುಳಿದವರ ಉದ್ಧಾರ ಕೂಡ. ಮಂಡಲ ಶಿಫಾರಸು ಕೂಡ ಶಿಫಾರಸು ಆಗಿಯೇ ಉಳಿದಿದೆ.

ಕೊನೆಯದಾಗಿ– ಹೆಚ್ಚುತ್ತಿರುವ ಹಿಂಸಾಚಾರ, ಮತೀಯ ವೈಷಮ್ಯಗಳು ನಾಗರಿಕರ ಜೀವನವನ್ನೇ ಅಸ್ತವ್ಯಸ್ತ ಮಾಡಿವೆ. ಅಹಿಂಸೆಯ ಈ ನಾಡಿನಲ್ಲಿ ಇಬ್ಬರು ಪ್ರಧಾನ ಮಂತ್ರಿಗಳು ಹತ್ಯೆಯಾದರು. ಇತ್ತೀಚೆಗೆ ಗೃಹ ಸಚಿವರ ಹತ್ಯೆಗೂ ಪ್ರಯತ್ನ ನಡೆಯಿತು!

ಈ ಎಲ್ಲ ಅನಿಷ್ಟಗಳಿಗೆ ಪರಿಹಾರವೇನು ? ಗಾಂಧೀಜಿಯವರ ಸ್ವದೇಶಿ ಹಾಗೂ ಸ್ವಾವಲಂಬನೆ ಗುರಿಯಾಗಬೇಕು. ಭಿಕ್ಷಾಪಾತ್ರೆ ಹಿಡಿದ ನಾವು ಶಸ್ತ್ರಾಗಾರದಲ್ಲಿ ಅಣುಬಾಂಬ್ ಇಟ್ಟುಕೊಂಡ ಮಾತ್ರಕ್ಕೆ ಸಮಸ್ಯೆ ಪರಿಹಾರವಾಗಲಾರದು. ಆತ್ಮರಕ್ಷಣೆ ಆದ್ಯ ಕರ್ತವ್ಯ ನಿಜ. ಆದರೆ ಅದು ಅತಿರೇಕಕ್ಕೆ ಮುಟ್ಟಿದರೆ ಭಾರತವಷ್ಟೇ ಅಲ್ಲ, ನೆರೆಹೊರೆಯ ರಾಷ್ಟ್ರಗಳೂ ನಾಶವಾಗುತ್ತವೆ. ಆರ್ಥಿಕ ಸ್ವಾತಂತ್ರ್ಯವಿರದಿದ್ದರೆ ಕೇವಲ ರಾಜಕೀಯ ಸ್ವಾತಂತ್ರ್ಯಕ್ಕೆ ಬೆಲೆಯಿಲ್ಲ. ಅಣ್ವಸ್ತ್ರಗಳ ಪೈಪೋಟಿ ಪ್ರಾರಂಭವಾದರೆ, ಆರ್ಥಿಕ ಅಭಿವೃದ್ಧಿ ಕನಸಿನ ಮಾತಾಗುತ್ತದೆ. ಯಾವ ಬೆಲೆ ತೆತ್ತಾದರೂ ಮತೀಯ ಸಾಮರಸ್ಯ ಮತ್ತು ನೆರೆಹೊರೆಯವರೊಡನೆ ಮಧುರ ಬಾಂಧವ್ಯ ಕಾಯ್ದುಕೊಳ್ಳಬೇಕಿದೆ. ಇಲ್ಲಿ ಎಲ್ಲರೂ, ಅಂದರೆ ಅಲ್ಪಮತಗಳವರೂ ಸಮಾನರಾಗಿದ್ದಾರೆ. ಬಹುಸಂಖ್ಯಾತರಿಗಿರುವ ಹಕ್ಕು ಬಾಧ್ಯತೆಗಳು ಅವರಿಗೂ ಇವೆ. ಅವರು ರಾಷ್ಟ್ರಪತಿಗಳೂ ಸರ್ವೋಚ್ಚನ್ಯಾಯಾಲಯದ ಮುಖ್ಯ ನ್ಯಾಯಾಧೀಶರೂ ಆಗಬಹುದಾಗಿದೆ.

❋ ❋ ❋

# ಭಾರತದ ಸ್ವಾತಂತ್ರ್ಯ ಹೋರಾಟಗಾರ್ತಿಯರು

• ಡಾ. ಚೆನ್ನಕ್ಕ ಪಾವಟೆ

ಸ್ವತಂತ್ರ ಭಾರತದ ಸುವರ್ಣ ಮಹೋತ್ಸವದ ಶುಭ ಸಂದರ್ಭ ನಮಗೆಲ್ಲ ಚೈತನ್ಯಪೂರ್ಣವಾಗಿ ಉಳಿದ ಸ್ಫೂರ್ತಿದಾಯಕ ಹೋರಾಟ, ಸ್ವಾತಂತ್ರ್ಯದ ಸವಿನೆನಪನ್ನು ಮರಳಿಸಿ ಸ್ಮೃತಿಪಟಲಕ್ಕೆ ತಟ್ಟುವ ಆಯಾಮ. ೧೮೫೭ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವೇ ಇರಲಿ, ೧೯೪೭ರ ಸ್ವಾತಂತ್ರ್ಯ ಸಂಗ್ರಾಮವೇ ಇರಲಿ, ಈ ದೇಶಪ್ರೇಮದ ಹೋರಾಟದಲ್ಲಿ ಪಾಲ್ಗೊಂಡ ಕನ್ನಡತಿಯರ ಶೌರ್ಯ, ಸಾಹಸ, ಸಮಯೋಚಿತ ಪ್ರಜ್ಞೆ, ಸ್ವಾತಂತ್ರ್ಯದ ಬಗೆಗಿರುವ ಅದಮ್ಯ ಕಳಕಳಿಯನ್ನು ಸ್ಮರಿಸುವಲ್ಲಿ, ಅವರ ವೀರಗಾಥೆಗಳನ್ನು ಮೆಲುಕು ಹಾಕುವಲ್ಲಿ ನಮಗಾಗುವುದು ರೋಮಾಂಚಕಾರಿ ಅನುಭವ.

ಮಹಿಳೆಯರ ಹಕ್ಕು-ಬಾಧ್ಯತೆಗಳ ಬಗೆಗೆ ಸಮಾಜದಲ್ಲಿ ಹೆಚ್ಚಿನ ಜಾಗೃತಿ ಮೂಡುತ್ತಿರುವಂತೆಯೇ, ಇಂದು ಮಹಿಳೆಯರ ವಿರುದ್ಧ ದೌರ್ಜನ್ಯದ ಪ್ರಕರಣಗಳು ದಿನದಿನಕ್ಕೂ ಹೆಚ್ಚುತ್ತಿರುವದು ವಿಪರ್ಯಾಸವಲ್ಲದೆ ಇನ್ನೇನು ? ಹೆಚ್ಚುತ್ತಿರುವ ವರದಕ್ಷಿಣಾ ದುರಂತಗಳು, ಕೌಟುಂಬಿಕ ಹಿಂಸೆ, ನೌಕರಿ ಮಾಡುವಲ್ಲಿ ಲೈಂಗಿಕ ಕಿರುಕಳ... ಸಮಾಜವಿನ್ನೂ ಸಂವೇದನಾಶೀಲವಾಗಬೇಕಿರುವ ಅವಶ್ಯಕತೆ ಸುವರ್ಣ ವರ್ಷದ ಶುಭಸಂದರ್ಭದಲ್ಲಿ ಮರು ಆಲೋಚನೆಗೆ ನಮ್ಮನ್ನು ತೊಡಗಿಸುತ್ತಿದೆ.

ಬ್ರಿಟಿಷ್ ಸರಕಾರದ ಕಪಿಮುಷ್ಠಿಯ ಆಡಳಿತ, ದಾಸ್ಯದ ಕಟು ಅನುಭವ ಭಾರತೀಯರಲ್ಲಿ ಸ್ವಾತಂತ್ರ್ಯದ ಕಿಚ್ಚೆಬ್ಬಿಸತೊಡಗಿತ್ತು. ಇದು ಸ್ಫೋಟಗೊಂಡು ೧೮೫೭ರಲ್ಲಿ ಜರುಗಿದ್ದೇ ಪ್ರಥಮ ಸ್ವಾತಂತ್ರ್ಯ ಸಮರ. ಈ ಕಾಲಕ್ಕಾಗಲೇ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ಭಾರತೀಯ ಸಾಹಿತ್ಯ, ಆಚಾರ-ವಿಚಾರಗಳ ಮೇಲೆ ಸಾಕಷ್ಟು ಪರಿಣಾಮ ಬೀರಿತ್ತು. ಸತಿಪದ್ಧತಿ, ಬಾಲ್ಯವಿವಾಹ, ಶಿಶುಬಲಿದಾನದಂತಹ ಬರ್ಬರ ಪದ್ಧತಿಗಳು ಜನಜನಿತವಾದ ಆ ಕಾಲದಲ್ಲಿ ಬದಲಾವಣೆ ತುಂಬ ಅವಶ್ಯಕವಾಗಿತ್ತು. ಅನಿಷ್ಟ ರೂಢಿ, ಮೂಢ ನಂಬಿಕೆಯ ಮಡಿಲಿನಿಂದ ಜನಮನವನ್ನು ಎಚ್ಚರಿಸಿ ಅವರಲ್ಲಿ ಹೊಸ ದೃಷ್ಟಿಕೋನ ಮೂಡಿಸುವ, ಪರಕೀಯರ ದಾಸ್ಯದಿಂದ ಬಿಡುಗಡೆಗೊಳ್ಳಲು ಸನ್ನದ್ಧಗೊಳಿಸುವ ಅವಶ್ಯಕತೆ ಇತ್ತು. ಇಂಥ ಸಂದರ್ಭದಲ್ಲಿ ಜನಾಂಗದ ಅರ್ಧಭಾಗವಾಗಿರುವ ಮಹಿಳಾವರ್ಗ ಎಚ್ಚೆತ್ತು ಕಾರ್ಯಪ್ರವೃತ್ತವಾಗಬೇಕಿತ್ತು. ಭಾರತೀಯರಲ್ಲಿ ರಾಷ್ಟ್ರೀಯ ಭಾವನೆಯನ್ನು ಜಾಗೃತಗೊಳಿಸಿ, ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ತನು-ಮನ-ಧನಗಳನ್ನು ಸಮರ್ಪಣೆ ಮಾಡುವ ಜವಾಬ್ದಾರಿ ಮಹಿಳೆಯರ ಮೇಲಿತ್ತು. ಮಹಿಳೆಯರ ಸರ್ವತೋಮುಖ ಬೆಳವಣಿಗೆಗಾಗಿ ಅಲ್ಲಲ್ಲಿ ಮಹತ್ವದ ಕಾರ್ಯ ಚಟುವಟಿಕೆಗಳು, ಸಭೆಗಳು ಪ್ರಾರಂಭವಾಗಿದ್ದವು.

## ಮಹಿಳಾ ಜಾಗೃತಿ

ಬಂಗಾಲದಲ್ಲಿ ರಾಜಾರಾಮ ಮೋಹನರಾಯರು ನಾಡಿನ ಹೆಣ್ಣುಮಕ್ಕಳ ಉದ್ಧಾರಕ್ಕೆ ಕಂಕಣಬದ್ಧರಾಗಿ ನಿಂತರು. 'ಬ್ರಹ್ಮ ಸಮಾಜ'ವನ್ನು ಕಟ್ಟಿ ಅದರ ಮೂಲಕ ಮಹಿಳಾ ಜಾಗೃತಿ ಪ್ರಾರಂಭಿಸಿದರು. ಪಂಜಾಬದಲ್ಲಿ ದಯಾನಂದ ಸರಸ್ವತಿಯವರು 'ಆರ್ಯ ಸಮಾಜ' ಕಟ್ಟಿ ಮಹಿಳೆಯರಲ್ಲಿ ರಾಷ್ಟ್ರೀಯ ಚಳುವಳಿಯ ಬೀಜ ಬಿತ್ತತೊಡಗಿದರು. ಸತಿಪದ್ಧತಿ, ಬಾಲ್ಯವಿವಾಹದಂತಹ ಸಾಮಾಜಿಕ ಪೀಡೆಗಳ ನಿರ್ಮೂಲನೆಗೆ ರಾಜಾರಾಮ ಮೋಹನರಾಯರು ಕರೆ ಕೊಟ್ಟರು. ಇದೇ ಕಾಲಕ್ಕೆ ಪಾಶ್ಚಾತ್ಯ ಸೋದರಿಯರಾದ ಆ್ಯನಿಬೆಸೆಂಟ್, ಸೋದರಿ ನಿವೇದಿತಾ, ಮೀರಾಬೆನ್ ಮುಂತಾದವರು ಪರ ಸಂಸ್ಕೃತಿಗೆ ಮಾರುಹೋದ ಭಾರತೀಯರನ್ನು ಎಚ್ಚರಿಸತೊಡಗಿದರು.

ಭಾರತ ದೇಶದ ಸತ್ಪ್ರಜೆಗಳು ಉನ್ನತಿಗೇರಬೇಕಾದರೆ ಇಲ್ಲಿ ಆಧ್ಯಾತ್ಮಿಕ ಜೀವನ ಬಲಗೊಳ್ಳಬೇಕು. ಉತ್ತಮ ಆದರ್ಶ ಚಿಂತನೆಗಳನ್ನು ಬಾಲ್ಯದಲ್ಲಿಯೇ ಮಕ್ಕಳ ಮನಸ್ಸಿನಲ್ಲಿ ಒಡಮೂಡಿಸಬೇಕು. ಸದೃಢ ದೇಹದ, ಸದ್ಬುದ್ಧಿಯ ಮಕ್ಕಳಿಂದ ದೇಶದ ಸರ್ವತೋಮುಖ ಅಭಿವೃದ್ಧಿ. ಭಾರತೀಯರು ಪ್ರಗತಿ ಹೊಂದಬೇಕಾದರೆ ಮೊದಲು ಇಲ್ಲಿ ಸಾಕ್ಷರತೆ ನೆಲೆಗೊಳ್ಳಬೇಕು. ಸುಸಂಸ್ಕೃತನಾದ ಸತ್ಪ್ರಜೆಯನ್ನು ರೂಪಿಸಿಕೊಡುವುದೇ ವಿದ್ಯಾಭ್ಯಾಸದ ಗುರಿ. ಸ್ತ್ರೀ ಶಿಕ್ಷಣದತ್ತ ಭಾರತೀಯರು ಅಧಿಕ ಗಮನ ಕೊಡಬೇಕು ಎಂದ ಆ್ಯನಿಬೆಸೆಂಟ್ ೧೯೧೭ರಲ್ಲಿ 'ಭಾರತೀಯ ಮಹಿಳೆಯರ ಸಂಘ' ಕಟ್ಟಿದರು. ಅದೇ ಕಾಲಾಂತರದಲ್ಲಿ 'ಅಖಿಲ ಭಾರತ ಮಹಿಳಾ ಪರಿಷತ್' ಆಗಿ ಭಾರತೀಯ ಸಾಮಾಜಿಕ, ಶೈಕ್ಷಣಿಕ ಪ್ರಗತಿಗೆ ಕಾರಣವಾಗಿದೆ.

ಈಗಾಗಲೇ ಸ್ವಾತಂತ್ರ್ಯ ಹೋರಾಟದ ಬೆಳ್ಳಿಚುಕ್ಕೆಯೆನಿಸಿ ಮೆರೆದ ಕಿತ್ತೂರ ಚೆನ್ನಮ್ಮ, ಬ್ರಿಟಿಷ್ ಸರಕಾರಕ್ಕೆ ಸಿಂಹಸ್ವಪ್ನಳೆನಿಸಿದ ಝಾನ್ಸಿರಾಣಿಯರ ಅಚ್ಚಳಿಯದ ಆದರ್ಶ ಭಾರತೀಯರ ಮನದಾಳದಲ್ಲಿ ನೆಲೆ ನಿಂತಿದ್ದವು. ಮೇಡಂ ಭೀರಾಜಿ ರಸ್ತೂಮ ಕಾಮಾ ೨೦ನೆಯ ಶತಮಾನದಲ್ಲಿ ಸ್ತ್ರೀ ಸ್ವಾತಂತ್ರ್ಯ ಹೋರಾಟಗಾರಳಾಗಿ ಹೊರಹೊಮ್ಮಿದಳು. ಜರ್ಮನಿಯಲ್ಲಿ ಜರುಗಿದ ಅಂತರರಾಷ್ಟ್ರೀಯ ಸಮಾಜವಾದಿಗಳ ಸಮ್ಮೇಳನದಲ್ಲಿ ಭಾರತ ಸ್ವಾತಂತ್ರ್ಯ ಧ್ವಜ ಹಾರಿಸಿ ಎಲ್ಲರನ್ನೂ ಚಕಿತಗೊಳಿಸಿದ್ದಳು.

ಮಹಾತ್ಮಾಗಾಂಧೀಜಿ ಭಾರತೀಯ ಸ್ತ್ರೀಯರಿಗೆ ಅವರ ಅಂತಃಶಕ್ತಿಯ ಅರಿವನ್ನು ಮಾಡಿಕೊಟ್ಟಿದ್ದರು. ಆಗ ಆವಂತಿಕಾಬಾಯಿ ಎಂಬ ಮಹಿಳೆ ಚಂಪಾರಣ್ಯದ ಪ್ರಥಮ ಸತ್ಯಾಗ್ರಹದಲ್ಲಿ ಪಾಲುಗಾರಳಾದಳು. ಸ್ತ್ರೀಯರ ಮೋರ್ಚಾ ತೆಗೆದುಕೊಂಡು ಮುಂಬೈ ಆಜಾದ್ ಮೈದಾನಕ್ಕೆ ಬಂದು ಉಪ್ಪಿನ ಮೇಲಿನ ಕರವನ್ನು ರದ್ದುಗೊಳಿಸಬೇಕೆಂದು ಸತ್ಯಾಗ್ರಹ ನಡೆಸಿದಳು. ಪೊಲೀಸರು ಇವರಿಗೆ ಮನೆಗೆ ತೆರಳಲು ಬಿನ್ನವಿಸಿಕೊಂಡರೂ, ಇವರು ಚಲಿಸಲಿಲ್ಲ. ಪೊಲೀಸರು ಸ್ತ್ರೀಯರ ಮೇಲೆ ಅಶ್ವಗಳನ್ನು ಬಿಡುವದಾಗಿ ಅಂಜಿಸಿದರೂ, ಕೊನೆಗೆ ಅಶ್ವಗಳನ್ನು ಬಿಟ್ಟರೂ ಸರಿಯಲಿಲ್ಲ. ಕೃಷ್ಣಕುಮಾರಿ ಸರದೇಸಾಯಿ ಎಂಬ ಹದಿನಾಲ್ಕುವರ್ಷದ ಬಾಲಿಕೆ ಕೈಯಲ್ಲಿ ರಾಷ್ಟ್ರ ಧ್ವಜ ಹಿಡಿದು ಅಚಲಿತಳಾಗಿ ನಿಂತಿದ್ದಳು. ಅಶ್ವಗಳು ಧಾವಿಸಿ ಬಂದರೂ ಅಚಲಳಾಗಿ ನಿಂತ ಇವಳ ಸಹನಶೀಲತೆಯನ್ನು ಅಂದಿನ ಪೊಲೀಸ್ ಕಮೀಶನರ್ ನೋಡಿ ಪ್ರಶಂಸಿಸಿದ್ದರು. 'ನಿದ್ರಿಸುತ್ತಿರುವ ಭಾರತೀಯರನ್ನು

ಎಚ್ಚರಿಸಿ ಅವರು ತಾಯ್ನಾಡಿಗಾಗಿ ದುಡಿಯುವಂತೆ ಮಾಡುವ ಒಂದು ಭಾರತೀಯ ಟಾಂ ಟಾಂ ಆಗಿದ್ದೇನೆ' ಎನ್ನುತ್ತಿದ್ದಳು ಸೋದರಿ ಆ್ಯನಿಬೆಸೆಂಟ್.

ಹೋರಾಟಗಾರರಲ್ಲಿ ಹೆಸರುವಾಸಿಯಾದ ಸೋದರಿ ದಕ್ಷಿಣ ಕರೋಲಿನಾದ ಸಾರಾ ಗ್ರಿಮ್ಕ ಸ್ತ್ರೀ-ಪುರುಷ ಸಮಾನತೆಗೆ ಚಳುವಳಿ ಆರಂಭಿಸಿದ್ದಳು. ಸಾರ್ವಜನಿಕ ಭಾಷಣಗಳಿಂದಾಗಿ, ಮುಷ್ಕರ ಚಳುವಳಿಯಿಂದಾಗಿ ಅನೇಕ ಬಾರಿ ಸೆರೆಮನೆ ವಾಸ ಮಾಡಿದ ಇವರು ಇನ್ನುಳಿದ ಹೋರಾಟಗಾರ್ತಿಯರಿಗೆ ಮಾರ್ಗದರ್ಶಿಯರೆನಿಸಿದ್ದರು. ಕಮಲಾದೇವಿ ಚಟ್ಟೋಪಾಧ್ಯಾಯ, ಸರೋಜಿನಿ ನಾಯ್ಡು, ಕಸ್ತೂರ ಬಾ ರಂತಹ ಕೆಲವು ರಾಷ್ಟ್ರೀಯ ನೇತಾರರು ಜನಮನದಲ್ಲಿ ಹೋರಾಟ, ಕ್ರಿಯಾಶೀಲತೆಗೆ ಆದರ್ಶ ವ್ಯಕ್ತಿಗಳೆನಿಸಿದ್ದರು. ಇವರ ಪ್ರೋತ್ಸಾಹ, ಅದಮ್ಯ ಉತ್ಸಾಹ, ಅಸಂಖ್ಯ ಮಹಿಳೆಯರನ್ನು ಸ್ವಾತಂತ್ರ್ಯ ಹೋರಾಟಗಾರರನ್ನಾಗಿ ಪರಿವರ್ತಿಸಿತ್ತು. ಅದಕ್ಕೆ ಪೂರಕವಾಗಿ ಅಸ್ಪೃಶ್ಯತಾ ನಿವಾರಣೆ, ಗ್ರಾಮೋದ್ಯೋಗಗಳ ಉತ್ಥಾನ, ಪತ್ರಿಕೋದ್ಯಮ, ಖಾದಿ ಗ್ರಾಮೋದ್ಯೋಗ, ಹಿಂದಿ ಪ್ರಚಾರ, ಮದ್ಯಪಾನ ನಿಷೇಧ, ಸಾಮಾಜಿಕ ಐಕ್ಯದಂತಹ ಜವಾಬ್ದಾರಿಯುತ ಕಾರ್ಯಗಳಲ್ಲಿಯೂ ಬಹುಸಂಖ್ಯಾತ ಮಹಿಳೆಯರು ಪಾಲುಗಾರರಾಗಿದ್ದರು.

ಕೆಲವು ಮಹಿಳೆಯರ ವ್ಯವಸ್ಥಿತ ಕಾರ್ಯಸಾಧನೆ ಬ್ರಿಟಿಷ್ ಸರಕಾರಕ್ಕೆ ನುಂಗಲಾರದ ತುತ್ತಾಗಿತ್ತು. ಸ್ವಾತಂತ್ರ್ಯ ಸಂಗ್ರಾಮ ಪ್ರತಿಯೊಂದು ಜೀವನದಲ್ಲಿ ಹೊಸ ಚೈತನ್ಯ ತುಂಬಿ ಕಾರ್ಯ ಸನ್ನದ್ಧಗೊಳಿಸುತ್ತಿತ್ತು. 'ಇಂಥ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡ ಮಹಿಳೆಯರ ಪಾತ್ರವನ್ನು ಸುವರ್ಣಾಕ್ಷರದಲ್ಲಿ ಬರೆದಿಡಬೇಕು' ಎಂದಿರುವರು ಮಹಾತ್ಮಾಗಾಂಧೀಜಿ.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯರದು ಮಹತ್ವದ ಹೆಜ್ಜೆ. ಬಾಲ್ಯದಲ್ಲಿಯೇ ವಿಧವೆಯಾಗಿದ್ದ ಇವರು ಮೂಢನಂಬಿಕೆಗಳಿಗೆ ದೀರ್ಘದಂಡ ನಮಸ್ಕಾರ ಹಾಕಿ, ಸರೋಜಿನಿ ನಾಯುಡುರವರ ಸೋದರ ನರೇಂದ್ರನಾಥರನ್ನು ಮರುಮದುವೆಯಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದರು. ಪುಣೆಯಲ್ಲಿ ಗೋಪಾಲಕೃಷ್ಣ ಗೋಖಲೆಯವರು 'ಮಹಿಳಾ ಸೇವಾ ಸದನ' ಮತ್ತು 'ಸರ್ವಂಟ್ ಆಫ್ ಇಂಡಿಯಾ' ಎಂಬ ಎರಡು ಸಂಸ್ಥೆಗಳ ಸದಸ್ಯರಾಗಿ ಕಾರ್ಯ ಕೈಕೊಂಡರು. ಇವರ ಹಾದಿಯಲ್ಲಿ ಮುನ್ನಡೆದ ದೇಶಭಕ್ತೆ ಉಮಾಬಾಯಿ ಕುಂದಾಪುರ ಅವರು. ಬ್ರಿಟಿಷರ ದಬ್ಬಾಳಿಕೆ ಮನಗಂಡು ಸ್ವಾತಂತ್ರ್ಯ ಸಂಗ್ರಾಮದಲ್ಲಿ ೧೯೧೯ರಲ್ಲಿ ನಡೆದ 'ಜಲಿಯನ್‌ವಾಲಾ ಬಾಗ್' ಹತ್ಯಾಕಾಂಡದ ದುಷ್ಕೃತ್ಯದ ನೋವನ್ನುಂಡರು. ಹುಬ್ಬಳ್ಳಿಯಲ್ಲಿ 'ಭಗಿನಿ ಸಮಾಜ' ಎಂಬ ಸಂಸ್ಥೆ ರಚಿಸಿ ಅದರ ಮೂಲಕ ಸಾಮಾಜಿಕ ಕ್ರಾಂತಿ ಮುಂದುವರೆಸಿದರು. ಅಂದು ಕಾಂಗ್ರೆಸ್ ನಿಧಿಗಾಗಿ ಒಂದು ಲಕ್ಷ ರೂಪಾಯಿ ಸಂಗ್ರಹಿಸಿಕೊಟ್ಟ ಕೀರ್ತಿ ಇವರದು. ಪಣಜೀಕರ ಕೃಷ್ಣಾಬಾಯಿ, ಈಸೂರಿನ ದಿಟ್ಟ ಹೋರಾಟಗಾರ್ತಿಯರೆನಿಸಿದ ಪಾರ್ವತೆಮ್ಮ, ಸಿದ್ದಮ್ಮ, ಹಾಲಮ್ಮ ಚಲೇಜಾವ್ ಚಳುವಳಿಯಲ್ಲಿ ಭೂಗತರಾಗಿ ಕಾರ್ಯ ಕೈಕೊಂಡವರು.

ಗಾಂಧೀಜಿಯವರು ಕೈಕೊಂಡ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಿಳೆಯರಿಗೆ ಹೆಚ್ಚಿನ ಉತ್ತೇಜನವಿತ್ತು. 'ನಮ್ಮದು ಅಹಿಂಸಾ ಚಳುವಳಿ. ಇದರಲ್ಲಿ ಮಾನವ ಶಕ್ತಿಯನ್ನು ಅಳೆಯಬೇಕಿಲ್ಲ. ಸಹನೆ, ತಾಳ್ಮೆ, ತ್ಯಾಗ, ನಿಶ್ಚಲತೆ, ಸದ್ಗುಣಗಳು ಇಲ್ಲಿ ಅಗತ್ಯ. ಈ ಗುಣಗಳಲ್ಲಿ ಪುರುಷನಿಗಿಂತ ಸ್ತ್ರೀ ದಕ್ಷಳೆಂದು ನಿರೂಪಿತವಾಗಿದೆ' ಎಂದರು ಮಹಾತ್ಮಾ

ಗಾಂಧೀಜಿ. ಜವಾಹರಲಾಲ್ ನೆಹರೂ ತಮ್ಮ ಆತ್ಮ ಕಥನದಲ್ಲಿ ಬರೆದಂತೆ 'ರಾಷ್ಟ್ರೀಯ ಹೋರಾಟವಲ್ಲಿ ಸ್ತ್ರೀಯರ ಪಾತ್ರ ಗಮನಾರ್ಹವಾಗಿತ್ತು.' ತಂತಮ್ಮ ಮನೆಗಳಿಂದ ಪ್ರತ್ಯೇಕಗೊಂಡು ಅನೇಕ ಸ್ತ್ರೀಯರು ಹೊರಬಂದು ಸಾರ್ವಜನಿಕ ಚಟುವಟಿಕೆಗಳಲ್ಲಿ ಯಾವ ಅನುಭವ ಇಲ್ಲದಿರುವಾಗಲೂ ರಾಷ್ಟ್ರೀಯ ಚಳುವಳಿಗೆ ಧುಮುಕಿದರು. ವಿದೇಶಿ ಬಟ್ಟೆ ಮತ್ತು ಮದ್ಯದ ಅಂಗಡಿಗಳ ಮುಂದೆ ಮುಷ್ಕರ ಹೂಡುವುದು ಬಹುಮಟ್ಟಿಗೆ ಸ್ತ್ರೀಯರ ಕೆಲಸಗಳಾಗಿದ್ದವು. ಎಲ್ಲ ನಗರಗಳಲ್ಲಿಯೂ ಹೆಂಗಸರುಗಳೇ ಇದ್ದ ಪ್ರತಿಭಟನಾ ಮೆರವಣಿಗೆಗಳು ಜರುಗುತ್ತಿದ್ದವು. 'ಇವರುಗಳ ಧೋರಣೆ, ಪುರುಷ ಧೋರಣೆಗಿಂತಲೂ ಹೆಚ್ಚು ಬಿಗಿಯಾಗಿತ್ತು' ಎಂದಿರುವರು.

## ಅಹಿಂಸಾತ್ಮಕ ಹೋರಾಟ

ಉಪ್ಪಿನ ಸತ್ಯಾಗ್ರಹದ ಸಂದರ್ಭದಲ್ಲಿ ಮುನ್ನುಗ್ಗಿದ, ಕೆಲವು ವೇಳೆ ಬ್ರಿಟಿಷರಿಗೆ ಪತ್ತೆಯಾಗದಿರಲೆಂದು ತಮ್ಮ ಹೆಸರು, ವೇಷ ಬದಲಿಸಿಕೊಂಡು ಗುಪ್ತ ಸ್ಥಳಗಳಿಗೆ ಹೋಗಿ ಜನರಲ್ಲಿ ಜಾಗೃತಿಯನ್ನುಂಟು ಮಾಡಿದ ಮಹಿಳೆಯರ ತಂಡ ಅಂದು ಎಲ್ಲರನ್ನೂ ಬೆರಗುಗೊಳಿಸುವಂತಿತ್ತು. 'ಅವಿದ್ಯಾವಂತರೆನಿಸಿದ ಭಾರತೀಯ ಮಹಿಳೆಯರು ಅಹಿಂಸಾತ್ಮಕ ಮತ್ತು ಸಹಕಾರ ಚಳುವಳಿಗಳಲ್ಲಿ ಅತ್ಯಂತ ಗಂಭೀರ ರೀತಿಯಲ್ಲಿ ಭಾಗವಹಿಸಿದ್ದರು. ಬ್ರಿಟಿಷ್ ಸರಕಾರದ ಕ್ರೋಧವನ್ನೂ, ಬೈಗುಳಗಳನ್ನೂ ತಾಳ್ಮೆಯಿಂದ ಧೈರ್ಯದಿಂದ ಸಹಿಸಿದ್ದಾರೆ. ಅಹಿಂಸಾ ಚಳುವಳಿಗೆ ನಿಜವಾದ ಅರ್ಥವನ್ನು ಕೊಟ್ಟು ಕಾರ್ಯಗತ ಮಾಡಿದ್ದಾರೆ' ಎಂದು ಅನೇಕ ಹಿರಿಯ ಹೋರಾಟಗಾರರು ತಿಳಿಸಿದ್ದುಂಟು.

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಮಹಿಳೆಯರ ಕ್ರಾಂತಿಕಾರಕ ಚಟುವಟಿಕೆಗಳೂ, ಅವರ ಪ್ರಚಂಡ ಸ್ವಾತಂತ್ರ್ಯ ಮನೋಭಾವವೂ ಸಾಹಸಮಯವೆನಿಸಿದ್ದವು. ಸಾಮಾಜಿಕ ಜೀವನದ ಕುಂದುಕೊರತೆ ನೀಗಿಸಲು ಪ್ರಯತ್ನಪಟ್ಟುದು, ಶೈಕ್ಷಣಿಕ ಪ್ರಗತಿ, ಆಧ್ಯಾತ್ಮ ಜೀವನದ ಉನ್ನತಿ, ವರ್ಗ, ವರ್ಣ ಭೇದಗಳ ವಿರುದ್ಧ ಅವರು ಕೈಕೊಂಡ ಹೋರಾಟ, ಮಾನವೀಯ ಅನುಕಂಪೆ, ವಿಶ್ವಪ್ರೇಮ ಬೆಸೆದಿವೆ. ಜನತೆಯ ಮುಂದಾಳಾಗಿ ರಾಷ್ಟ್ರ ಮುನ್ನಡೆಸಬಲ್ಲ ಆಧ್ಯಾತ್ಮಶಕ್ತಿ ಇವರನ್ನು ದೇಶಪ್ರೇಮಿಗಳನ್ನಾಗಿಸಿತ್ತು. ಕೆಲವು ಪ್ರದೇಶದ ಮಹಿಳೆಯರಂತೂ ಬ್ರಿಟಿಷರ ದಬ್ಬಾಳಿಕೆಯ ವಿರುದ್ಧ ಸಿಡಿದೆದ್ದು ನಿಂತು ಸ್ವಾತಂತ್ರ್ಯ ಕರೆಗೆ ಓಗೊಟ್ಟಿರುವರು. ಗಾಂಧೀಜಿಯವರ ಸ್ವಾತಂತ್ರ್ಯ ಕರೆಗೆ ಓಗೊಟ್ಟು ಕೂಲಿ ಕೆಲಸವನ್ನು ಬಿಟ್ಟು ಚಳುವಳಿಯಲ್ಲಿ ಪಾಲ್ಗೊಂಡವರಲ್ಲಿ ದೇವಮ್ಮ ಹರಿಜನ ಹೆಸರು ಉಲ್ಲೇಖಾರ್ಹ. ಸಿದ್ದಾಪುರದ ಶ್ರೀಮಂತ ನಾಗೇಶ ಹೆಗಡೆಯವರು ಕರ ನಿರಾಕರಣೆಯ ಚಳುವಳಿಯಲ್ಲಿ ಭಾಗವಹಿಸಿದ್ದರಿಂದ ಅವರ ತೋಟವನ್ನು ಬ್ರಿಟಿಷ್ ಸರಕಾರ ಮುಟ್ಟುಗೋಲು ಹಾಕಿತ್ತು. ಕೆಲಸ ಕಳೆದುಕೊಂಡ ದೇವಮ್ಮ ಸಾಗರಕ್ಕೆ ಬಂದು ಗಂಡನನ್ನು ಕಳೆದುಕೊಂಡು ಪಡಬಾರದ ಕಷ್ಟಪಟ್ಟು, ಸ್ವಾತಂತ್ರ್ಯಾನಂತರ ರಾಜ್ಯ ಸರಕಾರ ಗೌರವಿಸಿ ನೀಡಿದ ಹಣದ ಚೆಕ್ಕನ್ನು ದೂರ ಎಸೆದ ದೇಶಭಕ್ತೆ. ಕೆಲವು ಮಹಿಳೆಯರಿಗಂತೂ ದೊರೆತ ಈ ಪರಿಸರ ಅವರನ್ನು ಸ್ವಾತಂತ್ರ್ಯ ಹೋರಾಟಗಾರರನ್ನಾಗಿಯೇ ಹುಟ್ಟಿಸಿತ್ತೆನ್ನಬೇಕು. ಯಾವುದೇ ಪರಿಸರ, ಸಮರ್ಥ ಮಾರ್ಗದರ್ಶನವಿಲ್ಲದೆ ಈ ಸಂಗ್ರಾಮದಲ್ಲಿ ಧುಮುಕಿದವರೇ ಅಧಿಕ. ಗೃಹಕೃತ್ಯ ಬದಿಗಿರಿಸಿ ಹೊರಜಗತ್ತಿನ ಉರಿಗೆ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಪಾಲುವಹಿಸಿರುವರು. ಹೀಗಾಗಿ

ಸ್ವಾತಂತ್ರ್ಯ ಹೋರಾಟ ಜನ ಸಾಮಾನ್ಯರ ತ್ಯಾಗ, ಬಲಿದಾನ, ಸಾಹಸಗಳ ವೀರಗಾಥೆ ಎನಿಸಿದೆ. ರಾಜಕೀಯ ಸಂಘಟನೆಗಳು ಹಿಂದಿದ್ದರೂ ತಮ್ಮ ಜೀವನದ ಬಹುಭಾಗವನ್ನು ಸೆರೆಯಲ್ಲಿ ಕಳೆದ ಭಾರತೀಯ ಮಹಿಳಾ ವರ್ಗ ಸ್ತುತ್ಯವೆನಿಸಿದೆ. ಗಾಂಧೀಜಿಯವರ ದೇಶಪ್ರೇಮ ಬಹುಸಂಖ್ಯೆಯ ಮಹಿಳೆಯರನ್ನು ಹೋರಾಟಗಾರ ದೀಕ್ಷೆಗೆ ಬದ್ಧರನ್ನಾಗಿಸಿ ಅವರಿಂದ ದೇಶಸೇವೆಗೈಸಿದೆ.

ಮಹಾತ್ಮಾಜಿಯವರ ಆದೇಶದಂತೆ ರಾಷ್ಟ್ರಾದ್ಯಂತ ಸ್ವಾತಂತ್ರ್ಯ ಸಂಗ್ರಾಮ ಪ್ರಾರಂಭವಾದಾಗ ಉಮಾಬಾಯಿ ಕುಂದಾಪುರ, ಕೃಷ್ಣಬಾಯಿ ಪಣಜೀಕರ ಮುಂತಾದ ಮಹಿಳೆಯರು 'ಮಹಿಳಾ ಮಂಡಳ'ಗಳನ್ನು ಸ್ಥಾಪಿಸಿ ಮಹಿಳೆಯರಲ್ಲಿ ಜಾಗೃತಿ ತುಂಬತೊಡಗಿದರು. ಸ್ವದೇಶಿ ಬಟ್ಟೆ, ಖಾದಿ ಪ್ರಚಾರ, ಪರದೇಶಿ ವಸ್ತ್ರ ಬಹಿಷ್ಕಾರ, ವಿದೇಶಿ ವಸ್ತುಗಳ ಅಂಗಡಿಗಳ ಮುಂದೆ ಪಿಕೆಟಿಂಗ್ ಪ್ರಾರಂಭಿಸಿದರು. ಶಾಂತಾಬಾಯಿ ಕರಮರಕರ ಅವರು ೧೯೩೦ರಲ್ಲಿ ಉಪ್ಪಿನ ಸತ್ಯಾಗ್ರಹ, ೧೯೩೧ರಲ್ಲಿ ಕರನಿರಾಕರಣೆಯ ಚಳುವಳಿಯಲ್ಲಿ ಭಾಗಿಯಾದರು. ಹರಿಜನಪ್ರಿಯ ಶ್ರೀಮತಿ ನಾಗಮ್ಮ ಸರದಾರ ವೀರನಗೌಡ ಪಾಟೀಲರು ಹುಬ್ಬಳ್ಳಿಯಲ್ಲಿ 'ಮಹಿಳಾ ವಿದ್ಯಾಪೀಠ' ಕಟ್ಟಿದರು. ದೇಶಭಕ್ತರಾದ ವೀರನಗೌಡರು ಸ್ವಾತಂತ್ರ್ಯ ಚಳುವಳಿಯಲ್ಲಿ ತಮಗೆ ಕೆಲಸ ವಹಿಸಿಕೊಡಬೇಕೆಂದು ಮಹಾತ್ಮಾ ಗಾಂಧೀಜಿಯವರನ್ನು ಕೇಳಿದಾಗ ಅವರು 'ಇದೂ ಒಂದು ಸ್ವಾತಂತ್ರ್ಯ ಚಳುವಳಿಯೇ. ಅಸ್ಪೃಶ್ಯತೆ ಈ ದೇಶದ ಸ್ವಾತಂತ್ರ್ಯಕ್ಕೆ ಅಡ್ಡಿ ತಂದಿದೆ. ನಮ್ಮ ಸಮಾಜದಲ್ಲಿ ಈ ಕೆಟ್ಟ ಭಾವನೆ ತೊಲಗುವವರೆಗೂ ನಾವು ಸ್ವತಂತ್ರರಾಗಲು ಸಾಧ್ಯವಿಲ್ಲ. ಅಸ್ಪೃಶ್ಯ ನಿವಾರಣೆ ಸ್ವಾತಂತ್ರ್ಯ ಚಳುವಳಿಯ ಮುಖ್ಯ ಕೆಲಸ' ಎಂದು ಆದೇಶಿಸಿದ್ದರಿಂದ ಈ ಕೆಲಸವನ್ನು ಶಿರಸಾವಹಿಸಿ ಶ್ರಮಿಸಿದುದಲ್ಲದೆ, ಅದರ ಪೂರ್ಣ ಜವಾಬ್ದಾರಿಯನ್ನು ಮಡದಿ ನಾಗಮ್ಮನವರಿಗೂ ವಹಿಸಿಕೊಟ್ಟರು.

ಇದರಿಂದ ಪ್ರೇರಣೆಗೊಂಡು ೧೯೩೪ರಲ್ಲಿ ಇಬ್ಬರು ಹರಿಜನ ವಿದ್ಯಾರ್ಥಿನಿಯರಿಂದ ಪ್ರಾರಂಭವಾಯಿತು 'ಮಹಿಳಾ ವಿದ್ಯಾಪೀಠ'. ವೀರನಗೌಡರ ಮಾತಿನಲ್ಲಿಯೆ ಹೇಳುವದಾದರೆ 'ಇಂಥ ಬಾಲಿಕಾಶ್ರಮ ಸ್ಥಾಪನೆಯಾದುದು ಮೊದಲು ವಾರ್ಧಾದಲ್ಲಿ. ಅನಂತರ ಕರ್ನಾಟಕದಲ್ಲಿ. ಇಡೀ ಭಾರತದಲ್ಲಿಯೇ ಎರಡನೆಯದಾಗಿ ಪ್ರಸಿದ್ಧವಾದುದು ಹುಬ್ಬಳ್ಳಿಯಲ್ಲಿ' ಎಂದಿರುವರು. ಹರಿಜನರಲ್ಲಿ ಜಾಗೃತಿ ತರುವದು ಸ್ವಾತಂತ್ರ್ಯಕ್ಕಾಗಿ ಕೈಕೊಂಡ ಹೋರಾಟದ ಇನ್ನೊಂದು ಮುಖವೆನಿಸಿತ್ತು. ಈ ದೃಷ್ಟಿಯಿಂದ ಪ್ರಭಾತಫೇರಿ, ದೇಶಭಕ್ತಿಗೀತೆಗಳು, ಕೀರ್ತನೆಗಳು, ಲಾಠಿ, ಲೇಝಿಮ್, ವ್ಯಾಯಾಮ, ಶಿಕ್ಷಣ, ಹಂಜಿ ಮಾಡುವುದು, ನೂಲು ತೆಗೆಯುವುದು ಮುಂತಾದ ಚಟುವಟಿಕೆಗಳಿಂದ ಸಮಾಜದಲ್ಲಿ ಒಳ್ಳೆಯ ವಾತಾವರಣ ಹುಟ್ಟಿಸಿ ಎಷ್ಟೋ ಕಾಲದಿಂದ ಬೆಳೆದು ಬಂದ ವರ್ಣದ ತಾರತಮ್ಯ ಕಡಿಮೆಗೊಳಿಸಿದರು. 'ಪತಿತರಾದ ಜೀವಂತದೇವರ ಪೂಜೆಯೇ ನಿಜವಾದ ದೇವರ ಪೂಜೆ' ಎಂದು ನಂಬಿ ಕಾರ್ಯರೂಪಕ್ಕೆ ತಂದರು.

ಹೀಗೆ ಅಸಂಖ್ಯ ಸಂಖ್ಯೆಯಲ್ಲಿ ಭಾಗವಹಿಸಿದ ಹೋರಾಟಗಾರ್ತಿಯರಲ್ಲಿ ಹಾಸನದ ಶಾರದಮ್ಮ ಗೋವಿಂದರಾವ್, ಮೈಸೂರಿನ ಸುನಂದಮ್ಮ, ಬೆಂಗಳೂರಿನ ಕಾಮಾಕ್ಷಮ್ಮ, ಸುಬ್ಬಮ್ಮ ಜೋಯಿಸರು, ಕೃಷ್ಣಾಬಾಯಿ, ಜಮಖಂಡಿಯ ಪದ್ಮಾವತಿ ಬಿದ್ರಿ, ಸಿರ್ಸಿ,

ಸಿದ್ದಾಪುರದ ಕಡೆಗೋನು ಭವಾನಿಬಾಯಿ, ಸಿರ್ಸಿಯ ಗಂಗಾಬಾಯಿ, ಮಿರ್ಜಿಕರ್, ವಿರಾಜಪೇಟೆಯ ದೊಡ್ಡಮ್ಮ, ಬೆಳಗಾವಿಯ ಶಕುಂತಲಾ ಕುರ್ತಕೋಟಿ, ರಮಾಬಾಯಿ ಯೋಣ್ಗ, ಬೆಂಗಳೂರಿನ ರಾಜಮ್ಮ ತೀರ್ಥಶರ್ಮ, ಲೀಲಾವತಿ ಮಾಗಡಿ, ಯಶೋಧರಮ್ಮ ದಾಸಪ್ಪ, ಸಿದ್ದಾಪುರದ ಸೀತಾಬಾಯಿ ಮಡಗಾಂವಕರ, ಬಳ್ಳಾರಿ ಜಯಲಕ್ಷ್ಮಿ, ಚಿತ್ರದುರ್ಗದ ನಾಗರತ್ನಮ್ಮ ಹಿರೇಮಠ, ಈಸೂರಿನ ಸಿದ್ದಮ್ಮ, ಪಾರ್ವತಮ್ಮ, ಹಾಲಮ್ಮ ಮುಂತಾದ ಕರ್ನಾಟಕದ ಆದರ್ಶ ಮಹಿಳೆಯರನ್ನು ಹೆಸರಿಸಬಹುದು. ಗಂಗಾಬಾಯಿ ತಮಿಳುನಾಡಿನ ಹೋರಾಟಗಾರ್ತಿ, ಕಲ್ಕತ್ತಾದಲ್ಲಿ ಮಹಿಳಾ ವಿದ್ಯಾಲಯ, ಮಹಾಕಾಳಿ ವಿದ್ಯಾಲಯ, ಪಾಠಶಾಲೆ ಸ್ಥಾಪಿಸಿದ್ದರು; ಪ್ರತಿ ಭಾರತೀಯ ಮಹಿಳೆಯರನ್ನು ಚಳುವಳಿಯಲ್ಲಿ ತರಬೇತಿ ಮಾಡುತ್ತಿದ್ದರು ಎಂಬುದು ಕೆಲವರಿಗೆ ಮಾತ್ರ ಗೊತ್ತಿತ್ತು. ಬ್ರಿಟಿಷರು ಇವಳನ್ನು ಮಹಿಳಾ ವಿದ್ಯಾಲಯದ ಸ್ಥಾಪಕಳೆಂದು ತಿಳಿದಿದ್ದರೆ, ಅದರ ಹಿನ್ನೆಲೆಯಲ್ಲಿ ಈಕೆ ಸ್ವಾತಂತ್ರ್ಯ ಹೋರಾಟದ ಕಿಚ್ಚೆಬ್ಬಿಸಿದ ಸಮರ್ಥ ಹೋರಾಟಗಾರ್ತಿ ಎನಿಸಿದ್ದಳು.

ಹೀಗೆ ಕೆಲವು ಕ್ರಿಯಾಶೀಲ ಮಹಿಳೆಯರು ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡು ಮಹಿಳೆಯರ ಹಕ್ಕು-ಬಾಧ್ಯತೆಗಳ ಜೊತೆ ದೇಶಸೇವೆ, ಸಮಾಜ ಉನ್ನತಿಗೆ, ಮಹಿಳಾ ಸಂಘಟನೆಗೆ ಚಾಲನೆ ನೀಡಿರುವರು. ದೇಶದಿಂದ ತಮಗಾಗಿ ಏನನ್ನೂ ಬಯಸದೆ, ದೇಶದ ಹಿತವೇ ತಮ್ಮ ಹಿತವೆಂದು, ದೇಶದ ಸರ್ವಸಾಮಾನ್ಯರಲ್ಲಿ ತಮ್ಮನ್ನು ಗುರುತಿಸಿಕೊಂಡಿರುವರು. ಪ್ರಾತಃಸ್ಮರಣೀಯರಾದ ಇವರ ದಿವ್ಯಚೇತನ ಇಂದು ಭಾರತೀಯರನ್ನು ಸಕ್ರಿಯವಾಗಿ ಮುನ್ನಡೆಸಬೇಕಿದೆ.

❋ ❋ ❋

# ಸ್ವಾತಂತ್ರ್ಯ ಚಿಂತನೆ

• ರಜಿಯಾ ಡಿ. ಬಿ.

ಸ್ವತಂತ್ರ ಭಾರತವನ್ನು ರೂಪಿಸುವ ಚಳುವಳಿಯ ಹೋರಾಟದಲ್ಲಿ ಭಾಗವಹಿಸಿದ ಲಕ್ಷಾಂತರ ಮಹನೀಯರು, ಮಹಿಳೆಯರ ದೃಢ ಸಂಕಲ್ಪ, ಗೊತ್ತುವಳಿ, ಅಚಲ ಹೋರಾಟದ ಫಲವಾಗಿ ಭಾರತ ಸ್ವತಂತ್ರವಾಗಿ ೫೦ ವರ್ಷದ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿದೆ.

ಅವತ್ತಿನ ಕ್ರಿಯಾತ್ಮಕ ಚಿಂತನೆ, ದೇಶ ಕಟ್ಟುವ ಕನಸು, ಬ್ರಿಟಿಷರನ್ನು ಹೊಡೆದೋಡಿಸಲು "ಸಮಸ್ತ ಪ್ರಜೆಗಳೆಲ್ಲ ಒಂದೆಂಬಂತೆ ಸೆಣಸಿರುವ ಉದಾಹರಣೆಗಳು" – ಇವೆಲ್ಲ ಈಗ ಇತಿಹಾಸದ ಪುಟಗಳನ್ನು ಸೇರಿವೆ. ಮಹಾತ್ಮರ ಬದುಕು, ಬವಣೆ, ನಿಸ್ವಾರ್ಥ ದೇಶಪ್ರೇಮ, ನಿಷ್ಠೆಯ ರಾಜಕೀಯ ಮುಂತಾದವೆಲ್ಲ ಬೃಹತ್ ಗ್ರಂಥಗಳಲ್ಲಿ ದಾಖಲಾಗಿವೆ. ಆಗಾಗ ಮಾಧ್ಯಮಗಳ ಮೂಲಕ ಹಾಗೂ ಪಠ್ಯಗಳಲ್ಲಿ ಧ್ವನಿತವಾಗುತ್ತಲೇ ಇವೆ.

೫೦ನೇ ಸ್ವಾತಂತ್ರ್ಯೋತ್ಸವದ ಈ ಸಂದರ್ಭದಲ್ಲಿ ಪ್ರತಿಯೊಬ್ಬ ಪ್ರಜೆ ಸ್ವಾತಂತ್ರ್ಯದ ಹಿನ್ನೆಲೆ-ಮುನ್ನೆಲೆಗಳನ್ನು ಅವಲೋಕಿಸಿ, ನಿಸ್ವಾರ್ಥ ದೇಶಪ್ರೇಮ ಹಾಗು ನೈತಿಕ ರಾಜಕೀಯದ, ಉದ್ದೇಶದ ಮೌಲ್ಯಗಳನ್ನು, ಮಹಾತ್ಮರ-ಹುತಾತ್ಮರ ತ್ಯಾಗ, ಬಲಿದಾನಗಳನ್ನು ಗೌರವಿಸುವುದರ ಮಹತ್ವವನ್ನು ಅರಿತುಕೊಳ್ಳಬೇಕಿದೆ. ಜೊತೆಗೆ.... ಇಂದಿನ ದೇಶದ ಸಾಧನೆ, ವೈಫಲ್ಯಗಳನ್ನು ಚಿಂತಿಸಿ ಅರಿಯುವುದೂ ಅಗತ್ಯ. ದೇಶವಿಂದು ಕೈಗಾರಿಕೀಕರಣಗೊಂಡು, ಆರ್ಥಿಕವಾಗಿಯೂ ಸಾಮಾಜಿಕವಾಗಿಯೂ ಹಂತ-ಹಂತವಾಗಿ ಪ್ರಗತಿಯನ್ನು ಕಾಣುತ್ತ ಬಂದಿದೆ ಎಂಬುದರಲ್ಲಿ ಸಂಶಯವೇ ಇಲ್ಲ. ಸ್ವಾತಂತ್ರ್ಯದ ನಂತರ ಭಾರತದಲ್ಲಿ ಆಧುನೀಕರಣ ಪ್ರಕ್ರಿಯೆಗೆ ಚಾಲನೆ ದೊರೆತು ಅಗಾಧ ಕೈಗಾರಿಕಾ ಬೆಳವಣಿಗೆಗೆ ನೆಲೆ ಸಿಕ್ಕಿತು.

ತಾತ್ವಿಕ ನೆಲೆಯಲ್ಲಿ ಗಾಂಧೀಜಿಯವರು ನಶಿಸುತ್ತಿರುವ ಸಾಂಪ್ರದಾಯಿಕ ಹಾಗೂ ಗುಡಿ ಕೈಗಾರಿಕೆಯೊಂದಿಗೆ ಇದ್ದರೆ ನೆಹರೂರವರು ಬೆಳೆಯುವ ಆಧುನಿಕ ಕೈಗಾರಿಕೆಯೊಂದಿಗಿದ್ದರು.

ನಮ್ಮಲ್ಲಿ ಮಾತ್ರ ಕೈಗಾರಿಕೀಕರಣದ ಪ್ರಯತ್ನಗಳು ಸುಮಾರಷ್ಟು ಯಶಸ್ವಿಯಾದವು. ಅದಕ್ಕೆ ಒಂದು ಕಾರಣ ನಮ್ಮ ಸಾಂಪ್ರದಾಯಿಕ ಕೈಗಾರಿಕೆಗಳು. ನಮ್ಮ ಕುಲ ಕಸುಬುಗಾರರಲ್ಲಿನ ಪ್ರಾವೀಣ್ಯತೆ. ಆಧುನಿಕ ಕೈಗಾರಿಕೆಯಿಂದ ಕುಲಕಸುಬು ನಾಶ ಆದರೂ ಹೊಸ ಸಂದರ್ಭಕ್ಕೆ ತಕ್ಕಂತೆ ಸೃಷ್ಟಿಸಿಕೊಂಡ ಪ್ರಾವೀಣ್ಯತೆ, ಹೊಸ ಕೈಗಾರಿಕೆಗಳು ನಮ್ಮಲ್ಲಿ ಹೊಂದಿಕೊಳ್ಳುವ ಸಾಧ್ಯತೆಗಳನ್ನು ದೃಢಪಡಿಸಿದೆ. ತಾಂತ್ರಿಕತೆಯಿಂದ ಸೃಷ್ಟಿಯಾಗುವ ಈ ಪ್ರಾವೀಣ್ಯತೆ ಇಂದಿಗೂ ಬೆಳವಣಿಗೆಯ ಮುಖ್ಯ ಅಂಶವಾಗಿದೆ.

ವೈದ್ಯಕೀಯ ನೈಪುಣ್ಯತೆ, ಅಣುಶಕ್ತಿ ಉತ್ಪಾದನೆ, ಕೃಷಿ ಮಾರುಕಟ್ಟೆ, ಕಂಪ್ಯೂಟರ್ ತಾಂತ್ರಿಕ ವಿಭಾಗಗಳಡೆಯೂ ನಮ್ಮ ವಿಜ್ಞಾನಿಗಳು ಬೇರೆ ಯಾರಿಗೇನೂ ಕಡಿಮೆ ಇಲ್ಲವೆಂದು ಸಾಬೀತು ಪಡಿಸಿದ್ದಾರೆ.

ಈ ಎಲ್ಲ ಬೆಳವಣಿಗೆಯ ಜೊತೆಯಲ್ಲಿಯೂ ಕೆಲವು ಹೊಸ ಸಮಸ್ಯೆಗಳು ಬಂದಿವೆ. ಪರಿಸರ ನಾಶ, ಪರಿಸರ ಮಾಲಿನ್ಯ ಹಾಗೂ ನಗರೀಕರಣದ ಸಮಸ್ಯೆ ಇತ್ಯಾದಿ ಬೃಹದಾಕಾರದಲ್ಲಿವೆ ಸಹ. ಇದಿಷ್ಟು ದೇಶದ ಉನ್ನತಿಗೆ ಸಾಕೆ ? ಮಾನವೀಯ ಸಂಪನ್ಮೂಲಗಳು, ಅನುಬಂಧಗಳು ಅಗತ್ಯವೂ ಹೌದು.

ಒಂದು ದೇಶವು ಸಮೃದ್ಧವಾಗಿರಬೇಕಾದರೆ ಕನಿಷ್ಠ ಅಲ್ಲಿನ ಶೇಕಡಾ ೮೦ ರಷ್ಟು ಜನರ ಮೂಲಭೂತ ಸೌಕರ್ಯಗಳನ್ನು ಆ ಸರ್ಕಾರ ಪೂರ್ಣವಾಗಿಸಲೇಬೇಕು. ಆದರೆ ಇಂದು ನಮ್ಮ ರಾಜಕೀಯದ ಅಸ್ಥಿರತೆ-ಅನೈತಿಕತೆಯು ವ್ಯಕ್ತಿತ್ವವಿರದ ವ್ಯಕ್ತಿಯ ದೊಂಬರಾಟವಾಗುತ್ತಿದೆ. ಎಲ್ಲೆಡೆ ಭ್ರಷ್ಟಾಚಾರದ ಕರಾಳತೆ ಎದ್ದು ಕಾಣುತ್ತಿದೆ.

ಇಂದಿನ ಸ್ವತಂತ್ರ್ಯ ಭಾರತದ ಕಲ್ಪನೆ ಕೆಲವೊಮ್ಮೆ "ಜಾತೀಯತೆಯ, ವಿಭಜನೆಯ ಅಭ್ಯೋದಯವೆ?" ಎಂಬಂತೆ ಅನ್ನಿಸದೆ ಇರದು.

೫೦ ವರ್ಷಗಳೀಚೆ ಬೆಳೆದ ಭಾರತ ಆರ್ಥಿಕ, ಸಾಮಾಜಿಕ, ವೈಜ್ಞಾನಿಕತೆಯ ಮುನ್ನಡೆಯಲ್ಲಿ ಸಾಮರ್ಥ್ಯ ಹೊಂದಿದ್ದರೂ ಇನ್ನೂ ಅವೈಜ್ಞಾನಿಕ, ಮೌಢ್ಯಗಳ, ಅಂಧಶ್ರದ್ಧೆಯಲ್ಲಿ ಸಾವಿರಾರು ಜನರು ತೊಳಲಾಡುತ್ತಿರುವ ಜ್ವಲಂತ ಉದಾಹರಣೆಗಳೇ ಸಾಕಷ್ಟು ಸಿಗುತ್ತಿವೆ!

ವಿದ್ಯಾವಂತ ಪ್ರಜೆಯು ಇವುಗಳಿಗೆ ದಾಸನಾಗುತ್ತಿರುವುದು ದೊಡ್ಡ ವಿಪರ್ಯಾಸ. ಎಲ್ಲ ಕ್ಷೇತ್ರಗಳಲ್ಲಿ ಲಾಭ ಬಡುಕತನ, ಸ್ವಾರ್ಥ ರಾರಾಜಿಸುತ್ತ ಬಂದಿದೆ. ರಾಜಕೀಯ ಪಕ್ಷಗಳಂತೂ ಮತಗಳಿಕೆಯ ಸರ್ಕಸ್ಸಿನಲ್ಲೇ ತಮ್ಮ ಡೇರೆ ಹೂಡುತ್ತಿವೆ.

ಮಹಾತ್ಮರ "ಜಾತ್ಯತೀತ ಭಾರತ"ದ ಕನಸು ನನಸಾಗದೆ ದಿನೇ-ದಿನೇ ಜಾತಿ-ಮತಗಳ ಸಂಘ, ಸಂಸ್ಥೆಗಳು ತಲೆ ಎತ್ತುತ್ತಿವೆ. ಅವು ತಮ್ಮ ಪ್ರಾತಿನಿಧ್ಯವನ್ನು ಒಂದು ನಿರ್ದಿಷ್ಟ ಉನ್ನತಿ, ಉದ್ದೇಶಕ್ಕೆ ಬಳಸಿಕೊಂಡರೆ ತಪ್ಪಿಲ್ಲ. ಇಂದಿನ ತಾರತಮ್ಯವನ್ನು ಮೀರಲು, ತನ್ನನ್ನು ಗುರ್ತಿಸಿಕೊಳ್ಳಲು, ವ್ಯಕ್ತಿತ್ವ ಬೆಳೆಸಿಕೊಳ್ಳುವ ಅವಕಾಶಗಳಿಗೆ, ತನ್ನ ಅಸ್ತಿತ್ವ ರೂಪಿಸಿಕೊಳ್ಳಲು ಈ ಸಂಘಟನೆಗಳು ಕೊಂಚ ಉಪಯುಕ್ತವಾಗಿ ತನ್ನ ಸಮುದಾಯದ ಜನರ ವಿದ್ಯಾಭ್ಯಾಸ, ಅಭಿವೃದ್ಧಿಗಳಿಗೆ ಕಾಳಜಿ ವಹಿಸಿ ತನ್ನ ಜನರಲ್ಲಿ ಆತ್ಮವಿಶ್ವಾಸದ ಅರಿವು ಬೆಳೆಸಿಕೊಟ್ಟು, ಅವರ ಅಭಿವೃದ್ಧಿಗೆ ಶ್ರಮಿಸಲು ಯತ್ನಿಸಿದರೆ ಒಳಿತೇ. ಅದು ಮತ್ತೆ ಯಥಾ ರೀತಿ ಆಯಾ ಪಂಗಡಗಳ-ಸಮುದಾಯಗಳ ಒಂದು ರಾಜಕೀಯ ಕೇಂದ್ರ ಚಾಲನೆಯಾಗುವುದು ದೊಡ್ಡ ದುರಂತ. ಇಂಥವುಗಳನ್ನೇ ಇಂದು ಹೆಚ್ಚಾಗಿ ಕಾಣುತ್ತಿದ್ದೇವೆ.

ಭ್ರಷ್ಟಾಚಾರ, ಅದಕ್ಷ ರಾಜಕೀಯಗಳನ್ನು ನಿವಾರಿಸಲು, ತೊಡಗುವ ಕನಿಷ್ಠ ೨೦ರಲ್ಲಿ ಒಬ್ಬರಾದರೂ ಯೋಚಿಸುವಂತಾಗಲೇಬೇಕು.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬೆರಳೆಣಿಕೆಯ ಮಹಿಳೆಯರು ಪಾಲ್ಗೊಂಡದ್ದು ಗೋಚರಿಸುತ್ತದೆ.

ಇಂದು ನಾಗರಿಕತೆಯ ತುದಿಯನ್ನೇ ತಲ್ಪುತ್ತಿರುವಾಗ, ಮಹಿಳೆ ಎಲ್ಲ ಕ್ಷೇತ್ರಗಳಲ್ಲೂ ಪ್ರಮುಖವಾಗಿ ಪಾಲ್ಗೊಳ್ಳುತ್ತ ತನ್ನ ಸಾಧನೆಯ ಮೇಲುಗೈ ತೋರುತ್ತಿದ್ದಾಳೆ ಎಂಬುದು ಹರ್ಷವೇ.

ಆದಾಗ್ಯೂ ಭಾರತದಂತಹ ರಾಷ್ಟ್ರದಲ್ಲಿ ಹಳ್ಳಿಯ ಎಷ್ಟೋ ಮಹಿಳೆಯರು, ಕೆಲವು ಪಟ್ಟಣವಾಸಿ ಹಿಂದುಳಿದ ಜನಾಂಗದ ಸ್ತ್ರೀಯರೂ-ಸ್ವಾತಂತ್ರ್ಯದ ಪರಿಕಲ್ಪನೆಯೇ ಇಲ್ಲದೆ ಅಮಾಯಕವಾಗಿರುವುದು, ಸರ್ಕಾರ-ಸಾಕ್ಷರತೆಗಳೆಂದರೇನೋ ಎಂದು ತಿಳಿಯದ ಸ್ಥಿತಿ, ಇಂದೂ ಸಹ ಬಹಳಷ್ಟೇ ಕಾಣುತ್ತಿದೆ. ಈ ಪ್ರಜೆಗಳು ಸಹ ಇತರರಂತೆ ಚಿಂತಿಸುವ, ಪ್ರಜ್ಞೆಯನ್ನು ಮೂಡಿಸುವ ಮುಖ್ಯ ಕೆಲಸಗಳಾಗಬೇಕಾಗಿದೆ.

ಕಾಲು ಪಾಲು ಜನರು ಐಶಾರಾಮ ಜೀವನದವರಾಗಿ, ಉಳಿದಂತೆ ಜನಜೀವನ ಬವಣೆ-ಬಡತನ, ನಿರುದ್ಯೋಗದಲ್ಲಿ ತೊಳಲಾಡುತ್ತಿರುವಾಗ ಸಮಾನತೆ ಎಂಬುದನ್ನು ೫೦ ವರ್ಷಗಳಲ್ಲೂ ಸಾಧಿಸಲಾಗದ ನಮ್ಮ ''ಪ್ರಜಾಪ್ರಭುತ್ವಕ್ಕೆ'' ಮೊದಲು ಸಾಣೆ ಹಿಡಿಯಬೇಕಾಗಿದೆ.

ದೇಶದ ಬೆನ್ನೆಲುಬಾದ ಯುವಶಕ್ತಿ ಇಂದು ರಾಜಕೀಯ ದಾಳವಾಗಿ ಬಳಸಲ್ಪಡುತ್ತಿರುವುದು ದೊಡ್ಡ ಆಘಾತ.

ಕನಿಷ್ಠ ೨೦ ಜನರಲ್ಲಿ ಇಬ್ಬರಾದರೂ ನೈತಿಕ ಚಿಂತನೆ ಬೆಳೆಸಿಕೊಂಡು ಅಸಮಾನತೆಯ ಈ ತಕ್ಕಡಿಯನ್ನು ಸರಿಪಡಿಸುವೆಡೆ ಯೋಚಿಸುವಂತಾದರೆ ಸ್ವಲ್ಪ ಮಟ್ಟಿನ ಬದಲಾವಣೆ ತರಲು ಸಾಧ್ಯವೆಂದು ಆಶಿಸೋಣವೆ?

* * *

# ಸ್ವಾತಂತ್ರ್ಯೋತ್ತರ ಭಾರತದ ಐವತ್ತು ವರ್ಷ

• ಡಾ. ಎಸ್. ವಿ. ಪ್ರಭಾವತಿ

ಐವತ್ತು ವರ್ಷಗಳೆಂದರೆ ಸಣ್ಣ ಮೊತ್ತವೇನಲ್ಲ. ಒಬ್ಬ ಮನುಷ್ಯನ ಸರಾಸರಿ ಆಯುಷ್ಯಕ್ಕೆ ಹತ್ತಿರ ಹತ್ತಿರ ಬರುತ್ತದದು. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ಐವತ್ತು ವರ್ಷವಾಯಿತು ಎಂದಾಗ, 'ಹೌದೇ... ಅಷ್ಟಾಯಿತೇ' ಎಂಬ ಪ್ರಶ್ನೆಯೂ, ನಿಟ್ಟುಸಿರೂ ಹೊರಹೊಮ್ಮುತ್ತವೆ. ಸುಮಾರು ಮುನ್ನೂರು ವರ್ಷಗಳ ಸತತವಾದ ದಾಸ್ಯದಿಂದ ಬಿಡುಗಡೆ; ಕಿತ್ತೂರು ಚೆನ್ನಮ್ಮ, ಟಿಪ್ಪೂರಂತಹವರ ಯುದ್ಧಗಳಿಂದ ಹಿಡಿದು ಸಂಗೊಳ್ಳಿ ರಾಯಣ್ಣನಂತಹವರ ಕ್ರಾಂತಿಯವರೆಗೆ; ನೇತಾಜಿಯವರ, ಮಹಾತ್ಮಾ ಗಾಂಧಿಯವರ ಸತತ ಹೋರಾಟದವರೆಗೆ ನಿಲ್ಲದ ಸತ್ಯಾಗ್ರಹ, ಚಳುವಳಿ, ದಂಗೆ, ಎಲ್ಲವೂ ಸೇರಿ ಕೊನೆಗೆ ದೊರೆತ ಸ್ವಾತಂತ್ರ್ಯ! ದೇಶ ವಿಭಜನೆಯ ಕರಾಳ ನೆನಪಿನೊಂದಿಗೆ ದೊರೆತ ಸೂರ್ಯೋದಯ! ಹೆಸರಿಗೆ ಮಹಾತ್ಮಾಜಿಯವರ ಅಹಿಂಸಾತ್ಮಕ ಸತ್ಯಾಗ್ರಹವೆನ್ನಿಸಿಕೊಂಡರೂ ಎಷ್ಟೊಂದು ಮಂದಿಯ ರಕ್ತತರ್ಪಣ, ಬಲಿದಾನ ಇದರ ಹಿಂದೆ ಅಡಗಿತ್ತು! ಇಷ್ಟು ಕಷ್ಟದ ಗಳಿಕೆಯಾದ ಸ್ವಾತಂತ್ರ್ಯವನ್ನು ದೇಶ ಯಾವ ರೀತಿ ಉಳಿಸಿಕೊಳ್ಳಬೇಕು, ಯಾವ ರೀತಿ ಅನುಭವಿಸಬೇಕು ಎಂಬ ಬಗ್ಗೆ ಹಿರಿಯರ ಕೆಲವು ನೀತಿ ಸಂಹಿತೆಗಳಿದ್ದವು. ಒಲ್ಲದ ಮನಸಿನಿಂದ ಸ್ವಾತಂತ್ರ್ಯ ಕೊಟ್ಟುಹೋದ ಬ್ರಿಟಿಶ್ ಸರ್ಕಾರ ಚರ್ಚಿಲ್‌ರ ಮೂಲಕ, "ಇನ್ನು ಅರ್ಧ ಶತಕವೂ ಈ ದೇಶ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲಾರದು" ಎಂದು ಅಪಶಕುನವನ್ನಾಡಿಯೇ ಹೋಗಿತ್ತು.

ಸ್ವಾತಂತ್ರ್ಯ ಬಂದಮೇಲೆ ಪಂಚವಾರ್ಷಿಕ ಯೋಜನೆಗಳು, ಬೃಹತ್ ಉದ್ಯಮಗಳು, ದೊಡ್ಡ ಡ್ಯಾಮುಗಳ ನೀರಾವರಿ ಯೋಜನೆಗಳು ಹೀಗೆಲ್ಲ ವಾಸ್ತವವಾಗಿ ಮಹಾತ್ಮಾ ಗಾಂಧಿಯವರ ಹಿಂದ್‌ಸ್ವರಾಜ್ಯಕ್ಕೆ ತೀರ ಭಿನ್ನವಾದ ದಿಕ್ಕಿನಲ್ಲಿ ಇಂಡಿಯಾವನ್ನು ನಡೆಸಿದರು ಜವಾಹರರು. ಇದು ಇಲ್ಲಿಗೇ ನಿಲ್ಲದೆ ಎರಡು ಮೂರು ಯುದ್ಧಗಳನ್ನು ಎದುರಿಸಿದ್ದಾಯಿತು. ಧರ್ಮಮೂಲವಾದ ಆಂತರಿಕ ಕಲಹಗಳು ಪಂಜಾಬ್, ಕಾಶ್ಮೀರದಲ್ಲಿ ರಕ್ತ ಬಸಿಯುವಂತೆ ಮಾಡಿದವು. ಕೋಮು ಗಲಭೆಗಳಂತೂ ಅವ್ಯಾಹತವಾಗಿ ನಡೆದವು. ಭಾಷೆಯ ಹೆಸರಿನಲ್ಲಿ ಜನರ ಮನಸ್ಸುಗಳು ಛಿದ್ರ ಛಿದ್ರವಾಗುತ್ತಿರುವುದನ್ನು ಕಂಡುದಾಯಿತು. ವಿವಿಧತೆಯಲ್ಲಿ ಏಕತೆ ಎಂಬ ಮಾತಿನ ಮಾಂತ್ರಿಕತೆ ಕಳೆದು ಹೋಗಿ ವಿವಿಧತೆಗಳೆಲ್ಲವೂ ವಿಘಟನೆಗೆ ಕಾರಣವಾಗುತ್ತಿರುವ ವಿಕ್ಷಿಪ್ತತೆಯನ್ನು ನೋಡುವುದಾಯಿತು.

ಇವುಗಳ ನಡುವೆಯೇ, ಹಸಿರು ಕ್ರಾಂತಿ ಸಾಧಿಸಿ ಬೇರೆ ದೇಶಗಳಿಗೆ ಆಹಾರ ಧಾನ್ಯಗಳನ್ನು ರಫ್ತುಮಾಡುವಲ್ಲಿಗೆ ಬಂದು, ಅಮೆರಿಕದ ಮುಂದೆ ಅನ್ನಕ್ಕಾಗಿ ಭಿಕ್ಷಾಪಾತ್ರೆ ಹಿಡಿದು ನಿಲ್ಲುವದು ತಪ್ಪಿತು. ಬಡಕಲು ಹಸು ಹೊತ್ತಿಗೆ ಅರ್ಧಪಾವು ಹಾಲು ಕರೆಯುತ್ತಿದ್ದ

ದೇಶದಲ್ಲಿ ಬಿಳಿಕ್ರಾಂತಿ ನಡೆದು ಕ್ಷೀರಸಾಗರವನ್ನು ಸೃಷ್ಟಿಸಿದ್ದಾಯಿತು. ಅಮೆರಿಕದ ಸ್ನೇಹ ಬೆಳೆಸಿ ರಾಕೇಶ್ ಶರ್ಮನನ್ನು ಚಂದ್ರಲೋಕಕ್ಕೂ ಕಳಿಸಿದೆವು. ನೆಹರೂ ವಿದೇಶಾಂಗ ನೀತಿಯಿಂದ ರಷ್ಯದ ಸ್ನೇಹವೂ ಪ್ರಬಲವಾಗಿಯೇ ಉಳಿಯಿತು. ಹೀಗೆ ಪ್ರಪಂಚದ ಎರಡು ಪ್ರಬಲ ಶಕ್ತಿಗಳಾಗಿದ್ದ ಎರಡು ದೇಶಗಳನ್ನು ತೃತೀಯ ಜಗತ್ತಿನ ಬಡ ದೇಶವೊಂದು ನಿಭಾಯಿಸಿಕೊಂಡುಬಂದುದನ್ನು ಇಡೀ ಪ್ರಪಂಚವೇ ಅಚ್ಚರಿಯಿಂದ ನೋಡಿತು. ಹೀಗೆ ಸ್ವಾತಂತ್ರ್ಯ ಬಂದ ಐವತ್ತು ವರ್ಷಗಳಲ್ಲಿ ನಾವು ಸಾಕಷ್ಟು ಕ್ಷೇತ್ರಗಳಲ್ಲಿ ಸ್ವಾವಲಂಬಿಗಳಾಗಿ ಬೆಳೆದಿದ್ದೇವೆ.

ಆದರೆ ನಾವು ನಿಜವಾಗಿಯೂ ಬೆಳೆದಿದ್ದೇವೆಯೆ? ನಿಜವಾದ ನೆಮ್ಮದಿಯನ್ನು ಸ್ಥಾಪಿಸಿಕೊಂಡಿದ್ದೇವೆಯೆ? ಈ ಪ್ರಶ್ನೆಗಳನ್ನು ಉತ್ತರಿಸುವಲ್ಲಿ ನಾವು ತಡವರಿಸುವಂತಾಗುತ್ತದೆ, ತಲೆ ತಗ್ಗಿಸುವಂತಾಗುತ್ತದೆ. ಗರೀಬಿ ಹಟಾವೋ ಎಂಬ ಘೋಷಣೆಯೊಂದಿಗೆ ಚುನಾವಣೆ ಎದುರಿಸುವ ನಮ್ಮ ರಾಜಕಾರಣಿ ಬಂಧುಗಳು ತಮ್ಮ ಬಡತನವನ್ನು ಮಾತ್ರ ಹೋಗಲಾಡಿಸಿಕೊಂಡಿದ್ದಾರೆ. ದೇಶದ ಜನಸಂಖ್ಯೆಯ ಅರ್ಧಕ್ಕಿಂತಲೂ ಹೆಚ್ಚು ಜನ ಬಡತನದ ರೇಖೆಯ ಕೆಳಗಿರುವರು. ಒಪ್ಪೊತ್ತಿನ ಗಂಜಿಗೆ ಗತಿಯಿಲ್ಲದಲ್ಲಿ ಮುಕ್ತ ಮಾರುಕಟ್ಟೆ-ಲಿಬರಲೈಜೇಶನ್‌ಗಳ ಬಳುವಳಿಗಳನ್ನು ಜನಕ್ಕೆ ನೀಡಲಾಗುತ್ತಿದೆ. ಈಗ ಅನ್ನಕ್ಕಾಗಿನ ಸ್ಪರ್ಧೆ ಮುಕ್ತವಾಗಿ ನಡೆಯುವಂತಾಗಿದೆ. ಅಂತಲೇ ಬಡವರಿಗೆ ಸಾವು ಹೆಚ್ಚು ಹೆಚ್ಚು ಸುಲಭವಾಗಿ, ಮುಕ್ತವಾಗಿ ದೊರೆಯುವಂತಾಗಿದೆ. ಬಡತನದಲ್ಲಿ ಏಗಲಾಗದೆ ಸಾವನ್ನು ಆಹ್ವಾನಿಸುವ ಆತ್ಮಹತ್ಯೆಗಳು ಅತ್ಯಂತ ಪ್ರಚಲಿತವಾಗಿವೆ.

ಶಾಲೆ-ಕಾಲೇಜುಗಳು ಪದವೀಧರರನ್ನು ಹೊರತಳ್ಳುವ ಕಾರ್ಖಾನೆಗಳಾಗಿವೆಯೇ ಹೊರತು ಬದುಕಿನ ಮೌಲ್ಯಗಳನ್ನು ಕಲಿಸುವ ತಾಣಗಳಾಗಿಲ್ಲ. ಓದು ಐಷಾರಾಮಿ ಜೀವನಕ್ಕಾಗಿ ದುಡ್ಡು ದೊರಕಿಸಲು - ಇಂಥ ದುಡ್ಡಿಗಾಗಿ ನೌಕರಿ ದೊರಕಿಸಲು - ಇಂಥ ನೌಕರಿ ದೊರಕಿಸಲು ಡಿಗ್ರಿ ಪಡೆಯಲು ನಡೆಯುವ ಕ್ರಿಯೆಯಾಗಿದೆ. ಈ ಮಾತನ್ನು ಅಧ್ಯಾಪಕ, ವಿದ್ಯಾರ್ಥಿ ಇಬ್ಬರಿಗೂ ಅನ್ವಯಿಸಿಯೇ ಹೇಳಬಹುದು. ಮಕ್ಕಳಲ್ಲಿ ಇಂದು ಪಾಠ ಹೇಳುವ ಉಪಾಧ್ಯಾಯರ ಬಗ್ಗೆಯಾಗಲಿ, ತಂದೆ-ತಾಯಿಗಳ ಬಗ್ಗೆಯಾಗಲಿ, ಹಿರಿಯರ ಬಗ್ಗೆಯಾಗಲಿ ಗೌರವ ಉಳಿದಿಲ್ಲ. ಅದಕ್ಕೆ ಬದಲು ತಿರಸ್ಕಾರ, ಅವರು ಹೇಳಿದ್ದನ್ನೆಲ್ಲ ಮೀರುವ ಚಪಲ ಬೆಳೆಯುತ್ತಿದೆ. ಇಂದು ಹೇಗಾದರೂ ಮಾಡಿ ದುಡ್ಡುಗಳಿಸುವ ಹಾದಿಗೆ ಬಿದ್ದಿದ್ದಾನೆ ಮನುಷ್ಯ. ಗುರಿಯಷ್ಟೇ ಮಾರ್ಗವೂ ಪವಿತ್ರವಾಗಿರಬೇಕೆನ್ನುವ ಕಲ್ಪನೆ ಇಂದು ಕಳೆದುಹೋಗಿದೆ. ಇವುಗಳ ಜೊತೆಗೆ ಇಂದಿನ ಸಮೂಹ ಮಾಧ್ಯಮಗಳು ಜನರನ್ನು ವಿಚಲಿತಗೊಳಿಸುವ ಸಾಧನಗಳಂತೆ ವರ್ತಿಸುತ್ತಿವೆ. ಟಿವಿಯ ನೂರೆಂಟು ಚಾನೆಲ್ಲುಗಳು ಮುಕ್ತಮಾರುಕಟ್ಟೆಯ ಫರಂಗಿ ರೋಗಗಳನ್ನು ಹರಡುವ ಜವಾಬ್ದಾರಿ ಹೊತ್ತು, ಬಹುರಾಷ್ಟ್ರೀಯ ಕಂಪನಿಗಳ ಜಾಹೀರಾತುಗಳನ್ನು ಬಿತ್ತರಿಸುವ ಕಾರ್ಯವನ್ನು ನಿರ್ವಹಿಸುತ್ತಿವೆ. ಈ ದೇಶದಲ್ಲಿ ಮೊದಲು ಧರ್ಮಕ್ಕಿದ್ದ ಸ್ಥಾನವು ಕ್ರಮೇಣ ರಾಜಕೀಯಕ್ಕೆ ಹೋಗಿ ಇದೀಗ ವಾಣಿಜ್ಯವು ಆ ಸ್ಥಾನವನ್ನು ಆಕ್ರಮಿಸಿದೆ. ಈ ವಾಣಿಜ್ಯದ ಪ್ರವಾಹದಲ್ಲಿ ನಮ್ಮ ಮೌಲ್ಯಗಳೆಲ್ಲ ಕೊಚ್ಚಿಹೋಗಿ ನಾವು ಪೂರ್ತಿಯಾಗಿ ಮುಳುಗುವ ಮೊದಲು ನಮ್ಮ ಆತ್ಮಶಕ್ತಿ ಎಚ್ಚರವಾಗಲಾರದೆ!?

✻ ✻ ✻

# ಸ್ವಾತಂತ್ರ್ಯ ಹೋರಾಟದ ಸಾಹಿತ್ಯ

• ವೈ. ಕೆ. ತಿಮ್ಮರಸಯ್ಯ

ವಿವಿಧ ಸಂಸ್ಕೃತಿ, ಆಚಾರವಿಚಾರ, ಪದ್ಧತಿಗಳು, ಬಹುವಿಧ ಭಾಷೆ, ವೇಷಗಳು, ವಾಯುಗುಣ, ಜನರ ಶೀಲ-ಸ್ವಭಾವಗಳ ವೈವಿಧ್ಯತೆಗಳಿದ್ದರೂ ಇವೆಲ್ಲದರ ಹಿಂದೆ ಇರುವ ಸರ್ವಮಾನ್ಯ ಏಕತ್ವವನ್ನೂ ಅಂಗೀಕರಿಸಿ, ನಮ್ಮ ಭರತಖಂಡ ಅಖಂಡವೆಂದೇ ಸ್ವಾತಂತ್ರ್ಯ ಪಡೆದುಕೊಂಡಿದೆ. ಸಂತರು, ಹರಿದಾಸ ಪರಂಪರೆಯವರು, ಕೀರ್ತನಕಾರರು, ಸಾಹಿತಿಗಳು ತಮ್ಮ ಕೃತಿ ಕಾಣಿಕೆಗಳಿಂದ ಈ ರಾಷ್ಟ್ರೀಯತೆಯನ್ನು ಮತ್ತಷ್ಟು ಪ್ರಜ್ವಲಿಸಿ, ಬೆಳಗಿಸಿದ್ದಾರೆ. ಪಾರತಂತ್ರದಲ್ಲಿ ಬಹು ಕಾಲವಿದ್ದ ನಮ್ಮ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಭಾವ ಬೀರುವಂತೆ ತಮ್ಮ ಕತೆ, ಕವನ, ಲಾವಣಿ, ಹಾಡು, ಉಪನ್ಯಾಸ, ನಾಟಕೇತ್ಯಾದಿ ಮಾಧ್ಯಮಗಳಿಂದ ದೇಶಭಕ್ತಿಯನ್ನು ಪ್ರಚೋದಿಸಿದ್ದಾರೆ. ಆಂಗ್ಲರು ತಮ್ಮ ಪ್ರಭುತ್ವವನ್ನು ಸ್ಥಾಪಿಸಿದಂದಿನಿಂದಲೂ ಅದನ್ನು ಕಿತ್ತೊಗೆಯಲು ಚಳುವಳಿಯು ನಡೆಯುತ್ತಲೇ ಬಂದಿದೆ. ನಮ್ಮ ಸಾಹಿತ್ಯ, ಪತ್ರಿಕೆ, ಪ್ರಚಾರ ಮಾಧ್ಯಮಗಳೂ ಸಹ ಸ್ವಾತಂತ್ರ್ಯವನ್ನು ಸಾಧಿಸಲು ಹೋರಾಟ ನಡೆಸುತ್ತಲೇ ಬಂದಿವೆ. ಸ್ವಾತಂತ್ರ್ಯಕ್ಕಾಗಿ ಟಿಪ್ಪೂ ಸುಲ್ತಾನ್, ಲಜಪತ್‌ರಾಯ್, ಲೋಕಮಾನ್ಯ ಟಿಳಕ್, ಕುಮಾರರಾಮ, ಕೆಳದಿಯ ಚೆನ್ನಮ್ಮ, ಕಿತ್ತೂರರಾಣಿ ಚೆನ್ನಮ್ಮ, ಸಂಗೊಳ್ಳಿರಾಯಣ್ಣ, ವೆಂಕಟಪ್ಪನಾಯಕ, ನರಗುಂದದ ಬಾಬಾಸಾಹೇಬ, ಮುಂಡರಗಿ ಭೀಮರಾಯ ಮುಂತಾದ ಕೆಚ್ಚೆದೆಯ ಕಲಿಗಳು ದೇಶಸೇವೆಯಲ್ಲಿ ಪ್ರಾಣಾರ್ಪಣ ಮಾಡಿದ ಹುತಾತ್ಮರಾಗಿ ಅಮರರಾಗಿದ್ದಾರೆ. ಸ್ವಾತಂತ್ರ್ಯ ಪೂರ್ವ, ಸ್ವಾತಂತ್ರ್ಯದ ನಂತರ ನಮ್ಮ ಸಾಹಿತ್ಯದಲ್ಲಿ ರಾಷ್ಟ್ರೀಯತೆಯೇ ಪ್ರಾಮುಖ್ಯವಾಗಿದೆ. ಸ್ವಾತಂತ್ರ್ಯಾನಂತರ ನಮ್ಮ ಹೊಂಗನಸುಗಳು ನನಸಾಗಲು ನಮ್ಮ ಸಾಹಿತ್ಯವು ಪ್ರತಿಧ್ವನಿಸುವಂತೆ ಮಾಡಿದುದೂ ರಾಷ್ಟ್ರೀಯತೆಯೇ. ಇತ್ತೀಚಿನ ದಿವಸಗಳಲ್ಲಿ ಭಾರತದ ಐಕ್ಯತೆಯಲ್ಲಿ ಕಂಡುಬರುವ ಬಿರುಕುಗಳನ್ನು ಸೌಮ್ಯ ಮಾರ್ಗದಲ್ಲಿ ವ್ಯಕ್ತಪಡಿಸುತ್ತಿರುವುದೂ ಸಹ ರಾಷ್ಟ್ರೀಯತೆಯ ಅಪೇಕ್ಷೆಯಾಗಿರುತ್ತೆ.

ನಮ್ಮೆಲ್ಲರಿಗೂ ಭಾರತ ಜನ್ಮ ನೀಡಿದ ಮಾತೃ, ಮಾತೃಭೂಮಿ, ಸಹಸ್ರಾರು ವರ್ಷಗಳ ಹಿಂದೆಯೇ ಜನ್ಮಭೂಮಿ ಎನ್ನುವದನ್ನು ನಮ್ಮ ಸಾಹಿತ್ಯ ಸಾರುತ್ತ ಸಾಗಿದೆ. ಹಿಂದಿನ ಕಾಲದಲ್ಲಿ ಛಪ್ಪನ್ನಾರು ರಾಜ್ಯಗಳಿದ್ದರೂ ಯಾರೂ ನಾವು ಭಾರತದಿಂದ ಬೇರೆ ಎಂದು ಭಾವಿಸಿರಲಿಲ್ಲ. ಸಮುದ್ರದಿಂದ ಉತ್ತರಕ್ಕೆ, ಹಿಮಾಲಯದಿಂದ ದಕ್ಷಿಣಕ್ಕೆ ಇರುವ ರಾಷ್ಟ್ರವೇ ಭಾರತ, ಅಲ್ಲಿನ ನಿವಾಸಿಗಳೆಲ್ಲರೂ ಭಾರತೀಯರು ಎಂದು ನಮ್ಮ ವಿಷ್ಣು ಪುರಾಣವು ಹೇಳುತ್ತದೆ. ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ಜೀವ ತುಂಬಿದಂತೆ ನಮ್ಮ

ನಾಡಿನ ಸಾಹಿತ್ಯವೂ ಚೇತನಗೊಂಡಿತು. ಹಿಂದಿನ ಸಾಹಿತ್ಯಕ್ಕೆ ಮತಧರ್ಮ, ದೈವಭಕ್ತಿ, ಸತ್ಯ, ಪ್ರಾಮಾಣಿಕತೆ ಹೇಗೆ ಪ್ರಾಮುಖ್ಯ ಅಂಶಗಳಾಗಿದ್ದವೋ ಹಾಗೆಯೇ ಸ್ವಾತಂತ್ರ್ಯಯುಗದ ಸಾಹಿತ್ಯಕ್ಕೆ ಸ್ವಾತಂತ್ರ್ಯ ಯೋಧರು, ಚಳುವಳಿ, ದೇಶಭಕ್ತರ ಚರಿತ್ರೆ ಇವುಗಳು ಪ್ರಾಮುಖ್ಯ ಅಂಶಗಳಾದವು.

ಕರನಿರಾಕರಣ, ಧ್ವಜಸತ್ಯಾಗ್ರಹ, ಸ್ವದೇಶಿ ಆಂದೋಳನ, ಕಾನೂನುಭಂಗ ಚಳುವಳಿ, ಮಹಾತ್ಮಾಜಿಯವರ ಉಪವಾಸ, ಉಪ್ಪಿನ ಸತ್ಯಾಗ್ರಹ, ದಂಡಿಯಾತ್ರೆ, ಲಾಠಿ ಪ್ರಹಾರಗಳು, ಗೋಲಿಬಾರ್, ಸೆರೆಮನೆ ವಾಸ, ಇತ್ಯಾದಿ ಪ್ರಕರಣಗಳೆಲ್ಲವೂ ನಮ್ಮ ಜನರನ್ನು ಚುಚ್ಚಿ ಎಬ್ಬಿಸಿದವು. ಜನರು ಸ್ವಾತಂತ್ರ್ಯ ಹೋರಾಟದ ಸಾಹಿತ್ಯದತ್ತ ಒಲವು ತೋರಿಸಿದರು. ಚಳುವಳಿಯ ದಿನಂಪ್ರತಿ ಸುದ್ದಿಗಳನ್ನು ತಿಳಿಯಲು ಕಾತುರರಾಗಿ ದಿನಪತ್ರಿಕೆಗಳನ್ನು ಕಾದು, ಕೊಂಡರು. ನಮ್ಮ ಸಾಹಿತಿಗಳು ಈ ಕಾಲಕ್ಕೆ ರಾಷ್ಟ್ರೀಯ ಹೋರಾಟದ ಚಿತ್ರವನ್ನು ಯಥಾವತ್ತಾಗಿ ಜನತೆಯ ಮುಂದಿಟ್ಟು ಚಳುವಳಿಗೆ ಪ್ರಚೋದಿಸಿದರು. ಹೋರಾಟದಲ್ಲಿ ಭಾಗವಹಿಸಿದ ನೂರಾರು ದೇಶಭಕ್ತರ ತ್ಯಾಗ, ಪ್ರೇಮ, ಬಲಿದಾನಗಳನ್ನು ಕುರಿತು ರಚಿಸಿದ ಸಾಹಿತ್ಯಕ್ಕೆ ಜನತೆಯ ಬೇಡಿಕೆ, ಪ್ರೋತ್ಸಾಹವೂ ಹೆಚ್ಚಿತು. ಸಾಹಿತ್ಯವು ಇಂಥ ನೂರಾರು ದೇಶಭಕ್ತರ ಚಳುವಳಿಗೆ ಪ್ರೇರಣೆಯಾಗಿ ಪ್ರಕಟವಾದವು. ಮನೆಮನೆಗಳಿಂದ ನಮ್ಮ ನಾರೀಮಣಿಯರು ಹೊರಬಂದು ಹೋರಾಟದಲ್ಲಿ ಧುಮುಕಿ ತೋರಿದ ಸಾಹಸ, ಶಾಲಾ ಬಾಲಕ-ಬಾಲಕಿಯರ ದೇಶಪ್ರೇಮ, ಬ್ರಿಟಿಷರ ವಿರುದ್ಧ ಸಾರಿದ ಸಮರ ನೀತಿ, ರೀತಿಗಳನ್ನು ತಮ್ಮದೇ ಆದ ಶೈಲಿಯಲ್ಲಿ ನಿರೂಪಿಸಲು ಸಾಹಿತಿಗಳು ಪೈಪೋಟಿ ನಡೆಸಿದರು.

ಎಲ್ಲೆಲ್ಲೂ ಸ್ವಾತಂತ್ರ್ಯದ ಕಹಳೆ, ಸಮರ ಸಾಹಿತ್ಯವೇ ಎದ್ದುನಿಂತವು. ಭಾರತ ಸ್ವಾತಂತ್ರ್ಯಕ್ಕಾಗಿಯೇ ಅವತರಿಸಿ ನಿಂತ ಮಹಾತ್ಮಾ ಗಾಂಧೀಜಿ ಚರಿತ್ರೆಯೇ ನಮ್ಮ ದೇಶದ ಚರಿತ್ರೆಯಾಯಿತು. ಗಾಂಧೀ ಸಾಹಿತ್ಯ, ಗಾಂಧೀ ಮಹಾತ್ಮೆ, ಸ್ವಾತಂತ್ರ್ಯ ಚಳುವಳಿಯ ಕುರಿತ ಅಪಾರ ಸಾಹಿತ್ಯರಾಶಿಯೇ ಪ್ರಕಟವಾಯಿತು. ನಮ್ಮ ಕನ್ನಡ ನಾಡಿನ ಅಸಂಖ್ಯಾತ ಲೇಖಕರು, ಕವಿಗಳು, ಸಾಹಿತಿಗಳು ತಮ್ಮ ಕತೆ, ಕವನ, ನಾಟಕ, ವಿಚಾರಪೂರಿತ ಲೇಖನಗಳ ಪ್ರಕಾರದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ರಾಷ್ಟ್ರೀಯತೆ ದೇಶಪ್ರೇಮವನ್ನು ಮುಖ್ಯವಾಗಿ ಚಿತ್ರಿಸಿದರು. ಪ್ರತಿ ಲೇಖಕನ ಉಸಿರೂ ಸ್ವರಾಜ್ಯ ಸ್ವಾತಂತ್ರ್ಯ ಸಾಧನೆಯೊಂದಿಗೆ ಬೆರೆತುಹೋಯಿತು. ಲೇಖಕರು ಈ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಚಾರ ಪ್ರತಿಪಾದನೆ, ಪ್ರೋತ್ಸಾಹದ ಧ್ವನಿವಾಹಕರಾಗಿಯೇ ನಿಂತರು. ಎಲ್ಲೆಲ್ಲೂ, ಎಲ್ಲರ ಬಾಯಲ್ಲೂ, ಮೈ ಮನಸ್ಸಿನಲ್ಲೂ 'ಸ್ವಾತಂತ್ರ್ಯ ನಮ್ಮ ಉಸಿರು' ಎನ್ನುವಂತೆ ಈ ಸಾಹಿತ್ಯ ಪರಿಣಾಮ ಬೀರಿತು. ಸತ್ವಯುತ ಸತ್ಯ, ದೇಶ ಭಕ್ತಿಗೀತೆಗಳನ್ನು ರಚಿಸಿ, ಹಾಡಿ, ಹಾಡಿಸಿ ಜನಮನವನ್ನು ಒಗ್ಗೂಡಿಸಿದರು. ಅಂದಿನ ರಾಜಕಾಲದ ದರ್ಬಾರದ ಬ್ರಿಟಿಷ್ ಕೈಗೊಂಬೆ ಸರಕಾರದ ಆಡಳಿತ ವೈಖರಿಯ ರೀತಿ-ನೀತಿಗಳನ್ನು ಎಷ್ಟೆಷ್ಟು ಬಗೆಯಿಂದ ಟೀಕಿಸಿದರೂ ನಮ್ಮ ಸಾಹಿತ್ಯಕ್ಕೆ ತೃಪ್ತಿಯಾಗಲಿಲ್ಲ. ಒಂದು ರೀತಿಯಲ್ಲಿ ಸಾಹಿತ್ಯ ನೀಡಿದ ಸ್ಫೂರ್ತಿಯ ದಾರಿಯನ್ನೇ ಅನುಸರಿಸಿ ಹೊರಟ ಅನೇಕ ಹೋರಾಟಗಾರರೂ ಸಂಗ್ರಾಮಕ್ಕೆ ಕೈ ಜೋಡಿಸಿದರು. ಇಂಗ್ಲಿಷ್ ಪ್ರಭುತ್ವದ ದುರಾಡಳಿತವನ್ನು ತಮ್ಮ ವಿಶಿಷ್ಟ ವಿಡಂಬನೆಯಲ್ಲಿ ಟೀಕಿಸುವ ಸಾಹಿತ್ಯ ಜನರಿಗೆ ಅಚ್ಚುಮೆಚ್ಚಾಯಿತು. ಅಂದಿನ ಚಳುವಳಿಗಾರರೂ ಈ ಸಾಹಿತ್ಯವನ್ನೇ ಕುರಿತು ಅಲ್ಲಲ್ಲಿ ಭಾಷಣಗಳನ್ನು ಏರ್ಪಡಿಸಿ ಜನತೆಯನ್ನು ಹೋರಾಟ ಕಣಕ್ಕೆ ಇಳಿಸಿದರು.

ಕೊನೆಗೆ 'ಬ್ರಿಟಿಷರೇ ಭಾರತವನ್ನು ಬಿಟ್ಟು ತೊಲಗಿ' ಎಂದು ಕಟ್ಟಕಡೆಯ ಎಚ್ಚರದ ಚುಚ್ಚುಮಾತನ್ನು ಹೇಳಲಾಯಿತು. ಎಲ್ಲೆಲ್ಲೂ 'ತೊಲಗಿ' ಎಂಬುದು ಪ್ರತಿಧ್ವನಿತವಾಯಿತು. ಸಂಗ್ರಾಮದ ಮುಖಂಡತ್ವವಹಿಸಿದ ಮಹಾತ್ಮಾ ಗಾಂಧಿಯವರಿಂದ ಚಳುವಳಿಯು ಬಿಸಿಯಾದಂತೆ ನಮ್ಮ ಬಿಸಿಬಿಸಿ ಸಾಹಿತ್ಯವು ಚಳುವಳಿಗೆ ಪೂರಕವಾಯಿತು. ಚಳುವಳಿಯ ವಿವಿಧ ಮುಖಗಳ ದರ್ಶನ ಮಾಡಿಸುವಲ್ಲಿ ನಮ್ಮ ಸಾಹಿತ್ಯ ಮುಂದಾಯಿತು. ಸಾಹಿತ್ಯ ಪ್ರಕಾರ ಯಾವುದೇ ಇದ್ದರೂ ಅದರಲ್ಲಿ ದೇಶ ಪ್ರೇಮದ ರಾಷ್ಟ್ರೀಯತೆಯ ಎಳೆಗಳು ಹೆಣೆದಿರುವುದನ್ನು ನಾವು ಇಂದಿಗೂ ಗಮನಿಸಬಹುದಾಗಿದೆ. ವಂದೇಮಾತರಂ, ಝಂಡಾಊಂಚಾ, ಮಾತೃಭೂಮಿ ಜನನಿ ನಿನ್ನ, ನಡೆಮುಂದೆ ನಡೆಮುಂದೆ, ಗಲ್ ಫಾಸೀಸೆ ನಹೀ ಡರೇಂಗೆ, ದೂರ್ ಹಟೋ ಹಿಂದೂಸ್ತಾನ್ ಹಮಾರಾ ಹೈ, ಹಾಕುಬೆಂಕಿ ಉರಿಯಲಿ ಧಗಧಗ, ಧರಿಸು ಖಾದಿ ಪವಿತ್ರವ, ಇಂಥ ವಿವಿಧ ಭಾಷೆಯ ಹಾಡು, ಘೋಷಣೆಗಳಿಂದ ದೇಶ ತುಂಬಿಹೋಯಿತು.

ನಾಡಿನ ಪ್ರಸಿದ್ಧ ಕವಿಗಳೂ ನಮ್ಮ ಸ್ವಾತಂತ್ರ್ಯ ಚಳುವಳಿಗಾಗಿ ತಮ್ಮ ಅಮೋಘ ದೇಶಭಕ್ತಿಯ ಕವನಗಳನ್ನು ರಚಿಸಿಕೊಟ್ಟರು. ಇಂಥ ಕವನಗಳನ್ನೂ ನಮ್ಮ ನಾಡಿನ ಗಮಕಿಗಳು (ಹಾಡುಗಾರರು) ಪ್ರಭಾವಯುತವಾಗಿ ಹಾಡಿ ಜನರನ್ನು ಪ್ರೇರಿಸಿದರು. ಚಳುವಳಿಯಕಾಲಕ್ಕೆ ನಡೆಯುತ್ತಿದ್ದ ಪ್ರತಿದಿನದ ಪ್ರಭಾತ ಫೇರಿಗಳಲ್ಲಿ ಇಂಥ ಹೊಸ ಹೊಸ ಕವಿತೆಗಳನ್ನು ಹಾಡುತ್ತ ಮುಂದೆ ಮುಂದೆ ಹೆಜ್ಜೆಹಾಕಿದರು. ಎಲ್ಲೆಲ್ಲೂ ದೇಶಭಕ್ತಿ ಗೀತೆಗಳ ಸುರಿಮಳೆಯೇ ಸುರಿದು ಹೋಯಿತು. ಇಂಥ ಚಳುವಳಿಯನ್ನು ಕಂಡು ''ಬೆದರಿ ಬೆದರಿ ನಡುಗಿತು ಲಂಡನ್'' ಎಂದೂ ನಮ್ಮವರು ಹಾಡಿ ಕುಣಿದರು.

**ಬೇಡೆಂ ಕೀರ್ತಿಯ ಬೇಡೆ ನಾಂ ಪ್ರಭುತೆಯನ್ನೈಶ್ವರ್ಯಮಾಯುಷ್ಯ!**
**ಜನ್ಮ ಜನ್ಮಂಗಳೊಳ್ । ಭಾರತದೊಳೆನ್ನಂ ಪುಟ್ಟಿಸೈಬೇಡುವೆಂ ॥**

— ಹೀಗೆಂದು ತಮ್ಮ ಮಾತೃಭೂಮಿಯನ್ನು ಪ್ರಾರ್ಥಿಸಿದ್ದಾರೆ ಹಿರಿಯ ಗೋವಿಂದ ಪೈಗಳು. ಭರತಮಾತೆಯೆ ಭರತಮಾತೆಯೆ! ಎಂದು ನೀ ತಲೆ ಎತ್ತುವೆ? ಎಂದು ನಮ್ಮ ಆಚಾರ್ಯ ಬಿ. ಯಂ. ಶ್ರೀ. ಕೇಳುತ್ತಾರೆ. ಹೀಗೆ ಹಲವಾರು ಕವಿಗಳು ತಮ್ಮ ಹಂಬಲದ ಕಾವ್ಯಧಾರೆಯಿಂದ ತಮ್ಮ ದೇಶಭಕ್ತಿಯನ್ನು ಪ್ರಚಾರಿಸಿದ್ದಾರೆ. ಸಾಹಿತಿಗಳು ತಮ್ಮ ಪಾಲಿನ ದೇಶ ಸೇವೆಯನ್ನು ಪ್ರಾಮಾಣಿಕ ಶ್ರದ್ಧೆ, ಕಳಕಳಿಯಿಂದ ಸಲ್ಲಿಸಿರುವುದನ್ನು ನಾವು ಕಾಣಬಹುದು. ಸ್ವಾತಂತ್ರ್ಯದ ನಂತರವೂ ಸಹ ನಮ್ಮ ರಾಷ್ಟ್ರೀಯ ಐಕ್ಯತೆಗಾಗಿ ಇಂದಿಗೂ ಅಲ್ಲಲ್ಲಿ ಕವಿಗೋಷ್ಠಿಗಳು ನಡೆಯುತ್ತ ಇಂಥ ದೇಶಭಕ್ತಿ ಗೀತೆಗಳು ಹಾಡಲ್ಪಡುತ್ತಿವೆ.

ಶಿವಮೊಗ್ಗ ಜಿಲ್ಲೆಯ ಈಸೂರು ಗ್ರಾಮವು ಪ್ರಪ್ರಥಮವಾಗಿ ಸ್ವಾತಂತ್ರ್ಯ ಸ್ವರಾಜ್ಯವನ್ನು ಸಾರಿ, ಬ್ರಿಟಿಷರ ವಿರುದ್ಧ ನಡೆಸಿದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ಸತ್ಯಾಗ್ರಹಿಗಳು ನೇಣುಗಂಬಕ್ಕೇರಿ ನಮ್ಮ ಚರಿತ್ರೆಯಲ್ಲಿ ಅಮರರಾಗಿ ಉಳಿದಿದ್ದಾರೆ. ಈಸೂರಿನ ಈ ರೋಮಾಂಚಕ ದುರಂತಕತೆಯು ಲಾವಣಿಯಾಗಿ, ಆಕಾಶವಾಣಿ-ದೂರದರ್ಶನಗಳ ಚಲನಚಿತ್ರವಾಗಿ, ಪುಸ್ತಕರೂಪದ ಪ್ರಕಟನೆಯಾಗಿ, ರಂಗಭೂಮಿಯ ಪ್ರದರ್ಶನ ನಾಟಕವಾಗಿ ಸ್ವಾತಂತ್ರ್ಯ ಸಾಧನೆಯ ಇತಿಹಾಸದಲ್ಲಿ ಅಗ್ರಸ್ಥಾನ ಪಡೆದಿದೆ. ಕರ್ನಾಟಕ ರಾಜ್ಯ ಸರಕಾರವೂ ಸಹ ಅಂದಿನ ಸ್ವಾತಂತ್ರ್ಯ ಚಳುವಳಿಯ ಸಮಯದಲ್ಲಿ ಹಾಡುತ್ತಿದ್ದ ಹಾಡು, ಲಾವಣಿ, ಘೋಷಣಾವಾಕ್ಯ ಇತ್ಯಾದಿಗಳನ್ನು ಸ್ವಾತಂತ್ರ್ಯ ಹೋರಾಟಗಾರರಿಂದ ಸಂಗ್ರಹಿಸಿ ಪ್ರಕಟಿಸಿದೆ. ಅಂದಿನ ಇಂಥ ಸಾಹಿತ್ಯ ನಮ್ಮ ಚಳುವಳಿಗಾರರನ್ನು ಹೇಗೆ ಪ್ರೋತ್ಸಾಹಿಸಿತು ಎಂದು ನಾವು ಇಂದಿಗೂ ನೆನಪಿಸಿಕೊಳ್ಳುವ ಚಿರ ಸಾಹಿತ್ಯವಾಗಿ ನಿಂತಿದೆ.

"ಅಖಿಲ ಮಾನವ ಪ್ರೇಮವನ್ನು ಒಳಗೊಂಡ, ಸಂಕುಚಿತ ಅಭಿಮಾನಗಳಿಂದ ಬಿಡಲ್ಪಟ್ಟ, ಭಾರತದ ಶ್ರೇಷ್ಠ ಆದರ್ಶಗಳನ್ನೊಳಗೊಂಡ ರಾಷ್ಟ್ರೀಯತೆಯನ್ನು ನಮ್ಮ ಸಾಹಿತ್ಯ ಪ್ರತಿಬಿಂಬಿಸಬೇಕು" ಎಂಬ ಮಹಾತ್ಮಾ ಗಾಂಧಿಯವರ ಈ ಮಾತನ್ನು ನಮ್ಮ ಸಾಹಿತಿಗಳು ಅಕ್ಷರಶಃ ಪಾಲಿಸಿ ದೇಶಾಭಿಮಾನಿಗಳಾಗಿದ್ದಾರೆ. ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ನಮ್ಮ ಸಾಹಿತಿಗಳು ತಮ್ಮ ಲೇಖನಿಯ ಖಡ್ಗವನ್ನು ಹಿಡಿದೇ ಹೋರಾಡಿ, ಮಡಿದ ಹುತಾತ್ಮರನ್ನು ಕುರಿತು ನಮ್ಮ ಸಾಹಿತಿಗಳು ಮುಂದಿನ ನಮ್ಮ ಯುವಜನಾಂಗಕ್ಕೆ ಅವರ ದಿಟ್ಟತನದ ಹೋರಾಟ, ದೇಶಪ್ರೇಮವನ್ನು ತಿಳಿಸುವಂಥ ಸಾಹಿತ್ಯ ಕೃತಿಗಳನ್ನು ರಚಿಸಿ ಸ್ವಾತಂತ್ರ್ಯ ಹೋರಾಟಗಾರರನ್ನು ಪರಿಚಯಿಸಿದ್ದಾರೆ. ಸ್ವಾತಂತ್ರ್ಯ ಹೋರಾಟಗಾರರಿಗೆ ಹಿಂದಿನ ಚಳುವಳಿಯ ಹುರುಪು, ನೆನಪು ಇಂದಿಗೂ ಹಸಿರಾಗಿದ್ದು ಅದನ್ನು ವಿವರಿಸುವಾಗ ಮೈ ನವಿರೇಳುತ್ತದೆ. ಕೇಳುಗರ ಕಿವಿ ನಿಮಿರಿ ನಿಂತು ಕೇಳುತ್ತವೆ. ಅಂದಿನ ಪ್ರಭಾತ ಫೇರಿಯಲ್ಲಿ ಹಾಡುತ್ತಿದ್ದ ಗೀತೆಗಳು ಇಂದಿಗೂ ಕಿವಿಯಲ್ಲಿ ಮೊಳಗುತ್ತಿವೆ.

**ಬನ್ನಿ ಬನ್ನಿ ವೀರರೆ । ಚಳುವಳಿಯ ಬಂಟರೆ**
**ಹೊರಡಿ ಹೊರಡಿ ವೀರರೆ । ಗುಂಪುಗೂಡಿ ಶೂರರೆ ।**
**ಬಿಡುಗಡೆಯ ಗುಡಿಯ ಗಂಟೆ ಕೇಳುತಲ್ಲಿ ಕೇಳಿರಿ ॥**

ಇಂಥ ಕರೆಯನ್ನು ಯಾರು ಮನ್ನಿಸುವುದಿಲ್ಲ ?

ಇಂಥವು ಒಂದಲ್ಲ ಎರಡಲ್ಲ, ನೂರಾರು. ಕೆಲವು ಹಸ್ತಪ್ರತಿಗಳು ಸಿಕ್ಕಿವೆ. ಮತ್ತೆ ಕೆಲವು ಸಿಕ್ಕದೆ ಅವು ಜನರ ಬಾಯೊಳಗೇ ಕುಳಿತಿವೆ. ಚಳುವಳಿಯಲ್ಲಿ ತುಂಬ ಪ್ರಭಾವ ಬೀರಿದವು ಎಂದರೆ ಲಾವಣಿಗಳು. ಲಾವಣಿಗಾರರು ತಮ್ಮ ಸರಳ ಗ್ರಾಮ್ಯ ಆಡು ಭಾಷೆಯಲ್ಲಿ ಹೆಣೆದ ಲಾವಣಿಗಳನ್ನು ಹಾಡುತ್ತ ನಿಂತಾಗ ಕೇಳುಗರ ಮನಸ್ಸು ಒಮ್ಮೆಗೇ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುವಂತೆ ಪ್ರೇರೇಪಿಸುತ್ತಿದ್ದವು. ಇಂಥ ಸುಂದರವಾಗಿ ರಚಿಸಿದ ಹಾಡಿನ ಲಾವಣಿಯ ಪ್ರಭಾವ, ಪ್ರೇರಣೆಯಿಂದಲೂ ನಮ್ಮ ಜನರು ಚಳುವಳಿಯಲ್ಲಿ ನೇರ ಭಾಗವಹಿಸಿದವರು ಇದ್ದಾರೆ.

ದೇಶಭಕ್ತಿ, ದೈವಭಕ್ತಿ ಇವೆರಡೂ ಮನುಷ್ಯ ಜನ್ಮವನ್ನು ಸಾರ್ಥಕಗೊಳಿಸುವ ಸದ್ಗುಣಗಳು. ದೇಶಭಕ್ತಿಯಿಂದ ತುಂಬಿರುವ ಕತೆಗಳೂ ಕವಿತೆಗಳೂ ಇಲ್ಲದ ಸಾಹಿತ್ಯವೇ ಬಹುಶಃ ಈ ಪ್ರಪಂಚದಲ್ಲಿ ಯಾವುದೂ ಇಲ್ಲವೆನ್ನಬಹುದು. ಋಗ್ವೇದದಂಥ ಪ್ರಾಚೀನ ಗ್ರಂಥದಲ್ಲೂ ದೇಶಭಕ್ತಿಯ ಋಕ್ಕುಗಳಿವೆ. ಜನನಿ, ಜನ್ಮಭೂಮಿಯು ಸ್ವರ್ಗಕ್ಕಿಂತಲೂ ಶ್ರೇಷ್ಠವೆಂಬುದು ನಮ್ಮ ಆರ್ಯರ ಅಮೃತವಾಣಿಯಾಗಿದೆ. ನಮ್ಮ ದೇಶಮಾತೆಯು ನಮಗೆ ನೀಡಿರುವ ವೃಕ್ಷಗಳೆಲ್ಲವೂ ಕಲ್ಪವೃಕ್ಷಗಳು, ಇಲ್ಲಿರುವ ಬಂಡೆಕಲ್ಲುಗಳೆಲ್ಲವೂ ಚಿಂತಾಮಣಿಯ ಶಿಲೆಗಳು, ವನ ಸಂಪತ್ತೆಲ್ಲವೂ ನಂದನವನಗಳು ಎಂದು ನಾವು ಹಾಡುತ್ತೇವೆ. ಕವಿರಾಜಮಾರ್ಗದಲ್ಲಿ 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣಿತ ಮತಿಗಳ್' ಎಂದು ಕವಿ ತನ್ನ ನಾಡಿನ ಜನರನ್ನು ಅಭಿಮಾನದಿಂದ ಹೇಳಿಕೊಳ್ಳುತ್ತಾನೆ. ಪಂಪ ಮಹಾಕವಿಯು 'ಆರಂಕುಸಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ' ಎಂದು ದೇಶಾಭಿಮಾನ ಪಡುತ್ತಾನೆ. ಆರಂಕುಸ ಮಿಟ್ಟೊಡಂ ನೆನೆವುದೆನ್ನಮನಂ– ಎಂಬ ಧೀರ ವಾಕ್ಯದಂತೆ ನಮ್ಮ ಸ್ವತಂತ್ರ ಚಳುವಳಿಯಲ್ಲಿ ಅದೆಷ್ಟೋ ಜನ ಬ್ರಿಟಿಷರ ಅಂಕುಶಕ್ಕೆ ಬಲಿಯಾಗಲಿಲ್ಲವೆ!

ಇಂಥದಕ್ಕೂ ಹೆದರದೆ ಪ್ರಾಣಾರ್ಪಣ ಮಾಡುತ್ತ ಭಾರತಮಾತೆಯನ್ನು ನೆನೆಯುತ್ತ ಅಮರರಾಗಿದ್ದಾರೆ. ರಾಷ್ಟ್ರಕವಿ ಕುವೆಂಪುರವರು "ನಾನಳಿವೆ ನೀನಳಿವೆ । ನಮ್ಮೆಲುಬುಗಳ ಮೇಲೆ । ಮೂಡುವುದು ಮೂಡುವುದು । ನವಭಾರತದ ಲೀಲೆ ॥" ಎಂದೇ ತಮ್ಮ ಭವಿಷ್ಯ ಕವಿವಾಣಿ ನುಡಿದದ್ದು ಇದೀಗ ಸತ್ಯವಾಗಿದೆಯಲ್ಲವೆ! ಹೀಗೆ ನಮ್ಮ ಅಖಂಡ ಭರತಖಂಡದ ಸ್ವಾತಂತ್ರ್ಯ ಸಾಧನೆಗಾಗಿ ನಮ್ಮ ಸಾಹಿತಿಗಳು ಕೂಡ ಅಪಾರ ಕೊಡುಗೆ ನೀಡಿ ದೇಶಭಕ್ತರಾಗಿದ್ದಾರೆ. ಸ್ವಾತಂತ್ರ್ಯ ಚಳುವಳಿಯ ಪೂರ್ವಕ್ಕೆ ಹಾಗೂ ಸ್ವಾತಂತ್ರ್ಯದ ನಂತರ "ವಂದೇ ಮಾತರಂ" ಗೀತೆಯು ಇಂದಿಗೂ ಮಾತೃಭೂಮಿಯ ಭಕ್ತಿಗೀತೆಯಾಗಿ ಜನಮನದಿಂದ ಹಾಡಲ್ಪಡುತ್ತಿರುವುದು ವಿಶೇಷವಾಗಿದೆ.

ದೇಶಕ್ಕಾಗಿ ಬಲಿದಾನ ಮಾಡಿದ ಅಸಂಖ್ಯಾತ ಹುತಾತ್ಮರು ಇಂದು ನಮ್ಮ ಕಣ್ಣೆದುರು ಇಲ್ಲದಿದ್ದರೂ ಅವರ ಗಟ್ಟಿ ಎದೆಯ ಮೇಲೆ ಸ್ವತಂತ್ರ ಭಾರತವು ಎದ್ದು ನಿಂತಿದೆ ಎಂಬುವ ಈ ಕವಿವಾಣಿ ಎಂದೆಂದೂ ಮರೆಯದಂತಿದೆ.

❀ ❀ ❀

# ಸ್ವಾತಂತ್ರ್ಯ ಚಿಂತನ

• ಬಿ. ಎಂ. ಬಡಿಗೇರ

ಬ್ಯಾ. ಮೋಹನದಾಸ್ ಕರಮ್‌ಚಂದ್ ಗಾಂಧೀ ದಕ್ಷಿಣ ಆಫ್ರಿಕೆಗೆ ಹೋಗಿದ್ದಾರೆ. ಅವರು ಅಲ್ಲಿ ಜೋಹಾನ್ಸ್ ಬರ್ಗ್‌ನಿಂದ ನೇತಾಲಕ್ಕೆ ಹೊರಟಿದ್ದಾರೆ. ಆ ಸಮಯದಲ್ಲಿ ೨೪ ತಾಸುಗಳ ಸಮಯವನ್ನು ಅವರು ಅರ್ಥಪೂರ್ಣವಾಗಿ ಕಳೆಯಬೇಕೆಂಬ ಅಭಿಲಾಷೆಯಿಂದ ಪೋಲಕನೆಂಬವನು ಒಂದು ಪುಸ್ತಕವನ್ನು ಕೊಡುತ್ತಾನೆ. ಜಾಗತಿಕ ಸುಪ್ರಸಿದ್ಧ ಚಿಂತಕನಾದ ರಸ್ಕಿನ್ನನ ಆ ಕೃತಿ 'ಅನ್ ಟು ದಿಸ್ ಲಾಸ್ಟ್.' ಆ ಕೃತಿ ಗಾಂಧೀಜಿಯವರ ಮೇಲೆ ಅಪಾರ ಪ್ರಭಾವ ಬೀರಿ, ಅವರ ವೈಯಕ್ತಿಕ ಜೀವನದಲ್ಲಿ ಪರಿವರ್ತನೆಗೆ ಕಾರಣವಾಯಿತು. ಜೊತೆಗೆ ಸಾಮಾಜಿಕ·ಬದುಕಿನ ಬಗ್ಗೆ ಅವರ ಚಿಂತನಾ ಕ್ರಮವನ್ನು ಉದ್ದೀಪಿಸಿತು. ಆ ಪರಿವರ್ತನೆಯ ತಳಹದಿಯೇ "ಫೀನಿಕ್ಸ್" ಆಶ್ರಮ ರೂಪುಗೊಳ್ಳಲು ಕಾರಣವಾಯಿತು. ಗಾಂಧೀಜಿಯವರು ಆ ಕೃತಿಯನ್ನು ಗುಜರಾತಿ ಭಾಷೆಗೆ ಅನುವಾದಿಸಿದ್ದಾರೆ ಕೂಡ. ಈ ಮಾತನ್ನು ಬಾಪೂಜಿ ತಮ್ಮ ಆತ್ಮ ಚರಿತ್ರೆಯಲ್ಲಿ ವಿವರಿಸಿದ್ದಾರೆ. ಗುಲಾಮಗಿರಿಯ ತಂದ್ರಾವಸ್ಥೆಯಲ್ಲಿ ಸಿಲುಕಿರುವ ಭಾರತೀಯರನ್ನು ಕೇವಲ ಶಾಬ್ದಿಕವಾಗಿ, ವಾಕ್ ಚಾತುರ್ಯದ ಮೂಲಕವಾಗಿ ಜಾಗೃತಗೊಳಿಸುವುದು ಸಾಧ್ಯವಾಗಲಾರದೆಂದು ನಿಶ್ಚಯಿಸಿದ ಅವರು ಭಾರತೀಯರಲ್ಲಿ ಸಾದಾ ಜೀವನ, ಉಚ್ಚವಿಚಾರಗಳನ್ನು ಪ್ರೇರೇಪಿಸುವ ರಚನಾತ್ಮಕ ಹಾಗೂ ಕ್ರಿಯಾತ್ಮಕವಾದ ಕರ್ತೃತ್ವಶಕ್ತಿಗಳಾಗಿ ಹೊರಹೊಮ್ಮುವಂತಾಗುವ ರೀತಿಯಲ್ಲಿ ಕಾರ್ಯ ಪ್ರಾರಂಭಿಸಿದರು. ಅದಕ್ಕಾಗಿ ಭಾರತದಲ್ಲಿ ವಾರ್ಧಾ ಮತ್ತು ಸಾಬರಮತಿ ಆಶ್ರಮ ಸ್ಥಾಪಿಸಿ ಭಾರತೀಯ ಯುವ ಪೀಳಿಗೆಯಲ್ಲಿ ಸ್ವಾತಂತ್ರ್ಯಪ್ರೇಮ, ರಾಷ್ಟ್ರಧರ್ಮ ಭಾವನೆ ಬೆಳೆಸುವ ರೀತಿಯಲ್ಲಿ ಆಶ್ರಮಗಳನ್ನು ಗುರುಕುಲ ರೀತಿಯಲ್ಲಿ ಬೆಳೆಸಿದರು. ಗಾಂಧೀಜಿ ಹೇಳುತ್ತಾರೆ:- 'ರಸ್ಕಿನ್‌ನ ಗ್ರಂಥ ನನ್ನ ಮನಸ್ಸಿನ ಮೇಲೆ ಗಾಢ ಪರಿಣಾಮ ಬೀರಿತು. ಯಾಕೆಂದರೆ ಯಾವ ವಸ್ತು ಅಥವಾ ವಿಚಾರ ಚಿಂತನ ನನ್ನ ಆಳವಾದ ಅಂತರಂಗದಲ್ಲಿ ಅಡಗಿತ್ತೋ ಅದುವೇ ಈ ಗ್ರಂಥದಲ್ಲಿ ಪ್ರತಿಬಿಂಬಿತವಾಗಿದೆ ಎಂದು ನನ್ನ ಸ್ಪಷ್ಟ ನಂಬುಗೆಯಾಯಿತು. ಸರ್ವರ ಹಿತದಲ್ಲಿಯೇ ನನ್ನ ಹಿತವಡಗಿದ್ದು ಸರ್ವರೂ ಶರೀರ ಶ್ರಮದಿಂದಲೇ ತಮ್ಮ ಉಪಜೀವನ ಸಾಗಿಸಬೇಕೆಂದು ಅಭಿಪ್ರಾಯ ತಳೆಯುವಂತಾಯಿತು. ಮಾಡುವ ಕಾಯಕ ಯಾವುದೂ ಮೇಲಲ್ಲ, ಯಾವುದೂ ಕೀಳಲ್ಲ. ಆದುದರಿಂದ ಕಾಯಕ ಯಾವುದೇ ಇರಲಿ, ಪ್ರಾಮಾಣಿಕ ಸತ್ಯಾಧಾರಿತ ದುಡಿತಕ್ಕೆ ಸಮಾನ ಗೌರವ ದೊರೆಯಬೇಕೆಂಬುದನ್ನು ಮೊಟ್ಟಮೊದಲಾಗಿ ತಿಳಿದುಕೊಂಡೆನು. ಆದರೆ, ಸರ್ವರಿಗೂ ಅನ್ನ ನೀಡುವ ರೈತನ ಜೀವನ ನಿಜವಾಗಿಯೂ ಋಷಿ ಜೀವನ, ಸರ್ವೋತ್ಕೃಷ್ಟ ಜೀವನವಾಗಿದೆ.' ರಸ್ಕಿನ್ ಮಹಾಶಯನ ಗ್ರಂಥ

ಸರ್ವೋದಯದ ವಿಚಾರಗಳಿಂದ ಮಾತ್ರ ಭಾರತಕ್ಕೆ ಸ್ವಾತಂತ್ರ್ಯ ಲಭಿಸಲು ಸಹಾಯಕವಾಗಬಲ್ಲುದು; ಗಳಿಸಿದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲೂ ಸಾಧ್ಯವಾಗುವುದೆಂದು ಅವರ ಪೂರ್ಣ ನಂಬುಗೆಯಾಗಿತ್ತು. ಒಟ್ಟಿನಲ್ಲಿ ಮೃತಪ್ರಾಯರಾದ ಭಾರತೀಯರ ಜೀವನದಲ್ಲಿ 'ಸರ್ವೋದಯ'ವೊಂದೇ ಚೈತನ್ಯ ನೀಡಬಲ್ಲುದು ಎಂಬುದು ಅವರ ಸಿದ್ಧಾಂತವಾಗಿತ್ತು. ಗಾಂಧೀಜಿ ಚರಕಕ್ಕೆ ತುಂಬ ಮಹತ್ವ ನೀಡಿದ್ದರು. ಭಾರತೀಯ ಸಂಸ್ಕೃತಿ ಮತ್ತು ಸಭ್ಯತೆಯ ಪ್ರತೀಕವಾದ ಈ ಚರಕ ಕಾಲರುದ್ರನ ಸಾತ್ವಿಕ ಸ್ವಭಾವ, ಕ್ರಾಂತಿ ಮಾಡುವ, ದುಡಿಮೆಯ ಗೌರವವನ್ನು ಇಮ್ಮಡಿಗೊಳಿಸುವ, ಸಮಾನತೆಯ ತತ್ವವನ್ನು ಪ್ರತಿಬಿಂಬಿಸುವ ಕಾಲಚಕ್ರವೆಂದು ಅವರು ಚರಕದ ಬಗ್ಗೆ ವಿವರಿಸುತ್ತಿದ್ದರು. ಅಂತೆಯೇ ಖಾದಿಯೂ ಒಂದು ವ್ರತವಾಗಬೇಕೆಂದೂ ಅವರ ದೃಢ ಭಾವನೆಯಾಗಿತ್ತು. ಭಾರತಕ್ಕೆ ಸ್ವಾತಂತ್ರ್ಯ ದೊರೆಯಲು ಸರ್ವೋದಯ ಸಿದ್ಧಾಂತ ಪ್ರೇರಣೆಯಾಗಿರುವಂತೆ ಗಳಿಸಿದ ಸ್ವಾತಂತ್ರ್ಯ ಉಳಿಸಿಕೊಳ್ಳುವುದಕ್ಕೂ ಈ ಸಿದ್ಧಾಂತವೇ ಪ್ರಬಲ ಆಧಾರವೆಂದು ಅವರು ಕಾರ್ಯಕರ್ತರಿಗೆ ಬೋಧಿಸುತ್ತಿದ್ದರು. ಅದಕ್ಕಾಗಿ ಆಶ್ರಮದಲ್ಲಿ ಗುರುಕುಲ ಮಾದರಿಯ ಪಾಠಶಾಲೆಯನ್ನು ಆರಂಭಿಸಿದ ಗಾಂಧೀಜಿ ನಾಳಿನ ನಾಗರಿಕನಾಗುವ ಮಗು ಅಪ್ಪಟ ಭಾರತೀಯನಾಗಿ ಭಾರತೀಯ ಸಂಸ್ಕೃತಿಯ ಪೋಷಕನಾಗಿ ಬೆಳೆಯಬೇಕೆನ್ನುವ ರೀತಿಯಲ್ಲಿ ಶಿಕ್ಷಣ ನೀಡುತ್ತಿದ್ದರು. ತಾನೊಬ್ಬ ಹೇಳಿ ಕೇಳಿ ಸಫಾಯಿ ಕರ್ಮಚಾರಿಯಾಗಿ ಸ್ವಾವಲಂಬನ ಜೀವನ ಬದುಕಲು ಬಯಸುತ್ತಿರುವಂತೆಯೇ ಮಕ್ಕಳನ್ನು ಅದೇ ರೀತಿ ಬೆಳೆಸುವ ಸಲುವಾಗಿ ಮೂಲ ಶಿಕ್ಷಣ ಪ್ರಾರಂಭಿಸಿದರು. ನಿತ್ಯದಂತೆ ಗಾಂಧೀಜಿ ವಾಯು ಸಂಚಾರಕ್ಕಾಗಿ ಮಕ್ಕಳೊಂದಿಗೆ ಮಗುವಾಗಿ ನಗುತ್ತ ಕೆಲೆಯುತ್ತ ಹೋಗುತ್ತಿರುವಾಗ ಒಂದು ದಿನ ಒಬ್ಬ ಮಗು ಕೇಳುತ್ತಾನೆ:- 'ಬಾಪೂ, ನಮ್ಮ ದಾದಿ ಹೇಳುತ್ತಾಳೆ– ನಮ್ಮ ದೊಡ್ಡಮ್ಮನ ಮಗನೊಬ್ಬ ಇಂಗ್ಲಿಷ್ ಕಲಿತು ಸಾಹೇಬನಾಗುತ್ತಾನೆ. ನೀನೂ ಹಾಗೆ ಕಲಿಯಲು ಏಕೆ ಬರಬಾರದು? ಎಂದು ಕೇಳುತ್ತಾಳೆ. ಅವಳಿಗೆ ನಾನೇನು ಉತ್ತರ ಹೇಳಲಿ?' ಎಂದಾಗ ಗಾಂಧೀಜಿ– 'ಮಗೂ, ನಾನು ಅಪ್ಪಟ ಭಾರತೀಯನಾಗಿ, ಸ್ವಾವಲಂಬಿಯಾದ ಸರ್ವರ ಹಿತ ಬಯಸುವ ನಾಗರಿಕನಾಗಿ ಗಾಂಧೀಜಿ ಆಶ್ರಮದಲ್ಲಿ ಬೆಳೆಯುತ್ತಿದ್ದೇನೆಂದು ಹೇಳು' ಎಂದು ಅನ್ನುತ್ತಾರೆ. ನಿಜವಾಗಿಯೂ ಗಾಂಧೀಜಿಯ ಸಿದ್ಧಾಂತದಂತೆ ಸ್ವತಂತ್ರ ಭಾರತದ ಜೀವನ ಪದ್ಧತಿ ಸಂಪೂರ್ಣವಾಗಿ ತೊಡಗಿಕೊಳ್ಳದೇ ಹೋದುದರಿಂದ ಹಾಗೂ ಅರ್ಧ ದಾರಿಯಲ್ಲಿಯೇ ಗಾಂಧೀಜಿಯ ಸತ್ಸಂಗವನ್ನು ಕಳೆದುಕೊಂಡುದರಿಂದಲೇ ನಮ್ಮ ಭಾರತೀಯ ಜೀವನದಲ್ಲಿ, ವಿಪ್ಲವ ಬಿರುಗಾಳಿ ಬೀಸತೊಡಗಿ ಜೀವನ ಅಸಹನೀಯವಾಗತೊಡಗಿತು.

ಭಾರತಕ್ಕೆ ಸ್ವಾತಂತ್ರ್ಯ ದೊರಕಿತು. ಆದರೆ ರಾಷ್ಟ್ರ ಇಬ್ಭಾಗವಾಯಿತು. ಭಾರತದ ಪ್ರಥಮ ಪಂತ ಪ್ರಧಾನಿ ನೆಹರೂ ಸರ್ವೋದಯ ಸಿದ್ಧಾಂತದತ್ತ ಕೊಂಡೊಯ್ಯುವಲ್ಲಿ ನಿಸ್ಸಹಾಯಕರಾದರೇನೋ ಎಂದು ಅನಿಸುತ್ತದೆ. ಸ್ವತಂತ್ರ ಭಾರತದ ರಾಜ್ಯ ಘಟನೆ ಸ್ವೀಕೃತವಾಯಿತು. ಅದರಂತೆ ಭಾರತ ಸ್ವತಂತ್ರ ಸಾರ್ವಭೌಮ ಪ್ರಜಾರಾಜ್ಯವಾಯಿತು. ಆದರೆ ಪ್ರಜಾತಂತ್ರ ಆಡಳಿತದಲ್ಲಿ ಪ್ರಜೆಗಳೇ ಅತಂತ್ರರಾಗತೊಡಗಿದರು. ಭಾರತೀಯ ಸಂಸ್ಕೃತಿಯನ್ನಾಧರಿಸಿದ ಜೀವನ ಶೈಲಿಯಲ್ಲಿ ಸಂಪೂರ್ಣ ಬದಲಾವಣೆಯಾಗಿ ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರವೇಶವಾಗಿ ಭಾರತದಾಂತರ್ಗತವಾದ, ಭಾರತದ ಹೃದಯಗಳಾದ ಹಳ್ಳಿಗಳು ಕಂಗೆಟ್ಟು, ಬದುಕಲು ನಗರಗಳನ್ನು ಆಶ್ರಯಿಸುವಂತಾಯಿತು. ಸ್ವಾತಂತ್ರ್ಯ, ದೇಶಪ್ರೇಮ ಮತ್ತು ರಾಷ್ಟ್ರಧರ್ಮಗಳನ್ನು ಜನತೆಯಲ್ಲಿ ಪ್ರತಿಬಿಂಬಿಸಿ ಗಾಂಧೀಜಿಯವರ ಆದರ್ಶದಂತೆ

ರಾಮರಾಜ್ಯ ಆಡಳಿತ ನೀಡಬೇಕಾದ ಕಾಂಗ್ರೆಸ್ ಪಕ್ಷ ರಾಜಕಾರಣದಲ್ಲಿ ಸಿಲುಕಿ ರಾಷ್ಟ್ರ ವಿಕಾಸವನ್ನು, ರಾಷ್ಟ್ರಹಿತವನ್ನು ಕಡೆಗಣಿಸಿ ಅಧಿಕಾರ ಪ್ರಾಪ್ತಿಗಾಗಿ, ಸಂಪತ್ತು ಸಂಗ್ರಹಕ್ಕಾಗಿ ದೇಶವನ್ನು ಒಡೆದಾಳುವ ಸ್ಥಿತಿಗೆ ಬರುವಂತಾಯಿತು. ವಿದೇಶಿ ಗುಲಾಮಗಿರಿ ಆಡಳಿತವನ್ನು ಹಿಮ್ಮೆಟ್ಟಿಸಿದ ಭಾರತೀಯ, ದೇಶೀಯ ಆಡಳಿತಗಾರರ ಕಪಿ ಮುಷ್ಟಿಯಲ್ಲಿ ಸಿಲುಕಿ ನಲುಗುವಂತಾಯಿತು. ಸರ್ವೋದಯ ಸಿದ್ಧಾಂತದ ಬದಲು ಪಕ್ಷ ಸಿದ್ಧಾಂತದ ರಾದ್ಧಾಂತ ಬಲವಾಗಿ ಬಡ ಮತದಾರ ಕಣ್ಣು ಕಣ್ಣು ಬಿಡುವಂತಾಯಿತು. 'ರಂಡಿ ಮುಂಡಿಯ ಮದುವೆಯಲ್ಲಿ ಉಂಡವನೇ ಜಾಣ' ಎಂಬಂತೆ ಉರಿವ ಮನೆಯಿಂದ ಗಳ ಹಿರಿದದ್ದೇ ಲಾಭವೆನ್ನುವಂತಾಯಿತು. ಬಡತನ, ಅಜ್ಞಾನ ಮತ್ತು ನಿರುದ್ಯೋಗ ನಿವಾರಣೆಯ ಘೋಷಣೆ ಬರಿಯ ಘೋಷಣೆಗಳೇ ಆದವಲ್ಲದೆ ಕಿಂಚಿತ್ತೂ ಅಭಿವೃದ್ಧಿ ಕಾಣದಾಯಿತು. ಬಡ ಮತದಾರ ಸರಕಾರ ಘೋಷಿಸಿದ ಸೌಲಭ್ಯ ಪಡೆಯಬೇಕಾದರೆ ಅಧಿಕಾರಿಗಳ ಕೈ ಬೆಚ್ಚಗೆ ಮಾಡುವುದಲ್ಲದೆ ಜನ ಪ್ರತಿನಿಧಿಗಳನ್ನು ಓಲೈಸಲೇಬೇಕಾದದ್ದು ಅನಿವಾರ್ಯವಾಯಿತು. ಚುನಾವಣೆಗೆ ನಿಧಿ ಸಂಗ್ರಹಿಸಿ ಕೊಡದೇ ಇದ್ದರೆ ನೌಕರರಿಗೆ ನೌಕರಿ ಇಲ್ಲ ಮತ್ತು ನೌಕರರಿಗೆ ಉಳಿಗಾಲವಿಲ್ಲ. ಮತದಾರರಿಗೆ ಹಣ, ಹೆಂಡದ ಹೊಳೆ ಹರಿಸದಿದ್ದರೆ ಚುನಾವಣೆಯಲ್ಲಿ ಜನ ಪ್ರತಿನಿಧಿ ಆಯ್ಕೆಯಾಗುವುದು ಸಾಧ್ಯವೇ ಇಲ್ಲ. 'ಯಜಮಾನನಾಗಿ ಸೇವೆ ಮಾಡು, ದಾಸನಂತೆ ಕೂಲಿ ಮಾಡಬೇಡ' ಎಂದು ಬೋಧಿಸಿದ ಆ ಗಾಂಧೀಜಿಯ ಚಿಂತನೆಗೂ ನಮ್ಮ ಚಿಂತನೆಗೂ ಅಜಗಜಾಂತರವಾಗಿರುವಾಗ ದೇಶದ ಬಗ್ಗೆ ಯಾರಿಗೆ ಗಮನವಿದೆ? ಕಳಕಳಿ ಇದೆ? ಅಂತೂ 'ಮದುವೆಯಾಗದೆ ಹುಚ್ಚು ಬಿಡದು; ಹುಚ್ಚು ಬಿಡದೆ ಮದುವೆಯಾಗದು' ಎಂಬಂತಾಗಿದೆ ನಮ್ಮ ಸ್ಥಿತಿ. ಭಾರತದ ಇಂದಿನ ಶೋಚನೀಯ ಅನಾದರ್ಶ ಸ್ಥಿತಿ ಮಾಯವಾಗಬೇಕಿದ್ದರೆ, ಅರಬ ದೇಶವನ್ನುದ್ಧರಿಸಿದ 'ಕೆಮಾಲ ಪಾಶ' ನಂತಹ ಅಪ್ಪಟ ಭಾರತೀಯ ಋಷಿ ಸದೃಶ ವ್ಯಕ್ತಿಯ ಅವತಾರವಾಗಬೇಕು. ಅಲ್ಲಿಯವರೆಗೆ ಬರೇ ಭಾಷಣ-ಘೋಷಣೆಗಳನ್ನು ಕೇಳುತ್ತ, ಹೂ ಬತ್ತಿ ಹೊಸೆಯುತ್ತ ಕುಳಿತುಕೊಳ್ಳದೇ ಗತಿ ಇಲ್ಲ. ಹಾಗೇನಾದರೂ ಮಾಡಹೋದರೆ, ವಂಶಾಡಳಿತಾಧಿಕಾರಿಗಳು ತುರ್ತು ಪರಿಸ್ಥಿತಿ ತಂದು ತನಗಾಗದವರನ್ನು ಸೆರೆಮನೆಗೆ ತಳ್ಳದೆ ಬಿಡರು. ಪಕ್ಷವನ್ನು ಸಂಘಟಿಸಿ ಅದಕ್ಕೆ ಅಧಿಕಾರ ನೀಡಿದ ತಂದೆಯ ಸಮಾನ ವ್ಯಕ್ತಿಯನ್ನೇ ಒದ್ದೋಡಿಸಿ ಇಂದಿನ ವ್ಯವಸ್ಥೆಯಿಂದ ನಾವು ಬದುಕುಳಿದರೆ ಸಾಕೆನ್ನುವಂತಾಗಿದೆ. ಇಂದಿನ ಪ್ರಜೆಯ ಸ್ಥಿತಿ ಸ್ವಾತಂತ್ರ್ಯ ಸುವರ್ಣ ಮಹೋತ್ಸವದ ಈ ಸುಸಂದರ್ಭವನ್ನು ಮತ್ತು ಭಾರತದ ಸ್ಥಿತಿಯನ್ನು ಚಿಂತನೆಗೊಳಪಡಿಸದೆ ಚಿಂತಿತ ಮನಸ್ಸಿನಿಂದ ಚಿಂತಿಸುವಂತಾದುದು ವಯೋವೃದ್ಧನಾದ ನನ್ನಂಥವನ ದುರ್ದೈವವೆಂದೇ ಭಾವಿಸದೆ ಇನ್ನೇನು ಮಾಡಲಿ !

❋ ❋ ❋

# ಅರ್ಥಶಾಸ್ತ್ರ (ನಾನು ಕಂಡಂತೆ)

• ಡಾ. ಮಹಾದೇವ ಮುರಕಟ್ಟಿ

ಸ್ವಾತಂತ್ರ್ಯ ಚಿಂತನೆ ಅಂದರೆ ಅರ್ಥ ಚಿಂತನೆ ! ಸರ್ವ ಶಾಸ್ತ್ರಗಳಲ್ಲಿ ಅರ್ಥ-ಶಾಸ್ತ್ರವು ಪರಮ ಶ್ರೇಷ್ಠವೆಂಬುದು ನನ್ನ ಅಭಿಪ್ರಾಯ. ಸಂಪೂರ್ಣ ಜಗತ್ತಿನ ಜನ ಜೀವನದಲ್ಲಿ ಅದು ಸದಾ ಹಾಸುಹೊಕ್ಕಾಗಿ ಜೀವಂತ ನಿಂತಿರುತ್ತದೆ. "ಶಾಸ್ತ್ರ ಹೇಳುವುದಕ್ಕೆ, ಪುರಾಣ ಓದುವುದಕ್ಕೆ" ಎಂಬ ಲೋಕ ರೂಢಿಯ ಮಾತು ಅರ್ಥಶಾಸ್ತ್ರಕ್ಕೆ ಅನ್ವಯಿಸದೆ ಇನ್ನುಳಿದ ಶಾಸ್ತ್ರಗಳಿಗೆ ಹೇಳಲಾಗಿದೆ. ಹೊಟ್ಟೆಗೆ ಹಾಕದ, ಬಟ್ಟೆಯನ್ನು ಕೊಡದ ಅದು "ಒಣ ಬಾಯಿ, ಗೋಡೆಗೆ ಹಾಯಿ !" ಎಂದು ಹಳ್ಳಿಗರು ಹೇಳುವ ನುಡಿಯನ್ನು ನೆನಪಿಗೆ ತರುತ್ತದೆ. ಅರ್ಥಾತ್ ಅರ್ಥಶಾಸ್ತ್ರದ ಮುಂದೆ ಎಲ್ಲವೂ ವ್ಯರ್ಥ.

ಅರ್ಥ ಶಬ್ದವು ಅತ್ಯಂತ ಮಹತ್ವದ, ಬಹು ವಿಶಾಲ, ಅಗಮ್ಯ, ಆಳವಾದ, ಸದಾ ಸಜೀವ ಸತ್ವವುಳ್ಳ ಶಬ್ದವಾಗಿದೆ. 'ಒಂದು ಶಬ್ದಕ್ಕೆ ಅನೇಕ ಅರ್ಥ, ಒಂದು ಅರ್ಥಕ್ಕೆ ಅನೇಕ ಶಬ್ದ'ವೆಂಬ ಸೂತ್ರಕ್ಕೆ ಗೌಣ ಸ್ಥಾನ ಕೊಟ್ಟು ಮುಖ್ಯ ಮಾತಿಗೆ ಬರೋಣ. ಯಾಕೆಂದರೆ 'ಶಬ್ದ'ಕ್ಕೆ ಧ್ವನಿ ಅಥವಾ ಸ್ವರವುಂಟು– ಈ ಧ್ವನಿ ಅಥವಾ ಸ್ವರಕ್ಕೆ ಅರ್ಥವಿರದಿದ್ದರೆ ಅದೊಂದು ಕತ್ತಲೆಯ ಕಿರುಚಾಟವಾದೀತು ! ಅರ್ಥವಿದ್ದರೆ ಮಾತ್ರ ಪ್ರಪಂಚದಲ್ಲಿ ಅದಕ್ಕೊಂದು ಪ್ರಯೋಜನ ಉಂಟು. ಪಾತ್ರ, ಶಬ್ದಾರ್ಥ, ಮೂಲಾರ್ಥ, ಭಾವಾರ್ಥ, ಚರಿತಾರ್ಥ, ಸಹನಾರ್ಥ, ಸುಲಭಾರ್ಥ, ದ್ವಂದ್ವಾರ್ಥ– ಹೀಗೆಯೇ ಎಣಿಸುತ್ತ ಹೋದರೆ ಅದೇ ಒಂದು ಶಬ್ದಕೋಶವಾಗುವುದರಲ್ಲಿ ಸಂಶಯವಿಲ್ಲ. ಆದರೆ 'ಶಬ್ದಕೋಶ'ವೆಂದರೆ 'ಅರ್ಥಕೋಶ' ತಾನೆ ? ಅರ್ಥಾತ್ ಸಂಪೂರ್ಣ ಕೋಶವೇ ಅರ್ಥಮಯ (ಮೌಲ್ಯವಾನ್)ಎಂಬುದನ್ನು ಸೂರ್ಯ ಪ್ರಕಾಶದಷ್ಟು ಸ್ಪಷ್ಟಗೊಳಿಸುತ್ತದೆ. ಪ್ರತಿಯೊಂದು ಪದಾರ್ಥವೂ ತನ್ನದೇ ಆದ ಕನಿಷ್ಠ ಒಂದು ಮೌಲ್ಯವನ್ನು ಹೊಂದಿರುತ್ತದೆ. "ನಿಮ್ಮ ಮಾತಿಗೆ ಏನಾದರೂ ಅರ್ಥವಿದೆಯೆ?" ಎಂದು ಕೇಳಿದಾಗ, ಉತ್ತರಕ್ಕಾಗಿ ಶಬ್ದಕೋಶವನ್ನು ಮುಗುಚಿ ಹಾಕಬೇಕಿಲ್ಲ. "ನಿಮ್ಮ ಮಾತಿಗೆ ಏನಾದರೂ ಬೆಲೆ ಇದೆಯೆ?" ಎಂಬುದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದು ಬರಲು ಸಾಕು. ಅರ್ಥವಿಲ್ಲದ ಮಾತು ಅಂದರೆ ಪ್ರಯೋಜವಿಲ್ಲದ್ದು. ಪರಸ್ಪರ ಪ್ರಯೋಜನಕ್ಕಾಗಿಯೇ 'ಅರ್ಥಶಾಸ್ತ್ರ' ಪ್ರಪಂಚದ ಮಾಧ್ಯಮವಾಗಿ, ಡಾಲರ್, ರೂಪಾಯಿ, ಯೆನ್, ಪೌಂಡು, ಶಿಲಿಂಗ್ ಅಂತಾ ಅನೇಕ ಹೆಸರುಗಳಿಂದ ಮೆರೆಯುತ್ತಲಿದೆ !

ಯಾವ ಮನುಷ್ಯನ ಆರ್ಥಿಕಸ್ಥಿತಿ ಭದ್ರವಾಗಿರುತ್ತದೆಯೋ ಆತ ನಿಶ್ಚಿಂತೆಯಾಗಿ, ನಿರ್ಭಯವಾಗಿ ಬಾಳಬಲ್ಲ. "ಹಣವಿಲ್ಲದವ ಹೆಣಕ್ಕಿಂತ ಕಡೆ", "ದುಡ್ಡೇ ದೊಡ್ಡಪ್ಪ",

"ಹಣವೆಂದರೆ ಹೆಣ ಬಾಯಿಬಿಡುತ್ತದೆ" ಮುಂತಾದ ಮಾತಿನ ಮುತ್ತುಗಳು ಇಂಥ ಹಣದ ಮಹಿಮೆಗೆ ಮೆರುಗು ತಂದಿವೆ. ಇಂಥ ಮಾತುಗಳು ಹಿಂದಿನ ಕಾಲದಲ್ಲಿ ಇದ್ದಿಲ್ಲ ಎಂದು ಹೇಳಲಾರದು. ಆದರೆ ಅವು ಗೌಣಸ್ಥಾನದಲ್ಲಿದ್ದವು. ದಶರಥ ರಾಜನು ಯುದ್ಧದಲ್ಲಿ ಜಯ ಗಳಿಸಿದ್ದಕ್ಕೆ ಆತನ ಧರ್ಮಪತ್ನಿ 'ಕೈಕೇಯಿ'ಯೇ ಕಾರಣಳು. ಅದಕ್ಕೋಸ್ಕರ ದಶರಥ ರಾಜನು ತನ್ನ ಹೆಂಡತಿಗೆ, "ವರವನ್ನು ಬೇಡಿಕೋ. ನಾನು ಇಷ್ಟೊಂದು ಸಮರ್ಥನಿದ್ದೇನೆ. ಈ ನನ್ನ ರಾಜ್ಯದಲ್ಲಿ ಯಾವಾತ ಅತ್ಯಂತ ಶ್ರೀಮಂತನಿರುವನೋ ಅಂಥವನನ್ನು ಕ್ಷಣಾರ್ಧದಲ್ಲಿ ದರಿದ್ರನನ್ನಾಗಿ ಮಾಡಿಬಿಡುವೆ; ಯಾವಾತ ತೀರ ದರಿದ್ರನಿರುವನೋ ಅವನನ್ನು 'ಕುಬೇರ' ನನ್ನಾಗಿ ಮಾಡುವೆ?" ಎಂದು ಹೇಳುವ ರಾಜನ ಧ್ವನಿಯಲ್ಲಿ ಅರ್ಥಶಾಸ್ತ್ರದ ಇತ್ಯರ್ಥ ಅಡಗಿರಲು ಸಾಕು. ಇಂದಿನ ಕಾಲದಲ್ಲಿಯಂತೂ ನಮ್ಮ ಉಸಿರಾಟಕ್ಕಿಂತ ಹೆಚ್ಚಿನ ಹಿರಿಮೆ ಹಣಕ್ಕೆ, ಹಣಕಾಸಿನ ವ್ಯವಹಾರಕ್ಕೆ ಬಂದಿದೆ! ಹಣವು ಕೇವಲ ಒಬ್ಬ ಮನುಷ್ಯನ ಎತ್ತರವನ್ನು ಅಳೆಯುವ 'ಮಾನದಂಡ'ವಲ್ಲ; ದೇಶದ ಭವಿತವ್ಯವನ್ನು ತೂಗಿ ಹೇಳುವ ತಕ್ಕಡಿಯಾಗಿದೆ. ಆರ್ಥಿಕ ಅಡಚಣೆಯಲ್ಲಿರುವ ದೇಶ ವಿನಾಶದ ಬುನಾದಿಯನ್ನು ಹೊಂದಿರುತ್ತದೆ. ರಾಷ್ಟ್ರದ ರಕ್ಷಣೆ ಮೂಲತಃ ಸಂಪತ್ತನ್ನೇ ಅವಲಂಬಿಸಿರುತ್ತದೆ. ಅರ್ಥಶಾಸ್ತ್ರ ಅವನತಿಗೆ ಇಳಿದ ದೇಶದಲ್ಲಿ ಗೃಹಯುದ್ಧ (Civil war) ತಲೆಯೆತ್ತುವುದು ಸಹಜ. 'ಇಂಡೋನೇಶಿಯಾ'ಗೆ ವಿಶ್ವ ಸರಕಾರದ ನೆರವು ಸಿಕ್ಕರೂ ಅದು ಆರ್ಥಿಕ ಮುಗ್ಗಟ್ಟಿನಿಂದ ಮುಗ್ಗರಿಸಿ ಬಿದ್ದುದು ತಾಜಾ ಉದಾಹರಣೆಯಾಗಿರಲು ಸಾಕು.

ಜಗತ್ತಿನಲ್ಲಿ ಸುಖೀ ರಾಷ್ಟ್ರವೆಂದರೆ 'ಜಪಾನ್' ಎಂದು ಕೆಲವರ ಅಭಿಪ್ರಾಯ. ಜಪಾನವು ಜಾಣತನದಿಂದ ತನ್ನ ವ್ಯಾಪಾರವನ್ನು ಜಗತ್ತಿನಾದ್ಯಂತ ಪಸರಿಸಿ ಸಂಪತ್ತನ್ನು ಶೇಖರಿಸಿ ಸುಖದಿಂದ ಇರುವುದನ್ನು ಕಂಡರೆ ಬಲ್ಲವರು ಮೇಲೆ ಹೇಳಿದ ಮಾತು ಸಂಪೂರ್ಣ ಸತ್ಯವಿರಬೇಕು ಎಂದು ಎನ್ನಿಸದಿರಲಾರದು. ಎರಡನೆಯ ಮಹಾಯುದ್ಧದಲ್ಲಿ ಜಪಾನಿನ ಮೇಲೆ ಅಣುಬಾಂಬ್ ಬಿದ್ದಾಗ ಜಗತ್ತೇ ಕಂಪಿಸಿ ಹೋಯಿತು. ಹೀಗಿರುವಾಗ ಜಪಾನಿನ ಅವಸ್ಥೆ ಏನಾಗಿರಬೇಕು! ಅಂಥ ರಣರಂಗ ರಕ್ಕಸನ ಬಾಯಿಂದ ಬದುಕಿ ಬಂದ ಜಪಾನ್ ಇಂದಿಗೂ ಸಂಪತ್ತಿನ ಸ್ವಾಮಿತ್ವವನ್ನು ಕಳೆದುಕೊಂಡಿಲ್ಲ! ಮಾನಸಿಕ ನೆಮ್ಮದಿಯಲ್ಲಿ ಅಮೆರಿಕಾ ದೇಶವನ್ನು ಸಹ ಹಿಂದೂಡಿದೆ! ಇದಕ್ಕೆ ಮುಖ್ಯಕಾರಣ ಅರ್ಥಶಾಸ್ತ್ರದ ರಹಸ್ಯವನ್ನು ಅದು ಸಂಪೂರ್ಣ ತಿಳಿದುಕೊಂಡಿದೆ. ವಿಜ್ಞಾನಮಯ ಅವರ ಸತತೋದ್ಯೋಗ ತಲೆತಲಾಂತರದಿಂದ ಬಂದ ವರದಾನವಾಗಿದೆ. ವಿಶ್ವದ ಯಾವದೇ ಮೂಲೆಯಲ್ಲಿರುವ ದೇಶಕ್ಕೆ ಯಾವಾಗ ಯಾವ ವಸ್ತುವಿನ ಆವಶ್ಯಕತೆಯಾಗುವುದೆಂಬ ಗುಟ್ಟನ್ನು ತಿಳಿದುಕೊಂಡು ಆಯಾ ಸರಕು-ಸಾಮುಗ್ರಿಗಳನ್ನು ತನ್ನ ದೇಶದಲ್ಲಿ ಹುಟ್ಟಿಸಿ, ಬೆಳೆಸಿ ವಿದೇಶಕ್ಕೆ ಕಳಿಸಿ ಅವುಗಳನ್ನು ಬಳಸಿಕೊಳ್ಳುವಂತೆ ಮಾಡಿದ ಜಪಾನಿನ ಮಾಯಾಜಾಲದಲ್ಲಿ ಸಿಗದ ರಾಷ್ಟ್ರಗಳು ವಿರಳ! ಅಮೆರಿಕೆಯ ಮೇಲೂ ತನ್ನ ವ್ಯಾಪಾರದ ವೌಲೀಕರಣದ ಮುದ್ರೆಯನ್ನೊತ್ತಿದೆ!

ಈ ವಿಷಯದಲ್ಲಿ ಜಗತ್ತಿಗೆ ಜಪಾನ್ ಒಂದು ಅಮೋಘ ಉದಾಹರಣೆಯಾಗಿದೆ. ನಮ್ಮ ದೇಶ ಭಾರತಕ್ಕಂತೂ ಬಹು ಮೂಲ್ಯ ಪಾಠವಾಗಿರಲುಬೇಕು. ಜಪಾನಿನ ಮೇಲೆ ಬಿದ್ದಂಥ ಬ್ರಹ್ಮಾಸ್ತ್ರಗಳು ನಮ್ಮ ಭಾರತದ ಮೇಲೆ ಬಿದ್ದಿಲ್ಲ; ಜಪಾನ್ ಎದುರಿಸಿದಂಥ ಕಠಿಣ ಕಂಟಕಗಳು ನಮಗೆ ಭೆಟ್ಟಿಯಾಗಿಲ್ಲ. ಆದರೂ ನಾವು ದುರ್ದೈವದಿಂದ ಹೇಳಬೇಕೆಂದರೆ ಸ್ವಾತಂತ್ರ್ಯ ಸಿಕ್ಕು ೫೦ ವರ್ಷಗಳಾದರೂ ಆರ್ಥಿಕ ಸಂಕಟದಲ್ಲಿ ಸಿಕ್ಕು ನರಳುತ್ತಿದ್ದೇವೆ!

ಇದಕ್ಕೆ ಕಾರಣ. ಆ ಕಾರಣದ ಒಂದೇ ಒಂದು ಸತ್ಯಾಂಶವನ್ನು ಹೇಳಲು ದೇಶಾಭಿಮಾನಿಗಳಿಗೆ ಸಂಕೋಚ ಅಷ್ಟೇ ಅಲ್ಲ, ತೀರ ನಾಚಿಕೆಯಾಗುವದು! ಸಖೇದಾಶ್ಚರ್ಯವೆಂದರೆ ನಮಗೆ ದೇಶಕ್ಕಿಂತ ದುಡ್ಡೇ ದೊಡ್ಡದಾಗಿದೆ. ದೇಶ ಭದ್ರವಿದ್ದರೆ ನಾವು ಬದುಕುತ್ತೇವೆ. ಕೋಶಭದ್ರವಿದ್ದರೆ ದೇಶ ಭದ್ರವಾಗುತ್ತದೆ ಎಂಬ ಅರಿವು ನಮಗೆ ಇಲ್ಲ! ನಮ್ಮ ಅಜ್ಞಾನದ ಅಗ್ನಿಗೆ ಸ್ವಾರ್ಥಾಂಧತೆಯೊಂದು ಎಣ್ಣೆಯಾಗಿ ಬಿಟ್ಟಿದೆ! ವೈಯಕ್ತಿಕ ಹಣದ ದಾಹ ದೇಶವನ್ನಿಂದು ದಹಿಸುತ್ತಿದೆ!

ಹಲವಾರು ಪಂಚವಾರ್ಷಿಕ ಯೋಜನೆಗಳು ಅರ್ಥಶಾಸ್ತ್ರ ಪಂಡಿತರಿಂದಲೇ ಪೂರ್ಣಗೊಂಡಿದ್ದರೂ ಭಾರತದ ಬೆನ್ನಿನ ಮೇಲೆ ಸಹಿಸಲಾರದ ಸಾಲದ ಹೊರೆಯೇಕೆ? ಭಾರತವು ಮಾಡಿದ ಸಾಲದ ಮೊತ್ತ ನಾಲ್ವತ್ತು ಸಾವಿರಕೋಟಿ ರೂಪಾಯಿಗಳು! ಮಾಜಿ ಪ್ರಧಾನ ಮಂತ್ರಿಗಳೊಬ್ಬರು ಆ ಸಾಲ ೮೫ ಸಾವಿರ ಕೋಟಿ ರೂ. ಅಂತ ಹೇಳಿದ್ದನ್ನು ನಾನು ಕೇಳಿ ಕಸಿವಿಸಿಗೊಂಡೆ! ಆ ಸಾಲಕ್ಕೆ ಪ್ರತಿಯಾಗಿ ನಾವು ಸಲ್ಲಿಸಬೇಕಾದ ಬಡ್ಡಿ ಲೆಕ್ಕಕ್ಕೆ ಸಿಗದಷ್ಟು ದೊಡ್ಡದು ಹಾಗೂ ಪೇಚಿನದು! ಕರ್ನಾಟಕ ರಾಜ್ಯದಿಂದ ೨೦೦ ಕೋಟಿ ರೂ. ಗಳ ಗೋಡಂಬಿ ರಶಿಯಾ ದೇಶಕ್ಕೆ ರಫ್ತಾಗಿ ಹೋಗುತ್ತದೆ. ಅದರ ಪ್ರತಿಫಲ ನಮಗೆ ಸಿಕ್ಕುವದು ಮಾತ್ರ ೧೦೦ ಕೋಟಿ ರೂ. ಇನ್ನೊಂದು ನೂರು ಕೋಟಿ ರೂ. ಬಡ್ಡಿಯ ಬಾಯಲ್ಲಿ ಬೀಳುತ್ತದೆ!

ಕರ್ನಾಟಕ ರಾಜ್ಯದಿಂದ ಪರದೇಶಕ್ಕೆ ರಫ್ತಾಗುವ ಒಂದೇ ಒಂದು ವಸ್ತುವಿನ ಹಣೆಬರೆಹವನ್ನು ಬರೆದಿರುವೆ. ವಿವಿಧ ವಸ್ತುಗಳು ವಿದೇಶದ ಮಾರುಕಟ್ಟೆಗೆ ಕಳಿಸಲ್ಪಡುತ್ತಿವೆ. ಅದರಂತೆ ನೆರೆ ರಾಜ್ಯಗಳಿಂದ ಚಹಾ, ಗೋಧಿ, ಸಕ್ಕರೆ, ಹಣ್ಣು ಹಂಪಲುಗಳಲ್ಲದೆ ಕಲ್ಲು ಮಣ್ಣು, ಹೇಸಿಗೆಯೆಂದು ತಿಪ್ಪೆಗೆ ಎಸೆಯುವ ನರ-ಕುಲ-ಕೂದಲು ಕೂಡ ನಮ್ಮಲ್ಲಿಂದ ವಿದೇಶಕ್ಕೆ ರಫ್ತಾಗುತ್ತವೆ. ಈ ರಫ್ತಾಗುವ ವಸ್ತು ಪ್ರಮಾಣದಿಂದ ನೋಡಿದರೆ ನಮಗೆ ಸಿಕ್ಕುವ ಬೆಲೆ ಬರಿ ಬತ್ತಲೆ ಎಂದೇ ಹೇಳಬೇಕು! ನಮ್ಮಲ್ಲಿ ಹುಟ್ಟುವ ಉತ್ಕೃಷ್ಟ ಆಹಾರಧಾನ್ಯಗಳು ಪರದೇಶದವರ, ಸಿರಿವಂತರ ಪಾಲಿಗೆ ಹೊರತು ಭಾರತದ ಬಡ ಬಂಧುಗಳ ಬಾಯಿಗೆ ಬೀಳಲಾರವು. ಅಷ್ಟೇ ಅಲ್ಲ, ಬಡವರ ಕಣ್ಣಿಗೂ ಅವು ಅಪರೂಪ!

ಭಾರತ ಸರಕಾರವು ಈ ಕೊರತೆಯನ್ನು ನೀಗಿಸಲು ಅನೇಕ ಉಪಾಯ, ಚಿಂತನೆ ಮಾಡುತ್ತಿರುತ್ತದೆ. ಯಾಂತ್ರಿಕ, ತಾಂತ್ರಿಕ ಜ್ಞಾನಕ್ಕೆ ಪ್ರೋತ್ಸಾಹ ಕೊಡುತ್ತಲಿದೆ. ಅದಕ್ಕೋಸ್ಕರ ಉದ್ಯೋಗಪತಿಗಳನ್ನು ಸ್ವಾಗತಿಸುತ್ತಲಿದೆ. ಭಾರತೀಯ ರಿಜರ್ವ್ ಬ್ಯಾಂಕ್ ತನ್ನ ಪಾಲಿನ ಕರ್ತವ್ಯವನ್ನು ನಿರೀಕ್ಷೆ ಮೀರಿ ನಿಭಾಯಿಸುತ್ತಲಿದೆ. ಆದರೂ ಆರ್ಥಿಕ ಹಿಂಬಡತಿಯಲ್ಲಿ ನಾವು ಮುಂದುವರಿದವರೆಂದೇ ಹೇಳಬೇಕು!

ಅಮೆರಿಕೆಯು ತನ್ನಲ್ಲಿ ಬೆಳೆದ ಹೇರಳ ಗೋಧಿಯನ್ನು ಸುಟ್ಟುಹಾಕಿ ಅರ್ಥಶಾಸ್ತ್ರದ ಆಳತೆಯ ಒಳತಿರುಳನ್ನು ಬಹಿರಂಗಗೊಳಿಸಿತು. ಹಲವಾರು ಕೋಟಿ ಟನ್ನುಗಳಷ್ಟು ತತ್ತಿಗಳನ್ನು ಕಡಲಿನ ಒಡಲಿಗೆ ಹಾಕಿ ಡಾಲರಿನ 'ಡೌಲ'ನ್ನು ಜಗದ ಮುಂದೆ ಪ್ರದರ್ಶಿಸಿತು. ಅಮೆರಿಕೆಯ ಈ ಅರ್ಥತಂತ್ರ ಅವಿವೇಕತನದ್ದು ಎಂದು ಎಂಥ ಬುದ್ಧಿವಂತ ಮನುಷ್ಯನೂ ಹೇಳಬಲ್ಲನೆಂಬುದು ಸರಿ. ಆದರೆ ನಮ್ಮಲ್ಲಿ ಬೆಳೆದ ಬೆಳೆ ನಮಗೇ ಬದುಕುವುದಕ್ಕಾಗಿ ಸಿಕ್ಕದಿದ್ದಾಗ ಸುಡುವಷ್ಟು ಬೆಳೆಯುವ ಮಾತಂತೂ ದೂರೇ ಉಳಿಯಿತು; ಮತ್ತು ಅಂಥ

ಅಧಮ ಕೃತಿಯೂ ನಮಗೆ ಬೇಡ. ಇನ್ನೊಂದು ಸಖೇದಾಶ್ಚರ್ಯದ ಸಂಗತಿಯೆಂದರೆ, ಗೋದಾನ ಮಾಡುವ ನಮ್ಮ ಧಾರ್ಮಿಕ ಶ್ರದ್ಧಾ ಭೂಮಿಯಲ್ಲಿ ಹುಟ್ಟುವ ಹಸುಗಳ ಸಂಖ್ಯೆಗಿಂತ ಸಾವಿರಪಟ್ಟು ಹೆಚ್ಚು ಹಸುಗಳು ಅಮೆರಿಕಾದ ಜನತೆಯ ನಾಲಗೆಯ ಪಾಲಾಗುತ್ತವೆ. ಪೂಜೆ ಮಾಡುವ ನಮ್ಮ ಪವಿತ್ರ ಭಾರತ ಧರಿತ್ರಿಯಲ್ಲಿ ಹುಟ್ಟುವ ಆಕಳುಗಳನ್ನು, ಅಮೆರಿಕೆಗೆ ಹೋಲಿಸಿ ಹೇಳಿದರೆ ಆ ಅಂಕಿ ಅತ್ಯಲ್ಪ! ಇನ್ನೂ ಆಶ್ಚರ್ಯವೆಂದರೆ ಇದಕ್ಕಾಗಿ ನಮಗೆ ಪಶ್ಚಾತ್ತಾಪವೂ ಆಗುತ್ತಿಲ್ಲ!

ನಮ್ಮ ಆರ್ಥಿಕ ಅವನತಿಗೆ ಕಾರಣಗಳನ್ನು ಹುಡುಕುತ್ತ ಹೋಗುವದೆಂದರೆ ದೇವತೆಗಳ, ಪುರಾಣದಲ್ಲಿ ಹೇಳಿದಂತೆ "ಸಮುದ್ರಮಂಥನ" ಮಾಡಿದಂತೆ ! ಶ್ರಮದಲ್ಲಿ ಸಹಕಾರ ಮಾಡಿದ ಅಸುರರಿಗೂ ಅದರಲ್ಲಿ ಪಾಲು ಬೇಡವೆ? ನಾವು ಈ ವಿಷಯದಲ್ಲಿ ಸಂಶೋಧನೆ, ಯೋಜನೆ ಮಾಡಿಲ್ಲ ಎಂಬುದೇನೂ ಇಲ್ಲ. ಈ ಹಿಂದೆ ಬರೆದಂತೆ ಅವೆಲ್ಲ ಪಟ್ಟಭದ್ರ ಹಿತಾಸಕ್ತಿಗಳ ಅಧೀನವಾಗಿ ಬಿಟ್ಟವೆ. ಅದರ ಫಲದಲ್ಲಿ ಪ್ರಜೆಗಳ ಪಾಲು ನಗಣ್ಯ! ಉದಾರೀಕರಣದಲ್ಲಿ ಜಾಗೃತಿ ಹುಟ್ಟಿಕೊಂಡಾಗಲೇ ಈ ಅಪಾಯ ಕೆಲ ಪ್ರಮಾಣದಲ್ಲಿ ಕಡಿಮೆಯಾಗುವದು. ಈ ಕೆಳಗಿನ ಕೆಲ ಸೂತ್ರಗಳನ್ನು ನಮ್ಮ ಅರ್ಥಶಾಸ್ತ್ರಕ್ಕೆ ಅಳವಡಿಸಿಕೊಳ್ಳಬೇಕು :

೧) ಬಡತನ ರೇಖೆಗಿಂತ ಕೆಳಗಿರುವ ಜನರು ಜಾಗೃತರಾಗಿ ಪಟ್ಟಭದ್ರರ ಬಲೆಯಲ್ಲಿ ಬೀಳದಂಥ ಅರ್ಥಬಲವನ್ನು ಪಡೆದರೆ ಅಂತರ್ದೇಶೀಯ ಅರ್ಥಶಾಸ್ತ್ರಕ್ಕೆ ಒಂದಿಷ್ಟು ಅರ್ಥ ಬರುತ್ತದೆ.

೨) ಪ್ರಾಚೀನ ಕಾಲದಿಂದ ಬೆಂಬತ್ತಿ ಬಂದ ಅಂಧ ಶ್ರದ್ಧೆಯನ್ನು ದೂರೀಕರಿಸಬೇಕು. ಗುಡಿ-ಗುಂಡಾರಗಳಲ್ಲಿ ಅಮೂಲ್ಯ ಆಭರಣ, ಹೇರಳ ಹವಳ, ಮುತ್ತು, ರತ್ನ ಧನಕನಕಾದಿಗಳನ್ನು ಹೂತಿಡಬಾರದು. ಅದು ಕ್ರಯ ಶಕ್ತಿಯಾಗಬೇಕು.

೩) ಆಧುನಿಕ ತಂತ್ರಜ್ಞಾನದಿಂದ ಅಧಿಕ ವಸ್ತುಗಳನ್ನು ತಯಾರಿಸಿ ನಮಗೆ ಅಭಾವವಾಗದ ಪ್ರಮಾಣದಲ್ಲಿ ರಫ್ತುಮಾಡಿ ವಿದೇಶಿ ವಿನಿಮಯದಲ್ಲಿ ವಿಜಯ ಗಳಿಸಬೇಕು.

೪) "ಅಭಾವ ಸ್ವಭಾವ ಕೆಡಿಸಿತಂತೆ!" ಆದ್ದರಿಂದ ಅಭಾವದ ಆಯಾಮದಲ್ಲಿಯೇ ಅಡಿ ಇಡುವ ಅಭ್ಯಾಸವನ್ನು ತೊಡೆದು ಹಾಕಬೇಕು. ಕೃತ್ರಿಮ ಅಭಾವ ಹುಟ್ಟಿಸಿ ಹುಯಿಲೆಬ್ಬಿಸುವ ಹಣವಂತರನ್ನು ಶಾಸನಕರ್ತರ ಮುಂದೆ ಧೈರ್ಯದಿಂದ ಹಿಡಿದು ನಿಲ್ಲಿಸಬೇಕು. ಸರಕಾರವು ಅಂಥ ಸಾವುಕಾರರನ್ನು ಶಿಕ್ಷೆಗೊಳಪಡಿಸಿ ತನ್ನ ಪಾಲಿನ ಪವಿತ್ರ ಕರ್ತವ್ಯವನ್ನು ಪ್ರದರ್ಶಿಸಬೇಕು.

೫) ವಿದೇಶಿ ವಿನಿಮಯದಲ್ಲಿ ಒಳ್ಳೇ ಅನುಭವ, ಜ್ಞಾನ ಗಳಿಸಿದ ಮೇಧಾವಿಗಳನ್ನು ಕಂಡುಹಿಡಿದು ಕರೆದುಕೊಂಡು ಬಂದು ಸಮರ್ಥ ಸೇವೆಗೆ ಅನುಗೊಳ್ಳುವಂತೆ ಅವರಿಗೆ ಸಕಲ ಸನ್ಮಾನ ಕೊಡಬೇಕು. ನಮ್ಮಲ್ಲಿ ವಿಜ್ಞಾನಿಗಳಿಗೇನೂ ಕೊರತೆಯಿಲ್ಲ. ಸಂಪದ್ಭರಿತವಾದ ನಮ್ಮ ದೇಶದಲ್ಲಿ ನಡೆವ ಕಾರ್ಯಗಳಿಗೆ ಯಾವ ತೊಂದರೆಯೂ ಇಲ್ಲ. ಆದರೆ ಅವರ ಚಾಣಾಕ್ಷತೆಯನ್ನು ಕಂಡುಕೊಳ್ಳುವ ಕ್ಷಮತೆಯಿಲ್ಲ. ಪ್ರಾಮಾಣಿಕತೆ ಮೊದಲೇ ಇಲ್ಲ ! ಇಂಥ ಮಂದ, ಮತ್ಸರ ಬುದ್ಧಿ ನಮ್ಮಲ್ಲಿರಬಾರದು.

೬) ನಮ್ಮಲ್ಲಿಯ ಬೃಹತ್ ಉದ್ಯೋಗಕ್ಕಾಗಿ ಪರದೇಶದ ಬಂಡವಾಳಕ್ಕೆ ಬಾಯಿ ಬಿಡಬಾರದು. ದೇಶೀಮೂಲಗಳನ್ನು ಸಂಗ್ರಹಿಸಿ, ಪಕ್ಕಾ ವಸ್ತುಗಳನ್ನಾಗಿ ಪರಿವರ್ತಿಸಿ ಪರದೇಶಕ್ಕೆ ಕಳಿಸಿ ಅರ್ಥಾರ್ಜನೆ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ನಮ್ಮಲ್ಲಿ ಕಚ್ಚಾವಸ್ತುಗಳನ್ನು ಖರೀದಿಸಿ ಪರದೇಶದವರು ತಾವು ಖರೀದಿಸಿದ ಕಚ್ಚಾವಸ್ತುಗಳಲ್ಲಿ ತಮ್ಮ ತಂತ್ರ ಜ್ಞಾನದಿಂದ ಹೊಸ ಜೀವ ತುಂಬಿ ಪುನಃ ನಮಗೇ ಮಾರಿ ದುಪ್ಪಟ್ಟು ಹಣ ಹೇರಿಕೊಂಡು ಹೋಗುತ್ತಾರೆ. ನಾವು ನಿತ್ಯ ಪೂಜೆ ಮಾಡುವ ಲಕ್ಷ್ಮಿ, ಸರಸ್ವತಿ, ಗಣಪತಿ, ಮಾರುತಿ, ಬ್ರಹ್ಮ-ವಿಷ್ಣು-ಮಹೇಶ ಆದಿ ದೇವತೆಗಳು "ಮೂರ್ತಿವಂತ"ರಾಗಿ ಪರದೇಶದಿಂದ ಬರುತ್ತಾರೆ. ನಾವು ಅವರಿಗಾಗಿ ಹೇರಳ ಹಣ ತೆತ್ತು, ಗದ್ದುಗೆಯ ಮೇಲೆ ಕೂಡಿಸಿ, ಊದು, ಧೂಪಾರ್ತಿ, ಕರ್ಪೂರ ಆದಿಗಳಿಂದ ಹೊಗೆ ಹೊರಡಿಸುತ್ತ ನಿತ್ಯ ಜೀವನದ, ಹೊಟ್ಟೆ ಹೊರೆಯುವ ಕಾಯಕವನ್ನು ಬದಿಗಿಟ್ಟು ಅರ್ಚನೆಯಲ್ಲಿ ಆನಂದಭರಿತವಾಗುತ್ತಿರುತ್ತೇವೆ ಎಂಬುದನ್ನು ಮರೆಯಬಾರದು. ದೇವರ ಮುಂದೆ ನಾವು ಬಾರಿಸುವ ಗಂಟೆಯ ಧ್ವನಿ ವಿದೇಶದ್ದು ಎಂಬುದನ್ನು ನೆನಪಿಡಿ !

೭) ನಮ್ಮಲ್ಲಿಂದ ಶಕ್ಯವಿದ್ದಷ್ಟು ಪಕ್ಕಾ ವಸ್ತುಗಳು ರಫ್ತಾಗಬೇಕು. ಪರದೇಶದ ಪಕ್ಕಾ ವಸ್ತುಗಳನ್ನು ಖರೀದಿಸುವಲ್ಲಿ ನಮ್ಮ ಕ್ರಯಶಕ್ತಿಯನ್ನು ಕುಂದಿಸಿಕೊಳ್ಳಬಾರದು. ಅಷ್ಟೇ ಅಲ್ಲ, ನಮ್ಮ ಪಕ್ಕಾ ವಸ್ತುಗಳು ವಿಕ್ರಯದಲ್ಲಿ ಪರಾಕ್ರಮ ತೋರಿಸಬೇಕು. ಆ ರೀತಿಯ ತಂತ್ರ ಜ್ಞಾನ ನಾವು ಅಳವಡಿಸಿಕೊಳ್ಳಬೇಕು. ಖಾದಿ ಬಟ್ಟೆ ಅಥವಾ ಅದರಿಂದ ಸಿದ್ಧವಾದ ಉಡುಪು 'ದೇಶಾಭಿಮಾನ' ಎಂಬ ಮಹಾನ್ ಶಬ್ದದಾಧಾರದಿಂದ ನಮ್ಮ ದೇಶದಲ್ಲಿಯೇ ವಿಕ್ರಯಿಸಿ ಕ್ರಯ ಪಡೆಯುವ ಸುಲಭ ಯೋಜನೆಯನ್ನು ಹಾಕಿಕೊಳ್ಳದೆ ಪರದೇಶದಲ್ಲಿ ಅದು ಪಾವಿತ್ರ್ಯವನ್ನು ಪಡೆದುಕೊಳ್ಳುವಂಥ ಕಾರ್ಯಕ್ಕೆ ಕೈ ಹಾಕಬೇಕು. ಇಲ್ಲದಿದ್ದರೆ ಅದೊಂದು ಬಲವಂತದ ಮಾಘ ಸ್ನಾನವಾಗಲು ಸಾಕು.

೮) ಭಾರತದ ಬಡತನ ಹೋಗಬೇಕಾದರೆ ಹೊರ ದೇಶದಿಂದ ಕಾಲೋಚಿತವಾಗಿ ಹಣ ಹರಿದುಬರಬೇಕು. ಇದು ನಮ್ಮ ದೇಶದ ಆಮದು ಮಾಡುವ ಶಕ್ತಿಯನ್ನು ಅವಲಂಬಿಸಿದೆ. ನಮ್ಮಲ್ಲಿದ್ದ ಸಿದ್ಧ ಸಂಪನ್ಮೂಲಗಳು ಸಹ ಇಂದಿನ ಕಾಲದಲ್ಲಿಯೂ ವಿದೇಶಗಳಲ್ಲಿ ಹೊಂದಬೇಕಾದಷ್ಟು ಹೊಳಪನ್ನು ಹೊಂದಿಲ್ಲ. Honesty is the best policy ಎಂಬುದು ಜಗತ್ತಿನಲ್ಲೆಲ್ಲ ಹಬ್ಬಿರುವ, ಕೇವಲ ವ್ಯಾಪಾರಕ್ಕಾಗಿಯೇ ಹುಟ್ಟಿಕೊಂಡ 'ವಿದೇಶವಾಣಿ'ಯಾಗಿದೆ.

"ಹಿಂದೂಸ್ತಾನ(ಇಂಡಿಯನ್)ದ ಸರಕು" ಅಂದರೆ ಪರದೇಶದವರು ಮೂಗು ಮುರಿಯುತ್ತಾರೆ. ನಮ್ಮಲ್ಲಿಂದ ರಫ್ತಾಗುವ ಸಾವಿರ ಮೀಟರ್ ಬಟ್ಟೆಯಲ್ಲಿ ಅರ್ಧ ಮೀಟರಾದರೂ ಕಡಿಮೆಯಾದದ್ದು ಅವರಿಗೆ ಕಂಡುಬರುತ್ತದೆ. ಜಪಾನದವರು ಪರದೇಶಕ್ಕೆ ಕಳಿಸುವ ಬಟ್ಟೆಯಲ್ಲಿ ಒಂದು ಸಾವಿರ ಮೀಟರಿನಲ್ಲಿ ಒಂದು ಮೀಟರಾದರೂ ಹೆಚ್ಚಾಗಿದ್ದು ಅದು ಆ ದೇಶದ ವ್ಯವಹಾರವನ್ನು ಹೆಚ್ಚಿಸುವುದಕ್ಕೆ ಕಾರಣವಾಗುತ್ತದೆ. ಅದರಂತೆ ವಸ್ತುವಿನ ಗುಣಧರ್ಮದಲ್ಲಿಯೂ ನಾವು ಸತ್ಯವಂತರಾಗಿಲ್ಲ ಎಂದು ವಿಷಾದದಿಂದ

ಹೇಳಬೇಕಾದದ್ದು ಇಂದಿನ ಪರಿಸ್ಥಿತಿಯಲ್ಲಿ ಅನಿವಾರ್ಯ! "ಆನೆಯ ಹಲ್ಲು ತೋರಿಕೆಗೆ ಒಂದು, ತಿನ್ನುವುದಕ್ಕೆ ಇನ್ನೊಂದು" ಎಂಬಂತೆ ಕಪಟ ಆಚರಣೆ ಬಿಟ್ಟು ಪವಿತ್ರ ವಿಚಾರಕ್ಕೆ ಒಲಿದು ನೀತಿವಂತರಾಗಬೇಕು. ನಮ್ಮ ಪ್ರಾಮಾಣಿಕ ಪಾಶದಲ್ಲಿ ಪರಕೀಯರು ಸಹ ಸಮಾಧಾನದ ಅನುಭವ ಪಡೆಯುವಂತಾಗಬೇಕು.

> ೯) ಅನುತ್ಪಾದಕ ಉದ್ಯೋಗಗಳ ಒಂದು ಮುಖ್ಯ ಭಾಗವೆಂದರೆ, ನನ್ನ ದೃಷ್ಟಿಯಲ್ಲಿ ಜೂಜು, ರೇಸ್, ಲಾಟ್ರಿ, ಪಣ ಕಟ್ಟುವುದು, ಶರ್ತ ಹಾಕುವುದು– ಇತ್ಯಾದಿ. ಇಸ್ಪೇಟಿನ ಆಟದಲ್ಲಿ ನಾಲ್ಕು ಜನ ತೊಡಗಿರುತ್ತಾರೆ. ಅವರಲ್ಲಿದ್ದ ನಾಲ್ಕು ಮಂದಿಯ ಒಟ್ಟು ಹಣ ಸಾವಿರ ರೂ. ಎಂದು ತಿಳಿಯಿತು. ಕೆಲವರು ಗೆಲ್ಲುತ್ತಾರೆ, ಕೆಲವರು ಸೋಲುತ್ತಾರೆ. ಕೊನೆಗೆ ಎಲ್ಲರ ಒಟ್ಟು ಹಣ ಎಣಿಸಿದರೆ ಸಾವಿರ ರೂ.ಕ್ಕಿಂತ ಹೆಚ್ಚಾಗಲಾರದು. ಇವರ ದುಡಿತಕ್ಕೆ ಸಿಕ್ಕುವ ಫಲವೆಂದರೆ ನಾಲ್ಕು ತಾಸಿನ ಅಪವ್ಯಯ ! ದೇಶಕ್ಕೆ, ದೇಶದ ಸ್ವಾತಂತ್ರ್ಯಕ್ಕೆ ದೊಡ್ಡ ಅಪಾಯ !

ಸಮಾಧಾನದ ಸಂಗತಿಯೆಂದರೆ, ಇತ್ತಿತ್ತಲಾಗಿ ನಮ್ಮ ಕರಕುಶಲ ವಸ್ತುಗಳಿಗೆ ವಿದೇಶಗಳಿಂದ ಬೇಡಿಕೆ ಬರುತ್ತಲಿದೆ. ಭಾರತದ ಪ್ರತಿಯೊಂದು ವಸ್ತು ವಿಶ್ವದ ಮೂಲೆಯಲ್ಲಿ ತನ್ನ ಮೌಲ್ಯವನ್ನು ಹೆಚ್ಚಿಸಿಕೊಳ್ಳುತ್ತಿರುವುದು ಶುಭ ಲಕ್ಷಣ ! ಇದೇ ಕ್ಷಣವನ್ನು ನಾವು ನಮ್ಮ ವಸ್ತುವಿಗಾಗಿ ಪರದೇಶಗಳಲ್ಲಿ ಭದ್ರವಾದ ಮಾರುಕಟ್ಟೆಯನ್ನು ಮಾಡಿಕೊಳ್ಳುವಲ್ಲಿ ಉಪಯೋಗಿಸಿಕೊಳ್ಳಬೇಕು; ತಕ್ಕ ಪ್ರತಿಫಲ ಪಡೆದು ಆರ್ಥಿಕ ನೆಲೆಗಟ್ಟನ್ನು ಗಟ್ಟಿಯಾಗಿ ಮಾಡಿಕೊಳ್ಳಬೇಕು. ಅನ್ಯಥಾ ಕರ (Tax) ಭಾರದಿಂದ ನಾವು ಕಂಗಾಲಾಗಿ ತಾಳ್ಮೆಯನ್ನು ಕಳೆದುಕೊಂಡು ಯಾದವಿ ಯುದ್ಧಕ್ಕೆ ಭಾರತವನ್ನು ಗುರಿ ಮಾಡುವ ಅಪ್ರಿಯ ಸಮಯವನ್ನು ಸ್ವಾಗತಿಸುತ್ತೇವೆ !

❋ ❋ ❋

# "ಭಾರತೀಯ ಸ್ವಾತಂತ್ರ್ಯ ಮತ್ತು ಕೋಮುವಾದ"

• ಲಿಂಗರಾಜು

"ತೊಲಗು ತೊಲಗು ತೊಲಗಾಚೆ ತೊಲಗು
ಬಿಳಿ ತೊಗಲ ಸುಲಿಗೆಗಾರ
ನಾನಲ್ಲ ತೊತ್ತು ನಿನಗಲ್ಲ ತುತ್ತು
....... ....... ....... ....... ......."

ಬ್ರಿಟಿಷ್ ವಸಾಹತುಷಾಹಿಯ ಕ್ರೂರ ದಬ್ಬಾಳಿಕೆಯ ವಿರುದ್ಧ ಯಾವ ಫಲಾಪೇಕ್ಷೆ ಇಲ್ಲದೆ ಅಪ್ರತಿಮ ಶೂರತನದ ಧೀರೋದಾತ್ತ ಹೋರಾಟಗಳನ್ನು ನಡೆಸಿ ಅಮಾನುಷ ದಬ್ಬಾಳಿಕೆಗಳನ್ನೆದುರಿಸಿ, ಗೋಲಿಬಾರಿಗೆ ಎದೆಕೊಟ್ಟು ನಿಂತು ಆತ್ಮಾನಂದದಿಂದ ಗಲ್ಲಿಗೇರಿ ಪ್ರಾಣತೆತ್ತ ನಿಷ್ಠ, ನಿರ್ಮಲ ಹೃದಯದ ಸ್ವಾತಂತ್ರ್ಯಯೋಧರು ಸಾವಿರಾರು, ಲಕ್ಷಾಂತರ! ಈ ಹೋರಾಟದಲ್ಲಿ ಲಕ್ಷಾಂತರ ಜನ, ಜಾತಿ, ಭಾಷೆ, ಮತ, ಧರ್ಮ ಭೇದ ಮರೆತು ಪರಂಗಿಯ ದುಷ್ಟ ಆಕ್ರಮಣಕ್ಕಿದಿರಾಗಿ ಹೋರಾಡಿ ಮಡಿದರು. ಆತ್ಮತೃಪ್ತಿಯ ಈ ಹೋರಾಟದಲ್ಲಿ ಇದ್ದುದು ಒಂದೇ-ಗುಲಾಮಗಿರಿಯ ಬಂಧನದಿಂದ ಬಿಡುಗಡೆಗೊಳ್ಳುವುದು.

ಹಿಂದು, ಮುಸ್ಲಿಂ, ಕ್ರೈಸ್ತ, ಜೈನ ಎಂಬ ಯಾವುದೇ ಭೇದಭಾವವಿಲ್ಲದೆ ಹೋರಾಟಗಳು ಸಾಗಿದವು. ರೈತಕಾರ್ಮಿಕರು, ಕೃಷಿ ಕೂಲಿಕಾರರು, ನೌಕರರು, ಸಿಪಾಯಿಗಳು, ವ್ಯಾಪಾರಿಗಳು, ಮಹಿಳೆಯರು, ಬುಡಕಟ್ಟು ಜನಾಂಗದವರು, ಶಿಕ್ಷಕರು, ಅಧಿಕಾರಿಗಳು, ವಿದ್ಯಾರ್ಥಿ-ಯುವ ಜನರು, ಬುದ್ಧಿಜೀವಿಗಳು ಹಾಗೂ ಅಸಂಖ್ಯಾತ ಜನವರ್ಗ "ಹೋರಾಟದ ಸಾಗರಕೆ ಸಾವಿರಾರು ನದಿಗಳು" ಎಂಬಂತೆ ಈ ಹೋರಾಟದಲ್ಲಿ ಸೇರಿತು. ಹೋರಾಟದಲ್ಲಿ ಈ ತ್ಯಾಗಮಯಿಗಳ ಎದೆಗೂಡಿನಲ್ಲಿ ಅವಿತಿದ್ದ ಕನಸುಗಳು ನೂರಾರು ....

ಸ್ವಾತಂತ್ರ್ಯ ಸಮರದ ಸಾಮಾನ್ಯ ಸೈನಿಕರಿಗಂತೂ ಸ್ವಾತಂತ್ರ್ಯ ಎಂದರೆ ಎರಡು ಹೊತ್ತು ಕೂಳು, ತಲೆಯ ಮೇಲೊಂದು ಸೂರು, ದೇಹ ಮುಚ್ಚಲು ಸಾಕಷ್ಟು ಬಟ್ಟೆ, ತಮ್ಮನ್ನು ತಮ್ಮ ಕುಟುಂಬವನ್ನು ಪೋಷಿಸಬಲ್ಲ ನೌಕರಿ, ಹೂವಾಗಿ ಅರಳಿ ಕಂಪು ಬೀರುವಂತಹ ಒಂದು ಸಾರ್ಥಕ ಸಾಂಸ್ಕೃತಿಕ ಬದುಕು.

೧೯೪೭, ಆಗಸ್ಟ್ ೧೫ ರಂದು ಸ್ವಾತಂತ್ರ್ಯ ಲಭಿಸಿತು. ಆದರೆ ಅಂದೇ 'ಈ' ತ್ಯಾಗಮಯಿಗಳ ಕನಸುಗಳು ಕ್ರೂರ ಅತ್ಯಾಚಾರಕ್ಕೊಳಪಟ್ಟವು. ಮೂಲಭೂತವಾದಿಗಳ ಕುತಂತ್ರದಿಂದ ಹಿಂದೂ-ಮುಸ್ಲಿಮರ (ಭಾರತ-ಪಾಕಿಸ್ತಾನ) ವಿಭಜನೆಯಾಯಿತು. ಅಣ್ಣತಮ್ಮಂದಿರಂತೆ ಹೋರಾಡಿದರೂ ಶತ್ರುಗಳಾಗಬೇಕಾಯಿತು. ಬ್ರಿಟಿಷರ 'ಒಡೆದು

ಆಳುವ ನೀತಿ'ಯಿಂದ ಉದ್ಭವಿಸಿದ ಈ ಕೋಮು ಗಲಭೆ ಮೂಲಭೂತವಾದಿಗಳಿಗೆ ಬಲಿಯನ್ ಆಸ್ತಿಯಾಯಿತು. ಇದು ಇಂದಿಗೂ ತನ್ನ ವ್ಯಾಪ್ತಿಯನ್ನು ಮೀರಿ ಬೆಳೆಯುತ್ತಿದೆ.

೮೦ರ ದಶಕದಿಂದೀಚೆಗೆ ನಮ್ಮ ದೇಶದ ಪರಿಸ್ಥಿತಿಯಂತೂ ತುಂಬ ಗಂಭೀರವಾಗಿದೆ. ಈ ಗಂಭೀರತೆಯ ತೀವ್ರತೆಯು ರಾಷ್ಟ್ರದ ಬಗ್ಗೆ ಕಾಳಜಿಯಿರುವ ಪ್ರತಿಯೊಬ್ಬರಲ್ಲೂ 'ಈ ದೇಶ ಒಂದು ದೇಶವಾಗಿ ಉಳಿಯುವುದೇ' ಎಂಬ ಆತಂಕವನ್ನುಂಟು ಮಾಡಿದೆ.

ಇಂದು ಸಂಕೀರ್ಣವಾದಂತಹ ಈ ಆಧುನಿಕ ಸಮಾಜದಲ್ಲಿಯೂ ಕೂಡ ಪ್ರತಿಯೊಬ್ಬ ವ್ಯಕ್ತಿಯೂ ಕೂಡ ಒಂದಲ್ಲ ಒಂದು ಧರ್ಮಕ್ಕೆ ಅಡಿಯಾಳಾಗಿದ್ದಾನೆ. ಈ ಧರ್ಮದ ಮೇಲೆ ಅತಿಯಾದ ನಂಬಿಕೆ, ಶ್ರದ್ಧೆಯಿಂದಾಗಿ ತನ್ನ ಧರ್ಮದಲ್ಲಿರುವುದೆಲ್ಲ ಸರಿ ಎಂದೂ, ಜೊತೆಗೆ ತಾನು ನಂಬಿರುವ ಎಲ್ಲವನ್ನೂ ಸತ್ಯವೆಂದೇ ಆತ ಭಾವಿಸಿರುತ್ತಾನೆ. ಒಂದು ವೇಳೆ ತನ್ನ ಧರ್ಮಕ್ಕೇನಾದರೂ ಕಳಂಕ ಒದಗಿ ಬಂದಲ್ಲಿ ತನ್ನ ವಿವೇಚನಾ ಶಕ್ತಿಯನ್ನು ಕಳೆದುಕೊಂಡು 'ಎಲ್ಲಕ್ಕೂ' ಸಿದ್ಧನಾಗಿರುತ್ತಾನೆ. ಹೀಗಾಗಿ ಕೋಮುವಾದಿಗಳು ತಮ್ಮ ಕೆಲಸವನ್ನು ಸುಲಭ ಮಾಡಿಕೊಂಡಿದ್ದಾರೆ. ಉದಾ: ೧೯೯೨ರ ಡಿಸೆಂಬರ್ ೬ ರಂದು ನಡೆದ ಅಯೋಧ್ಯೆ ಗಲಭೆ. ಇಂಥ ಕೆಲಸಗಳಲ್ಲಿ ಆರ್. ಎಸ್. ಎಸ್., ಭಜರಂಗದಳ, ವಿ. ಹೆಚ್. ಪಿ. ಒಟ್ಟಾರೆ ಸಂಘ ಪರಿವಾರ ಹಾಗೂ ಮುಸ್ಲಿಂ ಲೀಗ್ ಮುಂತಾದ ವಿಭಜನಕಾರಿ ಸಂಘಟನೆಗಳು ತಮ್ಮ ಮೇಲುಗೈ ಸಾಧಿಸಲು ಹೊರಟಿವೆ.

ಇಂದು ಸುವರ್ಣ ಸ್ವಾತಂತ್ರ್ಯೋತ್ಸವದಂದು ಭಾರತದ ಅಸಂಖ್ಯಾತ ಜನ ಸಮುದಾಯ ಯೋಚಿಸಬೇಕಿದೆ– ನಮ್ಮ ಹಿರಿಯರ ಹೊಂಗನಸು ಘೋರ ದುಃಸ್ವಪ್ನವಾಗುತ್ತಿದೆಯೇಕೆ? ಜೇಬುಗಳ್ಳರು, ಪುಂಡರು, ದರೋಡೆಕೋರರು, ಜೂಜುಕೋರರು, ಇಸ್ತ್ರಿಮಾಡಿದ ಕುಬ್ಜ ಖಾದಿಯ, ಸೂಟುಬೂಟಿನ ಕ್ರಿಮಿನಲ್‌ಗಳು, ಹಗರಣಕೋರರು ಮಾತ್ರ ಸಂತೋಷದಿಂದಿರಬಹುದಾದ ಸ್ಥಿತಿ ಏಕೆ?

ಯೋಚಿಸೋಣ, ಇನ್ನಷ್ಟು ಯೋಚಿಸೋಣ! ಈ ಯೋಚನೆಗಳೇ ಪ್ರತಿಭಟನೆಯ ಕೂಗಾಗಲಿ, ಕ್ರಾಂತಿಯ ಅಡಿಪಾಯವಾಗಲಿ! ಈ ಯೋಚನೆಯ ಸಂದರ್ಭದಲ್ಲಿ ಕವಿ ಸಾಹಿರ್ ಲುಧಿಯಾನ್ವಿಯವರ ನೆನಪು ನನಗಾಗುತ್ತಿದೆ :

**"ಹೆಜ್ಜೆ ಹೆಜ್ಜೆಗೂ ರಕ್ತ ಕಾಣಿಕೆಯ ಅರ್ಪಿಸುತ್ತಿದ್ದ,**
**ಆದರೂ ಕತ್ತಲೆಯೊಡನೆ ಹೋರಾಡುವ ಹಣತೆಗಳಿವೆ."**

❋ ❋ ❋

# ಆಗಬೇಕಿದೆ ಭಾರತಕ್ಕೆ ಕಾಯಕಲ್ಪ!

• ಬಸವರಾಜ ಲಕ್ಕೇಶ್ವರ

ಜಗತ್ತಿನಲ್ಲೇ ತನ್ನ ಶ್ರೇಷ್ಠ ಸಂಸ್ಕೃತಿ, ಪರಂಪರೆ, ಸಂಪ್ರದಾಯ, ಸಾಂಸ್ಕೃತಿಕ ಚಟುವಟಿಕೆಗಳಿಂದ ಭಾರತ ಗುರುವಿನ ಸ್ಥಾನ ಹೊಂದಿದೆ.

ಮಹಾತ್ಮಾ ಗಾಂಧೀಜಿಯವರ ಅಹಿಂಸೆ, ಸುಭಾಷ್‌ಚಂದ್ರ ಬೋಸರ ಸಂಘಟನೆ, ಸರದಾರ ಪಟೇಲರ ಉಕ್ಕಿನ ದೃಢತೆ, ಭಗತ್‌ಸಿಂಗ್‌ನಂತಹ ಯುವಕರ ಆತ್ಮಾರ್ಪಣೆ, ವಿವೇಕಾನಂದರ ಆಧ್ಯಾತ್ಮಿಕತೆ, ಹೆಣ್ಣಿಗೆ ಮಾತೃಸ್ಥಾನ-ಪೂಜ್ಯ ಭಾವನೆ, ಡಾ. ಅಂಬೇಡ್ಕರ್ ಹಾಗೂ ಎಂ. ವಿಶ್ವೇಶ್ವರಯ್ಯರವರಂಥ ಪ್ರತಿಭಾವಂತರು, ವಿಶ್ವಕ್ಕೆ ಮಾರ್ಗದರ್ಶಕವೆನಿಸುವಂಥ ಹಿಂದೂ ಧರ್ಮಗ್ರಂಥ ರಾಮಾಯಣ, ಮಹಾಭಾರತದಂಥ ಕೃತಿಗಳ ನೆಲೆ ಈ ಭಾರತ.

ಏಳು ಬಣ್ಣಗಳು ಸೇರಿ ಕಾಮನ ಬಿಲ್ಲು, ಏಳು ಸ್ವರಗಳು ಸೇರಿ ಸುಮಧುರ ಸಂಗೀತವಾಗುವಂತೆ ಹಲವು ಧರ್ಮ, ಜಾತಿ-ಮತಗಳು, ಅಮೂಲ್ಯ ನಿಸರ್ಗ ಸಂಪತ್ತು, ನಿರಾಶ್ರಿತರಿಗೆ ಆಶ್ರಯ ನೀಡುವ ವಿಶಾಲ ಮನೋಭಾವ, ಪಾಶ್ಚಾತ್ಯ ಸಂಸ್ಕೃತಿಯ ದಾಳಿಯ ನಡುವೆಯೂ ತನ್ನತನ ಉಳಿಸಿಕೊಂಡ ಜಾತ್ಯತೀತ ರಾಷ್ಟ್ರ ಹಿಂದುಸ್ತಾನ.

ಇಂಥ ಪುಣ್ಯಭೂಮಿ ಈಗ ತನ್ನ ಸ್ವಾತಂತ್ರ್ಯ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿದೆ. ಈ ನಿಟ್ಟಿನಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಗಾಂಧೀಜಿಯವರು ಕಂಡ ರಾಮರಾಜ್ಯದ ಕನಸು ಎಷ್ಟರ ಮಟ್ಟಿಗೆ ನನಸಾಗಿದೆ ಎಂಬ ಸಾರ್ವತ್ರಿಕ ವಿಚಾರ ವಿನಿಮಯ, ವಿಶ್ಲೇಷಣೆ, ಅಭಿಪ್ರಾಯ ಸಂಗ್ರಹ ಅತ್ಯಗತ್ಯ, ಅನಿವಾರ್ಯವೂ ಕೂಡ.

"ಬೇರೆ ಬೇರೆ ದೇಶಗಳ ಸಂಸ್ಕೃತಿಯನ್ನು ಪ್ರೀತಿಸಬೇಕು. ಆದರೆ ನಮ್ಮ ಸಂಸ್ಕೃತಿಯಲ್ಲಿ ನಾವು ಜೀವನ ನಡೆಸಬೇಕು" ಎಂದರು ಗಾಂಧೀಜಿಯವರು. ಆದರೆ ನಾವೇನು ಮಾಡುತ್ತಿದ್ದೇವೆ? ನಮ್ಮ ಹಿರಿಯರ ಉದಾತ್ತ ಮಾನವೀಯ, ಮೌಲ್ಯವುಳ್ಳ ಆದರ್ಶಮಯ ಜೀವನವನ್ನು ಬದಿಗೊತ್ತಿ, ಅನಾಗರಿಕರಂತೆ ವರ್ತಿಸುತ್ತಿದ್ದೇವೆ. ವ್ಯಕ್ತಿತ್ವ ವಿಕಾಸದ ಹೆಸರಿನಲ್ಲಿ ವ್ಯಕ್ತಿತ್ವ ವಿಕಾರ !

ನಮ್ಮ ಪೂರ್ವಜರ ಕಾಲದಲ್ಲಿ ಸುಸಂಸ್ಕೃತರಾಗಿ ಬದುಕಲು ಮೌಲಿಕ ಧ್ಯೇಯ ಉದ್ದೇಶ, ಗುರಿಗಳಿದ್ದವು. ಆದರೆ ಇಂದು ಅವೇನೂ ಇದ್ದಂತಿಲ್ಲ. ಎಲ್ಲವೂ ತುರ್ತು.

ಸಾಂಪ್ರದಾಯಿಕ, ಸರಳ, ಸಜ್ಜನಿಕೆಯ ಸಾತ್ವಿಕ ಬದುಕನ್ನು ಅನುಸರಿಸದೆ, "ಫ್ಯಾಶನ್" ಎಂಬ ಹೆಸರಿನಲ್ಲಿ ಪ್ರತಿಯೊಂದರಲ್ಲೂ ಫಾರಿನ್ ಸಂಸ್ಕೃತಿ ಅನುಸರಿಸುತ್ತಿದ್ದೇವೆ. ಪಾಶ್ಚಾತ್ಯರು

ನಮ್ಮ ದೇಶದ ಸಂಸ್ಕೃತಿ, ಪರಂಪರೆಯನ್ನು ಗೌರವದಿಂದ ಕಂಡು, ಅವುಗಳಲ್ಲಿ ಆಸಕ್ತಿ ತೋರುತ್ತಿದ್ದರೆ, ನಾವು ಅವರ ಸಂಸ್ಕೃತಿಗೆ ಮಾರುಹೋಗಿ, ಪರೋಕ್ಷವಾಗಿ ಭಾರತೀಯ ಸಂಸ್ಕೃತಿಯನ್ನು ಕಂಪ್ಯೂಟರೀಕರಣಗೊಳಿಸುತ್ತಿದ್ದೇವೆ. ಇದಕ್ಕೆ ಅಪವಾದವಾಗುವವರ ಸಂಖ್ಯೆ ವಿರಳ.

ಇನ್ನು ನಮ್ಮನ್ನು ಆಳುವ ನಾಯಕರೋ, ನೆನೆಸಿದರೆ ರೇಜಿಗೆ ಎನಿಸುತ್ತದೆ.

ದಿನ ಬೆಳಗಾದರೆ ಪತ್ರಿಕೆಗಳಲ್ಲಿ ರಾಜಕಾರಣಿಗಳ ಹಗರಣ, ಭ್ರಷ್ಟಾಚಾರ, ಭಿನ್ನಮತ, ಒಳಜಗಳಗಳಿಗೆ ಸಂಬಂಧಿಸಿದ ಸುದ್ದಿಗಳೇ. ಲಂಚಾಸುರನ ಹಾವಳಿಯಿಂದ ಬೇಸತ್ತ ಪ್ರಜ್ಞಾವಂತರು "ಸ್ವಾತಂತ್ರ್ಯಪೂರ್ವ ಯುಗವೇ ಚೆನ್ನಾಗಿತ್ತು" ಎಂದು ನಿಡುಸುಯ್ಯುತ್ತಿರುವುದೂ ಸುಳ್ಳಲ್ಲ.

ತಮ್ಮ ಅಧಿಕಾರಾವಧಿಯಲ್ಲಿ ಸಿಕ್ಕಷ್ಟನ್ನು ಬಾಚಿಕೊಂಡು ಹೊಸ ಯೋಜನೆಗಳಿಗೆ ಹಣಕ್ಕಾಗಿ ಹೊರಗಿನವರಲ್ಲಿ ಕೈಚಾಚಿ ಅದರಲ್ಲೂ ತಿನ್ನುವಷ್ಟು ತಿಂದು, ಭಾರತದ ಭವಿಷ್ಯದಲ್ಲಿ ಹುಟ್ಟುವ ಮಗುವಿಗೂ "ತಲೆಗೊಂದಿಷ್ಟು ಸಾಲದ ಹೊರೆ" ಹೊರೆಸುವ ನಾಯಕಶಿಖಾಮಣಿಗಳನ್ನು ಕಂಡು ಸ್ವಾತಂತ್ರ್ಯ ದೊರಕಿಸಿಕೊಟ್ಟ ಮಹಾತ್ಮರು ಸ್ವರ್ಗದಲ್ಲೂ ಕಸಿವಿಸಿಗೊಳ್ಳುತ್ತಿರಬಹುದು!

ಸ್ವಾತಂತ್ರ್ಯಾನಂತರದ ಬೆಳವಣಿಗೆಗಳನ್ನು ಗಮನಿಸಿದರೆ ದೇಶ ಕೈಗಾರಿಕೆಯ ದೃಷ್ಟಿಯಿಂದ ಅಭಿವೃದ್ಧಿ ಸಾಧಿಸಿದೆ ಎನಿಸಿದರೂ, ಆ ಬೆಳವಣಿಗೆ ಗುಡಿ ಕೈಗಾರಿಕೆಗಳಿಗೆ ಕಂಟಕವಾಗಿ ಪರಿಣಮಿಸಿತು. ಇನ್ನು ಆಹಾರೋತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿದ್ದೇವೆಂದು ಹೇಳುತ್ತಿದ್ದರೂ, ದೇಶದ ರೈತನ ಬವಣೆ ತಪ್ಪಿಲ್ಲ. ತಪ್ಪುವ ಸೂಚನೆಗಳೂ ಕಂಡುಬರುತ್ತಿಲ್ಲ.

ಶೈಕ್ಷಣಿಕ, ಔದ್ಯೋಗಿಕ, ವ್ಯಾಪಾರಿ ಕ್ಷೇತ್ರಗಳಲ್ಲಿ ಅನ್ಯಾಯ ಅಕ್ರಮಗಳ ಹಾವಳಿ ಹೆಚ್ಚಾಗಿದೆ ಎನ್ನುವ ಸೊಲ್ಲು ಕೇಳಿಬರುತ್ತಿದ್ದರೂ, ಪರಿಹಾರದ ನಿಟ್ಟಿನಲ್ಲಿ ಯೋಚಿಸುವವರು ಕಮ್ಮಿ. ಲಾಭಬಡುಕ ವ್ಯಾಪಾರಿಗಳು, ನಿಷ್ಕ್ರಿಯ ಬುದ್ಧಿಜೀವಿಗಳು, ಭ್ರಷ್ಟ-ಅದಕ್ಷ ರಾಜಕಾರಣಿಗಳು, ನಿರ್ವೀರ್ಯವಾಗುತ್ತಿರುವ ಯುವ ಪೀಳಿಗೆ..... ಇವೆಲ್ಲ 'ರಾಮರಾಜ್ಯ'ದ ದಾರಿಯಲ್ಲಿನ ಬೃಹತ್ ಅಡ್ಡಗೋಡೆಗಳಾಗುತ್ತಿವೆ.....

ಅಂತರಿಕ್ಷ ವಿಜ್ಞಾನ, ಅಣುತಂತ್ರಜ್ಞಾನ ಮುಂತಾದವುಗಳಲ್ಲಿ ನಮ್ಮ ಸಾಧನೆ ತೃಪ್ತಿಕರವೆನ್ನುವ ಹೆಮ್ಮೆಯೊಂದಿಗೇ ನಮಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ದೊರಕಿಸಿಕೊಳ್ಳುವಲ್ಲಿನ ಅಸಮಾನತೆ, ದೌರ್ಬಲ್ಯಗಳನ್ನು ಕುರಿತ ಕೊರಗು ಇನ್ನೂ ಹಾಗೇ ಇದೆ. ಆಹಾರದಲ್ಲಿ ಸ್ವಾವಲಂಬನೆ ಸಾಧಿಸಿದ್ದರೂ ಹೆಚ್ಚುತ್ತಿರುವ ಜನಸಂಖ್ಯೆ ಆ ಸಾಧನೆಯನ್ನು ಹಿಂದಿಕ್ಕಿದೆ. ಜೊತೆಗೆ ಅವಕಾಶಗಳ ಕೊರತೆ ಪ್ರತಿಭಾ ಪಲಾಯನಕ್ಕೂ ಕಾರಣವಾಗಿದೆ.

ಪ್ರಕೃತಿ ಪರಿಸರಗಳನ್ನಂತೂ ನಾವು ವಿವೇಚನಾರಹಿತವಾಗಿ ಹಾಳುಗೆಡವುತ್ತಿದ್ದೇವೆ.

ಸರಕಾರಿ ಒಡೆತನದಲ್ಲಿರುವ ಪ್ರಸಾರ ಮಾಧ್ಯಮಗಳು ತೆರೆದಿಡುವ ಭಾರತದ ಹಾಗೂ ಭಾರತೀಯನ ಚಿತ್ರಣ ಎಷ್ಟು ಸಮಂಜಸ ಎನ್ನುವ ಪ್ರಶ್ನೆ ಪ್ರಜ್ಞಾವಂತ ಭಾರತೀಯನ ಮನಸ್ಸಿನಲ್ಲಿ ಉಂಟಾಗಿಯೇ ಆಗುತ್ತದೆ. "ವೈವಿಧ್ಯತೆಯಲ್ಲಿ ಏಕತೆ", "ಜಾತ್ಯತೀತ ರಾಷ್ಟ್ರ" ಮುಂತಾದ ಘೋಷಣಾವಾಕ್ಯಗಳು ಕೇವಲ ಘೋಷಣೆಗಳಾಗಿಯೇ ಉಳಿದಿವೆ. ವಸ್ತುಸ್ಥಿತಿಯೇ ಬೇರೆ ಎನ್ನುವುದನ್ನು ಅಷ್ಟು ಸುಲಭವಾಗಿ ನಿರಾಶಾವಾದವೆಂದು ತಳ್ಳಿ ಹಾಕುವಂತಿಲ್ಲ.

ಈಗಾಗಲೇ ಹೇಳಿರುವಂತೆ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಅಸ್ಥಿರ ರಾಜಕೀಯ, ಲಂಚಗುಳಿತನ ಮುಂತಾದ ನೂರೆಂಟು ಸಮಸ್ಯೆಗಳ ಸುಳಿಯಲ್ಲಿ ಸಿಲುಕಿರುವ ಭಾರತವನ್ನು ಪಾರು ಮಾಡಬೇಕಿರುವುದು ಭಾರತದ ಪ್ರಜೆಯೇ. ಅವನ ಮನೋಭಾವ "ನಾನು, ನನ್ನದು" ಎನ್ನುವ ವ್ಯಷ್ಟಿಯಿಂದ "ನಾವು, ನಮ್ಮದು" ಎನ್ನುವ ಸಮಷ್ಟಿಗೆ ಬದಲಾಗಬೇಕು. ಹಾಗಾದಾಗ ಇವತ್ತು ಕ್ಲೀಷೆಗಳೆನಿಸಿಕೊಳ್ಳುತ್ತಿರುವ ಸಮಸ್ತ (ಸರಕಾರಿ) ಘೋಷಣೆಗಳು ಅರ್ಥವಂತಿಕೆಯನ್ನು ಪಡೆದುಕೊಳ್ಳುತ್ತವೆ.

ಭಾರತಕ್ಕೆ ಸ್ವಾತಂತ್ರ್ಯ ಕೊಡುವಾಗ, ಬ್ರಿಟಿಷ್ ಮುತ್ಸದ್ದಿಯೊಬ್ಬ "ಭಾರತದ ಜನತೆಗೆ ಸ್ವಾತಂತ್ರ್ಯವನ್ನು ಅನುಭವಿಸಲು ಅರ್ಹತೆಯಿಲ್ಲ; ಅವರಿನ್ನೂ ಅಷ್ಟು ಪ್ರೌಢರಾಗಿಲ್ಲ" ಎನ್ನುವ ಅನುಮಾನವನ್ನು ವ್ಯಕ್ತಪಡಿಸಿದ್ದನಂತೆ! ಸಿನಿಕ ಮನಸ್ಸುಗಳಿಗೆ ಮೇಲಿನ ಮಾತು ಸತ್ಯವೆನಿಸಬಹುದಾದರೂ – ಇವತ್ತಿನ ಪರಿಸ್ಥಿತಿ ಹಾಗೇ ಇದೆ ಎನಿಸಬಹುದಾದರೂ – ತೀರ ಅಷ್ಟು ನಿರಾಶಾವಾದವನ್ನವಲಂಬಿಸುವ ಅಗತ್ಯವಿಲ್ಲವೆನಿಸುತ್ತದೆ.

ನಮ್ಮ ಹಿರಿಯರು ಹಾಕಿಕೊಟ್ಟ ಆದರ್ಶ, ಮಾರ್ಗಗಳನ್ನನುಸರಿಸುವುದರೊಂದಿಗೆ, "ಇದು ನನ್ನ ದೇಶ; ಈ ದೇಶವಿದ್ದರೆ ನಾನಿರುತ್ತೇನೆ. ದೇಶದ ಅಸ್ತಿತ್ವದಲ್ಲೇ ನನ್ನ ಅಸ್ತಿತ್ವವಡಗಿದೆ" ಎನ್ನುವುದನ್ನು ಪ್ರತಿಯೊಬ್ಬ ಭಾರತೀಯ ಅರಿತುಕೊಂಡರೆ, ರೋಗಗ್ರಸ್ಥವಾಗುತ್ತಿರುವ ಭಾರತಕ್ಕೆ ಕಾಯಕಲ್ಪ ಚಿಕಿತ್ಸೆ ಲಭಿಸುತ್ತದೆ. ಆ ರೀತಿ ಆಗಿಯೇ ಆಗುತ್ತದೆ ಎನ್ನುವ ಆಶಾವಾದದೊಂದಿಗೆ ಮುಂದುವರಿಯೋಣ!

❋ ❋ ❋

# ಸ್ವಾತಂತ್ರ್ಯ ಚಿಂತನೆ

• ಆನಂದ ತೀರ್ಥ ಪ್ಯಾಟಿ

ವ್ಯಾಪಾರಕ್ಕಾಗಿ ಬಂದು ಇಲ್ಲೇ ನೆಲೆಯೂರಿ ಎರಡು ಶತಮಾನಗಳ ಕಾಲ ನಮ್ಮನ್ನು ಆಳಿದ "ಬ್ರಿಟಿಷರು" ನಮಗೆ ಸ್ವಾತಂತ್ರ್ಯದ ನಿಜವಾದ ಮೌಲ್ಯ ಎಷ್ಟು ಎಂದು ತೋರಿಸಿಕೊಟ್ಟರು. ಅಂಥ ಅಮೂಲ್ಯ ಸ್ವಾತಂತ್ರ್ಯದ ಗಳಿಕೆಗಾಗಿ ಹೋರಾಡಿದ ಮಹನೀಯರ ಸಂಖ್ಯೆ ಕಡಿಮೆಯೇನಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ಅನೇಕಾನೇಕ ಸುಂದರ ಕನಸುಗಳು, ಆದರ್ಶಗಳೊಂದಿಗೆ ಸ್ವಾತಂತ್ರ್ಯ ಹೋರಾಟದ ಅಖಾಡಕ್ಕಿಳಿದ ಆ ಮಹನೀಯರ ಆದರ್ಶಗಳೀಗ ಎಲ್ಲಿ ಕಣ್ಮರೆಯಾಗಿವೆ ?

ಸ್ವಾತಂತ್ರ್ಯಾನಂತರ ಆದರ್ಶವಾದವಿನ್ನೂ ಜೀವಂತವಿದ್ದು, ಇನ್ನೇನು ರಾಮರಾಜ್ಯದ ಸ್ಥಾಪನೆಯಾಗಿ ಬಿಡುತ್ತದೆನ್ನುವ ನಂಬಿಕೆ ಬಹುತೇಕರಲ್ಲಿತ್ತು. ಆದರೆ ವೈಚಾರಿಕ ಕೊರತೆ ನಮ್ಮ ಮನೋಭೂಮಿಕೆಯಲ್ಲಿ ಮೊಳೆಯತೊಡಗಿದ್ದು ಯಾರ ಗಮನಕ್ಕೂ ಬರಲಿಲ್ಲ. ಈಗಷ್ಟೇ ಹೆಮ್ಮರವಾಗಿ ಬೆಳೆದು ನಿಂತ ಸ್ವಾತಂತ್ರ್ಯಾನಂತರದ ಬಹುತೇಕ ವೈಫಲ್ಯಗಳಿಗೆ ಅದು ಮೂಲ ಕಾರಣವಾಗಿದೆ ಎನ್ನಲಡ್ಡಿಯಿಲ್ಲ.

ಅಂತರಿಕ್ಷಕ್ಕೆ ಉಪಗ್ರಹ ಉಡಾಯಿಸಿದ್ದು, ಪೋಖ್ರಾನಿನಲ್ಲಿ ಅಣುಬಾಂಬ್ ಸ್ಫೋಟಿಸಿದ್ದು. ಕ್ಷಿಪಣಿ ತಯಾರಿಕೆಯ ಸಾಮರ್ಥ್ಯ ಗಳಿಸಿದ್ದು... ಇತ್ಯಾದಿ..... ಇವೆಲ್ಲ ಸ್ವಾತಂತ್ರ್ಯಾನಂತರದ ನಮ್ಮ ಸಾಧನೆಗಳೆಂದು ಕೊಚ್ಚಿಕೊಳ್ಳುವ 'ನಾವು,' ನಮಗೆ ಸ್ವತಂತ್ರವಾಗಿ ಬೆಂಕಿಕಡ್ಡಿಯಂತಹ ಅಗತ್ಯ ವಸ್ತುಗಳನ್ನು ತಯಾರಿಸುವ ಸಾಮರ್ಥ್ಯವಿಲ್ಲವೆನ್ನುವುದು ಅಷ್ಟೇ ಅನುಕೂಲಕರವಾಗಿ ಮರೆಯುತ್ತೇವೆ, ಇಲ್ಲವೆ ಮುಚ್ಚಿಟ್ಟುಕೊಳ್ಳುತ್ತೇವೆ! ಜೊತೆಗೆ ಭ್ರಷ್ಟಾಚಾರ, ಅನಾಚಾರ, ಬಡತನ ಮುಂತಾದ ಅನಿಷ್ಟಗಳು ನಮ್ಮ ಸಾಮಾಜಿಕ. ಸಾಂಸ್ಕೃತಿಕ ಬದುಕನ್ನು ಕಲುಷಿತಗೊಳಿಸುತ್ತಿರುವುದರ ಬಗ್ಗೆಯೂ ಜಾಣ್ಕುರುಡು-ಕಿವುಡುತನಗಳನ್ನು ಮೈಗೂಡಿಸಿಕೊಂಡವರು ನಾವು!

ಈ ಸಮಸ್ಯೆಗಳು ಮೊದಲು ಅಲ್ಪ ಪ್ರಮಾಣದಲ್ಲಿದ್ದು ಅವುಗಳ ಬಗ್ಗೆ ನಾವು ತೋರಿದ ಅಲಕ್ಷ್ಯದಿಂದಾಗಿ ಅವು ಇಂದು ಈ ಪರಿಯಾಗಿ ಬೆಳೆದು ನಿಂತಿವೆ.

ಈ ಎಲ್ಲ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕಿರುವುದು ನಾವೇ. ನಮ್ಮಲ್ಲಿ ಮೂಡುವ ಪ್ರಜ್ಞೆ ನಮ್ಮ ಸಮಸ್ಯೆಗಳಿಗೆ ಪರಿಹಾರ ಮಾರ್ಗವನ್ನು ತೋರಿಸಿಕೊಡುತ್ತದೆ...

ದೇಶದ ಪ್ರಸಕ್ತ ದುಸ್ಥಿತಿಗೆ ಇಲ್ಲಿನ ಸಾಮಾನ್ಯ ಪ್ರಜೆಯೇ ಶೇಕಡಾ ನೂರರಷ್ಟು ಕಾರಣ ಎನ್ನುವುದು ಅತಿಶಯೋಕ್ತಿಯೇನಲ್ಲ. ಏಕೆಂದರೆ ಅಧಿಕಾರಶಾಹಿ ವರ್ಗ, ಆಡಳಿತ ವರ್ಗ,

ರಾಜಕಾರಣಿಗಳು ಮುಂತಾದವರು ದೇಶವನ್ನು ಸುಲಿದು ತಿನ್ನುತ್ತಿರುವಾಗ ಸುಮ್ಮನೆ ನೋಡುತ್ತ ಕುಳಿತು ನಿಷ್ಕ್ರಿಯನಂತಿದ್ದುದು ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸಲು ಕಾರಣವಾಯ್ತು

ಸಮಸ್ಯೆಯ ಬಗ್ಗೆ ಚರ್ಚಿಸಿ, ಅದರ ಪರಿಣಾಮದ ಬಗ್ಗೆ ಊಹಿಸಿ ಕಂಗೆಡುವ ಬದಲು, ಪರಿಹಾರೋಪಾಯ ಕಂಡುಕೊಳ್ಳುವ ನಿಟ್ಟಿನಲ್ಲಿ ಯೋಚಿಸುವುದು ವಿವೇಕಿಗಳ ಲಕ್ಷಣ. ನಮ್ಮ ಮೂಲಭೂತ ಹಕ್ಕುಗಳ ಬಗ್ಗೆ ನಾವೇ ಹೋರಾಟ ನಡೆಸಬೇಕಿದೆ. ಹೋರಾಟವೆಂದೊಡನೆ ಗಲಭೆ, ದೊಂಬಿ, ಹಾಹಾಕಾರದ ಮಾರ್ಗವಲ್ಲ; ಅಹಿಂಸಾತ್ಮಕ, ಪ್ರಾಮಾಣಿಕ ಹೋರಾಟದಿಂದ ಮಾತ್ರ ಸಮಸ್ಯೆಯನ್ನು ಬೇರು ಸಮೇತ ನಿರ್ಮೂಲಿಸಲು ಸಾಧ್ಯ.

ಬಹುಶಃ ಇಂಥ ಮಾರ್ಗದಿಂದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಕೆಲ ವರ್ಷ ಹಿಡಿಯಬಹುದು. ಆದರೂ ಪರವಾಗಿಲ್ಲ. ಸುಮಾರು 50 ವರ್ಷಗಳಿಂದ ಹದಗೆಡುತ್ತ ಬಂದಿರುವ ಪರಿಸ್ಥಿತಿ ದಿಢೀರನೆ ಸುಧಾರಿಸಬೇಕೆಂದು ನಿರೀಕ್ಷಿಸುವುದು ಸಾಧ್ಯವಲ್ಲ, ಸಾಧುವೂ ಅಲ್ಲ. ಆದರೆ ಪ್ರಾಮಾಣಿಕ ಮನಸ್ಸಿನಿಂದ ನಾವೇ ಈ ಪರಿಸ್ಥಿತಿಯನ್ನು ಸುಧಾರಿಸುವ ನಿಟ್ಟಿನತ್ತ ಶ್ರಮಿಸತೊಡಗಿದರೆ "ಸ್ವಾತಂತ್ರ್ಯ ವಜ್ರಮಹೋತ್ಸವ"ದ ಹೊತ್ತಿಗಾದರೂ ಪರಿಹಾರ ಕಂಡುಕೊಳ್ಳುವಲ್ಲಿ ಯಶಸ್ವಿಯಾದೇವು! ಆವಾಗಲಾದರೂ ನಮಗೆ ಸ್ವಾತಂತ್ರ್ಯದ ನಿಜವಾದ ಅರ್ಥ ಹೊಳೆದೀತು !!

✿ ✿ ✿

# ಮಧ್ಯರಾತ್ರಿ ಸ್ವಾತಂತ್ರ್ಯದ ಐವತ್ತನೆಯ ಉತ್ಸವ

• ರವಿ ತುಂಬರಗುದ್ದಿ

ಸಾಮ್ರಾಜ್ಯಶಾಹಿ ವ್ಯವಸ್ಥೆಯಲ್ಲಿ ನಲುಗಿದ ಭಾರತ, ಒಂದು ಮಧ್ಯರಾತ್ರಿಯಂದು ಭಾರತೀಯ ಬಂಡವಾಳಶಾಹಿಗಳ ಕೈಗೆ ಹಸ್ತಾಂತರಗೊಂಡಿತು. ಇದನ್ನು ಕರಾಳರಾತ್ರಿ ಸ್ವಾತಂತ್ರ್ಯವೆಂದರೆ ತಪ್ಪಾಗಲಾರದು. ಸಾಮ್ರಾಜ್ಯಶಾಹಿ ವ್ಯವಸ್ಥೆಯ ಹಾಗೂ ಬಂಡವಾಳಶಾಹಿ ವ್ಯವಸ್ಥೆಯ ಚೇಲಾ ಆಗಿರುವ ಗಾಂಧೀಜಿ ನಮ್ಮ ದೇಶದ ಸ್ವಾತಂತ್ರ್ಯ ಸಮರದ ಮುಖಂಡತ್ವ ವಹಿಸಿದ್ದೊಂದು ಐತಿಹಾಸಿಕ ದುರಂತವಾಗಿದೆ.

ಅನ್ಯಾಯವಾದಾಗ ಪ್ರತಿಭಟಿಸುವ, ಸಿಡಿದು ನಿಲ್ಲುವ ಮನುಷ್ಯ ಸಹಜ ಪ್ರವೃತ್ತಿಯನ್ನು ಹತ್ತಿಕ್ಕುವ 'ಅಹಿಂಸಾವಾದ'ವೆನ್ನುವ ಹುಚ್ಚು ತತ್ವ ಹಾಗೂ 'ರಾಮರಾಜ್ಯ'ವೆನ್ನುವ ಮೂರ್ಖ ಹಾಗೂ ಅವೈಜ್ಞಾನಿಕ ಸುಂದರ ಕನಸು ಕಟ್ಟಿಕೊಂಡ ವ್ಯಕ್ತಿಯೊಬ್ಬನ ನೇತೃತ್ವದಲ್ಲಿ ಭಾರತೀಯ ಜನಸಾಮಾನ್ಯರ ವೈಜ್ಞಾನಿಕ ಚಿಂತನಾ ಶಕ್ತಿಯೇ ನಾಶವಾಯಿತೆಂದರೆ ತಪ್ಪಾಗಲಿಕ್ಕಿಲ್ಲ. ನಮಗಿದು ಅರ್ಥವಾಗಲು ತುಂಬ ದಿನ ಹಿಡಿದದ್ದು ಇನ್ನೊಂದು ದುರಂತ.

ಹಕ್ಕಿನಿಂದ ಹೋರಾಡಿ, ಅದಮ್ಯ ಮಾನವೀಯ ಮೌಲ್ಯದ ಹಿಂಸಾತ್ಮಕ ಕ್ರಮಗಳಿಂದ ಎಂದೋ ಪಡೆಯಬೇಕಿದ್ದ ಸ್ವಾತಂತ್ರ್ಯವನ್ನು ಅತ್ತೂ-ಕರೆದು, ಮುನಿಸಿಕೊಂಡು ಉಪವಾಸ ಕುಳಿತು, ಭಿಕ್ಷೆ ಬೇಡಿದ ರೀತಿಯಲ್ಲಿ ಕೊನೆಗೂ ಪಡೆದುಕೊಂಡೆವೆನ್ನುವುದೇನೋ ನಿಜ; ಆದರೆ ನಿಜವಾದ ಅರ್ಥದಲ್ಲಿ ದುಡಿಯುವ ವರ್ಗಕ್ಕಿನ್ನೂ ಸ್ವಾತಂತ್ರ್ಯ ಸಿಕ್ಕಿಲ್ಲ! ಹಾಗಾಗಿ ಸ್ವಾತಂತ್ರ್ಯಕ್ಕಾಗಿ ಭಾರತೀಯನ ಹೋರಾಟ ಸ್ವಾತಂತ್ರ್ಯ ಸಿಕ್ಕ ಐವತ್ತು ವರ್ಷಗಳ ನಂತರವೂ ಮುಂದುವರಿದೇ ಇದೆ! ವ್ಯತ್ಯಾಸ ಇಷ್ಟೇ – ಆಗ ನಮ್ಮ ಹೋರಾಟವಿದ್ದುದು ಸಾಮ್ರಾಜ್ಯಶಾಹಿ ವ್ಯವಸ್ಥೆಯೊಂದಿಗೆ; ಈಗ ನಾವು ಹೋರಾಡುತ್ತಿರುವುದು ಬಂಡವಾಳಶಾಹಿ ವ್ಯವಸ್ಥೆಯೊಂದಿಗೆ! ನಮ್ಮ ನಿಜವಾದ ಹೋರಾಟ ಆರಂಭವಾಗಿರುವುದೇ ಈಗ.

ಮುಂದೊಂದು ದಿನ ವೈಜ್ಞಾನಿಕ ಹಾಗೂ ವಾಸ್ತವ ನೆಲೆಗಟ್ಟಿನ ಸಮ ಸಮಾಜವನ್ನೂ ರೂಪಿಸುವ ಕನಸು ಕಟ್ಟಿಕೊಂಡಿರುವ ಪ್ರಜ್ಞಾವಂತ ಕ್ರಾಂತಿಕಾರಿಗಳು 'ಕತ್ತಲ ರಾತ್ರಿಯ ಸ್ವಾತಂತ್ರ್ಯ'ದ ಕ್ಷಿತಿಜದಲ್ಲಿ 'ಕೆಂಪು ಸಂದೇಶ' ಹೊತ್ತು ತರುವ ಸೂರ್ಯೋದಯವನ್ನು ಕಾಣಲು ಪ್ರಯತ್ನಿಸುತ್ತಲೇ ಇದ್ದಾರೆ.....

❋ ❋ ❋

# ಸಮಸ್ಯೆಗಳ ಸುಳಿಗೆ ಸಿಲುಕಿರುವ ದೇಶ

• ಟಿ. ಪಿ. ರವಿಕುಮಾರ

"ನನ್ನ ದೇಶಕ್ಕೆ ನಡುರಾತ್ರಿಯಲ್ಲಿ
ಸ್ವತಂತ್ರ ಬಂದಿತು. ಆದರೆ,
ಇನ್ನೂ ಬೆಳಕೇ ಹರಿದಿಲ್ಲ."

ದೇಶ ಸ್ವಾತಂತ್ರ್ಯ ಪಡೆದು ಐವತ್ತು ಸಂವತ್ಸರಗಳು ಕಳೆದರೂ ಮೇಲಿನಂತಹ ಸೊಲ್ಲು ಇನ್ನೂ ಕೇಳಿ ಬರುತ್ತಿದೆ. ಅವಿರತ ಹೋರಾಟದಿಂದ ಪಡೆದ ಸ್ವಾತಂತ್ರ್ಯಕ್ಕೇನಾಗಿದೆ? ನಮ್ಮ ಹಿರಿಯ ನಾಯಕರು ದೇಶವನ್ನು ಮುನ್ನಡೆಸುವಲ್ಲಿ ರೂಪಿಸಿದ ಯೋಜನೆಗಳೆಲ್ಲಿ ಹೋದವು? ಎಲ್ಲಿಯೂ ಹೋಗಿಲ್ಲ, ಎಲ್ಲವೂ ಇಲ್ಲಿಯೇ ಇವೆ. ಆದರೆ ಸಮಸ್ಯೆಗಳ ಸರಮಾಲೆಯೊಂದಿಗೆ ದಿನೇ ದಿನೇ ದೇಶ ಮೂಲೆಗುಂಪಾಗುತ್ತಿದೆ ಅಷ್ಟೆ.

ಇತಿಹಾಸದಲ್ಲಿಯೇ ಅನನ್ಯವೆನ್ನಬಹುದಾದ ಅಹಿಂಸಾತ್ಮಕ ಚಳುವಳಿಯಿಂದ ಭಾರತಕ್ಕೆ ಸ್ವಾತಂತ್ರ್ಯ ಲಭಿಸಿತು. ಅದರೊಂದಿಗೆ ಹತ್ತು-ಹಲವು ಸಮಸ್ಯೆಗಳೂ ಕೂಡ! ಅವೆಲ್ಲವನ್ನೂ ಭಾರತ ಇನ್ನೂ 'ಕಾಪಾಡಿಕೊಂಡು' ಬರುತ್ತಿದೆ ಎನ್ನುವುದೇ ವಿಪರ್ಯಾಸ...

ಅನಕ್ಷರತೆ, ರಾಜಕೀಯ ಭ್ರಷ್ಟಾಚಾರ, ಗಡಿವಿವಾದ, ಜಲವಿವಾದ ಮುಂತಾದ ಹಲವಾರು ಸಮಸ್ಯೆಗಳು ದೇಶವನ್ನು ಕಿತ್ತು ತಿನ್ನುತ್ತಿವೆ. ಇವುಗಳಲ್ಲಿ ಬಹಳಷ್ಟು ಸಮಸ್ಯೆಗಳು ಸ್ವಾತಂತ್ರ್ಯ ಪೂರ್ವದಿಂದಲೂ ಇದ್ದಂಥವೇ. ಸ್ವಾತಂತ್ರ್ಯ ದೊರೆತು 50 ವರ್ಷ ಕಳೆದರೂ ಭಾರತದಲ್ಲಿನ್ನೂ ಸುಮಾರು ನಲವತ್ತೈದು ಕೋಟಿ ಜನ ಅನಕ್ಷರಸ್ಥರಿರುವುದು; ನಿರಂತರವಾಗಿ ಉರಿಯುತ್ತಿರುವ ಕಾಶ್ಮೀರ ಸಮಸ್ಯೆ, ಅಂತರರಾಷ್ಟ್ರೀಯ ಹಾಗೂ ಅಂತರರಾಜ್ಯ ಜಲವಿವಾದಗಳು ದಿನದಿಂದ ದಿನಕ್ಕೆ ಬಿಗಡಾಯಿಸುತ್ತಿರುವುದು.... ಇವ್ಯಾವವನ್ನೂ ಬಗೆಹರಿಸುವಲ್ಲಿ ನಮ್ಮ ರಾಜಕಾರಣಿಗಳಾಗಲಿ, ಆಡಳಿತದ ಚುಕ್ಕಾಣಿ ಹಿಡಿದ ಯಾವುದೇ ರಾಜಕೀಯ ಪಕ್ಷವಾಗಲಿ ವಿಫಲಗೊಂಡಿವೆ.

ದೇಶಕ್ಕೆ ಮಾರಕವಾಗಿರುವ ಮತ್ತೊಂದು ಉಗ್ರ ಸಮಸ್ಯೆಯೆಂದರೆ ಅದು ರಾಜಕೀಯ ಸಮಸ್ಯೆ. ಎಂದು ದೇಶ ರಾಜಕೀಯವಾಗಿ ಸ್ವತಂತ್ರವಾಯಿತೋ ಅಂದೇ ಗುಪ್ತವಾಗಿದ್ದ ಎಷ್ಟೋ ಸಮಸ್ಯೆಗಳು, ಘರ್ಷಣೆಗಳು ಮೇಲಕ್ಕೆದ್ದವು. ಕಾಲಗರ್ಭದಲ್ಲಿ ಹೂತುಹೋಗಿವೆ ಎನ್ನಲಾಗಿದ್ದ ಎಷ್ಟೋ ಸಾಂಸ್ಕೃತಿಕ, ಸಾಮಾಜಿಕ ಸಮಸ್ಯೆಗಳು ಗೋಚರವಾಗತೊಡಗಿದವು. ಭ್ರಷ್ಟಾಚಾರಿ, ಸ್ವಜನ ಪಕ್ಷಪಾತಿಗಳಿಂದ ಕೂಡಿರುವ ನಮ್ಮ ರಾಜಕೀಯ ಪಕ್ಷಗಳು ಅಕ್ರಮಗಳ ಆಲಯವಾಗಿವೆ. ನಮ್ಮ ರಾಜಕೀಯ ಇತಿಹಾಸವನ್ನೊಮ್ಮೆ ಸೂಕ್ಷ್ಮವಾಗಿ ಅವಲೋಕಿಸಿದರೆ

ಭಾರತೀಯನ ಹೃದಯ ಹಿಂಡಿ ಬರುತ್ತದೆ. ಪ್ರಾಮಾಣಿಕತೆ, ಸತ್ಯಶೀಲತೆ ಹಾಗೂ ಸರಳತೆಗಳನ್ನು ಮೈಗೂಡಿಸಿಕೊಂಡು ದೇಶ ಸೇವೆ ಮಾಡಬೇಕಾಗಿದ್ದ ನಮ್ಮ ರಾಜಕೀಯ ವ್ಯಕ್ತಿಗಳು ತಮ್ಮ ತಮ್ಮ ಸ್ವಾರ್ಥ ಸಾಧಿಸಿಕೊಳ್ಳಲು ದೇಶವನ್ನು ಅಧಃಪತನದತ್ತ ದೂಡುತ್ತಿದ್ದಾರೆ. ಇಂಥವರಿಂದ ದೇಶದ ಉದ್ಧಾರವನ್ನು ನಿರೀಕ್ಷಿಸುವುದು ಸಾಧ್ಯವೆ?

ಒಟ್ಟಿನಲ್ಲಿ ಸ್ವತಂತ್ರ ಭಾರತ ಸಮಸ್ಯೆಗಳ ಸುಳಿಯಿಂದ ಝರ್ಜರಿತಗೊಂಡಿದೆ ಎಂದೇ ಹೇಳಬೇಕು. ಬಹುಪಾಲು ಕ್ಷೇತ್ರಗಳಲ್ಲಿ ಭಾರತ ದಯನೀಯ ಸೋಲು ಅನುಭವಿಸಿರುವುದು ಆತಂಕದ ವಿಚಾರ.

✲ ✲ ✲

# ಸ್ವಾತಂತ್ರ್ಯವೆಂಬುದು ಸ್ವೇಚ್ಛೆಯಲ್ಲ

• ಎಂ. ಭಾರತೀ ರಘುಪತಿ

ಅನೇಕ ವರ್ಷಗಳ ದಾಸ್ಯದ ಶೃಂಖಲೆಗೆ ತನ್ನನ್ನೊಡ್ಡಿಕೊಂಡಿದ್ದ ಭಾರತವು ೧೯೪೭ರ ಆಗಸ್ಟ್ ೧೫ ರಂದು ಮಧ್ಯರಾತ್ರಿ ಪಡೆದ ಸ್ವಾತಂತ್ರ್ಯಕ್ಕೆ ತೆತ್ತ ಬೆಲೆ ಅಷ್ಟಿಷ್ಟಲ್ಲ. ಹಾಗಿದ್ದೂ ಐವತ್ತು ವರ್ಷಗಳ ಹಿಂದಿನ ಆ ಮಧ್ಯರಾತ್ರಿ ಭಾರತೀಯರ ಪಾಲಿಗೆ ಶುಭೋದಯದ ಮುನ್ಸೂಚನೆಯನ್ನು ಹೊತ್ತು ತಂದಿತ್ತು.

'ಸ್ವಾತಂತ್ರ್ಯ'ವೆನ್ನುವುದು ಸ್ವೇಚ್ಛೆ. ಸ್ವೈರತೆ ಎನ್ನುವ ಅರ್ಥ ಪಡೆದುಕೊಂಡರೆ ಅದಕ್ಕಿಂತ ದುರಂತ ಬೇರೊಂದಿಲ್ಲ. ಈ ಸತ್ಯವನ್ನು ಪ್ರತಿಯೊಬ್ಬನೂ ಮನಗಂಡಾಗಲೇ ಸ್ವಾತಂತ್ರ್ಯಕ್ಕೆ ನಿಜವಾದ ಅರ್ಥವನ್ನು ಕಾಣಲು, ಅದನ್ನು ಅನುಭವಿಸಲು ಸಾಧ್ಯ.

ಭಾರತಕ್ಕೆ ಸ್ವಾತಂತ್ರ್ಯ ತಂದು ಕೊಟ್ಟವರಲ್ಲಿ ಮಹಾಪುರುಷರೂ, ಸಮಾಜ ಸುಧಾರಕರೂ ಸಾವಿರಾರು ಜನ. ಅವರು ಹಾಕಿಕೊಟ್ಟ ದಾರಿಯ ಮೇಲ್ಪಂಕ್ತಿ ನಮಗಿದ್ದರೂ ಇವತ್ತು ನಮ್ಮನ್ನು ದ್ವಂದ್ವ, ಬುದ್ಧಿ ಮಾಂದ್ಯತೆಗಳು ಆವರಿಸಿಕೊಂಡು ಕಾಡುತ್ತಿರುವುದು ಶೋಚನೀಯ. ಹಾಗಾಗಿಯೇ ಐವತ್ತು ವರ್ಷಗಳ ನಂತರವೂ ಸ್ವಾತಂತ್ರ್ಯದ ಮೂಲೋದ್ದೇಶ ಬಹುಮಟ್ಟಿಗೆ ಸಾರ್ಥಕವಾಗಿಲ್ಲದಿರುವುದನ್ನು ಕಾಣುತ್ತಿದ್ದೇವೆ.

ಮುಖ್ಯವಾಗಿ ಬದಲಾಗಬೇಕಿರುವುದು ನಮ್ಮ ಕಲುಷಿತ ರಾಜಕೀಯ ವ್ಯವಸ್ಥೆ. ಜನಸಾಮಾನ್ಯನ ಕಲ್ಯಾಣವನ್ನು ಗುರಿಯಾಗಿಟ್ಟುಕೊಂಡಿರುವ ವ್ಯವಸ್ಥೆಯ, ನಾಯಕರ ಅಗತ್ಯವಿದೆ. ಅಂಥ ನಾಯಕರು ಕಾರ್ಯರಂಗದ ಮೇಲೆ ಮೂಡಿಬಂದಾಗ ಮಾತ್ರ ಭಾರತ ಪಡೆದ ಸ್ವಾತಂತ್ರ್ಯ ಸಾರ್ಥಕವಾಗಬಲ್ಲದು. ಅಂಥ ನಾಯಕರನ್ನು ಆಯ್ಕೆ ಮಾಡಿಕೊಳ್ಳಬೇಕಿರುವುದು ಜನಸಾಮಾನ್ಯನೇ. ಇದೊಂದು ರೀತಿಯ ಸುತ್ತು ಚಕ್ರ.....

ಸ್ವಾರ್ಥ-ಸಮಯಸಾಧಕತನ-ಪಕ್ಷಪಾತಿ ಮನೋಭಾವ, ಇವುಗಳಿಂದ ಹೊರತಾದ ಆಡಳಿತ ವ್ಯವಸ್ಥೆ ರೂಪುಗೊಳ್ಳಬೇಕು. ದೇಶದ ಬೊಕ್ಕಸ ವೃಥಾ ಸೋರಿ ಹೋಗುವುದು ನಿಂತು ಫಲಾನುಭವಿಗಳಿಗೆ ದಕ್ಕಬೇಕೆಂದರೆ ಸಮರ್ಥ ಆಡಳಿತ ವ್ಯವಸ್ಥೆ ರೂಪುಗೊಳ್ಳಬೇಕು. ಆಡಳಿತಕ್ಕೆ ಬರುವ ಯಾವುದೇ ವ್ಯಕ್ತಿ, ಪಕ್ಷ ಅಥವಾ ಸರಕಾರ ವ್ಯಾಪಾರಿ ಮನೋಭಾವವನ್ನು ತೊರೆದು ಜನವರ ಕಾಳಜಿಯನ್ನು ಹೊಂದುವಂತಾಗಬೇಕು.

ಈ ಮೇಲೆ ಹೇಳಿದ ಕಾರಣಗಳಿಂದ ರಾಜಕೀಯ ಸುಸ್ಥಿತಿಯನ್ನು ಕುರಿತು ಯೋಚಿಸಿ, ಅದನ್ನು ನಿರಂತರವಾಗಿ ಕಾಯ್ದುಕೊಳ್ಳುವಲ್ಲಿ ಪ್ರಜೆಗಳ, ನಾಗರಿಕರ ಪಾತ್ರ ಬಹು

ಗಮನಾರ್ಹವಾದುದು. ಈ ನಿಟ್ಟಿನಲ್ಲಿ 'ಮಾನವಶಕ್ತಿ' (Man power)ಯನ್ನೇ ಮರೆತು ಮಲಗಿ ನಿದ್ರಿಸುವ ಯುವ ಜನಾಂಗ ಎಚ್ಚೆತ್ತುಕೊಳ್ಳಬೇಕು. ಯುವ ಜನಾಂಗ ಧೀರ ಸಂಕಲ್ಪವನ್ನು ತೊಟ್ಟರೆ ಅಸಾಧ್ಯವಾದ ಯಾವ ಕೆಲಸವೂ ಇರುವುದಿಲ್ಲ. ಒಳ್ಳೆಯ ಪ್ರಗತಿಗಾಗಿ ತಮ್ಮ ಗಟ್ಟಿತನವನ್ನೂ, ಸಮಸ್ಯಾಪರಿಹಾರದತ್ತ ತಮ್ಮ ಕುಶಾಗ್ರಮತಿಯನ್ನೂ ಬಳಸಿಕೊಂಡರೆ 'ದೇಶದ ಉನ್ನತಿ' ಸ್ವಲ್ಪ ಮಟ್ಟಿಗಾದರೂ ಸಾಧಿತವಾಗಬಹುದೇನೋ ಎಂಬ ಆಶಯವನ್ನು ವ್ಯಕ್ತಪಡಿಸಬಹುದು.

✻ ✻ ✻

# ಒಂದು ಕಪ್ಪು ಬಣ್ಣ ಸುಂದರ ಚಿತ್ರ ಮಲಿನಗೊಳಿಸಿದಂತೆ

• ಅನಂತ ಚಿಂತಾಮಣಿ ಜ್ಯೋತಿಷಿ

ನಮ್ಮ ದೇಶ ಭಾರತವು ಸ್ವಾತಂತ್ರ್ಯದ ಹೊನ್ನಿನ ರೇಖೆಯ ಸೀಮೋಲ್ಲಂಘನೆ ಮಾಡಿದೆ. ಈ ಅರ್ಧ ಶತಮಾನದ ಹಿನ್ನೋಟದತ್ತ ಪರಿಶೀಲಿಸುವುದು ಪ್ರತಿಯೊಬ್ಬ ಪ್ರಜ್ಞಾವಂತ ಭಾರತೀಯನ ಕರ್ತವ್ಯ. ಪ್ರತಿವರ್ಷ ಸ್ವಾತಂತ್ರ್ಯೋತ್ಸವದ ದಿನದಂದು ನಮ್ಮ ಸಾಧನೆ-ವೈಫಲ್ಯದತ್ತ ತುಸು ಲಕ್ಷ್ಯ ಹರಿಸಿ ಆನಂತರ ಮರೆತು ಬಿಡಲಾಗುತ್ತದೆ. ಪುನಃ ಮತ್ತೊಂದು ವರ್ಷ ಬಂದಾಗ ಅದೇ ಹಾಡು, ಜಾಡು.

ಈ ಅರ್ಧ ಶತಮಾನದ ಕಾಲ ಖಂಡದಲ್ಲಿ ಸ್ವಾತಂತ್ರ್ಯವು ನಮ್ಮವರೇ 'ಆಳರಸ'ರ ಕೈಯಲ್ಲಿ ಸಿಕ್ಕು ಜರ್ಝರಿತಗೊಂಡಿದೆ. ಸ್ವಾತಂತ್ರ್ಯ ಪಡೆಯಲು ಅಂದಿನ ನಾಯಕರು ತುಂಬ ಕಷ್ಟದಾಯಕ ಪರಿಸ್ಥಿತಿಯನ್ನು ಎದುರಿಸಿ ಯಶವನ್ನು ಹೊಂದಿದರು. ಅಂದು ಕಷ್ಟಪಟ್ಟು ಪಡೆದ ಸ್ವಾತಂತ್ರ್ಯವನ್ನು ನಾವು ದುರುಪಯೋಗಪಡಿಸಿಕೊಂಡಿದ್ದೇವೆ.

ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯಾನಂತರದ ಪರಿಸ್ಥಿತಿಗಳನ್ನು ತುಲನಾತ್ಮಕವಾಗಿ ನೋಡಿದರೆ ಗಮನಾರ್ಹವೆನಿಸುವಂತಹ ಸಾಧನೆಗಳನ್ನು ಮಾಡದೆ ಇದ್ದರೂ ಕೂಡ ಆಶಾದಾಯಕವಾದ ಪ್ರಯತ್ನವನ್ನು ಮಾಡಲಾಗಿದೆ. ಅನೇಕ ಯೋಜನೆಗಳನ್ನು ರೂಪಿಸಿ ಹಲವು ಯೋಜನೆಗಳಲ್ಲಿ ಯಶಸ್ಸನ್ನು ಸಾಧಿಸಲಾಗಿದೆ.

ಸತ್ಯ, ಧರ್ಮ, ನೈತಿಕತೆಯ ತಳಹದಿಯ ಮೇಲೆ ನಿಂತ ಈ ರಾಷ್ಟ್ರ ತನ್ನ ಇತ್ತೀಚಿನ ವರ್ಷಗಳ ಕುಕೃತ್ಯದಿಂದಾಗಿ ತಲೆ ತಗ್ಗಿಸುವ ಸ್ಥಿತಿಯು ಬಂದಿರುತ್ತದೆ. ಹಗರಣ, ತೆರಿಗೆಗಳ್ಳತನಗಳು ಇಂದು ಸರ್ವ ಸಾಮಾನ್ಯವಾಗಿವೆ. ಅಂದು ಬ್ರಿಟಿಷರು ನಿಯಮಿಸಿದ ಕಾಯ್ದೆಗಳನ್ನು ಭಂಗ ಮಾಡಬೇಕೆಂದು ಮಹಾತ್ಮಾಜಿಯವರು ದೇಶಕ್ಕೆ ಕರೆ ಕೊಟ್ಟರೆ, ಇಂದು ನಮ್ಮನ್ನು ಆಳುವವರು ತಾವೇ ಕಾನೂನನ್ನು ಮುರಿದು ಎಲ್ಲರಿಗೆ ದಾರಿಯನ್ನು ಹಾಕಿಕೊಡುತ್ತಿದ್ದಾರೆ. ಇಂದು ಸ್ವಾತಂತ್ರ್ಯದ ಮಹತ್ವತೆಯನ್ನರಿತ ವ್ಯಕ್ತಿಯು ಸರಕಾರದ ನೀತಿನಿಯಮಗಳನ್ನು ಪಾಲಿಸಹೋದರೆ, ಅವನಿಗೆ ಮಾನಸಿಕ ಹಿಂಸೆ ಕೊಡುವವರೇ ಹೆಚ್ಚು. ಅಂದಾಗ ಜನಸಾಮಾನ್ಯರ ದೃಷ್ಟಿಯಲ್ಲಿ ಸ್ವಾತಂತ್ರ್ಯ ಸಾರ್ಥಕತೆ ಪಡೆದಿಲ್ಲ ಎಂಬುದನ್ನು ಸ್ಪಷ್ಟವಾಗಿ ಹೇಳಬಹುದಾಗಿದೆ. ಸ್ವಾತಂತ್ರ್ಯದ ಪರಿಕಲ್ಪನೆ ಪ್ರತಿಯೊಬ್ಬರಲ್ಲಿ ಮೂಡಬೇಕು, ಪ್ರತಿಯೊಬ್ಬರಲ್ಲಿ ದೇಶ ಪ್ರೇಮ ಅರಳಬೇಕು ಎಂಬುದನ್ನು ಇಂದು ಎಲ್ಲರೂ ಹೇಳುತ್ತ ಪರದೇಶದ ಸಂಸ್ಕೃತಿಗೆ ದಾಸರಾಗುತ್ತಿದ್ದಾರೆ. ಇಂದು ವಿದೇಶಿ ಸಂಸ್ಕೃತಿಯು ನಮ್ಮ

ಜನಜೀವನವನ್ನು ಕುಲಗೆಡಿಸಿದೆ. ಇತ್ತ ಭಾರತೀಯನೂ ಅಲ್ಲ, ಅತ್ತ ವಿದೇಶೀಯನೂ ಅಲ್ಲ. ಯಾವುದನ್ನೂ ಮಾಡಲು ಸ್ವತಂತ್ರರಾಗದೆ ನಾವು ಅತಂತ್ರರಾಗುತ್ತಿದ್ದೇವೆ.

ಒಂದು ಕಪ್ಪುಬಣ್ಣ ಸುಂದರ ಚಿತ್ರವನ್ನು ಮಲಿನಗೊಳಿಸಿತು ಎಂಬಂತೆ ಪ್ರಸಕ್ತ ಭಾರತದ ಪರಿಸ್ಥಿತಿಯಾಗುತ್ತಿದೆ. ಸರಕಾರವನ್ನು ವಂಚಿಸುವ ಏಕೈಕ ಗುರಿಯನ್ನು ಪ್ರತಿಯೊಬ್ಬರು ಹಾಕಿಕೊಂಡಿದ್ದರಿಂದ ಸ್ವಾತಂತ್ರ್ಯದ ಬಗ್ಗೆ ಕೃತಜ್ಞತಾ ವಿಚಾರವೇ ನಾಶಗೊಂಡಿರುವುದು ದುರ್ದೈವದ ಸಂಗತಿಯಾಗಿರುತ್ತದೆ. ಪ್ರತಿಭೆ, ಬುದ್ಧಿಮತ್ತೆ, ಉತ್ಸಾಹ ತುಂಬಿರುವ ಯುವಶಕ್ತಿಯ ಜೀವನ ನಿಧಿಯನ್ನು ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಬಳಸಿಕೊಂಡರೆ ಮಾತ್ರ ಸ್ವಾತಂತ್ರ್ಯ ರಕ್ಷಣೆಗೆ ಹೆಚ್ಚಿನ ಬಲ ದೊರಕುವದು.

ಸ್ವಾತಂತ್ರ್ಯ ಪ್ರಾಪ್ತಿಯ ೨೮ನೇ ವರ್ಷದಲ್ಲಿ ನಮ್ಮ ಹಕ್ಕು, ಸ್ವಾತಂತ್ರ್ಯ ಹರಣವಾಯಿತು. ಎರಡೂವರೆ ವರ್ಷ ಕಳೆದ ನಂತರ ಪುನಃ ಹಕ್ಕು, ಸ್ವಾತಂತ್ರ್ಯಗಳು ಪ್ರಾಪ್ತವಾದವು. ಇಂದು ಸ್ವಾತಂತ್ರ್ಯದ ೫೦ನೇ ಹಬ್ಬವನ್ನು ಎಲ್ಲೆಡೆಗೆ ಆಚರಿಸಲಾಗಿದೆ. ಸರಕಾರದ ಕಟ್ಟಾಜ್ಞೆಯಿಂದಾಗಿ ಕಾಟಾಚಾರಕ್ಕೆ ಎಂಬಂತೆ ಸ್ವಾತಂತ್ರ್ಯೋತ್ಸವ ಬಹುಶಃ ಎಲ್ಲೆಡೆ ನಡೆಯುತ್ತಿದೆ. ಸ್ವದೇಶ ಪ್ರೇಮದ ಕುರಿತು ಕಿಂಚಿತ್ತೂ ವಿಚಾರವಿಲ್ಲ. ಪ್ರಸ್ತುತ ಸಂಗತಿಯನ್ನು ಗಮನಿಸಿದರೆ ಉತ್ತಮ ದಿನ ಬರಬಹುದೆಂಬ ಆಶಾ ಭಾವನೆಯಿದೆ.

ಪ್ರತಿಯೊಬ್ಬರಿಗೆ ಅನ್ನ, ವಸತಿ, ಬಟ್ಟೆ ಈ ಮೂರು ಲಭ್ಯವಾದರೆ ಮಾತ್ರ ಸ್ವಾತಂತ್ರ್ಯಕ್ಕೆ ಅರ್ಥ ಬರುತ್ತದೆ. ಇಂದು ದೇಶದ ಜನತೆಯು ಬಡತನ, ಅನಕ್ಷರತೆಗಳಿಗೆ ಒಳಗಾಗಿದೆ. ಇವುಗಳಿಗೆ ಪರಿಹಾರ ಕಾಣಿಸಿ ಈ ಜಾಡ್ಯಗಳನ್ನು ಹೋಗಲಾಡಿಸಿದರೆ ಮಾತ್ರ ನಮ್ಮ ಸ್ವಾತಂತ್ರ್ಯಕ್ಕೆ ಮಹತ್ವ ಬಂದಂತಾಗುತ್ತದೆ. ಸ್ವಾತಂತ್ರ್ಯದ ನಂತರ ಭಾರತ ಪ್ರಗತಿಪರ ರಾಷ್ಟ್ರವಾಗುತ್ತದೆಂದು ಹಲವು ಪ್ರಾಜ್ಞರ ಕನಸಾಗಿತ್ತು. ಆದರೆ ಅವರೆಲ್ಲರ ಕನಸುಗಳು ತಲೆ ಕೆಳಗಾದವು. ಲಂಚಗುಳಿತನ, ಕಳಪೆ ಮಟ್ಟದ ತಂತ್ರಜ್ಞಾನ, ಧನದಾಹಿತ್ವಗಳಿಂದಾಗಿ ಅಂದಿನ ಕನಸುಗಳು ನುಚ್ಚು ನೂರಾದವು.

ಈ ಐವತ್ತು ವರ್ಷಗಳಲ್ಲಿ ಭಾರತದೊಳಗೆ ಬಡವರು ಮತ್ತಷ್ಟು ಬಡವರಾಗುತ್ತಿದ್ದಾರೆ; ಶ್ರೀಮಂತರು ಶ್ರೀಮಂತರಾಗುತ್ತಿದ್ದಾರೆ. ಇದು ನಿಲ್ಲಬೇಕು. ಸರಕಾರದ ಅಂಕುಶ ಇಲ್ಲದಂತಾಗಿ ಸ್ವೈರ ವೃತ್ತಿ ಹೆಚ್ಚುತ್ತಿದೆ. ನಮ್ಮ ಸಂಸತ್ತು ಕಳ್ಳರ, ದರೋಡೆಕೋರರ ತಾಣವಾಗುವ ದುಃಶಕುನ ಈಗಾಗಲೇ ಕಾಣುತ್ತಿದೆ. ಇಂತಹ ಅಪಾಯಕಾರಿ ಪರಿಸ್ಥಿತಿ ಬರದಂತೆ ಇನ್ನು ಮುಂದೆ ಪ್ರತಿಯೊಬ್ಬ ಪ್ರಜೆಯೂ ಎಚ್ಚರಿಕೆ ವಹಿಸಬೇಕಾಗಿದೆ.

ನಮ್ಮ ದೇಶದ ಕುರಿತ ಸ್ಪಷ್ಟ ಚಿತ್ರಣ ಭಾವೀ ಭಾರತೀಯರಿಗೆ ತಿಳಿಯಬೇಕು. ನಮ್ಮ ಇತಿಹಾಸವನ್ನು ಬೇಕಾಬಿಟ್ಟಿ ತಿರುಚಿದ್ದಾರೆಂದು ಹಲವರು ಅಭಿಪ್ರಾಯಪಡುತ್ತಾರೆ. ಇಂತಹ ಇತಿಹಾಸಗಳಿಂದ ದೇಶಪ್ರೇಮ ಹುಟ್ಟುವುದಿಲ್ಲ. ತಿರುಚಿದ ಇತಿಹಾಸವನ್ನು ಪುನರ್‌ರೂಪಿಸುವದು ಇಂದಿನವರ ಆದ್ಯ ಕರ್ತವ್ಯ. ಪ್ರತಿ ಪ್ರಜೆಯು ಸ್ವಾತಂತ್ರ್ಯದ ಮಹತ್ವ, ದೇಶ ಪ್ರೇಮದ ಕುರಿತು ಮನದಟ್ಟು ಮಾಡಿಕೊಂಡಾಗಲೇ ದೇಶವು ಪ್ರಗತಿ ಪಥದಲ್ಲಿ ಮುನ್ನಡೆಯಬಹುದು.

✲ ✲ ✲

# ಓಟಿಗಾಗಿ ಬಳಕೆಯಾಗುತ್ತಿರುವ ಭಾರತೀಯ

• ಇಮಾಮಸಾಬ ಖಾ. ಮುಲ್ಲಾ

ನಮ್ಮ ದೇಶ ಸ್ವತಂತ್ರವಾಗಿ ೫೦ ವರ್ಷ ಗತಿಸಿದರೂ ಸ್ವಾತಂತ್ರ್ಯದ ಅರ್ಥವೇ ನಮಗೆ ತಿಳಿದಿಲ್ಲ. ನಮ್ಮ ಜನತೆಗೆ "ಸ್ವಾತಂತ್ರ್ಯ"ದ ಅರಿವು ಬೇಕಾಗಿದೆ. ಮೊದಲು ನಮ್ಮಲ್ಲಿಯೇ ಅನೇಕ ನ್ಯೂನತೆಗಳು ಇವೆ. ಅನೇಕ ಸಮಸ್ಯೆಗಳಿವೆ. ನಮ್ಮ ದೇಶದ ಸಂಸ್ಕೃತಿ ಬಿಟ್ಟು ಬೇರೆ ಸಂಸ್ಕೃತಿಗೆ ಹೊಂದುವುದು ಸರಿಯಲ್ಲ. ಈ ಕುಲಗೆಟ್ಟ ರಾಜಕೀಯದಿಂದಾಗಿ ಪಂಗಡ-ಪಂಗಡಗಳ ನಡುವೆ ದ್ವೇಷ, ಜಾತಿ, ಮತ, ಧರ್ಮಗಳಲ್ಲಿ ಕಿತ್ತಾಟ ಪ್ರಾರಂಭವಾಗಿದೆ.

ಡಾ|| ಅಂಬೇಡ್ಕರ್. ಜಯಂತಿ ಇದೆ ಎಂದರೆ ಅದನ್ನು ಕೇವಲ ಹಿಂದುಳಿದವರು ಆಚರಣೆ ಮಾಡಬೇಕೆ? ಅದು ಹಿಂದುಳಿದವರಿಗೆ ಸಂಬಂಧ ಎಂಬ ಒಂದು ಕೆಟ್ಟ ಸಂಸ್ಕೃತಿ ಬೆಳೆದಿದೆ. ಇದರಂತೆ ಅನೇಕ ಕಾರ್ಯಕ್ರಮಗಳು ನಡೆದರೂ ಅವು ಜಾತಿ, ಮತಗಳ ಮೇಲೆ ನಡೆಯುತ್ತ ಇರುತ್ತವೆ. ಇಂದಿನ ಯುವ ಜನಾಂಗವು ಕೂಡ ತಮ್ಮ ತಮ್ಮ ಬೇಳೆ ಬೇಯಿಸಿಕೊಳ್ಳಲು ಜಾತಿಗಳ ಮೇಲೆ ಹಲವಾರು ಪಂಗಡಗಳನ್ನು ಕಟ್ಟಿಕೊಂಡು ಕಲುಷಿತ ವಾತಾವರಣ ನಿರ್ಮಾಣ ಮಾಡುತ್ತಿದ್ದಾರೆ.

ನಾವು ಕೇವಲ ಸ್ವಾತಂತ್ರ್ಯ ಸಿಕ್ಕಿದೆ ಎಂಬ ಸಂತೋಷದಲ್ಲಿ ಮೈ ಮರೆತು ಕುಳಿತಿದ್ದೇವೆ. ಅದರ ಸರಿಯಾದ ಅರ್ಥ ತಿಳಿದುಕೊಂಡಿಲ್ಲ. ಗಾಂಧೀಜಿಯವರು ನಮ್ಮ ದೇಶ "ರಾಮರಾಜ್ಯ"ವಾಗಬೇಕೆಂದು ಪ್ರಯತ್ನ ಪಟ್ಟರು. ಆದರೆ ಈಗ ಕರ್ಮರಾಜ್ಯವಾಗುತ್ತಿರುವುದು ಸೋಜಿಗದ ಸಂಗತಿಯಾಗಿದೆ. ನಮ್ಮದು ಸಂಪದ್ಭರಿತ ಹಾಗೂ ಐತಿಹಾಸಿಕ ಪರಂಪರೆಯುಳ್ಳ ರಾಷ್ಟ್ರ. ಹೀಗಿದ್ದೂ ನಮಗಿಂತಲೂ ಚಿಕ್ಕ ಹಾಗೂ ಹಿಂದುಳಿದ ರಾಷ್ಟ್ರಗಳು ಇವತ್ತು ನಮ್ಮನ್ನು ಮೀರಿ ಮುಂದುವರೆಯುತ್ತಿವೆ. ಹೊಲಸು ರಾಜಕೀಯದಿಂದ ನಮ್ಮ ದೇಶದ "ಪ್ರಜಾಪ್ರಭುತ್ವ" ಮಣ್ಣುಗೂಡಿ ಅರ್ಥ ಕಳೆದುಕೊಳ್ಳತೊಡಗಿದೆ. ಹಣದಿಂದ ಎಲ್ಲವನ್ನೂ ಕೊಂಡುಕೊಳ್ಳುವ ಪ್ರವೃತ್ತಿ ಬೆಳೆದುಬಿಟ್ಟಿದೆ.

ಭಾರತದ ಶ್ರೀ ಸಾಮಾನ್ಯನನ್ನು ನಮ್ಮ ವ್ಯವಸ್ಥೆ ಕೇವಲ "ಓಟಿಗಾಗಿ" ಉಪಯೋಗಿಸುತ್ತಿದೆ. ವಸ್ತುಸ್ಥಿತಿ ಹೀಗಿರುವಾಗ ಈ ದೇಶದ ಅಭಿವೃದ್ಧಿಯ ಚಿಂತನೆ ಮಾಡುವವರು ಯಾರು? "ಸ್ವಾತಂತ್ರ್ಯ"ದ ಅರ್ಥ ತಿಳಿಯುವುದು ಯಾವಾಗ? ಗಾಂಧೀಜಿ ಕಂಡ ಕನಸು ನನಸಾಗುವುದು ಯಾವಾಗ?

ಮಹಾತ್ಮಾ ಗಾಂಧೀಜಿ ಕಟ್ಟಿದ ಕನಸು ನನಸಾಗಬೇಕು ಅಂದರೆ ನಾವು ಧರ್ಮ ನಿರಿಕ್ಷೆಯ ರಾಜ್ಯ ಕಟ್ಟಬೇಕು. ಯುವಕರು ಉತ್ತಮ ಚಟುವಟಿಕೆಯಲ್ಲಿ ತೊಡಗಬೇಕು ಹಾಗೂ ನ್ಯಾಯ, ನಿಷ್ಠೆ, ಧರ್ಮದಂತೆ ನಡೆಯುತ್ತ ಸ್ವಾರ್ಥವನ್ನು ತ್ಯಾಗ ಮಾಡಿ ಭಾವೈಕ್ಯದಿಂದ ಮೆರೆಯಬೇಕು. ನಮ್ಮ ದೇಶದ ರಾಜಕೀಯ ಶುದ್ಧವಾಗಬೇಕು. ಜನತೆಗೆ ಸ್ಪಂದಿಸಿ ಉತ್ತಮವಾದ ಆಡಳಿತ ಕೊಡಬೇಕು. ಅಧಿಕಾರ ವರ್ಗಗಳು ಉತ್ತಮ ಅಧಿಕಾರ ಕೊಡಬೇಕು. ದೇಶ ಸೇವೆಗೆ ಹಗಲಿರುಳು ದುಡಿಯಬೇಕು. ಈ ದೇಶದ ಸಂಪತ್ತನ್ನು ಕಾಯಬೇಕು. ಇದಕ್ಕೆ ಎಲ್ಲರ ಸಹಾಯ-ಸಹಕಾರ, ಯುವ ಮಿತ್ರರ ಛಲ, ದೃಢವಾದ ನಿರ್ಧಾರ ಬೇಕು. ನಾವು ಎಲ್ಲರೂ ಭಾರತ ಮಾತೆಯ ಮಕ್ಕಳು ಎಂಬ ಭಾವನೆಯಿಂದ, ಒಂದೇ ಮನಸ್ಸಿನಿಂದ ಮುನ್ನುಗ್ಗಬೇಕು. ಈ ದೇಶದ ಅಭಿವೃದ್ಧಿಯತ್ತ ದಾಪುಗಾಲು ಹಾಕಬೇಕು. ಆಗ ಮಾತ್ರ ಸ್ವಾತಂತ್ರ್ಯದ ನಿಜವಾದ ಅರ್ಥ ಸಿಕ್ಕಂತಾಗುವುದು. ಗಾಂಧೀಜಿಯವರು ಕಂಡ ಕನಸು ನನಸಾಗುವುದು.

* * *

# ನಿಜವಾದ ಸ್ವಾತಂತ್ರ್ಯ ಲಭಿಸಿದೆಯೆ?

• ಎಸ್. ಆನಂದ್ ಆಡಾನ್

ಸ್ವಾತಂತ್ರ್ಯ ಬಂದು ೫೦ ವರುಷ ಕಳೆದಿರುವ ಪರ್ವ ಕಾಲದಲ್ಲಿ ನಮಗೆ ನಿಜವಾದ ಸ್ವಾತಂತ್ರ್ಯ ಲಭಿಸಿದೆಯೆ ಎಂದು ನಮ್ಮನ್ನು ನಾವು ಕೇಳಿಕೊಂಡರೆ ಬಹುಶಃ ಸ್ಪಷ್ಟವಾದ ಉತ್ತರ ಹೇಳುವುದು ಸ್ವಲ್ಪ ಕಷ್ಟ. ಸ್ವಾತಂತ್ರ್ಯ ಬರುವ ಮುನ್ನ ಹಾಗೂ ಬಂದು ಒಂದೆರಡು ದಶಕದ ತನಕ ಜನನಾಯಕರಲ್ಲಿ, ಜನರಲ್ಲಿ ದೇಶಭಕ್ತಿಯ ಮಹಾಪೂರವೇ ಇತ್ತು. ಇಂದು ದೇಶಭಕ್ತಿ ಎಷ್ಟು ಜನರಲ್ಲಿದೆ ಎನ್ನುವುದನ್ನು ಹೇಳುವುದು ಕಷ್ಟ. ಅಂದು ಬಡತನವಿತ್ತು, ಇಂದೂ ಇದೆ. ಆದರೆ ಜನರಲ್ಲಿ ನೈತಿಕ ಹೊಣೆ, ಜವಾಬ್ದಾರಿ, ದೇಶಭಕ್ತಿ, ದೈವಭಕ್ತಿ, ಸಾಮರಸ್ಯ, ಸೌಹಾರ್ದತೆ ಎಲ್ಲವೂ ಇದ್ದವು. ಇಂದು ಏನಾಗಿದೆ ಎನ್ನುವುದು ಎಲ್ಲರಿಗೂ ತಿಳಿದಿರುವ ಸಂಗತಿ. ಸಮಸ್ಯೆಗಳ ರಾಶಿ, ಬಡತನ, ಜನಸಂಖ್ಯೆ, ನಿರುದ್ಯೋಗ, ಕೋಮು-ಗಲಭೆ, ಭ್ರಷ್ಟಾಚಾರ, ಸ್ವಾರ್ಥ, ಸ್ವಜನ ಪಕ್ಷಪಾತ.... ಇವುಗಳನ್ನೆಲ್ಲ ಪಟ್ಟಿ ಮಾಡುತ್ತ ಹೋದರೆ ಕೊನೆಯೇ ಇಲ್ಲ. ಮೂಲಭೂತವಾಗಿ ಜನರಲ್ಲಿ ತಿಳುವಳಿಕೆ ಅಭಾವವಿದೆ. ವಿದ್ಯಾವಂತರಲ್ಲೂ ಕೂಡ. ಅಂದರೆ ವಿದ್ಯಾವಂತನೆಂದರೆ ಈ ದಿನ ಬರೀ ಓದಲಿಕ್ಕೆ ಬರೆಯಲಿಕ್ಕೆ ಬರೋದೇ ವಿದ್ಯಾವಂತನ ಲಕ್ಷಣ ಅನ್ನೋ ಹಾಗಾಗಿದೆ, ವೈಚಾರಿಕತೆ ಬೆಳೆಸೋದಲ್ಲ.

ಎಂತಹ ನಾಡೋಜರು ಹುಟ್ಟಿ ಬೆಳೆದ ನಾಡಿದು! ಗಾಂಧಿ, ನೆಹರೂ, ಅಂಬೇಡ್ಕರ್, ಸುಭಾಷ್ ಚಂದ್ರ ಬೋಸ್, ಟ್ಯಾಗೋರ್, ವಿವೇಕಾನಂದ..... ಎಂತಹ ಚಿಂತಕರಿವರು! ಇವರ ಹಾದಿಯಲ್ಲಿ ಯಾರೂ ಚಿಂತಿಸುತ್ತಿಲ್ಲ. ಉತ್ತಮ ಭವಿಷ್ಯದ ಕನಸು ಕಟ್ಟುತ್ತಿಲ್ಲ, ನಮ್ಮ ಚಿಂತನೆಯ ಹಾದಿ ಬದಲಾಗಬೇಕಿದೆ, ಜನರಲ್ಲಿ ಜಾಗೃತಿಯ ಕಹಳೆ ಮೊಳಗಬೇಕಿದೆ. ಪಾಶ್ಚಾತ್ಯರ ಉಡುಪು, ಜೀವನದ ಶೈಲಿಯನ್ನು ಅನುಸರಿಸುವುದು ಗೊತ್ತೇ ವಿನಃ ಅವರಂತೆ ಚಿಂತಿಸುವುದು ನಮಗೆ ತಿಳಿದಿಲ್ಲ; ತಿಳಿದಿದ್ದರೂ ನಾವು ಕಾರ್ಯೋನ್ಮುಖರಾಗುತ್ತಿಲ್ಲ. ಸ್ವಾತಂತ್ರ್ಯಪೂರ್ವ ಜನರಲ್ಲಿ ಶಾಂತಿ ಇತ್ತು. ಇಂದು ಇದೆಯೆ? ಅನ್ನದ ಕೂಗು ಯಾರ ಕಿವಿಗೂ ಬೀಳುತ್ತಿಲ್ಲ. ಹೃದಯ ಬಿಚ್ಚಿ, ಮನಸ್ಸು ಕೊಟ್ಟು ಆಲಿಸಿದಾಗ, ಕಣ್ತೋಡಿಸಿದಾಗ ಮಾತ್ರ ಆ ಅನ್ನದ ಕೂಗು ರಣಕಹಳೆಯಾಗಿ ಕೇಳಿಬರುತ್ತದೆ. ಇಂಥ ಸಮಸ್ಯೆಗಳ ಪರಿಹಾರದ ನಿಟ್ಟಿನಲ್ಲಿ ನಾಯಕರು, ಆಳುವ ಜನ ಬರೀ ಉದ್ದುದ್ದ ಘೋಷಣೆ, ಭಾಷಣಗಳನ್ನು ಬಿಗಿದು ಸುಮ್ಮನಾಗುತ್ತಿದ್ದಾರೆ. ಇಂಥವರಿಂದ ದೇಶದ ಉತ್ತಮ ಭವಿಷ್ಯ ನಿರೀಕ್ಷಿಸಲಾದೀತೇ? ಭಾರತೀಯ ಸ್ವಾತಂತ್ರ್ಯ ಹೋರಾಟದ ದಿನಗಳಲ್ಲಿ ಪ್ರಪ್ರಥಮ ಪಂಚವಾರ್ಷಿಕ ಯೋಜನೆ ಹಾಗೂ ದ್ವಿತೀಯ ಪಂಚವಾರ್ಷಿಕ ಯೋಜನೆಗಳಲ್ಲಿ ಸ್ವಲ್ಪ ಸಾಧನೆಯ ಫಲ ನೀಡಿರುವುದಂತೂ

ನಿಜ. ನಂತರದ ಯಾವುದೇ ಯೋಜನೆ ಅಡಿಯಲ್ಲಿ ಸಾಧನೆಯ ಹಾದಿ ಇದೆ ಎಂದರೆ ಸ್ವಲ್ಪ ತಲೆ ತಗ್ಗಿಸಬೇಕಾದೀತು. ಸಾಧಕರ ದೃಷ್ಟಿಯಲ್ಲಿ ಏನನ್ನೂ ನಾವು ಸಾಧಿಸಲೇ ಇಲ್ಲವೆ ಅಂತ ನಮ್ಮನ್ನು ನಾವು ಕೇಳಿಕೊಂಡರೆ ಸಾಧಿಸಿದ್ದು ಇದೆ– ವಿದೇಶಿ ಸಾಲ, ದೇಶಾದ್ಯಂತ ಹಗರಣ, ರಸ್ತೆ ತುಂಬ ವಾಹನ, ಮಿತಿಮೀರಿದ ಜನಸಂಖ್ಯೆ. ಇದಕ್ಕೆ ಅಂಕಿ ಸಂಖ್ಯೆ ಆಧಾರದ ಮೇಲೂ, ಹಾಂ! ನೋಡಿ ಇಷ್ಟು ಸಾಧಿಸಿದ್ದೇವೆ ಎಂದು ಗ್ರಾಫ್ ಹಾಕಿ ತೋರಿಸುವ ಗಣಕಯಂತ್ರ ಹಾಗೂ ದೂರದರ್ಶನ ಇದ್ದೇ ಇದೆ. ವಿಜ್ಞಾನ ಮುಂದುವರೆದಿರಬಹುದು, ಜೊತೆಗೆ ಅಜ್ಞಾನವೂ ಮುಂದುವರಿಯುತ್ತ ಇದೆಯಲ್ಲ, ಸಂಸ್ಕೃತಿಯನ್ನು ನಾವು ಮರೆಯುತ್ತ ಇದೀವಲ್ಲ! ಅದೇ ಒಂದು ದೊಡ್ಡ ಸಾಧನೆ!

# ಸ್ವಾತಂತ್ರ್ಯದ ಪರಿಭ್ರಮಣೆ

• ಶ್ರೀಮತಿ ಚಂಚಲಾ ಶ್ರೀಕಂಠಯ್ಯ

ಸ್ವಾತಂತ್ರ್ಯ ನಮ್ಮ ಜನ್ಮಸಿದ್ಧ ಹಕ್ಕು; ನಾವು ಏನೂ ಮಾಡಲೂ ಸರ್ವ ಸ್ವತಂತ್ರರೆಂದು ಬೀಗುತ್ತ ಐದು ದಶಕವನ್ನು ಕಳೆದ ಭಾರತೀಯರು ನಾವು! ಇದೀಗ ನಮಗೆ ದಕ್ಕಿರುವ ಸ್ವಾತಂತ್ರ್ಯವನ್ನು ಯಾವ ನಿಟ್ಟಿನಲ್ಲಿ ನಡೆಸಿಕೊಂಡು ಹೋಗುತ್ತಿದ್ದೇವೆಂದು ಪರಾಮರ್ಶಿಸುವ ಸುವರ್ಣಾವಕಾಶ ದೊರಕಿದೆ. ಸ್ವಾತಂತ್ರ್ಯದ ಹಕ್ಕನ್ನು ಅನುಭವಿಸುವ ಸಂಭ್ರಮದಲ್ಲಿ ದೇಶ ಚಿಂತನೆಗಿಂತ ಸ್ವಾರ್ಥ ಚಿಂತನೆಗೆ ಆದ್ಯತೆ ಕೊಟ್ಟು ದೇಶದ ಹಿತವನ್ನು ವಿನಾಶದ ಅಂಚಿಗೆ ಕೊಂಡೊಯ್ಯುತ್ತಿದ್ದೇವೇನೋ ಎಂಬ ಆತಂಕ ವಿಚಾರವಾದಿಗಳನ್ನು ಕಾಡದೆ ಬಿಟ್ಟಿಲ್ಲ. ಹಾಗೆಂದು ಸ್ವಾತಂತ್ರ್ಯ ಎಲ್ಲರಿಗೂ ಲಭ್ಯವಿದ್ದು, ಪ್ರತಿಯೊಬ್ಬರೂ ಅನುಭವಿಸುತ್ತಾರೆಂದು ಅರ್ಥವಲ್ಲ. ಇದು ಕೆಲವರ ಸೊತ್ತು. ಇದರಲ್ಲಿರುವ ಸೌಲಭ್ಯ, ಸವಲತ್ತುಗಳನ್ನು ಅನುಭವಿಸುವಂತೆ ಈ ಸೊತ್ತಿನ ಮಾಲೀಕರು ಸ್ವಾತಂತ್ರ್ಯದ ಅರ್ಥವನ್ನೇ ಅರಿಯದ ಮುಗ್ಧ ಜೀವಿಗಳ ಹೊಣೆ ಹೊತ್ತವರು. ಅವರ ಉದ್ಧಾರದ ಹೆಸರಿನಲ್ಲಿ ಅನೇಕ 'ಹಗರಣ'ಗಳ ಸೃಷ್ಟಿಗೆ ನಾಂದಿ ಹಾಡಿ ಬಡ ಭಾರತವನ್ನು ಶಕ್ತಿಹೀನವನ್ನಾಗಿಸುವ ಹುನ್ನಾರದಲ್ಲಿದ್ದಾರೆ. ಇದರಿಂದ ಸಾಮಾಜಿಕ ಅಸಮತೆ ಏರ್ಪಟ್ಟಿದೆ. ಬಡವ ಬಡತನದ ಕೆಳ ರೇಖೆಗೆ ಜಾರಿದರೆ, ಧನಿಕ ಕೋಟ್ಯಾಧಿಪತಿಯಾಗುತ್ತಿದ್ದಾನೆ. ಅನಕ್ಷರತೆ, ಅಜ್ಞಾನ ಒಂದು ಕಡೆ ಸವಾಲಾದರೆ..... ಮತ್ತೊಂದೆಡೆ ಸ್ವಾತಂತ್ರ್ಯದ ಸ್ವರ್ಣ ಮಹೋತ್ಸವದ ಅಂಗವಾಗಿಯೋ ಎಂಬಂತೆ ಇತ್ತೀಚೆಗೆ ಪೋಖ್ರಾನ್‌ನಲ್ಲಿ ಅಣ್ವಸ್ತ್ರವನ್ನು ಸಿಡಿಸಿ ನಮ್ಮ ವೈಜ್ಞಾನಿಕ ಜ್ಞಾನವನ್ನು ಪ್ರದರ್ಶಿಸಿದ್ದೇವೆ. ಕೆಲವೊಂದು ಬಲಿಷ್ಠ ರಾಷ್ಟ್ರಗಳನ್ನು ಮುಜುಗರಕ್ಕೆ ಒಳಪಡಿಸಿದ ಹೆಗ್ಗಳಿಕೆ ನಮ್ಮದಾಗಿದೆ. ಹಾಗಾದರೆ ಸ್ವಾತಂತ್ರ್ಯದ ಅರ್ಥ? ಸ್ವಾತಂತ್ರ್ಯವೆಂಬುದು ಸ್ಥೂಲವೂ ಹೌದೂ ಸೂಕ್ಷ್ಮವೂ ಹೌದು. ಇದು ವ್ಯಷ್ಟಿಯಲ್ಲಿ ವೈಯಕ್ತಿಕ, ಸಮಷ್ಟಿಯಲ್ಲಿ ಸಾಮೂಹಿಕ. ಇತರರಿಗೆ ತೊಂದರೆ, ಸಂಕಟ, ಹಿಂಸೆಯಾಗದಂತೆ ಸ್ವಚ್ಛ ಸ್ವಾತಂತ್ರ್ಯವನ್ನು ನಾವೆಷ್ಟು ಋಜು ಮಾರ್ಗದಲ್ಲಿ ಬಳಸಿದ್ದೇವೆ? ಆ ನಿಟ್ಟಿನಲ್ಲಿ ಹಿಂಸೆ, ಹಲ್ಲೆ, ಭ್ರಷ್ಟತೆಯ ಹಾದಿ ಹಿಡಿದ ಸ್ವೇಚ್ಛೆ, ಸ್ವಾತಂತ್ರ್ಯವನ್ನು ಹೀರಿಕೊಳ್ಳುವವರೇ ಅಧಿಕ. ಸ್ವಾತಂತ್ರ್ಯಕ್ಕಿರುವ ಕಾನೂನಿನ ಚೌಕಟ್ಟನ್ನು ಮೀರದಂತೆ ಬಹು ಚಾಕಚಕ್ಯತೆಯಿಂದ ನಿಭಾಯಿಸುವಷ್ಟು ನಿಪುಣತನ ತೋರಿಸಿದ್ದೇವೆ. ಸ್ವಾತಂತ್ರ್ಯವೆಂಬ ಕಲಬೆರಕೆ ಮಿಶ್ರಣ ಯಾರು ಬೇಕಾದರೂ ಯಾವ ರೀತಿಯಲ್ಲೂ ಉಪಯೋಗಿಸಬಹುದಾದ ಅಗ್ಗದ ಪದಾರ್ಥವಾಗಿದೆ! ಹಿಂದೆ ಏಕ ರಾಷ್ಟ್ರ, ಏಕ ಜನಾಂಗ, ಏಕ ಸಂಸ್ಕೃತಿಯ ದೃಷ್ಟಿಕೋನ ಹೊಂದಿ ದೇಶವನ್ನು ಪರತಂತ್ರದಿಂದ ಬಿಡಿಸಿದ್ದಾಯಿತು. ಆದರಲ್ಲಿ ಪ್ರತಿಯೊಬ್ಬರಿಗೂ ಸಮಪಾಲುಂಟು ಎಂಬ ವಿಭ್ರಮೆಯಲ್ಲಿ ದೇಶದ ಏಕತೆಯನ್ನು ಇಂಚು ಇಂಚಾಗಿ

ಕೊಲ್ಲುತ್ತಿದ್ದೇವೆ. ವೈವಿಧ್ಯತೆಯಲ್ಲಿ ಕಾಣುವ ಏಕತೆಗೆ ಭಂಗ ತಂದೊಡ್ಡಬಹುದೆಂಬ ಅಂಜಿಕೆ ಯಾರ ಮನದಲ್ಲಿಯೂ ಇಣಕಿಲ್ಲ. ಜಾತ್ಯತೀತತೆ ಎಂಬ ಸೋಗಿನಲ್ಲಿ ಜಾತಿವಾದ ಮತ್ತು ಜಾತೀಯತೆಯನ್ನು ಎತ್ತಿ ಹಿಡಿಯುತ್ತಿದ್ದೇವೆ. ದಲಿತೋದ್ಧಾರದ ಮುಖವಾಡದ ಹಿಂದೆ ದಲಿತರನ್ನು ಇನ್ನಷ್ಟು ದಲಿತರನ್ನಾಗಿ ಮಾಡಿ ಅವರು ಎಂದೂ ಮೇಲೇರದಂತೆ ತುಳಿಯುತ್ತಲಿದ್ದೇವೆ. ಅವರಿಗೆ ಸಾಮಾಜಿಕ ನ್ಯಾಯ ದೊರಕಿದರೆ ನಮ್ಮ ಖಜಾನೆ ತುಂಬುವುದು ನಿಂತೀತೆಂಬ ಭಯ ಅಂತರಂಗದಲ್ಲಿ ಸದಾ ತುಡಿಯುತ್ತಲೇ ಇರುತ್ತದೆ. ಪ್ರಾದೇಶಿಕತೆಯ ಅರೆ ಅಭಿಮಾನದ ಚಿಂತನೆಯಲ್ಲಿ ಪ್ರಾದೇಶಿಕವಾದವನ್ನು ಪರೋಕ್ಷವಾಗಿ ಬೆಂಬಲಿಸಿ, ದೇಶದ ಚಿಂತನೆಯನ್ನು ಕಡೆಗಣಿಸುವಷ್ಟು ಸ್ವಾತಂತ್ರ್ಯವನ್ನು ತೋರುತ್ತಿದ್ದೇವೆ. ಅಲ್ಪ ಸಂಖ್ಯಾತರ ಹಣೆಪಟ್ಟಿ ಕಟ್ಟಿ ಮಂದಿ ಮಂದಿಯಲ್ಲಿ ವೈಷಮ್ಯದ ವಿಷಬೀಜ ಬಿತ್ತಿದ್ದೇವೆ. ಮೀಸಲಾತಿ ಎಂಬ ತಪ್ಪು ವರ್ಗೀಕರಣದಿಂದ ಗೊಂದಲ ಸೃಷ್ಟಿಸಿ, ಪ್ರತಿಭೆಗಳ ಮಾರಣಹೋಮ ಮಾಡಿದ್ದೇವೆ. ಕೆಲವೊಂದು ಪ್ರತಿಭೆಗಳು ಈ ಅಗ್ನಿಕುಂಡದಿಂದ ಹಾರಿ ಪ್ರತಿಭಾ ಪಲಾಯನ ಮಾಡಿದರೆ ಸಂತೋಷದಿಂದ ಬೀಳ್ಕೊಡುತ್ತಿದ್ದೇವೆ. ಇನ್ನು ದೇಶದ ಅತ್ಯಮೂಲ್ಯ ನೈಸರ್ಗಿಕ ಸಂಪತ್ತನ್ನು ಪೇಟೆಂಟ್ ಮೂಲಕ ವಿದೇಶೀಯರು ಕೊಳ್ಳೆ ಹೊಡೆಯುವುದಕ್ಕೆ ಮತ್ತೊಮ್ಮೆ ಅವರನ್ನು ಹೃದಯ ವೈಶಾಲ್ಯತೆಯಿಂದ ಸ್ವಾಗತಿಸುತ್ತಿದ್ದೇವೆ. ಅವರು ಧೃಢವಾಗಿ ಕಾಲೂರಲು ಮಾರ್ಗಸೂಚಿ ಹಾಕುತ್ತಿದ್ದೇವೆ.

ಮಾತೆತ್ತಿದರೆ ಮುಷ್ಕರ, ಹರತಾಳ ಎನ್ನುವ ಕಾರ್ಮಿಕರು, ನೌಕರರು; ಜಗತ್ತಿನಲ್ಲಿ ಬೇರೆಲ್ಲೂ ಇಲ್ಲದಷ್ಟು ಸರಕಾರಿ ರಜೆಗಳು ಹಾಗೂ ಸಾರ್ವತ್ರಿಕ ರಜೆಗಳ ಸೌಲಭ್ಯಗಳನ್ನು ಪಡೆದು ಜಡವಾಗುತ್ತಿರುವ ಸರಕಾರಿ ಆಡಳಿತ ಯಂತ್ರಾಂಗ..... ಇವೆಲ್ಲ ದೇಶದ ಆರ್ಥಿಕ, ಬೌದ್ಧಿಕ ದಿವಾಳಿತನಕ್ಕೆ ಕಾರಣವಾಗತೊಡಗಿವೆ.

ಭಾರತದಲ್ಲಿ ಈ ಶತಮಾನದ ಅತ್ಯಂತ ಪ್ರಮುಖ ಘಟನೆ–ಪ್ರಜಾಶಕ್ತಿಯ ಹೆಸರಿನಿಂದ ಎರಡೇ ವರ್ಷದಲ್ಲಿ ಎರಡೆರಡು ಮಹಾಚುನಾವಣೆಯನ್ನು ಕಂಡಂತಹುದು. ಇದರಲ್ಲಿ ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ನಿರ್ನಾಮ ಮಾಡಿ ಸ್ವಾತಂತ್ರ್ಯ ಪ್ರಜ್ಞೆಯನ್ನು ಪ್ರದರ್ಶಿಸಿದ್ದೇವೆ! ಸಮ್ಮಿಶ್ರ ಸರ್ಕಾರಗಳ ಆಳ್ವಿಕೆಯ ವೈಫಲ್ಯತೆಯ ನೆರಳಿನಲ್ಲಿ ನರಳಿ-ನರಳಿ ಮತ್ತೊಂದು ಚುನಾವಣೆಯನ್ನು ಆತಂಕದಿಂದ, ಬೇಡದ ಮನಸ್ಸಿನಿಂದ ನಿರೀಕ್ಷಿಸುತ್ತಿರುವ ಭವ್ಯ ನಾಗರಿಕರು ನಾವಾಗಿದ್ದೇವೆ. 'ಮತದಾರರೇ ಮೂರ್ಖರಾದರೆ ದೇಶವನ್ನು ದುರ್ಜನರಲ್ಲದೆ ಇನ್ನಾರು ಆಳಬಲ್ಲರು' ಎಂದ ಬೆಂಜಮಿನ್ ಡಿಸ್ರೇಲಿಯವರ ನುಡಿ ನಾಯಕರು ಮತ್ತು ನಾಗರಿಕರ ಕರ್ತವ್ಯ ನಿಷ್ಠೆ, ಪ್ರಾಮಾಣಿಕತೆ ಜವಾಬ್ದಾರಿಯನ್ನು ಪ್ರತಿಪಾದಿಸುತ್ತದೆ. ಬುದ್ಧಿಜೀವಿಗಳು ರಾಜಕೀಯದಲ್ಲಿ ಅನಾಸಕ್ತರು. ಅನಕ್ಷರಸ್ಥ ಮುಗ್ಧರು ರಾಜಕಾರಣದಲ್ಲಿ ಅಜ್ಞಾನಿಗಳು. ಇದು ನಮ್ಮ ಪ್ರಜಾಸತ್ತೆಯಲ್ಲಿರುವ ಬಿರುಕಿನ ಕಂದರ. ಬಾಂಬ್ ಹಿಡಿಸಿಕೊಂಡ ಜಪಾನ್ ಕೇವಲ ೫೦ ವರ್ಷದಲ್ಲಿ ತನ್ನ ಪ್ರಾಮಾಣಿಕತೆ, ದೇಶಪ್ರೇಮ ಹಾಗೂ ಆತ್ಮಬಲದಿಂದ ವಿಶ್ವದಲ್ಲಿ ಒಂದು ಬಲಿಷ್ಠ ರಾಷ್ಟ್ರವೆನಿಸಿಕೊಂಡರೆ, ಭಾರತ ಸ್ವಾತಂತ್ರ್ಯ ಗಳಿಸಿ ಐದು ದಶಕದ ನಂತರವೂ ಇನ್ನೂ ಪ್ರಗತಿಯ ಬಾಲ್ಯಾವಸ್ಥೆಯಲ್ಲಿರಲು ದೇಶದ ನೈತಿಕ ಅಧಃಪತನವೇ ಕಾರಣ. ಸ್ವಸ್ಥ ಮತಿಯಿಲ್ಲದೆ ನಡೆಸುವ ಆಳ್ವಿಕೆಯಲ್ಲಿ ಪ್ರಜಾಪ್ರಭುತ್ವ ಸುಸ್ತು ಹೊಡೆದಿದೆ. ಒಂದು ಪಕ್ಷ ಆಡಳಿತ ವಹಿಸಿಕೊಂಡಾಕ್ಷಣ ಅದನ್ನುರುಳಿಸಲು ಟೀಕಾಸ್ತ್ರಗಳನ್ನು ವಿಪುಲವಾಗಿ ಇತರ ಪಕ್ಷಗಳು ಎಸೆಯುತ್ತಿವೆ. ವಿಮರ್ಶಿಸುವ, ಟೀಕಿಸುವ

ಹಕ್ಕು-ಸ್ವಾತಂತ್ರ್ಯವನ್ನು ನಾವು ಪಡೆದಿದ್ದೇವೆಂಬ ಕಾರಣದಿಂದ ಇತರ ಪಕ್ಷಗಳ ಸಹಕಾರ ಎಷ್ಟೋ ಸಲ ಅತ್ಯಲ್ಪದ್ದಾಗಿರುತ್ತದೆ. ಇದೆಲ್ಲದರ ನಡುವೆ ದೇಶದ ಹಿತ ಚಿಂತನೆಯನ್ನು ಹಿಂದೆ ಹಾಕಲಾಗುತ್ತಿದೆ.

ಅತಿ ದುಬಾರಿ ಬೆಲೆ ತೆತ್ತು ಪಡೆದುಕೊಂಡ ಸ್ವಾತಂತ್ರ್ಯವನ್ನು ಕಾಪಾಡುವುದು ಮತ್ತು ಅದರ ಬೆಲೆ ಅರಿಯುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವೂ ಹೌದು. ಒಟ್ಟಾರೆ, ಮಾನವ ಮಾನವನಿಗೆ ಶತ್ರುವಾಗದೆ, ಮಾನವೀಯತೆಯಿಂದ ವರ್ತಿಸಿ ಒಬ್ಬರ ಸ್ವಾತಂತ್ರ್ಯದ ಮೌಲ್ಯವನ್ನು ಮತ್ತೊಬ್ಬರು ಅರಿತು ನಡೆದಾಗ ಸ್ವಾತಂತ್ರ್ಯ ಚಿಂತನೆಗೊಂದು ಚಾಲನೆ ಬಂದೀತು.

✲ ✲ ✲

# ಜಾತಿ ರಾಜಕಾರಣ ನಿಲ್ಲಿಸಿ !
# ಭ್ರಷ್ಟತೆಯನ್ನು ಧಿಕ್ಕರಿಸಿ!

• ಪ್ರಕಾಶ ಎಸ್. ಪತ್ತಾರ

ಭಾರತ ಸ್ವತಂತ್ರವಾಗಿ ೫೦ ವರ್ಷಗಳು ಉರುಳಿದವು. ನಮ್ಮ ಲಕ್ಷಾಂತರ ದೇಶಪ್ರೇಮಿಗಳ ನೂರಾರು ವರ್ಷಗಳ ಅಪಾರ ತ್ಯಾಗ, ಬಲಿದಾನಗಳ ಪರಿಣಾಮವಾಗಿ ನಮಗೆ ಗುಲಾಮಗಿರಿಯಿಂದ ಮುಕ್ತಿ ದೊರೆಯಿತು. ಬ್ರಿಟಿಷರ ಕುತಂತ್ರಕ್ಕೆ ಮತ್ತು ಮತಾಂಧ ವಿಭಜನಕಾರಿ ಶಕ್ತಿಗಳಿಗೆ ಬಗ್ಗಿದ ನಮ್ಮ ನಾಯಕರ ದೌರ್ಬಲ್ಯಗಳಿಂದ ಅದೇ ದಿನ ನಮ್ಮ ಪ್ರಿಯ ಮಾತೃ ಭೂಮಿ ಭಾರತ ಮೂರು ತುಂಡುಗಳಾಗಿ ಒಡೆದು ಹೋಯಿತು. ರಾತ್ರಿ ಬೆಳಗಾಗುವುದರ ಒಳಗಾಗಿ ಲಕ್ಷಾಂತರ ಮಕ್ಕಳು ತಮಗೆ ಅರಿವಿಲ್ಲದೆ ತಮ್ಮದೇ ನೆಲದಲ್ಲಿ ಪರಕೀಯರೆನಿಸಿದರು. ಮನೆ-ಮಠ-ಬಂಧು-ಬಾಂಧವರನ್ನು ಕಳೆದುಕೊಂಡು ನಿರ್ಗತಿಕರಾದರು. ಜಗತ್ತಿನ ಇತಿಹಾಸದಲ್ಲಿ ಕಂಡು ಕೇಳರಿಯದಂತಹ ನರಮೇಧ, ಸ್ತ್ರೀಯರ ಮಾನಾಪಹರಣ, ಲೂಟಿ, ವಿಧ್ವಂಸಗಳು ನಡೆದವು.

ಸ್ವಾತಂತ್ರ್ಯ ಬಂದದ್ದು ನಮಗೆ; ಪ್ರಾಣಮಾನಗಳ ಬೆಲೆ ತೆತ್ತವರು ಅವರು. ಅದೊಂದು ಬಗೆಯ ಸ್ವಾತಂತ್ರ್ಯ ಬಲಿದಾನದ ಯಜ್ಞ. ಒಂದೆಡೆ ಸ್ವಾತಂತ್ರ್ಯೋತ್ಸವದ ಸಂಭ್ರಮದ ಆಚರಣೆ ಆಗುತಿತ್ತು. ಮತ್ತೊಂದೆಡೆ ನರಮೇಧ ನಡೆಯುತಿತ್ತು. ಭಾರತ ಮಾತೆಯ ಅಂಗವಿಭಜನೆ ನಡೆಯುತಿತ್ತು.

ಸ್ವಾತಂತ್ರ್ಯ ಎಂದರೆ ನಮ್ಮ ಸಂಸ್ಕೃತಿ, ಪರಂಪರೆಗಳಿಗೊಪ್ಪುವಂತೆ ಆರ್ಥಿಕವಾಗಿ, ಸಾಮಾಜಿಕವಾಗಿ, ಮಾನಸಿಕವಾಗಿ ಆಡಳಿತವನ್ನು ರೂಪಿಸಿಕೊಳ್ಳಬೇಕಾಗಿದೆ. ಸ್ವಾತಂತ್ರ್ಯ ನಂತರ ಮತ್ತು ಪೂರ್ವದಿಂದಲೂ ಸಾಧನೆಯನ್ನು ಮಾಡಲು ಸಾಕಷ್ಟು ಮಹಾನ್ ವ್ಯಕ್ತಿಗಳು ಪ್ರಯತ್ನಿಸಿದ್ದಾರೆ. ಜಗತ್ತಿಗೆ ಮೊದಲ ಕಾವ್ಯ ರಾಮಾಯಣ, ಮಹಾಭಾರತ ನಮ್ಮವು. ಜಗತ್ತಿಗೆ ಬದುಕಲು ಕಲಿಸಿದ ಸಂಸ್ಕೃತಿ, ರಾಷ್ಟ್ರಧರ್ಮ, ರಾಜ್ಯಶಾಸ್ತ್ರಗಳನ್ನು ಪ್ರಥಮವಾಗಿ ಬೋಧಿಸಿದ ಇತಿಹಾಸ ನಮ್ಮದು. ಗಣಿತಶಾಸ್ತ್ರ, ಲೋಹಶಾಸ್ತ್ರ, ಶಿಲ್ಪಶಾಸ್ತ್ರ, ಖಗೋಳಶಾಸ್ತ್ರ, ವೈದ್ಯಕೀಯ ಕ್ಷೇತ್ರದಲ್ಲಿ ಇಂದಿಗೂ ಸ್ಥಾನ ಉಳಿಸಿಕೊಂಡು ಬಂದಿರುವ ಕುಟುಂಬ ನಮ್ಮದು. ಅಮೆರಿಕಾ, ಯೂರೋಪ್ ದೇಶಗಳಲ್ಲಿ ಸಹಿತ ನಮ್ಮವರು ವಿಜ್ಞಾನ-ತಂತ್ರಜ್ಞಾನ-ವೈದ್ಯಕೀಯ ಕ್ಷೇತ್ರಗಳಲ್ಲಿ ಉತ್ತಮ ಉನ್ನತ ಸಾಧನೆಗೈದಿದ್ದಾರೆ. ಜಗತ್ತಿನಲ್ಲಿ ಅದ್ವಿತೀಯ ಶೌರ್ಯ, ಪರಾಕ್ರಮಗಳನ್ನು ಪ್ರದರ್ಶಿಸುತ್ತಿರುವ ಸೈನ್ಯ ನಮ್ಮದು. ಬಲಿಷ್ಠ ರಾಷ್ಟ್ರಗಳ ಸವಾಲನ್ನು ಎದುರಿಸಿ ಯುರೇನಿಯಂ ಬದಲಿಗೆ ಥೋರಿಯಂನಿಂದ ಅಣುವಿಕಿರಣ ಸಾಧಿಸಿದ್ದಾರೆ. ಪರಮಾ

೯೦೦೦ ಸ್ವದೇಶಿ ಸೂಪರ್ ಕಂಪ್ಯೂಟರ್ ನಿರ್ಮಿಸಿದ್ದಾರೆ. ಅಲ್ಲದೆ ಕ್ರಯೋಜನಿಕ್ ಎಂಜಿನ್ ನಿರ್ಮಿಸಿದ್ದಾರೆ. ಉಪಗ್ರಹಗಳನ್ನು ತಯಾರಿಸಿದ್ದಾರೆ. ಇನ್ನೂ ಇನ್ನೂ ಸಾಧನೆಗಳ ಅವಕಾಶ ಇದ್ದೇ ಇದೆ.

ಇಷ್ಟೆಲ್ಲ ಸಾಧನೆಗೈದರೂ ನಮ್ಮ ದೇಶದಲ್ಲಿ ಸಾಕಷ್ಟು ಸಮಸ್ಯೆಗಳ ಬೆಂಕಿಯ ಉಡಿಯನ್ನು ಹೊತ್ತು ನಿಂತಿದ್ದೇವೆ. ಜನಸಂಖ್ಯಾಸ್ಫೋಟದಿಂದ ಆರ್ಥಿಕವಾಗಿ ಹಿಂದುಳಿದಿದ್ದೇವೆ. ವಿದ್ಯಾವಂತರು ನಿರುದ್ಯೋಗಿಗಳಾಗಿದ್ದಾರೆ. ಸೆಕ್ಯೂಲರಿಸಂ ಹೆಸರಿನಲ್ಲಿ ಸಮಾಜವನ್ನು ಒಡೆಯುತ್ತಿರುವ ಅಸಹ್ಯ ಜಾತಿಯ ರಾಜಕಾರಣ, ಸಿದ್ಧಾಂತಹೀನ, ಸಮಯಸಾಧಕ, ಸ್ವಾರ್ಥ ಕೇಂದ್ರಿತ ಭ್ರಷ್ಟ ರಾಜಕಾರಣ, ೪೭ರ ವಿಭಜನೆಯ ನಂತರ ಕಳೆದುಕೊಂಡ ಕಾಶ್ಮೀರದ ಒಂದು ಭಾಗ, ತಪ್ಪು ಯುದ್ಧೋತ್ತರ ಒಪ್ಪಂದಗಳಿಂದಾಗಿ ಶತ್ರುಗಳಿಗೆ ಒಪ್ಪಿಸಿದ ಕೈಲಾಸ ಮಾನಸ ಸರೋವರ, ಸಹಸ್ರಾರು ಚ.ಕಿ.ಮೀ. ಭೂಪ್ರದೇಶ ಮಿತಿ ಮೀರಿದ ಭಯೋತ್ಪಾದನೆಯಿಂದ ಅಪಾಯಕ್ಕೊಳಗಾಗಿರುವ ರಾಷ್ಟ್ರೀಯ ಸುರಕ್ಷೆ, ೭ ಲಕ್ಷ ಕೋಟಿ ರೂ. ಗಳಿಗೂ ಮೀರಿದ ವಿದೇಶಿ ಸಾಲ, ಗ್ರಾಮರಾಜ್ಯ ಸ್ವದೇಶಿ ಕಲ್ಪನೆಗಳಿಗೆ ತಿಲಾಂಜಲಿ, ವಿದೇಶಿ ಕಂಪನಿಗಳಿಗೆ ಮುಕ್ತದ್ವಾರ, ತಡೆಯಿಲ್ಲದ ಉಪಭೋಗ ವಾದ, ನಾಡಿನ ಮಕ್ಕಳನ್ನು ಹಸಿವು, ಬಡತನಗಳ ಕೂಪಕ್ಕೆ ತಳ್ಳಿದ ಅಸಹಾಯಕ ಆರ್ಥಿಕತೆ.

ಸಂಸ್ಕೃತಿವಿಹೀನರನ್ನು ಸೃಷ್ಟಿಸುತ್ತಿರುವ, ರಾಷ್ಟ್ರಪ್ರಜ್ಞೆಯನ್ನು ಮೂಲೆಗುಂಪಾಗಿಸುತ್ತಿರುವ ದಿಕ್ಕೆಟ್ಟ ಶಿಕ್ಷಣರಂಗ; ಜೊತೆಗೆ ಘೋರ ನಿರ್ಲಕ್ಷ್ಯಕ್ಕೊಳಗಾದ ಕೃಷಿಕ್ಷೇತ್ರ; ಪ್ರೋತ್ಸಾಹ, ಸೌಲಭ್ಯಗಳಿಂದ ವಂಚಿತರಾದ ವಿಜ್ಞಾನಿಗಳು; ಮಿತಿಮೀರಿದ ಪ್ರಾಂತೀಯ, ಜಾತೀಯ ಭಾವನೆಗಳು.... ಇನ್ನೂ ಇನ್ನೂ ವಿಫಲತೆಯ ಪ್ರಪಾತದತ್ತ ಸಾಗುತ್ತಲೇ ಇದ್ದೇವೆ.

ಹಿಂದಿನ ತಪ್ಪುಗಳನ್ನು ತಿದ್ದಿಕೊಂಡು ನಾವು ಪುನಃ ಜಾಗೃತರಾಗಬೇಕಿದೆ. ಅದಕ್ಕೆ ನಾವೆಲ್ಲರೂ ಮೈ ಕೊಡವಿಕೊಂಡು ಎದ್ದು ನಿಲ್ಲೋಣ! ಸಮಾಜವನ್ನು ಕಲುಷಿತಗೊಳಿಸುತ್ತಿರುವ ಅಸಹ್ಯ ಜಾತಿಯ ರಾಜಕಾರಣವನ್ನು ನಿಲ್ಲಿಸೋಣ. ನೈತಿಕ ನೆಲೆಗಟ್ಟಿನ ಮೇಲೆ ಜನಶಕ್ತಿಯನ್ನು ಕಟ್ಟೋಣ. ಭ್ರಷ್ಟ ರಾಜಕಾರಣವನ್ನು ಧಿಕ್ಕರಿಸೋಣ. ರಾಷ್ಟ್ರೀಯಸುರಕ್ಷೆಗೆ ಒದಗಿರುವ ಅಪಾಯವನ್ನು ತಡೆಯೋಣ. ಸ್ವದೇಶಿ ಸ್ವಾವಲಂಬನೆಯಿಂದ ಸದೃಢ ಅರ್ಥವ್ಯವಸ್ಥೆ ರೂಪಿಸೋಣ. ರಾಷ್ಟ್ರೀಯತೆಗೆ ನಮ್ಮ ಶ್ರೇಷ್ಠ ಸಂಸ್ಕೃತಿಗೆ ಆಧಾರವಾಗಿರುವ ಶಿಕ್ಷಣವನ್ನು ರೂಪಿಸೋಣ! ಕೋಟಿ ಕೋಟಿ ಕೈಗಳಿಂದ ತಾಯಿ ಭಾರತಮಾತೆಗೆ ಒಂದಾಗಿಸೋಣ. ನಮ್ಮ ಹಿರಿಯರು ಕನಸು ಕಂಡಂತೆ ರಾಮರಾಜ್ಯವನ್ನು ಕಟ್ಟೋಣ. ಶಾಂತಿ ನೆಲೆಸುವಂತೆ ಮಾಡೋಣ. ಇದು ಪ್ರತಿಯೊಬ್ಬ ಭಾರತೀಯನು ಮಾಡಬೇಕಾದ ಆದ್ಯ ಕರ್ತವ್ಯ.

❋ ❋ ❋

# "ಸಾರೇ ಜಹಾಂಸೆ ಉಚ್ಛಾ ಹಮಾರಾ ಹಿಂದೂಸ್ತಾನ್" ಆಗದಿರಲಿ!

• ಎ. ಆರ್. ರಶ್ಮಿ

ಸಂಪದ್ಭರಿತ ರಾಷ್ಟ್ರ ಭಾರತವನ್ನು ಪರಕೀಯರು ಆಕ್ರಮಿಸಿ, ಲೂಟಿ ಮಾಡಿದರು. ಮೊದಲು ಮುಸ್ಲಿಮರು; ಅನಂತರ ಬ್ರಿಟಿಷರು. ಬ್ರಿಟಿಷರ ಕಪಿಮುಷ್ಟಿಯಿಂದ ಪಾರಾಗಿ ಸ್ವಾತಂತ್ರ್ಯ ಗಳಿಸಲು ಭಾರತ ಸಾಕಷ್ಟು ಹೋರಾಟ ನಡೆಸಿತು. ಸ್ವಾತಂತ್ರ್ಯ ಪ್ರೇಮಿಗಳ ಬಲಿದಾನದಿಂದ ಸಿಕ್ಕ ಸ್ವಾತಂತ್ರ್ಯಕ್ಕೆ ಇಂದು ಬೆಲೆಯೇ ಇಲ್ಲವಾಗಿದೆ ಎನ್ನುವುದು ಶೋಚನೀಯ ಸತ್ಯ.

ಸ್ವಾತಂತ್ರ್ಯಾನಂತರ ನಮ್ಮ ಮುಖಂಡರೆನಿಸಿಕೊಂಡವರು ಭಾರತದ ಅಭಿವೃದ್ಧಿಗೆ ಹಲವಾರು ರೀತಿಯಲ್ಲಿ ಪ್ರಯತ್ನಪಟ್ಟಿದ್ದಂತೂ ಸುಳ್ಳಲ್ಲ. ಪಂಚವಾರ್ಷಿಕ ಯೋಜನೆಗಳು. ಇತರ ಅಭಿವೃದ್ಧಿ ಯೋಜನೆಗಳನ್ನು ಹಮ್ಮಿಕೊಂಡು ಪ್ರಗತಿಯತ್ತ ಭಾರತವನ್ನೊಯ್ಯಲು ಪ್ರಯತ್ನಗಳು ಸಾಗಿದವು, ಇನ್ನೂ ಸಾಗುತ್ತಿವೆ. ಆದರೆ ಚಿತ್ತಶುದ್ಧಿಯ ಕೊರತೆಯೋ ಮತ್ತೇನು ಕಾರಣವೋ, ಆಗಬೇಕಾದಷ್ಟು ಪ್ರಗತಿಯಾಗಿಲ್ಲ ಎನ್ನುವುದೂ ಅಷ್ಟೇ ನಿಜ.

ಹಸಿರು ಕ್ರಾಂತಿಯಿಂದಾಗಿ ಆಹಾರೋತ್ಪಾದನೆಯಲ್ಲಿ ಗಮನಾರ್ಹ ಸಾಧನೆ ಮಾಡಿ, ಸ್ವಾವಲಂಬನೆ ಹೊಂದಿದರೂ ಮಿತಿ ಮೀರಿದ ಜನಸಂಖ್ಯೆಯ ಬೆಳವಣಿಗೆ ಆ ಸಾಧನೆಯ ಮೇಲೆ ಕಪ್ಪು ಪರದೆ ಹೊದಿಸಿದೆ.

ಭಾರತ ಹಳ್ಳಿಗಳ ರಾಷ್ಟ್ರವಾಗಿದ್ದರೂ. ಇಲ್ಲಿ ಹಳ್ಳಿಗಳ ಪ್ರಗತಿ ಮಾತ್ರ ನಗಣ್ಯವೆನ್ನುವ ಮಟ್ಟದಲ್ಲಿದೆ. ಪ್ರಗತಿಯೆಲ್ಲವೂ ನಗರಗಳಿಗೆ ಮಾತ್ರ ಸೀಮಿತವೇನೋ ಎನ್ನುವಂಥ ಪರಿಸ್ಥಿತಿ ಕಣ್ಣೆದುರಿಗಿದೆ. ರೈತಾಪಿ ಜನರಿಗೆ ಅನುಕೂಲವಾಗಲು ಹಾಕಿದ ಯೋಜನೆಗಳ ಫಲಾನುಭವಿಗಳು ಕೆಲವೇ ಜನ ಜಮೀನ್ದಾರರಾಗಿದ್ದುದು, ನಮ್ಮ ಆಡಳಿತ (ಅ)ವ್ಯವಸ್ಥೆಯ ಪ್ರತೀಕವಾಗಿದೆ. ಭೂ ಸುಧಾರಣೆಯಂತಹ ಕಾನೂನುಗಳಾಗಲಿ, ಬೇರೆ ಕಾನೂನುಗಳಾಗಲಿ ಹಳ್ಳಿಯ ರೈತಾಪಿ ಜನರಿಗೆ ಹೇಳಿಕೊಳ್ಳುವಂತಹ ಅನುಕೂಲವನ್ನಂತೂ ಒದಗಿಸಿಲ್ಲ.

ಇನ್ನು ನಗರಗಳಲ್ಲಿ-ಹಳ್ಳಿಗಳಲ್ಲಿ ಕೂಡ ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರವನ್ನು ಒದಗಿಸುವಲ್ಲಿ ಯಾವ ಸರ್ಕಾರವೂ ಹೇಳಿಕೊಳ್ಳುವಂತೆ ಯಶಸ್ಸನ್ನು ಕಂಡಿಲ್ಲವೆಂದೇ ಹೇಳಬೇಕಾದುದು ಅನಿವಾರ್ಯ.

ಸಂಪರ್ಕ ವ್ಯವಸ್ಥೆ, ಸಾಗಾಣಿಕೆ, ಮುಂತಾದವುಗಳಲ್ಲಿ ತಕ್ಕಮಟ್ಟಿಗೆ ಪ್ರಗತಿ ಸಾಧಿಸಿದ್ದರೂ ಪೂರ್ಣ ಪ್ರಗತಿಯಾಗಿಲ್ಲ. ಕೈಗಾರಿಕೆಗಳಲ್ಲೂ ಸ್ವಾವಲಂಬನೆ

ಸಾಧಿಸತೊಡಗಿದ್ದೇವೆ; ಜೊತೆಗೆ ವಿದ್ಯುತ್ ಕೊರತೆಯ(ಉತ್ಪಾದನೆ ಮೊದಲಿಗಿಂತ ಹೆಚ್ಚಿದ್ದರೂ) ಸಮಸ್ಯೆಯನ್ನು ಅನುಭವಿಸುತ್ತಿದ್ದೇವೆ. ಶೈಕ್ಷಣಿಕವಾಗಿ ಪ್ರಗತಿ ಸಾಧಿಸಿದ್ದೇವೆ, ನಮ್ಮಲ್ಲಿ ಸಾಕಷ್ಟು ಪ್ರತಿಭಾವಂತ ವಿಜ್ಞಾನಿಗಳು, ಉದ್ಯಮಿಗಳು ಇದ್ದಾರೆ ಎಂದು ಎದೆ ತಟ್ಟಿಕೊಳ್ಳಬೇಕೆಂದರೆ ಸುಮಾರು ಶೇ. 45 ರಷ್ಟಿರುವ ಅನಕ್ಷರತೆ ಭೂತದಂತೆ ಎದ್ದು ನಿಲ್ಲುತ್ತದೆ! ಇದು ಸಾಲದೆನ್ನುವಂತೆ ಪ್ರತಿಭೆಗೆ ತಕ್ಕ ಪುರಸ್ಕಾರವಿಲ್ಲದ ಪ್ರಸ್ತುತ ವಾತಾವರಣದಲ್ಲಿ ಭಾರತದಿಂದ ಪ್ರತಿಭೆಗಳು ಬೇರೆಡೆ ಹರಿದುಹೋಗುತ್ತಿರುವುದು ಅನುನಿತ್ಯದ ಗೋಳು!

ಜನಸಂಖ್ಯಾ ಬೆಳವಣಿಗೆಯನ್ನು ನಿಯಂತ್ರಿಸಲು ಕುಟುಂಬ ಯೋಜನೆಯಂತಹ ಹಲವಾರು ಕಾರ್ಯಕ್ರಮಗಳಿವೆ. ಆದರೆ ದಿನನಿತ್ಯ ಏರುತ್ತಿರುವ Population ಗಡಿಯಾರದ ಮುಳ್ಳುಗಳನ್ನು ಗಮನಿಸಿದರೆ ಆ ಯೋಜನೆಗಳು ನಮ್ಮಲ್ಲಿ ಯಶಸ್ವಿಯಾಗಿವೆಯೆ ಎನ್ನುವ ಅನುಮಾನ ತಲೆ ಎತ್ತುತ್ತದೆ.

ವೈಜ್ಞಾನಿಕ ಕ್ಷೇತ್ರದಲ್ಲಿ, ಮಿಲಿಟರಿ ತಂತ್ರಜ್ಞಾನ, ರಕ್ಷಣಾ ಸಾಮರ್ಥ್ಯದಲ್ಲಿ ಭಾರತ ಮುಂದುವರಿದ ರಾಷ್ಟ್ರಗಳೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ನಿಲ್ಲುವ ಸ್ಥಿತಿಯಲ್ಲಿದೆ.

ಇನ್ನು ಕೊರತೆಗಳ ಬಗ್ಗೆ ನೋಡುವುದಾದರೆ, ಮೊದಲಿಗೆ 'ರಾಷ್ಟ್ರಪ್ರೇಮ'ದ ಕೊರತೆಯೇ ಎದ್ದು ಕಾಣುತ್ತದೆ. 'ಜಾತ್ಯತೀತ ರಾಷ್ಟ್ರ'ವೆನ್ನುವುದು ಕೇವಲ ಹೇಳಿಕೊಳ್ಳುವುದಕ್ಕಷ್ಟೇ ಸೀಮಿತವಾಗಿದೆ. ಭ್ರಷ್ಟಾಚಾರ, ಲಂಚಕೋರತನ ಕೆಳವರ್ಗದ ನೌಕರನಿಂದ ಹಿಡಿದು ದೇಶದ ಪ್ರಧಾನಿಯವರೆಗೆ ಎಲ್ಲರನ್ನೂ ಆವರಿಸಿಕೊಂಡಿವೆ. ರಾಜಕಾರಣಿಗಳಂತೂ ದೇಶದ ಸಂಪತ್ತನ್ನು ಸುಲಿದು, ಪರದೇಶದ ಬ್ಯಾಂಕುಗಳಲ್ಲಿ ತುಂಬಲು ಪರಸ್ಪರ ಪೈಪೋಟಿ ನಡೆಸುತ್ತಿದ್ದಾರೆ! ಇಂಥ ಲಂಚಕೋರ ನೌಕರಶಾಹಿವರ್ಗ, ರಾಜಕಾರಣಿಗಳು ಭಾರತದ ಪ್ರಗತಿಯ ಹೆದ್ದಾರಿಯಲ್ಲಿನ ಬೃಹತ್ ಹಳ್ಳ-ಹೊಂಡಗಳೇ ಸರಿ.

ಕವಿ ಇಕ್ಬಾಲರ ಪ್ರಸಿದ್ಧ ದೇಶಭಕ್ತಿ ಗೀತೆ "ಸಾರೇ ಜಹಾಂಸೆ ಅಚ್ಛಾ, ಹಿಂದೂಸ್ಥಾನ್ ಹಮಾರಾ" ಎಂದು ಶುರುವಾಗುತ್ತದೆ. ಆದರದು "ಸಾರೇ ಜಹಾಂಸೆ ಲುಚ್ಛಾ ಹಿಂದೂಸ್ತಾನ್ ಹಮಾರಾ" ಎಂದು ಕುಹಕವಾಡತೊಡಗಿರುವ ಸಿನಿಕರ ಅಭಿಪ್ರಾಯ ನಿಜವಾಗಗೊಡದಂತೆ ನಾವೆಲ್ಲ ಪ್ರಯತ್ನಪಡಬೇಕು. ನಮ್ಮ ರಾಷ್ಟ್ರೀಯ ಲಾಂಛನದಲ್ಲಿರುವ "ಸತ್ಯಮೇವ ಜಯತೇ" ಅಕ್ಷರಶಃ ಸತ್ಯವಾಗುವಂತೆ ನಮ್ಮ ಸಾಮಾಜಿಕ, ಸಾಂಸ್ಕೃತಿಕ ವ್ಯವಸ್ಥೆಯನ್ನು ರೂಪಿಸಿಕೊಳ್ಳಬೇಕು. ಹಾಗಾಗುತ್ತದೆ ಎನ್ನುವ ಭರವಸೆಯೊಂದಿಗೆ ನಾವೆಲ್ಲ ಮುನ್ನಡೆಯೋಣ, ಅಲ್ಲವೆ?

✽ ✽ ✽

# ಐವತ್ತು ವರ್ಷಗಳ ನಂತರವೂ ಸಮಸ್ಯೆಯಿಂದ ಮುಕ್ತವಾಗದ ಭಾರತ

• ವೈ. ಆರ್. ಪಂಕಜ

ದೀರ್ಘ ಹೋರಾಟದ ಫಲವಾಗಿ ಭಾರತ ಬ್ರಿಟಿಷರ ಆಳ್ವಿಕೆಯಿಂದ ಬಿಡುಗಡೆ ಹೊಂದಿ ೧೯೪೭ರ ಆಗಸ್ಟ್ ೧೫ ರಂದು ಸ್ವತಂತ್ರವಾಯಿತು. ಸ್ವಾತಂತ್ರ್ಯದೊಡನೆ ಹಲವಾರು ಸಮಸ್ಯೆಗಳೂ ಉದ್ಭವವಾದವು. ರಾಜ್ಯಾಂಗ ರಚನೆ, ಮತೀಯ ಗಲಭೆಗಳು, ನಿರಾಶ್ರಿತರ ಆಹಾರ ಮತ್ತು ನಿರುದ್ಯೋಗ, ಆರೋಗ್ಯ ರಕ್ಷಣೆ, ಅನಕ್ಷರತೆ, ದುರ್ಬಲ ವರ್ಗದವರ ಶೋಷಣೆ, ಮೂಢನಂಬಿಕೆ ಮತ್ತು ಕಂದಾಚಾರಗಳು, ಮಹಿಳಾ ಮತ್ತು ಮಕ್ಕಳ ಶೋಷಣೆಯಂತಹ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವಲ್ಲಿ ದೇಶವು ಆಸಕ್ತಿವಹಿಸಬೇಕಾಗಿತ್ತು.

ಸ್ವತಂತ್ರ ಭಾರತ ದೊಡ್ಡ ದೊಡ್ಡ ಯೋಜನೆಗಳನ್ನು, ಗುರಿಗಳನ್ನು, ಆಸೆಗಳನ್ನಿಟ್ಟುಕೊಂಡು ಬಹು ಬೇಗನೆ ಸರ್ವೋದಯವನ್ನು ಸಾಧಿಸುವತ್ತ ಹೆಜ್ಜೆ ಹಾಕಿತು. ಇಂದು ದೇಶ ಒಂದು ವಿಶೇಷ ಪರಿವರ್ತನೆಯ ಪ್ರವಾಹದಲ್ಲಿ ಸಿಕ್ಕಿದೆ.

ಸ್ವತಂತ್ರ ಭಾರತಕ್ಕೆ ಇಂದು ಐವತ್ತು ವರ್ಷಗಳು ತುಂಬಿವೆ. ಆದರೂ ದೇಶ ಸಮಸ್ಯೆಗಳಿಂದ ಮುಕ್ತವಾಗಿಲ್ಲ ಎಂಬುದು ವಿಷಾದಕರ ವಿಷಯ. ಇಂದಿನ ಸಮಸ್ಯೆಗಳಲ್ಲಿ ಹೆಚ್ಚಿನವು ಭೂತಕಾಲದಿಂದ ಕೊಡುಗೆಯಾಗಿ ಬಂದವು. ಇವುಗಳಲ್ಲಿ ಕೆಲವು ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಕ್ಷೇತ್ರಗಳಿಗೆ ಸಂಬಂಧಿಸಿವೆ.

ದೇಶದ ಸಮಸ್ಯೆಗಳಲ್ಲಿ ಪ್ರಮುಖವಾದದ್ದು ಜನಸಂಖ್ಯಾ ಸ್ಫೋಟ. ಜನಸಂಖ್ಯಾ ಹೆಚ್ಚಳಕ್ಕೆ ಮೂಲ ಕಾರಣಗಳು ಬಡತನ, ಅಜ್ಞಾನ, ಧಾರ್ಮಿಕ ನಂಬಿಕೆಗಳು, ಶೀಘ್ರ ಮದುವೆ, ಅವಿಭಕ್ತ ಕುಟುಂಬ ಪದ್ಧತಿ, ಉಷ್ಣ ಹವಾಮಾನ, ಮರಣ ಸಂಖ್ಯೆಯಲ್ಲಿ ಇಳಿತ ಮುಂತಾದುವು. ಜನಸಂಖ್ಯೆಯ ಅಧಿಕವಾದ ಬೆಳವಣಿಗೆಯಿಂದ ತಲಾ ವರಮಾನದಲ್ಲಿ ಇಳಿತ, ಅನಕ್ಷರತೆ, ಬಡತನ, ನಿರುದ್ಯೋಗ, ಸೌಲಭ್ಯಗಳ ಕೊರತೆ, ಕಡಿಮೆ ಬಂಡವಾಳ ಶೇಖರಣೆ ಮತ್ತು ಆಹಾರ ಕೊರತೆಯಂತಹ ಸಣ್ಣ, ಪೂರಕ ಸಮಸ್ಯೆಗಳು ಉದ್ಭವವಾಗುತ್ತವೆ. ನಮ್ಮ ಘನ ಸರ್ಕಾರವು ಕುಟುಂಬ ಯೋಜನೆಯಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರೂ ಜನನ ನಿಯಂತ್ರಣದಲ್ಲಿ ಸಂಪೂರ್ಣವಾಗಿ ಸಫಲಗೊಂಡಿಲ್ಲ.

ಆರ್ಥಿಕ ಅಸಮಾನತೆ ಮತ್ತು ಬಡತನ ಇವು ದೇಶದ ಪ್ರಮುಖ ಸಮಸ್ಯೆಗಳೇ ಆಗಿವೆ. ನಮ್ಮ ದೇಶದಲ್ಲಿ ಶೇಕಡಾ ೪೦ ರಷ್ಟು ಜನರು ದಾರಿದ್ರ್ಯ ರೇಖೆಗಿಂತ

ಕೆಳಮಟ್ಟದಲ್ಲಿದ್ದಾರೆಂದು ಹೇಳಬಹುದು. ಬಡತನಕ್ಕೆ ಕಾರಣಗಳು ಜನಸಂಖ್ಯಾ ಸ್ಫೋಟ, ನಿರುದ್ಯೋಗ, ಅರೆ ಉದ್ಯೋಗ, ಅನಕ್ಷರತೆ, ಅಜ್ಞಾನ, ಸಂಪ್ರದಾಯ ಪದ್ಧತಿಗಳು ಪಂಚವಾರ್ಷಿಕ ಯೋಜನೆಗಳಲ್ಲಿ ಬಡತನ ನಿವಾರಣೆ ಸ್ವತಂತ್ರ ಭಾರತಕ್ಕೆ ಕನಸಾಗಿಯೇ ಉಳಿದಿದೆ.

ದೇಶದ ಮತ್ತೊಂದು ಸಮಸ್ಯೆ ಅನಕ್ಷರತೆ. ಒಂದು ದೇಶದ ಪ್ರಜಾಪ್ರಭುತ್ವದ ಯಶಸ್ಸು ದೇಶದ ಅಕ್ಷರಸ್ಥರ ಪ್ರಮಾಣವನ್ನವಲಂಬಿಸಿದೆ. ಆಡಳಿತದ ಒಳ್ಳೆಯ ಹಾಗೂ ಕೆಟ್ಟ ಮುಖಗಳನ್ನು ಗುರುತಿಸುವಲ್ಲಿ ಅಕ್ಷರಸ್ಥರ ಪಾತ್ರ ಪ್ರಮುಖವಾದದ್ದು. ಸರ್ಕಾರ ಶಿಕ್ಷಣ ಪ್ರಗತಿಗಾಗಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ, ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮ (೧೯೭೮ರಲ್ಲಿ ಪ್ರಾರಂಭ) ಮುಂತಾದ ಶಿಕ್ಷಣ ಯೋಜನೆಗಳನ್ನು ರೂಪಿಸಿ ಅನಕ್ಷರತೆಯನ್ನು ತೊಡೆದು ಹಾಕಲು ಶ್ರಮಿಸುತ್ತಿದೆ. ಆದರೂ ಭಾರತ ಸಂಪೂರ್ಣ ಸಾಕ್ಷರತೆಯ ನಾಡಾಗಿಲ್ಲ.

ದೇಶದ ಮತ್ತೊಂದು ಸಮಸ್ಯೆ ಜಾತಿ ಪದ್ಧತಿ. ಅದು ಸಂಕುಚಿತ ಭಾವನೆಗಳನ್ನು ಸಂಕುಚಿತ ನಿಷ್ಠೆಯಿಂದ ಬೆಳೆಸಿ ಸಮಾಜವನ್ನು ದುರ್ಬಲಗೊಳಿಸುತ್ತದೆ. ನ್ಯಾಯ ಸಮಾನತೆ, ಸಹೋದರತೆಯಂತಹ ಆದರ್ಶಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಜಾತಿ ದೊಡ್ಡ ಸಮಸ್ಯೆಯಾಗಿದೆ. ಪುರಾತನ ಕಾಲದಿಂದಲೂ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ಜಾತಿಗಳಿವೆ. ಪ್ರತಿ ಜಾತಿಯಲ್ಲಿ ಹಲವಾರು ಉಪ ಜಾತಿಗಳು, ಹಲವು ಕಟ್ಟುಪಾಡುಗಳು, ತನ್ನದೇ ಆದ ಕಸಬು ಮತ್ತು ನಿಯಮಗಳನ್ನೊಳಗೊಂಡಿದೆ. ಜಾತಿಗಳಲ್ಲಿ ವೈಷಮ್ಯ, ಮೇಲು-ಕೀಳೆಂಬ ಭೇದಭಾವ, ಮೇಲ್ಜಾತಿಯವರಿಂದ ದಬ್ಬಾಳಿಕೆ, ಅಸ್ಪೃಶ್ಯತೆ ಮುಂತಾದ ಸಮಸ್ಯೆಗಳು ಭಾರತಕ್ಕೆ ಕಳಂಕವನ್ನುಂಟುಮಾಡಿವೆ. ಈ ಅನಿಷ್ಟ ಪದ್ಧತಿ ಪೂರ್ಣವಾಗಿ ನಿರ್ನಾಮವಾಗದ ಹೊರತು ದೇಶದ ಸರ್ವಾಂಗೀಣ ಪ್ರಗತಿ ಸಾಧ್ಯವಾಗಲಾರದು.

ನಿರುದ್ಯೋಗ ಮತ್ತು ಅರೆ ಉದ್ಯೋಗದಂತಹ ಗಂಭೀರ ಸಮಸ್ಯೆಗಳು ಜನಸಂಖ್ಯಾ ಸ್ಫೋಟದಿಂದ ಉದ್ಭವಿಸಿದವು. ಇಂದು ನಿರುದ್ಯೋಗಿ ಯುವಕರ ಸಂಖ್ಯೆ ಹೆಚ್ಚಾಗಿದ್ದು, ಅಂಥವರು ಸಮಾಜ ವಿರೋಧಿ ಚಟುವಟಿಕೆಯಲ್ಲಿ ಭಾಗಿಯಾಗುವಂತಾಗಿರುವುದು ಒಂದು ಸಾಮಾಜಿಕ ಸಮಸ್ಯೆಯಾಗಿ ಪರಿಣಮಿಸಿದೆ.

ಬಹು ಧರ್ಮಗಳ ಸಮಾಜ ವ್ಯವಸ್ಥೆ ಹೊಂದಿರುವ ನಮ್ಮ ದೇಶದಲ್ಲಿ ಕೋಮುವಾದವು ಒಂದು ಸಮಸ್ಯೆಯಾಗಿ ತಲೆಯೆತ್ತಿ ಭಾವೈಕ್ಯತೆಗೆ ಧಕ್ಕೆ ತರುತ್ತಿದೆ. ಕೋಮುವಾದವನ್ನೇ ಅಸ್ತ್ರವನ್ನಾಗಿಸಿಕೊಂಡಿರುವ ಕೆಲವು ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ಹೋರಾಡಿ ರಾಷ್ಟ್ರೀಯ ಏಕತೆಯನ್ನು ಸಾಧಿಸುವುದು ಅಗತ್ಯ.

ಮೂಢ ನಂಬಿಕೆಗಳು ಮತ್ತು ಕುಲಾಚಾರಗಳ ನಂಬಿಕೆಯಿಂದುಂಟಾಗುವ ಪ್ರತಿಕೂಲಗಳು ದೇಶದ ಸಮಸ್ಯೆಗಳಾಗಿವೆ. ಆಂತರಿಕ ಅಶಾಂತಿಗೆ ಮಾನವ ಇಟ್ಟುಕೊಂಡಿರುವ ಸುಳ್ಳು ನಂಬಿಕೆಗಳು ಹಾಗೂ ದುಷ್ಟ ಶಕ್ತಿಗಳು ನಡೆಸುತ್ತ ಬಂದ ಎಲ್ಲ ದಬ್ಬಾಳಿಕೆಗಳಿಗೆ ತಲೆ ಬಾಗುವುದು ಕಾರಣವೆನ್ನಬಹುದು. ಮನುಷ್ಯ ಕುರುಡು ನಂಬಿಕೆಗಳ ಹಿಡಿತದಿಂದ ಬಿಡುಗಡೆ ಹೊಂದಿ ಬೇಡವಾದ ಹಳೆಯ ಹಾದಿಯನ್ನು ಬಿಟ್ಟು ಹೊಚ್ಚ ಹೊಸ ಜಾಡೊಂದನ್ನು ಹಿಡಿಯಬೇಕಾಗಿದೆ.

ಇವುಗಳ ಜೊತೆ ಜೊತೆಗೆ ಲಾಭಕೋರತನ, ಕಳ್ಳ ಸಾಗಾಣಿಕೆ, ಭ್ರಷ್ಟಾಚಾರ, ವರದಕ್ಷಿಣೆ ಮತ್ತು ಸಮಾಜ ವಿರೋಧಿ ಚಟುವಟಿಕೆಗಳಂತಹ ಸಮಾಜದ ಹುಣ್ಣುಗಳು ದೇಶದ ಸಮಸ್ಯೆಗಳೇ ಆಗಿವೆ. ಭ್ರಷ್ಟಾಚಾರ ಇಂದು ಎಲ್ಲ ಕ್ಷೇತ್ರಗಳಲ್ಲೂ ವಿಜೃಂಭಿಸುತ್ತಿದೆ. ಸರ್ಕಾರ ಏನೆಲ್ಲ ಪ್ರಯತ್ನ ಮಾಡಿದರೂ ಭ್ರಷ್ಟಾಚಾರ ನಿರ್ಮೂಲನೆಯಲ್ಲಿ ಯಶಸ್ಸುಗಳಿಸಿಲ್ಲವೆಂದು ಹೇಳಬಹುದು.

ವರದಕ್ಷಿಣೆ ಎನ್ನುವುದು ಬೃಹತ್ತಾಗಿ ಬೆಳೆದು ನಿಂತಿರುವ ಮತ್ತೊಂದು ಸಾಮಾಜಿಕ ಪಿಡುಗು. ಅದು ಹೆಣ್ಣಿನ ಮಾತಾ-ಪಿತೃಗಳಿಗೆ ಉರುಳಾಗಿ ಪರಿಣಮಿಸಿದೆ. ವರದಕ್ಷಿಣೆಯ ಅಗ್ನಿಕುಂಡದಲ್ಲಿ ಮುಗ್ಧ ಹೆಣ್ಣುಮಗಳ ಆತ್ಮಾಹುತಿ ಇಂದಿಗೂ ನಡೆದೇ ಇದೆ. ಸರ್ಕಾರ ವರದಕ್ಷಿಣೆ ನಿಯಂತ್ರಣಕ್ಕೆ ಜಾರಿಗೆ ತಂದ ಯಾವ ಶಾಸನಗಳೂ ಪರಿಣಾಮಕಾರಿಯಾಗಿಲ್ಲ. ಇದರ ನಿವಾರಣೆ ಯುವ ಜನಾಂಗದ ಕೈಯಲ್ಲಿದೆ. ಯುವಕರು ವರದಕ್ಷಿಣೆಯನ್ನು ಪಡೆಯದೆ ಮದುವೆಯಾಗಲು ಮುಂದಾಗಬೇಕು.

ದೇಶದ ಇತರ ಸಮಸ್ಯೆಗಳಲ್ಲಿ ಮಹಿಳಾ ಶೋಷಣೆ, ಹೆಣ್ಣು ಗಂಡುಗಳಲ್ಲಿ ತಾರತಮ್ಯ, ಮಕ್ಕಳ ಶೋಷಣೆಯಂತಹವು ಸೇರಿಕೊಂಡಿವೆ. ಇವುಗಳ ನಿರ್ಮೂಲನೆಗೂ ಸರ್ಕಾರ ತಕ್ಕ ಕ್ರಮಗಳನ್ನು ಕೈಗೊಂಡಿದೆ. ಆದರೂ ಸಂಪೂರ್ಣವಾಗಿ ಸಮಸ್ಯಾಮುಕ್ತವಾಗಿಲ್ಲದಿರುವುದು ದೇಶದ ದುರ್ದೈವ.

ಒಟ್ಟಿನಲ್ಲಿ ಹೇಳುವುದಾದರೆ ನಮ್ಮ ದೇಶ ಸಮಸ್ಯೆಗಳೊಂದಿಗೆ ಸೆಣಸುತ್ತಲೇ ಪ್ರಗತಿಯತ್ತ ದಾಪುಗಾಲು ಹಾಕುತ್ತಿರುವ ಅಭಿವೃದ್ಧಿಶೀಲ ರಾಷ್ಟ್ರವಾಗಿದೆ.

❋ ❋ ❋

# ಟೊಂಕಕಟ್ಟಿ ನಿಂತರೆ ಪ್ರಗತಿ ನಿಶ್ಚಿತ

• ಕೆ. ಜಿ. ಹತ್ತಳ್ಳಿ

ನಮ್ಮ ದೇಶವು ಈಗ ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆದು ೫೦ ವರ್ಷಗಳು ಕಳೆದಿವೆ. ಅದರ ಸವಿನೆನಪಿಗೆ ಎಲ್ಲೆಡೆಯೂ "**ಸ್ವಾತಂತ್ರ್ಯದ ಸುವರ್ಣ ಮಹೋತ್ಸವ**"ವನ್ನು ಸಂಭ್ರಮದಿಂದ ಆಚರಿಸುತ್ತಿದ್ದೇವೆ. ಇಂತಹ ಸುಸಂದರ್ಭವಲ್ಲಿ ನಮ್ಮ ದೇಶದ ಸ್ವಾತಂತ್ರ್ಯ ಪೂರ್ವದ ಹಾಗೂ ನಂತರದ ಸ್ಥಿತಿಗತಿಯನ್ನು ಅರಿಯುವದು ಅವಶ್ಯ.

ನಮಗೆ ಸ್ವಾತಂತ್ರ್ಯ ಸಿಗುವುದಕ್ಕಿಂತ ಪೂರ್ವದಲ್ಲಿ ನಮ್ಮ ಪೂರ್ವಜರು ಬ್ರಿಟಿಷರ ಕೆಳಗೆ ಗುಲಾಮರಂತಿದ್ದರು. ಅಸಮಾನತೆ ಹಾಗೂ ದಬ್ಬಾಳಿಕೆಯಲ್ಲಿ ನರಳಿದ ಭಾರತೀಯರಲ್ಲಿ "ಸ್ವಾತಂತ್ರ್ಯ"ದ ಹಂಬಲ ಮೂಡಿ ಬ್ರಿಟಿಷರಿಂದ ಮುಕ್ತಿ ಪಡೆಯಬೇಕೆಂಬ ಭಾವನೆಗಳು ಬರತೊಡಗಿದವು. ಆ ಸ್ವಾತಂತ್ರ್ಯ ಯಜ್ಞದಲ್ಲಿ ಭಾಗವಹಿಸಿದ ಹೋರಾಟಗಾರರು, ಮಹಾನ್ ದೇಶಭಕ್ತರ ಅವಿರತ ಪ್ರಯತ್ನದ ಫಲವಾಗಿ ಕೊನೆಗೂ ಭಾರತ ಸ್ವತಂತ್ರವಾಯಿತು.

ಆದರೆ ಸ್ವಾತಂತ್ರ್ಯಾನಂತರದ ಭಾರತದ ಪರಿಸ್ಥಿತಿಯನ್ನು ವಿವೇಚಿಸಿದರೆ ಕಳವಳ ಉಂಟಾಗುತ್ತದೆ. ಸಾವಿರಾರು ಜನರ ತ್ಯಾಗ, ಬಲಿದಾನಗಳಿಂದ ಪಡೆದ ಸ್ವಾತಂತ್ರ್ಯದ ಫಲವನ್ನು ಇಂದು ಸವಿಯುತ್ತಿರುವವರಲ್ಲಿ ಸ್ವಾರ್ಥಿ ರಾಜಕಾರಣಿಗಳು, ಲಂಚಕೋರರು, ಲಾಭ ಬಡುಕರು ಇಂಥವರೇ ಮುಂಚೂಣಿಯಲ್ಲಿದ್ದಾರೆ! ಹೀಗಾಗಿ ಮಹಾತ್ಮರ "ರಾಮರಾಜ್ಯ" ನಮ್ಮೆಲ್ಲರ ಕನಸುಗಳಿಂದಲೂ ಮರೆಯಾಗಿ ಹೋಗುವ ಹಂತದಲ್ಲಿದೆ.....

ಹಾಗೆಂದು ಭಾರತದಲ್ಲಿ ಏನೇನೂ ಇಲ್ಲ, ಇಲ್ಲಿ ಏನೂ ಸರಿಯಿಲ್ಲ ಎನ್ನುವ ಅಪಸ್ವರವನ್ನೆತ್ತುತ್ತಿಲ್ಲ. ಇಲ್ಲಿಯೂ ಮಹನೀಯರಿದ್ದಾರೆ; ಮಹಾನ್ ಸಾಧಕರಿದ್ದಾರೆ. ಹಲವಾರು ಕ್ಷೇತ್ರಗಳಲ್ಲಿ ಹೆಮ್ಮೆಪಟ್ಟುಕೊಳ್ಳುವಂತಹ ಸಾಧನೆಯೂ ಆಗಿದೆ. ಆದರೆ ಇವುಗಳೆಲ್ಲವಕ್ಕೂ ಮಸಿ ಬಳಿಯುವಂತೆ ಸಡ್ಡು ಹೊಡೆದು ನಿಲ್ಲುತ್ತಿರುವ 'ಸಮಸ್ಯಾ ಭೂತ'ಗಳಿವೆಯಲ್ಲ!

ಮತ್ತೆ ಈ ಸಮಸ್ಯಾ ಭೂತಗಳನ್ನು ಹೊಡೆದೋಡಿಸಲು ಯಾವ ಉಪಾಯಗಳೂ ಇಲ್ಲವೆ?

ಉಪಾಯಗಳೇನೋ ಇವೆ. ಅವು :-

೧) ರಾಜಕಾರಣಿಗಳು, ಆಡಳಿತಾಧಿಕಾರಿಗಳು ಪರಿಶುದ್ಧರಾಗಬೇಕು. ಲಂಚಕ್ಕೆ ಕೈ ಒಡ್ಡದೆ ದೇಶದ ಅಭಿವೃದ್ಧಿಗೆ ಪ್ರಾಮಾಣಿಕ ಕಾರ್ಯವನ್ನು ಎಸಗಬೇಕು.

೨) ೬ ರಿಂದ ೧೨ ವರ್ಷದ ವರೆಗಿನ ಮಕ್ಕಳಿಗೆ ಶಿಕ್ಷಣವನ್ನು ಕೇವಲ ಕಾನೂನು ಪುಸ್ತಕಗಳಲ್ಲಿ ಜಾರಿಗೊಳಿಸದೆ ಅದನ್ನು ಕಾರ್ಯರೂಪಕ್ಕೆ ತರಬೇಕು.

೩) ಬಾಲ ಕಾರ್ಮಿಕತನವನ್ನು. ಮಹಿಳಾ ಶೋಷಣೆಯನ್ನು ಹೋಗಲಾಡಿಸಬೇಕು.

೪) ಜನಸಂಖ್ಯೆಯನ್ನು ಕಡಿಮೆ ಮಾಡಬೇಕಾದರೆ ಈಗ "**ಕುಟುಂಬಕ್ಕೆ ಒಂದೇ ಜ್ಯೋತಿ**" ಸಾಕು; ಚಿಕ್ಕ ಕುಟುಂಬ ಚೊಕ್ಕ ಕುಟುಂಬ ಎಂಬುದನ್ನು ಮನಗಾಣಬೇಕು.

೫) ನಿರುದ್ಯೋಗ ಸಮಸ್ಯೆಯನ್ನು ಭಾರತದಿಂದಲೇ ಓಡಿಸಬೇಕು. ಶಿಕ್ಷಣಕ್ಕೆ ಬೆಲೆ ಬೇಕು. ಶಿಕ್ಷಣ ಪಡೆದ ವ್ಯಕ್ತಿಗೆ ಆತನ ಅರ್ಹತೆಗೆ ತಕ್ಕಂತೆ ಉದ್ಯೋಗವನ್ನು ಕಲ್ಪಿಸುವದು ಸರ್ಕಾರದ ಪ್ರಮುಖ ಕರ್ತವ್ಯವಾಗಬೇಕು.

೬) ಆರ್ಥಿಕತೆಯಲ್ಲಿ ನಮ್ಮ ದೇಶವು ಸ್ವಾವಲಂಬನೆಯನ್ನು ಕಾಣಬೇಕು.

೭) ಪ್ರತಿಯೊಬ್ಬ ಭಾರತೀಯ ಪ್ರಜೆಯು ತನ್ನ ದಿನ ನಿತ್ಯದ ಕಾರ್ಯವನ್ನು ಪ್ರಜ್ಞೆಯೊಂದಿಗೆ ಮಾಡಬೇಕು.

೮) ಶ್ರೀಸಾಮಾನ್ಯನ ಮೂಲಭೂತ ಬೇಡಿಕೆಗಳಾದ ಆಹಾರ, ವಸತಿ, ನೀರು ಮುಂತಾದವುಗಳು ಸಮರ್ಪಕವಾಗಿ ದೊರಕುವಂತಾಗಬೇಕು.

೯) ಜಾತೀಯ ಗಲಭೆಗಳು ಪ್ರಜಾಪ್ರಭುತ್ವದ ಅಧಃಪತನಕ್ಕೆ ಕಾರಣವಾಗುತ್ತವೆ. ಅವು ಮೊದಲು ನಿವಾರಣೆಯಾಗಬೇಕು.

೧೦) ಹಿಂಸಾತ್ಮಕ ಚಳುವಳಿಗಳು ದೇಶದಲ್ಲಿ ನಡೆಯಬಾರದು. ಇದರಿಂದ ನಮಗೆ, ನಮ್ಮ ದೇಶಕ್ಕೆ ತುಂಬಲಾರದಷ್ಟು ಹಾನಿಯಾಗುತ್ತದೆ.

ಸ್ವಾತಂತ್ರ್ಯ ಸುವರ್ಣ ಮಹೋತ್ಸವವನ್ನಾಚರಿಸುತ್ತಿರುವ ಈ ಸಂದರ್ಭದಲ್ಲಿ ಪ್ರತಿಯೊಬ್ಬ ಭಾರತೀಯನು ಟೊಂಕ ಕಟ್ಟಿ ನಿಂತರೆ ಪ್ರಗತಿ ನಿಶ್ಚಿತ!

❋ ❋ ❋

# ತೆವಳುತ್ತಿರುವ ಅರಾಜಕ ಸ್ಥಿತಿಯಲ್ಲಿ ಭಾರತ

• ಮಹಾಂತೇಶ ಈ. ಕರಿಂಡಿ

'ಜನನಿ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ' ಎಂಬ ಉಕ್ತಿಯನ್ನು ಮೈಗೂಡಿಸಿಕೊಂಡ ಆಗಿನ ಸ್ವಾತಂತ್ರ್ಯಯೋಧರು ಭಾರತವನ್ನು ಬ್ರಿಟಿಷ್ ಪಾಶವೀ ಹಿಡಿತದಿಂದ ಮುಕ್ತಗೊಳಿಸಿದರು. ಇಂದು ಭಾರತವನ್ನು ನಾವು ಎಲ್ಲಿಂದ ಎಲ್ಲಿಗೆ ತಂದಿದ್ದೇವೆನ್ನುವುದನ್ನು ಹಿಂದಿರುಗಿ ನೋಡಬೇಕಾಗಿದೆ.

"ಸಂಪೂರ್ಣ ಪ್ರಭುತ್ವ ಸಂಪನ್ನ, ಪ್ರಜಾಸತ್ತಾತ್ಮಕ, ಜಾತ್ಯತೀತ, ಸಮಾಜವಾದಿ ಗಣರಾಜ್ಯದ ಲಕ್ಷಣಗಳನ್ನು ಮುಂದುವರಿಸಿಕೊಂಡು ಹೋಗುವ ನೂತನ ಸಂವಿಧಾನ ಹೊಂದಿರುವ ಭಾರತ" ಮಹಾತ್ಮರ ಕನಸಿನ ಭಾರತವಾಗಿತ್ತು. ಆದರೆ ಇಂದಿನ ಭಾರತ ಹೇಗಿದೆ? ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಭಾರತವಿಂದು ತೆವಳುತ್ತಿರುವ ಅರಾಜಕ ಸ್ಥಿತಿಯಲ್ಲಿದೆ.

ಭಾರತದಂತಹ ಪ್ರಜಾಪ್ರಭುತ್ವ ದೇಶದಲ್ಲಿಯ ವರ್ತಮಾನದ ಸಮಸ್ಯೆಗಳು ಹಾಗೂ ಅವುಗಳ ಪರಿಹಾರಕ್ಕೆ ಶಾಂತಿಯುತ ಮಾರ್ಗಗಳ ಬಗ್ಗೆ ತಿಳಿಸುವುದೇ ಈ ಕಿರು ಲೇಖನದ ಉದ್ದೇಶ.

## ಭಾರತದ ವರ್ತಮಾನದ ಸಮಸ್ಯೆಗಳು

### (ಅ) ಭ್ರಷ್ಟಾಚಾರ ಹಾಗೂ ರಾಜಕೀಯ ಅನಿಶ್ಚಿತತೆ

ಭಾರತ ಜಗತ್ತಿನ ಭ್ರಷ್ಟ ದೇಶಗಳಲ್ಲಿ ೮ ನೆಯ ಸ್ಥಾನವನ್ನು ಪಡೆದಿದೆ ಎನ್ನುವ ಸಮೀಕ್ಷೆ ನಮ್ಮಲ್ಲಿ ಭ್ರಷ್ಟಾಚಾರ ಯಾವ ಪ್ರಮಾಣದಲ್ಲಿ ಬೆಳೆದು ನಿಂತಿದೆ ಎನ್ನುವುದಕ್ಕೆ ಕೈಗನ್ನಡಿ. ಸ್ವಾತಂತ್ರ್ಯಪೂರ್ವದ ಆದರ್ಶಗಳನ್ನು ಇಂದಿನ ನಮ್ಮ ಬಹುಪಾಲು ರಾಜಕಾರಣಿಗಳು ಗಾಳಿಗೆ ತೂರಿ ಭ್ರಷ್ಟತೆಯನ್ನು ಅಪ್ಪಿಕೊಂಡಿದ್ದಾರೆ.

೧೯೮೦ರ ನಂತರದ ಅವಧಿಯೆಲ್ಲವೂ ಭ್ರಷ್ಟಾಚಾರ ಪರ್ವವೆಂದರೆ ತಪ್ಪಾಗಲಾರದು. ಸುಖರಾಂ ಸಂಪರ್ಕ ಹಗರಣ, ಮುಂದ್ರಾ, ಬೋಫೋರ್ಸ್, ಸಕ್ಕರೆ, ಕೃಷ್ಣಾ ಮೇಲ್ದಂಡೆ, ಟೆಲಿಕಾಂ ಹಗರಣಗಳು, ಕಲರ್ ಟಿ. ವಿ. ಹಗರಣ, ಒಂದೇ ಎರಡೇ! ಐವತ್ತು ವರ್ಷಗಳಲ್ಲಿ ನಾವು ಅಪಾರ ಪ್ರಗತಿ ಸಾಧಿಸಿರುವುದು ಇಂಥ ಹಗರಣಗಳ ಸೃಷ್ಟಿಯಲ್ಲಿ ಮಾತ್ರ ಎನ್ನುವುದೇನೂ ಉತ್ಪ್ರೇಕ್ಷೆಯಲ್ಲ!

ಇನ್ನು ರಾಜಕೀಯ ಅನಿಶ್ಚಿತ ಸ್ಥಿತಿಯ ಬಗ್ಗೆ ನೋಡಿದರೆ– ಸ್ವಾತಂತ್ರ್ಯದ ಸ್ವರ್ಣ ಮಹೋತ್ಸವ ವರ್ಷಗಳಲ್ಲಿ ನಾವು ೧೩ ಮಂದಿ ಪ್ರಧಾನಿಗಳನ್ನು, ೧೨ ಲೋಕಸಭಾ ಚುನಾವಣೆಯನ್ನು ಕಂಡಿದ್ದೇವೆ. ಪದೇ ಪದೇ ಚುನಾವಣೆಯನ್ನಿಡುವುದು ಅಭಿವೃದ್ಧಿಯ

ಕಾರ್ಯಗಳಿಗೆ ಬಾಧೆಯನ್ನುಂಟು ಮಾಡುವುದಾಗಿದೆ. ಪ್ರಸ್ತುತ ಟ್ರೆಂಡ್ ಗಮನಿಸುತ್ತಿದ್ದರೆ ಸದ್ಯಕ್ಕಂತೂ ರಾಜಕೀಯ ಅನಿಶ್ಚಿತತೆ ಕೊನೆಗೊಳ್ಳುವ ಲಕ್ಷಣಗಳು ಕಾಣುತ್ತಿಲ್ಲ.

**(ಬ) ಬಡತನ :**

'ಭಾರತ ಶ್ರೀಮಂತ ದೇಶ; ಆದರೆ ಭಾರತೀಯರು ಬಡವರು' ಎಂಬುದು ವಾಸ್ತವವೇನೋ ಎನ್ನುವಂಥ ಪರಿಸ್ಥಿತಿಯಿಂದು ಕಂಡುಬರುತ್ತಿದೆ. ಮಿತಿಮೀರಿದ ಜನಸಂಖ್ಯೆಯಿಂದಾಗಿ ಇಂದು ಒಪ್ಪತ್ತು ಊಟಕ್ಕೆ, ತುಂಡು ಬಟ್ಟೆಗೆ ಗತಿಯಿಲ್ಲದಂತಹ ಪರಿಸ್ಥಿತಿ ಬಂದೊದಗಿದೆ. ಕೆಲಜನರಲ್ಲಿ ಮಾತ್ರ ಕೊಳೆಯುವಷ್ಟು ಐಶ್ವರ್ಯವಿದ್ದು, ಕೆಲಜನ ತೀವ್ರ ರೀತಿಯ ಬಡತನದಲ್ಲಿ ಬಳಲುತ್ತಿದ್ದಾರೆ. ಬಡತನಕ್ಕೆ ಕಾರಣವಾಗುವ ಸಮಸ್ಯೆಗಳೇ ಮನುಷ್ಯನನ್ನು ತಪ್ಪುದಾರಿಗೆ ಎಳೆಯಲು ಆಹ್ವಾನಿಸುತ್ತವೆ.

**(ಕ) ನಿರುದ್ಯೋಗ :**

ಹೆಚ್ಚುತ್ತಿರುವ ಜನಸಂಖ್ಯೆಯಿಂದಾಗಿ ಉಂಟಾಗಿರುವ ಭೀಕರ ಸಮಸ್ಯೆಯೇ ನಿರುದ್ಯೋಗ ಸಮಸ್ಯೆ. ಭಾರತದಲ್ಲಿ ಶೇ. ೨೭ರಷ್ಟು ಯುವಕ ಪೀಳಿಗೆ ನಿರುದ್ಯೋಗದಿಂದಾಗಿ ಬೇಸತ್ತಿದೆ. ಹೆಚ್ಚಾಗಿರುವ ಭ್ರಷ್ಟಾಚಾರದಿಂದ ಉದ್ಯೋಗ ಸಿಗುತ್ತಿಲ್ಲವೆಂಬುದು ವಾಡಿಕೆಯಾಗಿದೆ. ನಿರುದ್ಯೋಗವನ್ನು ಹೋಗಲಾಡಿಸಲು ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದ್ದರೂ ಗಮನಾರ್ಹ ಫಲಿತಾಂಶ ಕಂಡುಬಂದಿಲ್ಲ.

**(ಪ) ಪ್ರಾದೇಶಿಕತೆ :**

ತನ್ನ ಪ್ರದೇಶ, ತನ್ನ ಜನರ ಮೇಲಿನ ಮಿತಿಮೀರಿದ ಪ್ರೇಮವೇ 'ಪ್ರಾದೇಶಿಕತೆ'ಗೆ ಕಾರಣ. ಇತ್ತೀಚಿನ ದಿನಗಳಲ್ಲಂತೂ ತಮಗಾಗಿಯೇ ಪ್ರತ್ಯೇಕವಾದ ರಾಜ್ಯ, ಜಿಲ್ಲೆ ಹೊಂದಬೇಕೆನ್ನುವುದೇ ಜನರ ಬೇಡಿಕೆಯಾಗುತ್ತಿದೆ. ಇಂಥ ಪ್ರವೃತ್ತಿ ಅನಾಹುತಕ್ಕೆ ಕಾರಣವಾಗಬಲ್ಲದು.

**(ಡ) ಭಯೋತ್ಪಾದಕತೆ :**

ಭಯೋತ್ಪಾದಕತೆಯಿಂದು ದೇಶದ ನಾನಾ ಭಾಗದಲ್ಲಿ ಪಸರಿಸಿದೆ. ದಿನನಿತ್ಯ ಪಂಜಾಬದಲ್ಲಿ ಉಗ್ರಗಾಮಿಗಳ ದೆಸೆಯಿಂದ ಮುಗ್ಧ ಜನರ ಕಗ್ಗೊಲೆ, ಅಸ್ಸಾಮಿನಲ್ಲಿ ದೇಶೀಯ, ವಿದೇಶೀಯರ ನಡುವೆ ಹೋರಾಟ, ಇವೆಲ್ಲ ಭಯೋತ್ಪಾದಕತೆಯನ್ನು ಹುಟ್ಟುಹಾಕಿ, ತಲೆನೋವಿಗೆ ಕಾರಣವಾಗಿವೆ.

**(ಸ) ಶಸ್ತ್ರಾಸ್ತ್ರಗಳ ಪೈಪೋಟಿ :**

ಭಾರತ ಸಂಪೂರ್ಣ ನಿಶ್ಶಸ್ತ್ರೀಕರಣ ತತ್ವಕ್ಕೆ ಬದ್ಧವಾಗಿದೆ. ಆದರೂ ನಮ್ಮ ಸ್ವಂತದ ರಕ್ಷಣೆಗೋಸ್ಕರವಾದರೂ ನಾವು ಕ್ಷಿಪಣಿ ತಯಾರಿಕೆ, ಅಣುಬಾಂಬ್ ತಯಾರಿಕೆಯಲ್ಲಿ ತೊಡಗಿಸಿಕೊಳ್ಳಬೇಕಾಗಿದೆ. 'ಶಾಂತಿಯುತ ಉದ್ದೇಶ ನಮ್ಮದೆ'ಂದು ಹೇಳಿಕೊಳ್ಳುತ್ತಿದ್ದರೂ ವಿಶ್ವರಂಗದ ಕೆಂಗಣ್ಣು ನಮ್ಮ ಮೇಲಿದ್ದೇ ಇದೆ.

## ಪರಿಹಾರೋಪಾಯಗಳು

**ಭ್ರಷ್ಟಾಚಾರದ ನಿರ್ಮೂಲನೆ :**

ಭ್ರಷ್ಟಾಚಾರವನ್ನು ತಡೆಗಟ್ಟುವ ಕೆಲವು ಪರಿಹಾರೋಪಾಯಗಳು ಕೆಳಗಿನಂತಿವೆ :-

೧) ರಾಜಕೀಯ ಪಕ್ಷಗಳು ತಮ್ಮ ಪ್ರತಿನಿಧಿಗಳನ್ನು ಚುನಾವಣೆಗಳಿಗೆ ನಿಲ್ಲಿಸಬೇಕಾದಾಗ ಕೆಲ ನೀತಿ-ನಿಯಮಗಳನ್ನು ಪಾಲಿಸಬೇಕು. ಚಾರಿತ್ರ್ಯಹೀನ ಹಾಗೂ ಅಪರಾಧಿ ಹಿನ್ನೆಲೆಯುಳ್ಳವರಿಗೆ ಚುನಾವಣೆಗಳಲ್ಲಿ ಸ್ಪರ್ಧಿಸಲು ಅವಕಾಶವನ್ನೇ ಕೊಡಬಾರದು.

೨) ಈಗಿರುವಂತೆ ಹಲವಾರು ರಾಜಕೀಯ ಪಕ್ಷಗಳು ಚುನಾವಣೆಗಳಲ್ಲಿ ಸ್ಪರ್ಧಿಸುವ ಬದಲಾಗಿ ಎರಡೇ ಎರಡು ಪಕ್ಷಗಳು ತತ್ವಾಧಾರದ ಮೇಲೆ ಚುನಾವಣಾ ಕಣಕ್ಕಿಳಿಯಬೇಕು.

೩) ಚುನಾವಣೆಯಲ್ಲಿ ಆರಿಸಿ ಬಂದವರು ಪ್ರತಿ ತಿಂಗಳು ತಮ್ಮ ಕ್ಷೇತ್ರದಲ್ಲಿಯ ಜನರ ಕಷ್ಟ-ನಷ್ಟಗಳನ್ನು ಅರಿತು ಪರಿಹಾರ ಮಾರ್ಗವನ್ನು ಕೈಕೊಳ್ಳಬೇಕು.

೪) ಇಂದಿನ ನಮ್ಮ ರಾಜಕೀಯ ಜೀವನದಲ್ಲಿ ಭ್ರಷ್ಟಾಚಾರ, ಅಪರಾಧೀಕರಣಗಳು ತೀರ ಸಾಮಾನ್ಯವಾಗಿ ಬಿಟ್ಟಿವೆ. ಈ ಭ್ರಷ್ಟಾಚಾರದ ಪ್ರಕರಣಗಳನ್ನು ನಿವೃತ್ತರಾದ ಉಚ್ಚ ನ್ಯಾಯಾಧೀಶರನ್ನೊಳಗೊಂಡ ವಿಶೇಷ ನ್ಯಾಯಾಲಯಗಳೇ ಪರೀಕ್ಷೆಗಳಿಗೆ ಒಳಪಡಿಸಬೇಕಲ್ಲದೆ ರಾಜಕೀಯ ಪ್ರಭಾವದಿಂದ ಮುಕ್ತವಾದ ತನಿಖೆಯ ವ್ಯವಸ್ಥೆಯಾಗಬೇಕು. ಆದರಂತೆ ಭ್ರಷ್ಟಾಚಾರ ನಿರ್ಮೂಲನಕ್ಕಾಗಿ ವ್ಯಾಪಕವಾದ ಜನಾಂದೋಲನ ನಡೆಯಬೇಕು.

**ನಿರುದ್ಯೋಗ-ಬಡತನದ ನಿವಾರಣೆ**

ನಮ್ಮ ಸಂವಿಧಾನದ ನಿರ್ದೇಶಿತ ತತ್ವಗಳಲ್ಲಿ ಒಂದಾದ ಉಪಜೀವನದ ಹಕ್ಕು ಅರ್ಥಾತ್ ನಾಗರಿಕರಿಗೆ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವ ಕೆಲಸ ಇಂದು ತುರ್ತಾಗಿ ನಡೆಯಬೇಕಾಗಿದೆ. ಅದರಂತೆ ಸಂವಿಧಾನದ ೪೨ನೇ ಕಲಮಿನ ಪ್ರಕಾರ ೧೦ ವರ್ಷದ ಒಳಗಿನ ಮಕ್ಕಳಿಗೆ ಉಚಿತ, ಕಡ್ಡಾಯ ಶಿಕ್ಷಣದ ವ್ಯವಸ್ಥೆಯೂ ಆಗಬೇಕಾಗಿದೆ. ಭಾರತದ ಬೆಳೆಯುತ್ತಿರುವ ಜನಸಂಖ್ಯೆಗೆ ಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗ ಒದಗಿಸಬಹುದಾದ ಕ್ಷೇತ್ರವೆಂದರೆ ಕೃಷಿಯೇ ಆಗಿದೆ. ಒಕ್ಕಲುತನಕ್ಕೆ ಪೂರಕವಾದ ಕೋಳಿಸಾಕಣೆ, ತೋಟಗಾರಿಕೆ, ರೇಷ್ಮೆಬೆಳೆ, ಪಶುಸಂಗೋಪನೆಗಳಂಥ ಉದ್ಯೋಗಗಳಲ್ಲಿಯೂ ಬಹಳಷ್ಟು ಜನರನ್ನು ತೊಡಗಿಸುವಂತಾಗಬೇಕು. ರೈತರು ಬೆಳೆದ ಬೆಳೆಗೆ ಉತ್ತಮ ಬೆಲೆ ಸಿಗುವ ವ್ಯವಸ್ಥೆ ಮಾಡಬೇಕು. ಗಾಂಧೀಜಿಯವರು ಹೇಳಿದ ಗ್ರಾಮ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡುವುದರ ಮೂಲಕ ಭಾರತದ ನಿರುದ್ಯೋಗ ಹಾಗೂ ಬಡತನಗಳನ್ನು ನಿವಾರಿಸಬಹುದಾಗಿದೆ.

**ನಿಶ್ಶಸ್ತ್ರೀಕರಣ-ಭಾರತದ ನೀತಿ**

ಸಂಪೂರ್ಣ ನಿಶ್ಶಸ್ತ್ರೀಕರಣ ತತ್ವಕ್ಕೆ ಭಾರತವು ಬದ್ಧವಾಗಿದೆ. ಈ ಗುರಿಯ ಸಾಧನೆಗಾಗಿ ಭಾರತವು ವಿಶ್ವಸಂಸ್ಥೆಯಲ್ಲಿ ಹಾಗೂ ಹೊರಗಡೆ ಸಕ್ರಿಯ ಪಾತ್ರವಹಿಸಿದೆ. ಹಾಗಿದ್ದರೂ ನಾವು ಅಣ್ವಸ್ತ್ರಗಳನ್ನು ಹೊಂದಿರಲು ಕಾರಣ ನಮ್ಮ ನೆರೆ-ಹೊರೆ ರಾಷ್ಟ್ರಗಳ ಕುಟಿಲ ನೀತಿ.

ಸ್ವಾತಂತ್ರ್ಯ ಪಡೆದ ಐವತ್ತು ವರ್ಷಗಳಲ್ಲಿ ಭಾರತ ಎದುರಿಸುತ್ತಿರುವ ಹಲವಾರು ಸಮಸ್ಯೆಗಳು ಹಾಗೂ ಅವುಗಳ ಪರಿಹಾರೋಪಾಯಗಳ ಬಗ್ಗೆ ಸ್ಥೂಲವಾಗಿ ನೋಡಿದರೆ, ಭಾರತದ ಭವಿಷ್ಯ ಅಷ್ಟೇನೂ ಚಿಂತಾಜನಕವಾಗಲಾರದು ಎನ್ನುವ ಆಶಾಕಿರಣವೊಂದು ಮಿಂಚುತ್ತದೆ. ಮುಂಬರುವ ದಿನಗಳಲ್ಲಿ ಭಾರತ ತನ್ನೆಲ್ಲ ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡು ವಿಶ್ವದ ಅಗ್ರಮಾನ್ಯ ರಾಷ್ಟ್ರಗಳ ಸಾಲಿನಲ್ಲಿ ಮುಂಚೂಣಿಯಲ್ಲಿರುವಂತಾಗಲಿ ಎಂದು ಆಶಿಸೋಣ.

❋ ❋ ❋

# ಸ್ವಾತಂತ್ರ್ಯ ಸಾರ್ಥಕವಾಗಲಿ !

• ನಾ. ಕು. ಗಣೇಶ್

ವ್ಯಾಪಾರದ ಸಲುವಾಗಿ ಭಾರತಕ್ಕೆ ಆಗಮಿಸಿದ ಬ್ರಿಟಿಷರು ಕ್ರಮೇಣ ಇಲ್ಲಿನ ವನ್ಯ ಹಾಗೂ ಖನಿಜಸಂಪತ್ತು, ಪ್ರಕೃತಿ ಸೌಂದರ್ಯ, ಉತ್ತಮ ಹವೆ, ಶ್ರೇಷ್ಠ ಕಲೆ ಹಾಗೂ ಜನತೆಯ ಸೌಮ್ಯ ವರ್ತನೆಗಳಿಂದ ತೀವ್ರ ಆಕರ್ಷಿತರಾದರು. ಪರಸ್ಪರ ಕಾದಾಟದಲ್ಲಿ ತೊಡಗಿದ್ದ ಆಗಿನ ನಮ್ಮ ವಿವಿಧ ಸಂಸ್ಥಾನಗಳ ರಾಜರ, ಪಾಳೇಗಾರರ ಸ್ವಾರ್ಥ-ದುರಾಶೆಗಳು, ಅವಿವೇಕತನ-ದೌರ್ಬಲ್ಯಗಳು ಇಲ್ಲಿ ಬ್ರಿಟಿಷರು ತಮ್ಮ ಪ್ರಾಬಲ್ಯವನ್ನು ಪ್ರದರ್ಶಿಸಲು, ಆಧಿಪತ್ಯವನ್ನು ಸ್ಥಾಪಿಸಲು ಮೂಲ ಕಾರಣಗಳಾದವೆನ್ನಬಹುದು. ಸಮಯ ಪ್ರಜ್ಞೆ ಹಾಗೂ ಕುಟಿಲ ತಂತ್ರಗಳ ಮೂಲಕ ತಮ್ಮ ಗುರಿಯನ್ನು ಸಾಧಿಸಿಕೊಂಡ ಬ್ರಿಟಿಷರ ಸುಮಾರು ಮೂರು ಶತಮಾನಗಳ ಕಾಲಾವಧಿಯ ಆಡಳಿತವನ್ನು ಕೊನೆಗೊಳಿಸಲು ಅನೇಕ ಸ್ವಾಭಿಮಾನಿ ರಾಷ್ಟ್ರಪ್ರೇಮಿಗಳು ನಿಸ್ಪೃಹ ಮನೋಭಾವನೆಯಿಂದ ಹೋರಾಡಿದರು; ವಿವಿಧ ರೀತಿಯ ದೈಹಿಕ, ಮಾನಸಿಕ ಹಿಂಸೆಗಳನ್ನು ಹಾಗೂ ಸೆರೆಮನೆವಾಸವನ್ನು ಅನುಭವಿಸಿದರು. ಅದೆಲ್ಲದರ ಫಲವಾಗಿ ೧೫-೮-೧೯೪೭ ರಂದು ಭಾರತವು ಬ್ರಿಟಿಷರು ದಾಸ್ಯಸಂಕೋಲೆಯನ್ನು ಕಳಚಿ ಹೊರಬಂತು.

ಸ್ವತಂತ್ರ ಭಾರತದ ಆಡಳಿತ ಸೂತ್ರವನ್ನು ನಮ್ಮವರು ಕೈಗೆತ್ತಿಕೊಂಡ ಬಳಿಕ ಅನೇಕರ ಕೀಳರಿಮೆ, ದಾಸ್ಯಮನೋಭಾವನೆಗಳು ನಿವಾರಣೆಗೊಂಡವು; ಇಲ್ಲಿನ ಅಮೂಲ್ಯ ಸಂಪತ್ತು ಪರಾಧೀನವಾಗುವುದು ನಿಂತಿತು. ಜವಾಹರಲಾಲ್ ನೆಹರೂ, ಸರ್ದಾರ್ ವಲ್ಲಭಬಾಯಿ ಪಟೇಲ್, ಲಾಲ್‌ಬಹದ್ದೂರ್ ಶಾಸ್ತ್ರಿ ಮುಂತಾದ ಆಡಳಿತಗಾರರ ದೂರದೃಷ್ಟಿ, ಉತ್ತಮ ಯೋಜನೆ ಹಾಗೂ ಜನಪರ ಕಾಳಜಿಗಳ ಫಲವಾಗಿ, ಆಹಾರ ಪದಾರ್ಥಗಳ ಹಾಗೂ ದಿನಬಳಕೆ ವಸ್ತುಗಳ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಸಾಧಿಸುವಂತಾಯಿತು. ಶಿಕ್ಷಣ, ಆರೋಗ್ಯ, ನೀರಾವರಿ, ವಿದ್ಯುತ್ ಹಾಗೂ ಬಡತನ ನಿವಾರಣೆಗೆ ವಿವಿಧ ಯೋಜನೆಗಳು ರೂಪುಗೊಂಡು ಅನುಷ್ಠಾನಕ್ಕೆ ಬಂದವು. ಸ್ಥಳೀಯ ಮಟ್ಟದ ಸಣ್ಣ ಹಾಗೂ ಬೃಹತ್ ಕೈಗಾರಿಕೋದ್ಯಮಗಳು ಸ್ಥಾಪನೆಗೊಂಡು ನಿರುದ್ಯೋಗ ಸಮಸ್ಯೆ ನಿವಾರಣೆಗೊಳ್ಳುವಂತಾಯಿತು.

ಆದರೆ ಕ್ರಮೇಣ ನಮ್ಮ ಆಡಳಿತಗಾರರಲ್ಲಿ ಪ್ರಜಾಹಿತ ಚಿಂತನೆ, ದಕ್ಷತೆ, ದೇಶಭಕ್ತಿಯ ಬದಲು ಸ್ವಾರ್ಥ, ಅಧಿಕಾರದಾಹ, ಭ್ರಷ್ಟಾಚಾರ, ಸ್ವಜನಪಕ್ಷಪಾತದ ಕೀಳು ಧ್ಯೇಯ-ಧೋರಣೆಗಳು ಮೈಗೂಡಿಕೊಂಡವು; ತತ್ವ-ಸಿದ್ಧಾಂತಗಳಿಗೆ ಬದ್ಧರಾಗದ, ನೀತಿ-ನಿಯಮಗಳನ್ನು ಹೊಂದದವರ ಸಂಖ್ಯೆ ವೃದ್ಧಿಗೊಳ್ಳತೊಡಗಿತು. ಪ್ರಾರಂಭಿಕ ಹಂತದಲ್ಲಿ ಕೆಲವೇ ಸಂಖ್ಯೆಯಲ್ಲಿದ್ದ

ರಾಜಕೀಯ ಪಕ್ಷಗಳು ಈಗ ನೂರಾರು! ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ಸಿಗದಿದ್ದರೆ, ಮಂತ್ರಿ ಪದವಿ ಅಥವಾ ಇತರ ಪ್ರಭಾವಿತ- ಫಲವತ್ತಾದ ಹುದ್ದೆ ಸಿಗದಿದ್ದರೆ, ತಮ್ಮ ಮೂಲ ಪಕ್ಷವನ್ನು ತೊರೆದು, ಗುರಿ ಹಾಗೂ ಪ್ರಯತ್ನಗಳು ಫಲಿಸುವ ಪಕ್ಷಕ್ಕೆ ಜಿಗಿಯುವ ಅವಕಾಶವಾದಿತನವನ್ನು ಈಗಿನ ಬಹುತೇಕ ರಾಜಕಾರಣಿಗಳು ಹೊಂದಿದ್ದಾರೆ. ಇಂಥ ಅವಕಾಶವಾದಿ ಪ್ರಜಾಪ್ರತಿನಿಧಿಗಳ ಅಕ್ರಮ ಹಣ, ಆಸ್ತಿಗಳ ಮೊತ್ತ ಊಹೆಗೆ ನಿಲುಕದಷ್ಟು! ಜನಸಾಮಾನ್ಯರ ಜೀವನಸ್ಥಿತಿ ಮಾತ್ರ ಯಥಾರೀತಿ ಇದೆ. ಬಡತನ, ನಿರುದ್ಯೋಗ, ವಸತಿ ಸಮಸ್ಯೆಗಳ ನಿವಾರಣೆಗೆ ಪರಿಣಾಮಕಾರಿಯಾದ ಯೋಜನೆಗಳಿಲ್ಲ; ಇದ್ದರೂ ಅವು ರಾಜಕಾರಣಿಗಳು ಮಾಡುವ ಭಾಷಣ, ಘೋಷಣೆ ಹಾಗೂ ಹೊರಡಿಸುವ ಜಾಹೀರಾತುಗಳಲ್ಲಷ್ಟೇ! ಜನಸಂಖ್ಯಾ ಸ್ಫೋಟ, ಅಭಿವೃದ್ಧಿ ಯೋಜನೆಗಳ ಸ್ಥಗಿತತೆ, ಭ್ರಷ್ಟಾಚಾರ, ನಿರುದ್ಯೋಗ, ಪರಸ್ಪರ ತಮ್ಮ ಪ್ರಭಾವ ಅಥವಾ ಪ್ರಾಬಲ್ಯವನ್ನು ಪ್ರದರ್ಶಿಸಲು, ರಾಜಕೀಯ ವಿರೋಧಿಗಳನ್ನು ಹತ್ತಿಕ್ಕಲು, ಪ್ರಜ್ಞಾವಂತ ನಾಗರಿಕರ ಹತಾಶೆ-ಆಕ್ರೋಶಗಳನ್ನು ಮರೆಸಲೆಂದು ಕೋಮುಗಲಭೆ ಅಥವಾ ಭಯೋತ್ಪಾದಕ ಚಟುವಟಿಕೆಗಳ ಉದ್ಭವಕ್ಕೆ, ಉಲ್ಬಣಸ್ಥಿತಿಗೆ ಬಹುತೇಕ ರಾಜಕಾರಣಿಗಳೇ ಪ್ರತ್ಯಕ್ಷ ಹಾಗೂ ಪರೋಕ್ಷ ಕಾರಣರಾಗುತ್ತಿದ್ದಾರೆ! ಸಾವಿರ ಸಂಖ್ಯೆಯ ಜನತೆಯ ಸುಗಮ ಜೀವನ ನಿರ್ವಹಣೆಗೆ ವಿನಿಯೋಗವಾಗಬೇಕಿದ್ದ ಮೊತ್ತದ ಹಣ, ಆಸ್ತಿಗಳು ಒಬ್ಬೊಬ್ಬ ರಾಜಕಾರಣಿ, ಬೃಹತ್ ಉದ್ಯಮಿ ಹಾಗೂ ಸಿನಿಮಾ ಕ್ಷೇತ್ರದವರ ಕೈವಶವಾಗಿವೆ! ವಿದೇಶಿ ಸಾಲದ ಮೊತ್ತ ವೃದ್ಧಿಗೊಳ್ಳುತ್ತಲಿದೆ. ವಿವಿಧ ಸಂಪನ್ಮೂಲಗಳನ್ನು ಹೊಂದಿಯೂ ಅವುಗಳ ಅಸಾರ್ಥಕ ಬಳಕೆಯಿಂದಾಗಿ ಆರ್ಥಿಕ ಸ್ಥಿತಿ ಕುಸಿದಿದೆ. ಪ್ರತಿ ಐದು ವರ್ಷಗಳಿಗೊಮ್ಮೆ ನಡೆಯಬೇಕಿದ್ದ ಸಾರ್ವತ್ರಿಕ ಚುನಾವಣೆ ಪದೇ ಪದೇ ನಡೆಯುವಂತಾಗಿ, ಇತರ ಅಭಿವೃದ್ಧಿಯೋಜನೆಗಳಿಗೆ ವಿನಿಯೋಗಿಸಬಹುದಾಗಿದ್ದ ಕೋಟಿಗಟ್ಟಲೆ ಮೊತ್ತದ ಹಣ ಮರು ಚುನಾವಣೆಗಳಿಂದ ಅಪವ್ಯಯವಾಗುತ್ತಿದೆ. ರಾಜಕಾರಣಿಗಳ, ವಿವಿಧ ರಾಜಕೀಯ ಪಕ್ಷಗಳ ಅನುಚಿತ-ಅನಪೇಕ್ಷಿತ ನೀತಿಗಳಿಂದ ಭ್ರಮನಿರಸನಗೊಂಡಿರುವ ಪ್ರಜ್ಞಾವಂತ, ವಿದ್ಯಾವಂತ ನಾಗರಿಕರು ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ದ್ವೇಷಿಸುವಂತಾಗಿದೆ. ಪರಿಣಾಮವಾಗಿ ಯಾವುದೇ ಒಂದು ಪಕ್ಷಕ್ಕೂ ಸ್ವತಂತ್ರವಾಗಿ ಆಡಳಿತ ನಡೆಸಲು ಅಗತ್ಯವಾದ ಸ್ಪಷ್ಟ ಬಹುಮತ ಕಳೆದ ಕೆಲವು ಲೋಕಸಭಾ ಚುನಾವಣೆಗಳಲ್ಲಿ ಲಭಿಸಿಲ್ಲ.

ರಾಜಕೀಯ ಪಕ್ಷಗಳ ಸಂಖ್ಯೆ ಎರಡು ಅಥವಾ ಮೂರಕ್ಕೆ ಕುಗ್ಗಿ, ರಾಜಕಾರಣಿಗಳು ತಮ್ಮ ಅಧಿಕಾರದಾಹ, ಸ್ವಜನಪಕ್ಷಪಾತ, ಅಕ್ರಮ ಸಂಪತ್ತಿನ ಲೂಟಿ ಇತ್ಯಾದಿ ಅನುಚಿತ ನೀತಿಗಳನ್ನು ತೊರೆದು, ಬೆಲೆಏರಿಕೆ, ನಿರುದ್ಯೋಗ ಸಮಸ್ಯೆ, ವಿದೇಶಿ ಸಾಲದ ಮರುಪಾವತಿ, ತೆರಿಗೆ ವಂಚಕರ, ದೇಶದ್ರೋಹಿಗಳ, ದುಷ್ಟಶಕ್ತಿಗಳ ದಮನ ಇತ್ಯಾದಿ ಗಂಭೀರ ವಿಷಯಗಳ ಬಗ್ಗೆ ನಿಸ್ಪೃಹ ಹಾಗೂ ದಿಟ್ಟನಿಲುವಿನಿಂದ ಅಗತ್ಯದ ಕ್ರಮಗಳನ್ನು ಕೈಗೊಳ್ಳುವ ಮೂಲಕ ಪಡೆದ ಸ್ವಾತಂತ್ರ್ಯವನ್ನು ಸಾರ್ಥಕಗೊಳಿಸಲಿ, ಪ್ರಜಾಪ್ರಭುತ್ವನೀತಿ ದೃಢವಾಗಲಿ!

❊ ❊ ❊

# ದೇಶದ ಪ್ರಗತಿ ಮರೆತು ಅಧಿಕಾರಕ್ಕೆ ಜೋತುಬಿದ್ದ ಪಕ್ಷಗಳು

• ಎಸ್. ಸಿದ್ದೇಶ್ ಕುರ್ಕಿ

**ಸ್ವಾತಂತ್ರ್ಯಕ್ಕಾಗಿ ಹೋರಾಟ :**

ಭಾರತ ದೇಶ ತನ್ನದು ಎಂಬ ಒಂದು ಮನೋಧರ್ಮದ ಸಂಸ್ಕೃತಿಯನ್ನು ಪಡೆದಿದೆ. ನಮ್ಮ ರಾಷ್ಟ್ರದ ಎಲ್ಲ ಮುಖದ ವಿಕಾಸ ಸಾಧ್ಯವಾಗಬೇಕೆಂದರೆ. ನಮ್ಮ ರಾಷ್ಟ್ರ ತನ್ನ ಜೀವನವನ್ನು ತಾನೇ ರೂಪಿಸಿಕೊಳ್ಳಬೇಕೆಂದು, ಹಾಗೂ ಬ್ರಿಟಿಷರ ದಬ್ಬಾಳಿಕೆ, ಹಿಂಸೆಯನ್ನು ಸಹಿಸಲಾರದೆ ಎಲ್ಲರಾಷ್ಟ್ರಗಳಂತೆ ನಾವು ಸ್ವತಂತ್ರರಾಗಬೇಕು ಎಂದು ನಮ್ಮ ನಾಯಕರು ರಾಜಕೀಯ ಸ್ವಾತಂತ್ರ್ಯವನ್ನು ಅಪೇಕ್ಷಿಸಿ, ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಡಲು ಹೋರಾಟ ಮಾಡಲು ಸಿದ್ಧರಾದರು.

ಭಾರತೀಯ ಕಾಂಗ್ರೆಸ್ ಎಂಬ ಪಕ್ಷವನ್ನು ಕಟ್ಟಿಕೊಂಡು ಬ್ರಿಟಿಷರ ವಿರುದ್ಧ ಹೋರಾಡಲು ಗಾಂಧಿ, ನೆಹರೂ, ನೇತಾಜಿ, ಭಗತ್‌ಸಿಂಗ್, ಲಾಲ್‌ಬಹಾದ್ದೂರ್ ಶಾಸ್ತ್ರಿ, ವಲ್ಲಭಭಾಯಿ ಪಟೇಲ್ ಇಂತಹ ನಾಯಕರ ಸಮಿಷ್ಟಿ ಪ್ರಯತ್ನದ ಫಲವಾಗಿ ಭಾರತ ಸ್ವತಂತ್ರವಾದದ್ದೀಗ ಇತಿಹಾಸ.

**ಸಾಧನೆ ಮತ್ತು ವೈಫಲ್ಯಗಳು :**

ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳು ಗತಿಸಿವೆ. ಈ ಅರ್ಧಶತಮಾನದ ಅವಧಿಯಲ್ಲಿ ಭಾರತ ಸಾಕಷ್ಟು ಸಾಧನೆಗಳನ್ನು ಮಾಡಿದೆ ಹಾಗೂ ಹಲವಾರು ವೈಫಲ್ಯಗಳನ್ನೂ ಕಂಡಿದೆ. ಅಂಥ ಒಂದೆರಡು ಉದಾಹರಣೆಗಳನ್ನು ನೋಡುವುದಾದರೆ:

೧) ರಾಜಕೀಯ ಪಕ್ಷಗಳಿಗೆ ದೇಶದ ಪ್ರಗತಿಗಿಂತ ಅಧಿಕಾರ ಹಿಡಿಯುವುದೇ ಮುಖ್ಯವಾಗಿ ಬಿಟ್ಟಿರುವುದರಿಂದ ಆರ್ಥಿಕ ವಿಷಯ ನಿರ್ಲಕ್ಷಕ್ಕೊಳಗಾಗಿದೆ. ಭಾಷಣಗಳಲ್ಲಿ, ಸುದ್ದಿ-ಸಮಾಚಾರಗಳಲ್ಲಿ ಬಹುತೇಕ ರಾಜಕೀಯ ಪಕ್ಷಗಳು ಆರ್ಥಿಕ. ಸಾಮಾಜಿಕ ಸುಧಾರಣೆಗಳನ್ನು ಪ್ರತಿಪಾದಿಸುತ್ತವೆ. ಆದರೆ ವಾಸ್ತವದಲ್ಲಿ ಆಡಳಿತಾರೂಢ ಪಕ್ಷಗಳಾಗಲಿ ಅಥವಾ ವಿರೋಧ ಪಕ್ಷಗಳಾಗಲಿ ಸುಧಾರಣೆಯತ್ತ ಗಮನ ಹರಿಸುವುದಿಲ್ಲ.

೨) ನೂರೆಂಟು ಪ್ರಾದೇಶಿಕ ಪಕ್ಷಗಳಲ್ಲಿ ಒಂದೊಂದು ಪಕ್ಷದ ನಿಲುವುಗಳು ಬೇರೆ ಬೇರೆಯಾಗಿ ದೇಶದ ಏಕತೆಗೆ ದುಡಿಯುವ ಕಾರ್ಯ ಆಗುತ್ತಿಲ್ಲ.

೩) ಅಧಿಕಾರದ ದಾಹ ಎಲ್ಲ ಪಕ್ಷಗಳಿಗೆ ಅಂಟಿಕೊಂಡ ರೋಗವಾಗಿದೆ.

೪) ಭಾರತ ಒಂದು ಫೆಡರಲ್ ರಾಷ್ಟ್ರವೆಂದು ಡಾ|| ಬಿ. ಆರ್. ಅಂಬೇಡಕರ್‌ರವರ ನಿಲುವಾಗಿತ್ತು. ಆದರೆ ಸ್ವಾತಂತ್ರ್ಯದ ನಂತರ ಪಕ್ಷಗಳ ವ್ಯವಸ್ಥೆ ಆರೋಗ್ಯ ಪೂರ್ಣವಾಗಿ ಬೆಳೆಯಲಿಲ್ಲ. ರಾಷ್ಟ್ರೀಯ ಪಕ್ಷಗಳು ಫೆಡರಲ್ ತತ್ವಗಳನ್ನು ಮೈಗೂಡಿಸಿಕೊಳ್ಳಲಿಲ್ಲ. ರಾಜ್ಯಗಳು ಫೆಡರಲ್ ತತ್ವಗಳನ್ನು ಅನುಸರಿಸಲಿಲ್ಲ. ಹಾಗಾಗಿ ದೇಶದ ಪರಿಸ್ಥಿತಿ ಹದಗೆಟ್ಟಿದೆ.

**ಮುಂದೆ ಅನುಸರಿಸಬೇಕಾದ ನಿಯಮಗಳು :-**

೧) ಬೆಳೆಯುತ್ತಿರುವ ಜನಸಂಖ್ಯೆಯನ್ನು ನಿಯಂತ್ರಿಸುವುದು. ಇದರಿಂದ ಬಡತನ, ನಿರುದ್ಯೋಗ ಸಮಸ್ಯೆಗಳು ಕಡಿಮೆಯಾಗುತ್ತವೆ.

೨) ಭ್ರಷ್ಟಾಚಾರ, ಲಂಚಕೋರತನ, ತಡೆಗಟ್ಟಬೇಕು.

೩) ರಾಜಕೀಯದಿಂದ ಆರ್ಥಿಕ ಪ್ರಗತಿಯನ್ನು ದೂರವಿರಿಸಿ, ಆರ್ಥಿಕ ಸುಧಾರಣೆಗಾಗಿ ಎಲ್ಲ ಪಕ್ಷಗಳು ಏಕಚಿತ್ತದಿಂದ ಶ್ರಮಿಸಿದರೆ ಭಾರತ ಪ್ರಬಲ ಆರ್ಥಿಕ ಶಕ್ತಿಯನ್ನು ಹೊಂದಿದ ದೇಶವಾಗಿ ಹೊರಹೊಮ್ಮುತ್ತದೆ.

೪) ಪರರಾಷ್ಟ್ರಗಳಿಂದ ಸಾಲ ಮಾಡುವುದನ್ನು ತಡೆಗಟ್ಟಿ, ರಾಷ್ಟ್ರದ ಸಂಪನ್ಮೂಲಗಳನ್ನು ಸದುಪಯೋಗಪಡಿಸಿಕೊಳ್ಳುವತ್ತ ಗಮನಹರಿಸಬೇಕು.

೫) ದೇಶದಲ್ಲಿ ಈಗ ಸಂಯುಕ್ತರಂಗಗಳ ಸರಕಾರ ರಚನೆಯಾಗುತ್ತಿದ್ದು ರಾಜಕೀಯವಾಗಿ ಭಿನ್ನಾಭಿಪ್ರಾಯಗಳು ಒಂದು ಮಧ್ಯೆ ಸರಕಾರ ಬಿದ್ದು ಮಧ್ಯಂತರ ಚುನಾವಣೆಗಳ ಹಾವಳಿ ಹೆಚ್ಚಿ, ದೇಶದ ಮೇಲೆ ಹಣದ ಹೊರೆ ಬೀಳುತ್ತದೆ. ಆದ್ದರಿಂದ ಚುನಾವಣಾ ಆಯೋಗ ಒಂದೆರಡು ರಾಷ್ಟ್ರೀಯ ಪಕ್ಷಗಳಿಗೆ ಮಾತ್ರ ಮನ್ನಣೆ ನೀಡಿ, ಪ್ರಾದೇಶಿಕ ಪಕ್ಷಗಳಿಗೆ ಮನ್ನಣೆ ನೀಡಬಾರದು.

೬) ಜಾತಿಭೇದ ಎನ್ನದೆ ಎಲ್ಲರಿಗೂ ಒಂದೇ ಕಾನೂನು ಮಾಡಿ ಆರ್ಥಿಕವಾಗಿ ಹಿಂದುಳಿದಂಥವರಿಗೆ ಮಾತ್ರ ಪ್ರಾತಿನಿಧ್ಯ ಕೊಡುವಂತಾಗಬೇಕು.

೭) ಒಳ್ಳೆಯ ತಂತ್ರಜ್ಞಾನಿಗಳಿಗೆ, ವಿಜ್ಞಾನಿಗಳಿಗೆ, ಅರ್ಥಶಾಸ್ತ್ರಜ್ಞರಿಗೆ ಸರಕಾರ ಪ್ರೋತ್ಸಾಹ ನೀಡಿ ಸಂಶೋಧನೆ ಮಾಡಲು ಅವಕಾಶ ಮಾಡಿಕೊಡಬೇಕು.

೮) ಕೇವಲ ವೋಟ್ ಬ್ಯಾಂಕ್‌ಗೋಸ್ಕರ ಜಾತಿ ಬೀಜ ಬಿತ್ತದೆ ಸರ್ವರಿಗೂ ಸಮನಾದ ಹಕ್ಕನ್ನು ನೀಡಬೇಕು.

❋ ❋ ❋

# ದೇಶ ಉಳಿದರೆ ನಮ್ಮ ಪುಣ್ಯ !

• ಲೀಲಾ

ತಗ್ಗಿ ಬಗ್ಗಿ ಭಾರತಕ್ಕೆ ಬಂದ ಬ್ರಿಟಿಷರು ಆಮೇಲೆ ಚಟಮ್ಮನೆ ನಿಗುರಿನಿಂತು, ನೂರಾರು ವರ್ಷಗಳ ಕಾಲ ಭಾರತೀಯರನ್ನಾಳಿದ್ದು; ಆಮೇಲೆ ಲಕ್ಷಾಂತರ ಜನರ ನೂರಾರು ವರ್ಷಗಳ ದೀರ್ಘ ಹೋರಾಟದಿಂದ ಭಾರತ ಸ್ವತಂತ್ರವಾದದ್ದು – ಇದೆಲ್ಲ ಈಗ ಯಾವತ್ತೋ ನಡೆದುಹೋದ ಕಥೆ ಎನಿಸಿಕೊಳ್ಳತೊಡಗಿದೆ! ಸ್ವಾತಂತ್ರ್ಯಪೂರ್ವದಲ್ಲಿ ಕನಸು ಕಂಡಿದ್ದ ಸುಖೀರಾಜ್ಯ, ಸುಭಿಕ್ಷ ರಾಜ್ಯದ ಕಲ್ಪನೆ ಕಲ್ಪನೆಯಾಗಿಯೇ ಉಳಿಯುತ್ತದೆಂದು ಬಹುಶಃ ಯಾರೂ ಅಂದುಕೊಂಡಿರಲಿಕ್ಕಿಲ್ಲ!

ಸ್ವಾತಂತ್ರ್ಯ ಪಡೆದು ಐವತ್ತು ವರ್ಷ ಸಾಗಿ ಬಂದ ಹಾದಿಯನ್ನೊಮ್ಮೆ ಅವಲೋಕಿಸಿ ಮುಂದೆ ಸಾಗಬೇಕಿರುವ ದಾರಿಯ ಬಗ್ಗೆ ಯೋಚಿಸಿದಾಗ ಹೆದರಿಕೆಯಂತಹ ಭಾವನೆ ಕಾಡತೊಡಗಿದರೆ ಅಚ್ಚರಿಯೇನಿಲ್ಲ.

ಪ್ರಸ್ತುತದ ಕರಾಳರಾಜಕೀಯ, ದುರುಳತನ, ಕೊಳಕುತನ, ಸಮಾಜವನ್ನೆಲ್ಲ ವ್ಯಾಪಿಸಿಕೊಳ್ಳುತ್ತಿರುವ ಭ್ರಷ್ಟಾಚಾರ, ಲಂಚಕೋರತನ, ಮೌಲ್ಯ ಕಳೆದುಕೊಳ್ಳುತ್ತಿರುವ ನೈತಿಕತೆ– ಇವೆಲ್ಲವುಗಳಿಂದಾಗಿ ಮುಂದಿನ ಭವಿಷ್ಯವನ್ನು ನೆನೆದರೆ ನಿಜಕ್ಕೂ ಮೈಯೆಲ್ಲ 'ಝುಂ' ಎನ್ನುತ್ತದೆ.

ಈ ದೇಶದ ಪ್ರಸ್ತುತ ರಾಜಕೀಯ ತಂತ್ರದಿಂದ ದೇಶದ ಉನ್ನತಿಯಾಗಲಿ ಜನಸಾಮಾನ್ಯನ ಉನ್ನತಿಯಾಗಲಿ ಅಸಾಧ್ಯ. ರಾಜಕೀಯ ದೃಷ್ಟಿಕೋನ ಬದಲಾಗಬೇಕು. ತನ್ನ ಸ್ವಾರ್ಥ ಸಾಧನೆ, ಶ್ರೇಯೋಭಿವೃದ್ಧಿ ಇಷ್ಟನ್ನೇ ಗುರಿಯಾಗಿ ಹೊಂದಿರುವ ನಮ್ಮ ರಾಜಕೀಯ ಪುಢಾರಿಗಳ ಕೈಯಿಂದ ದೇಶ ಸ್ವತಂತ್ರವಾಗುವವರೆಗೂ ನಮ್ಮ ಭವ್ಯ ಭಾರತಮಾತೆಯು ಉನ್ನತಿ ಪಥದಲ್ಲಿ ಬರುವುದು ಅಸಾಧ್ಯವೆಂಬುದು ನಿಷ್ಠುರವಾದರೂ ಕಟುಸತ್ಯ.

ಬ್ರಿಟಿಷರಿಗೆ ಇದ್ದ ಸ್ವಾರ್ಥ ಲಾಲಸೆ ಹಾಗೂ ಭ್ರಷ್ಟತನ, ಲಂಚಕೋರತನ ಇವುಗಳಲ್ಲಿ ಯಾವುದೂ ಕಡಿಮೆಯಿಲ್ಲದೆ ನಮ್ಮ ರಾಜಕಾರಣಿಗಳಲ್ಲಿ ತುಂಬಿತುಳುಕುತ್ತಿವೆ. ದೇಶವನ್ನು ಇನ್ನಷ್ಟು ದುಸ್ಥಿತಿಗೆ ಕೊಂಡೊಯ್ಯುತ್ತಿರುವ ಇಂತಹ ಭ್ರಷ್ಟ ಧುರೀಣರಿಂದ ದೇಶದ ಅತ್ಯುನ್ನತ ಪ್ರಗತಿ ಹಾಗೂ ಸಾಮಾನ್ಯ ಪ್ರಜೆಯ ಜೀವನದ ಮೇಲ್ಮಟ್ಟವನ್ನು ಬಯಸುವುದು ಹಾಸ್ಯಾಸ್ಪದ ಸಂಗತಿ.

ನಮ್ಮ ಸಮಾಜವನ್ನು ಪ್ರಗತಿಪರ ದೇಶದೊಂದಿಗೆ ಹೋಲಿಸಿ ವಿಶ್ಲೇಷಿಸಿದಾಗ ನಮ್ಮ ಮುಂದಿನ ಜೀವನದ ಗುರಿ ಹಾಗೂ ದೇಶದ ಪ್ರಗತಿಯ ಬಗ್ಗೆ ಅನುಕಂಪವಾಗುವುದರ ಜೊತೆಗೆ ಭಯವೂ ಆಗುತ್ತದೆ. ಇಂತಹ ಸ್ವಾರ್ಥಪರ ಜನರಿಂದ ತುಂಬಿದ ನಮ್ಮ ದೇಶವು ನಮ್ಮ ಕೈಯಿಂದ ಜಾರಿ ಮತ್ತೆ ಪರರ ಕೈ ಸೇರದಿದ್ದರೆ ಅದೇ ನಮ್ಮ ಪುಣ್ಯ!

❋ ❋ ❋

# ನಿರಕ್ಷರಿಗಳೆಂಬ ನಿರಾಶಾಭಾವ

• ಓ. ಶೀನಪ್ಪ

ಸ್ವಾತಂತ್ರ್ಯ ದೊರೆತು ೫೦ ವರುಷ ದಾಟಿದ್ದರೂ ದೇಶದ ಹಿತ ಚಿಂತನೆಗಾಗಿ ಒಳ್ಳೆಯ ಕಾರ್ಯಕ್ರಮಗಳನ್ನು ತರುವುದರಲ್ಲಿ ನಾವು ವಿಫಲರಾಗಿದ್ದೇವೆ. ಇದಕ್ಕೆ ಕಾರಣ ಭಾರತೀಯರಲ್ಲಿ "ನಾವು ನಿರಕ್ಷರಿಗಳು, ನಮ್ಮಿಂದ ಏನೂ ಉಪಯೋಗವಾಗುವುದಿಲ್ಲ. ನಾವು ದೇಶಕ್ಕಾಗಿ ಏನು ನೀಡಲೂ ಅಸಮರ್ಥರಾಗಿದ್ದೇವೆ" ಎನ್ನುವ ಭಾವನೆ ತುಂಬಿರುವುದು.

ಭಾರತಕ್ಕೆ ಸ್ವಾತಂತ್ರ್ಯ ದೊರಕಿದ ನಂತರ ರಾಜಕೀಯವಾಗಿ ನಮ್ಮನ್ನು ನಾವು ಆಳಿಕೊಳ್ಳಬಲ್ಲವರಾದೆವು. ಅದೇ ನಮಗೆ ಮುಳುವಾಯಿತೇನೋ ಎನ್ನುವ ಅನುಮಾನ ಕಾಡುತ್ತಿದೆ. ಇತ್ತೀಚಿನ ರಾಜಕೀಯ ಬೆಳವಣಿಗೆ, ಬದಲಾವಣೆಗಳು ರಾಷ್ಟ್ರದ ಉಳಿವಿಗಾಗಲಿ, ಉನ್ನತಿಗಾಗಲಿ ಪೂರಕವಾದಂಥವಲ್ಲವೇ ಅಲ್ಲ.

ಭಾರತದ ಸ್ವಾತಂತ್ರ್ಯ ಇನ್ನಷ್ಟು ಅರ್ಥಪೂರ್ಣವಾಗಬೇಕಾದರೂ ಜನರಲ್ಲಿ ತಿಳುವಳಿಕೆ ಮೂಡಬೇಕು. ಆ ತಿಳುವಳಿಕೆಗೆ ಉತ್ತಮ ಶಿಕ್ಷಣ ಪೂರಕ. ಅಂಥ ಶಿಕ್ಷಣವನ್ನು ಭಾರತದ ಪ್ರತಿಯೊಬ್ಬ ಪ್ರಜೆ ಪಡೆಯುವಂತಾಗುವುದು ಎಂದಿಗೋ ?

ಸ್ವಾತಂತ್ರ್ಯಾನಂತರದ ಭಾರತದ ಸಾಧನೆ-ವೈಫಲ್ಯಗಳ ಬಗ್ಗೆ ಯೋಚಿಸಿದರೆ, ವೈಫಲ್ಯ ಬಹುಮುಖಿಯಾಗಿದ್ದು, ಸಾಧನೆ ವಾಮನನಂತಿರುವುದು ಕಂಡುಬರುತ್ತದೆ. ಆದಾಗ್ಯೂ ಜನರಲ್ಲಿ ಪ್ರತಿಭಟನೆ ಕಂಡುಬರುತ್ತಿಲ್ಲ (ಅಲ್ಲಲ್ಲಿ ಕಂಡುಬರುತ್ತಿದ್ದರೂ ಅದು ಕೂಡ ಬಹುಪಾಲು ಅವಕಾಶವಾದಿಗಳ, ಸ್ವಾರ್ಥಿಗಳ ಪ್ರತಿಭಟನೆಯಾಗಿರುತ್ತದೆನ್ನುವುದೇ ದುರಂತ). ಕಾರಣ-ತಿಳುವಳಿಕೆಯ ಅಭಾವ. ಭಾರತದ ಪ್ರತಿಯೊಬ್ಬನೂ ಸಾಕ್ಷರನಾಗಿ ವಿಚಾರಪರತೆಯನ್ನು ರೂಢಿಸಿಕೊಳ್ಳುವತನಕ ಈ ಅವ್ಯವಸ್ಥೆ ಸುಧಾರಿಸುವಂತಿಲ್ಲ. ಒಮ್ಮೆ ಸಂಪೂರ್ಣ ಸಾಕ್ಷರತೆ ಸಾಧ್ಯವಾದರೆ, ಭಾರತದ ಪ್ರತಿಯೊಬ್ಬನೂ ತನ್ನ ವರ್ತಮಾನ ಹಾಗೂ ಭವಿಷ್ಯವನ್ನು ತಾನೇ ರೂಪಿಸಿಕೊಳ್ಳಬಲ್ಲ. ಆದರೆ ಅಂಥ ಕಾಲ ಬಂದೀತೇ?

❋ ❋ ❋

# ಭ್ರಷ್ಟಾಚಾರದಲ್ಲಿ ರಾಜಕಾರಣಿಗಳು : ಕ್ರಿಕೆಟ್‌ನಲ್ಲಿ ಮೈಮರೆತ ಯುವಕರು

• ಪ್ರವೀಣ ಅಕ್ಕಿಶೆಟ್ಟಿ

ಸ್ವಾತಂತ್ರ್ಯದ ಸುವರ್ಣ ಮಹೋತ್ಸವದಂದು 'ಸ್ವಾತಂತ್ರ್ಯದ ನಂತರ ಭಾರತದ ಪರಿಸ್ಥಿತಿ ಏನು ಎತ್ತ' ಎಂದು ವಿಚಾರ ಮಾಡಿದರೆ ನಿರಾಶಾದಾಯಕ ಉತ್ತರವೇ ಲಭಿಸುತ್ತದೆ. ಜನಸಂಖ್ಯೆ, ನಿರುದ್ಯೋಗ, ಭಯೋತ್ಪಾದನೆ, ಬೆಲೆ ಏರಿಕೆ, ಹಗರಣಗಳು, ಭ್ರಷ್ಟಾಚಾರ..... ಮುಂತಾದವೆಲ್ಲ ಒಂದರೊಡನೊಂದು ಪೈಪೋಟಿಗಿಳಿದಂತಿವೆ. ಬ್ರಿಟಿಷರ ಆಳ್ವಿಕೆಯಲ್ಲಿ ನಮ್ಮ ದೇಶದ ಜನರ ಆರ್ಥಿಕ ಸ್ಥಿತಿ-ಗತಿ ಹೇಗಿತ್ತು? ಆಗ ನಮ್ಮ ದೇಶದ ಜನರ ವಾರ್ಷಿಕ ತಲಾ ಆದಾಯ 30 ರೂ. ಗಳಷ್ಟಿದ್ದರೆ, ಅದೇ ಬ್ರಿಟಿಷ್ ಪೌರರ ವಾರ್ಷಿಕ ತಲಾ ಆದಾಯ 1500 ರೂ. ಗಳಷ್ಟಿತ್ತು! ಮತ್ತೆ ಪ್ರಸ್ತುತದ ಪರಿಸ್ಥಿತಿ ಹೇಗಿದೆ? ವಾರ್ಷಿಕ ತಲಾ ಆದಾಯ ಹೆಚ್ಚಿರಬಹುದಾದರೂ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳ ತುಲನೆಯಲ್ಲಿ ಆ ತಾರತಮ್ಯ ಇನ್ನೂ ಹಾಗೇ ಇದೆ ಎನ್ನಬಹುದು. ಆಗಲಾದರೆ ಬ್ರಿಟಿಷರು ನಮ್ಮನ್ನು ಶೋಷಣೆ ಮಾಡುತ್ತಿದ್ದಾರೆ ಎಂದು ಅವರ ಮೇಲೆ ಗೂಬೆ ಕೂರಿಸಬಹುದಿತ್ತು. ಮತ್ತೆ ಈಗ? ಈಗಲೂ ಕೆಲವು ಜನ 'ನವ ಬ್ರಿಟಿಷರು' (ಭ್ರಷ್ಟ ರಾಜಕಾರಣಿಗಳು) ನಮ್ಮ ಬಡತನಕ್ಕೆ, ದುಸ್ಥಿತಿಗೆ ಕಾರಣ ಎಂದೇ ಹೇಳಬೇಕಾಗುತ್ತದೆ.

ಸ್ವಾತಂತ್ರ್ಯ ತಂದುಕೊಡಲು ಹೋರಾಡಿದ ಆ ಮಹನೀಯರ ಕನಸುಗಳೆಲ್ಲವೂ ನುಚ್ಚು ನೂರಾಗಿವೆ. ಹಿಂದೆ ಇದ್ದ ಸಮಸ್ಯೆಗಳು ಪರಿಹಾರವಾಗುವುದಿರಲಿ, ಹೊಸ ಹೊಸ ಸಮಸ್ಯೆಗಳು ಸರಪಳಿಯಲ್ಲಿ ಕೂಡಿಕೊಳ್ಳುತ್ತ ಸಾಗಿವೆ.

ಜನತೆ ಸಮಸ್ಯೆಗಳ ಸುಳಿಯಲ್ಲಿ ಸಿಕ್ಕು ತತ್ತರಿಸುತ್ತಿದ್ದರೆ, ಆಳುವವರು ಮಾತ್ರ 'ಬೆಂದ ಮನೆಯಿಂದ ಗಳ ಹಿರಿಯುವ' ಪ್ರವೃತ್ತಿಯನ್ನು ಹೆಚ್ಚು ಹೆಚ್ಚಾಗಿ ಮೈಗೂಡಿಸಿಕೊಳ್ಳತೊಡಗಿದ್ದಾರೆ. ಇನ್ನು ನಾಡಿನ ಭವಿಷ್ಯದ ಚುಕ್ಕಾಣಿ ಹಿಡಿಯಬೇಕಾದ ಯುವ ಪೀಳಿಗೆಯಂತೂ ಕ್ರಿಕೆಟ್ ಬ್ಯಾಟು-ಬಾಲುಗಳಲ್ಲಿ, ಸಿನಿಮಾ-ದೂರದರ್ಶನಗಳಲ್ಲಿ ತನ್ನನ್ನು ತಾನು ಕಳೆದುಕೊಳ್ಳತೊಡಗಿದೆ.

ಮುಂದೆ ಈ ನಾಡಿನ ಭವಿಷ್ಯ ಏನು? ಶತಶತಮಾನಗಳ ಕಾಲ ಹೋರಾಡಿ ಪಡೆದ ಸ್ವಾತಂತ್ರ್ಯ ಅರ್ಥಹೀನವೆನಿಸಿಕೊಳ್ಳುತ್ತದೆಯೆ?

❋ ❋ ❋

# ಓಟು ಕೊಟ್ಟವನು ಕೋಡಂಗಿ; ಗೆದ್ದವರು ವೀರಭದ್ರರು

• ಸಾಯಿಪ್ರಿಯ, ಅರಸೀಕೆರೆ.

ನಮ್ಮ ಭಾರತ ದೇಶವು ಹಿಂದೊಮ್ಮೆ ರಾಜ-ಮಹಾರಾಜರ, ಪಾಳೇಗಾರರ ಒಳ ಜಗಳದಿಂದಾಗಿ ಪರದೇಶದವರ ಪಾಲಾಗುತ್ತಲಿತ್ತು. ಲಕ್ಷಾಂತರ ಜನರ ತ್ಯಾಗ, ಬಲಿದಾನಗಳಿಂದ ಎಷ್ಟೋ ಸಂಸಾರಗಳ ಬೀದಿ ಪಾಲಾಗುವಿಕೆಯಿಂದ ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರಕಿತು. ಜೊತೆಗೆ ದೇಶ ವಿಭಜನೆಗೊಂಡು ಲಕ್ಷಾಂತರ ಜನರ ಮಾರಣ ಹೋಮವೂ ಆಯಿತು. ಭಾಷಾವಾರು ರಾಜ್ಯಗಳ ವಿಂಗಡನೆ, ಇಲ್ಲಿಯ ಕಲಹ, ಸಂಘರ್ಷ, ಇಷ್ಟೆಲ್ಲ ಸಂಕಟ, ನೋವುಗಳ ಸರಮಾಲೆಯನ್ನುಂಡ 'ಭಾರತ ಮಾತೆ'ಯು ಸ್ವಾತಂತ್ರ್ಯವೆಂಬ 'ಸಂಕೋಲೆ'ಯನ್ನು ತೊಟ್ಟು ಈಗ ನಮ್ಮ ಜನಗಳಿಂದಲೇ ವಂಚಿತಳಾಗಿ ಕ್ರೂರ, ದೌರ್ಜನ್ಯಗಳ ಪ್ರತಿರೂಪವಾಗಿ ಮೆರೆಯುತ್ತಿದ್ದಾಳೆ. 'ಸ್ವಾತಂತ್ರ್ಯ' ಎಂಬ ನಾಮೋಚ್ಚಾರಣೆಯು ಸ್ವಾತಂತ್ರ್ಯ ಪೂರ್ವದ ಜನಗಳ ಮೂಲ ಮಂತ್ರವಾಗಿತ್ತು. ಲಕ್ಷಾಂತರ ಜನರ ಬಲಿದಾನಗಳಲ್ಲಿ ಸಮಾಪ್ತಿಯಾಯಿತು. ಇಂದು ನಾವು ಕಾಣುತ್ತಿರುವ 'ಸ್ವಾತಂತ್ರ್ಯ'ದ ಚಿತ್ರ 'ಮೂರ್ಖರ' ಬಲಿದಾನದ ಪ್ರತೀಕವಾಯ್ತು. ಇತ್ತೀಚಿನ ದಿನಗಳಲ್ಲಿ ಸಾಮಾನ್ಯ ಜನರ ಪಾಡು 'ನಾಯಿ'ಯ ಪಾಡಾಯ್ತು. ನಮಗೆ ನಮ್ಮವರಿಂದಲೇ ಒಂದು ಹೊತ್ತಿನ ಕೂಳಿಗಾಗಿ ಬೇಡುವ ಪರಿಸ್ಥಿತಿ ನಿರ್ಮಾಣವಾಯ್ತು. 'ಪ್ರಜಾಪ್ರಭುತ್ವ'ದ ಅರ್ಥ ಸಂಪೂರ್ಣ ಸಮಾಧಿಯಾಗಿ ಕೇವಲ ಕೆಲವೇ ಜನರ ಕೈಯಲ್ಲಿ 'ಶೂಲ'ದ ರೂಪವಾಗಿ ಉಳಿಯಿತು. ಈಗಿನ ರಾಜಕೀಯ ಧುರೀಣರಲ್ಲಾಗಲಿ, ಜನಸಾಮಾನ್ಯರಲ್ಲಾಗಲಿ 'ನಾವೆಲ್ಲರೂ ಒಂದು, ಭಾರತ ನಮ್ಮದು' ಎಂಬ ದೇಶಾಭಿಮಾನವು ಇಲ್ಲದಂತಾಗಿದೆ. ಹಿಂದೆ ರಾಜ-ಮಹಾರಾಜರ ಆಡಳಿತದಲ್ಲಿ ನಡೆಯುತ್ತಿದ್ದಂಥ ಅಂತಃಕಲಹವನ್ನು ಈಗಿನ ರಾಜಕೀಯ ಪಕ್ಷಗಳು ನಡೆಸುತ್ತ ಬಂದಿವೆ. ಇದು ನಮಗೆ ನಾಚಿಕೆಗೇಡಿನ ಪ್ರಸಂಗ. ಇಂತಹ ಅಂತಃಕಲಹದಿಂದಲೇ ನಮ್ಮ ದೇಶ ಪರದೇಶೀಯರ ಪಾಲಾಗಿದ್ದಿತು. ಮತ್ತೆ ಮತ್ತೆ ಅಂತಹುದೇ ತಪ್ಪನ್ನು ಮಾಡುತ್ತಿದ್ದೇವೆ.

ಈಗಿನ ರಾಜಕೀಯ ನೇತಾರರ ಪಕ್ಷಗಳ ಆಶ್ವಾಸನೆಗಳು ಮೋಡಿ ಯಾವ ಜಗದ್ವಿಖ್ಯಾತ ಜಾದೂಗಾರನಿಗೂ ಬರುವುದಿಲ್ಲ. ಇದುವರೆಗೂ ನಡೆದ ಚುನಾವಣೆಗಳಲ್ಲಿ ಜನಸಾಮಾನ್ಯರು ಮೂರ್ಖರಾಗುತ್ತಿದ್ದಾರೆಯೋ ಹೊರತು ಗೆದ್ದವರು ಎಂದಿಗೂ ಸೋತಿಲ್ಲ. 'ಓಟು ಕೊಟ್ಟವನು ಕೋಡಂಗಿ; ಗೆದ್ದವರು ವೀರಭದ್ರರಾಗಿ' ಮೆರೆಯುತ್ತಿದ್ದಾರೆ. ತಮ್ಮ ತಮ್ಮ ವಂಶಾವಳಿಗಳ ಸುಭದ್ರತೆಯ ಬಗ್ಗೆ ಚಿಂತಿಸುವ ಈ ಜನ ದೇಶದ ಅಭಿವೃದ್ಧಿಯ ಬಗೆಗಾಗಲಿ ಜನಸಾಮಾನ್ಯರ

ಹಿತವನ್ನಾಗಲಿ ಚಿಂತಿಸದೆ ದೇಶವನ್ನು ಅಭದ್ರತೆಯ ಕಡೆಗೆ ತಳ್ಳುತ್ತಿದ್ದಾರೆ. ಇದಕ್ಕೆಲ್ಲ ಕಾರಣಗಳು ಹಲವಾರು :-

೧) ನಮ್ಮ ವಿದ್ಯಾಭ್ಯಾಸದ ತಳಹದಿ ಸರಿಯಿಲ್ಲದಿರುವುದು,

೨) ಪ್ರಜಾಪ್ರಭುತ್ವ ಎಂದರೇನು? ಎಂಬುದು ಗೊತ್ತಿಲ್ಲದಿರುವುದು.

೩) ಚುನಾವಣೆಯ ಬಗ್ಗೆ ಸರಿಯಾದ ಅರಿವಿಲ್ಲದಿರುವುದು,

೪) ಮತದಾನ ಎಂದರೇನು, ಅದಕ್ಕೆಷ್ಟು ಮಹತ್ವವಿದೆ ಎಂಬುದರ ಬಗ್ಗೆಅಜ್ಞಾನ.

ಇತ್ತೀಚಿನ ದಿನಗಳಲ್ಲಿ ನಮ್ಮ ದೇಶದ ಜನತೆ ಮತದಾನದ ಬಗ್ಗೆ ತುಂಬ ಉದಾಸೀನ ತೋರುತ್ತಿದೆ (ಶೇ. ೫೫ ರಿಂದ ೬೫ರ ವರೆಗೆ). ಇದರಿಂದಲೇ ಗೊತ್ತಾಗುತ್ತದೆ ನಮ್ಮ ದೇಶದ ಜನತೆಯ ರಾಷ್ಟ್ರಾಭಿಮಾನ ! ದೇಶಾಭಿಮಾನ !! ಇದುವರೆಗೂ ನಮ್ಮ ದೇಶದ ಸ್ವಾತಂತ್ರ್ಯ ನಂತರದ ಪ್ರಗತಿಯನ್ನು ಗಮನಿಸಿದರೆ ಅದು ಪ್ರತಿಶತ ಶೇ. ೩೦ರಷ್ಟು ಮಾತ್ರ. ಮುಂಬರುವ ದಿನಗಳನ್ನು ನೆನೆಸಿಕೊಂಡಲ್ಲಿ ಭಯಭೀತರಾಗಿ ಜನ ಕಂಗೆಡುವ ಪರಿಸ್ಥಿತಿ ಇದೆ. ಹಳ್ಳಿಗಾಡುಗಳೆಲ್ಲ ಪಟ್ಟಣಗಳಾಗಿ, ಕಾಡೆಲ್ಲ ನಾಡಾಗಿ, ಬೆಳೆಯನ್ನು ತೆಗೆಯುವ ಭೂಮಿಯೆಲ್ಲ ದೊಡ್ಡ ಉದ್ಯಮಗಳಿಗೆ ಮೀಸಲಾಗಿ, ಸಣ್ಣ ಸಣ್ಣ ಗುಡಿ ಕೈಗಾರಿಕೆಗಳು ಅಧಃಪತನ ಹೊಂದಿ ಇನ್ನು ೨೫ ವರುಷಗಳಲ್ಲಿ ಭಾರತ ದೇಶವು ದಿನ ನಿತ್ಯದ ಆಹಾರ ಪದಾರ್ಥಗಳನ್ನು ಆಮದು ಮಾಡಿಕೊಳ್ಳುವ ಪರಿಸ್ಥಿತಿಗೆ ಪರಿವರ್ತನೆಗೊಳ್ಳುತ್ತದೆ. ಇವತ್ತಿಗೂ ದೇಶದ ಅಭಿವೃದ್ಧಿಗೆ ಆಗಬೇಕಾಗಿರುವ 'ಚಿಂತನೆ'ಯು ಕಂಡುಬರುತ್ತಿಲ್ಲ. ಬದಲಿಗೆ ವೈಯಕ್ತಿಕ ದ್ವೇಷ, ಅಧಿಕಾರದ ಹುಚ್ಚು ಹಂಬಲ, ಪಕ್ಷ ಪಕ್ಷಗಳ ಬಡಿದಾಟ ಇವೆಲ್ಲವೂ ಜನಸಾಮಾನ್ಯರನ್ನು ಸದಾ ಚಿಂತೆಗೆ ದೂಡಿ ಚಿತೆಯ ಕಡೆಗೆ ಕಳಿಸುತ್ತಿವೆ. ದೇಶವು ಪ್ರಗತಿಯನ್ನು ಮರೆತು ಅವನತಿಯ ಹಾದಿಯಲ್ಲಿ ಸಾಗುತ್ತಿದೆ ಎಂಬ ದಿಗಿಲು ತುಂಬಿರುವಾಗ 'ಸ್ವಾತಂತ್ರ್ಯದ ಚಿಂತನೆಗೆ'ಲ್ಲಿದೆ ಜಾಗ ?

❋ ❋ ❋

# ಸ್ವಾತಂತ್ರ್ಯ ಮತ್ತು ಪ್ರಾದೇಶಿಕ ಮೀಸಲಾತಿ

• ಗುರುಪ್ರಸಾದ್ ಈ.

ಹಿಂದುಳಿದ ವರ್ಗಗಳ ಮತ್ತು ಶೋಷಣೆಗೆ ಒಳಪಟ್ಟವರ ಜೀವನವನ್ನು ಉತ್ತಮಪಡಿಸಲು ಮೀಸಲಾತಿ ಅವಶ್ಯಕ. ಮೀಸಲಾತಿಗೆ ಭಾರತದ ಸಂವಿಧಾನದಲ್ಲಿ ವಿಶೇಷ ಆದ್ಯತೆ ನೀಡಲಾಗಿದೆ. ಆದರೆ, ಮೀಸಲಾತಿಯಿಂದ ಪ್ರತಿಭೆಗೆ ವಂಚನೆ ಆಗಬಾರದು. ಯಾವುದೇ ಕಾಯಿದೆ ರೂಪಿಸಬೇಕಾದರೂ ಎಲ್ಲ ವರ್ಗಗಳನ್ನು ಮತ್ತು ಪ್ರಾದೇಶಿಕ ಪರಿಸರವನ್ನು ಗಮನಿಸಬೇಕು.

ಕರ್ನಾಟಕ ಸರ್ಕಾರವು ಹಿಂದುಳಿದ ವರ್ಗಗಳನ್ನಲ್ಲದೆ ಗ್ರಾಮೀಣ ವಿದ್ಯಾರ್ಥಿಗಳಿಗೂ ಹೆಚ್ಚು ಗಮನ ನೀಡುತ್ತಿರುವುದು ಪ್ರಶಂಸನೀಯ. ಆದರೆ ಹೆಚ್ಚು ಗಮನ ನೀಡುವ ಮೂಲಕ ನಗರದ ವಿದ್ಯಾರ್ಥಿಗಳ ಭಾವನೆ, ಗುರಿಯನ್ನು ಹತ್ತಿಕ್ಕುವಂತೆ ಮಾಡುತ್ತಿದೆ. ಮಾನಸಿಕ ನೋವಿನಿಂದ ತನ್ನ ಉತ್ಸಾಹವನ್ನು ಕಳೆದುಕೊಳ್ಳುವಂತಹ ಸನ್ನಿವೇಶ ರೂಪಿಸುತ್ತಿದೆ. ಯಾವ ರಾಷ್ಟ್ರದಲ್ಲಿ ಮೀಸಲಾತಿಗೆ ಮಹತ್ವ ನೀಡುತ್ತಾರೆಯೋ ಆ ರಾಷ್ಟ್ರ ಕ್ರಮೇಣ ತನ್ನ ರಾಷ್ಟ್ರೀಯತೆ ಕಳೆದುಕೊಳ್ಳುತ್ತದೆ. ಆಡಳಿತದಲ್ಲಿ ಅದಕ್ಷತೆ ಉಂಟಾಗುತ್ತದೆ; ನ್ಯಾಯಾಲಯವು ತನ್ನ ಮಹತ್ವವನ್ನು ಕಳೆದುಕೊಳ್ಳುತ್ತದೆ.

ನಗರದಲ್ಲಿ ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿಗಳು ಹಲವು ಸಂಕಷ್ಟ ಪರಿಸ್ಥಿತಿಯೊಂದಿಗೆ ಹೋರಾಡಿ ಮಾನಸಿಕ ನೋವನ್ನು ಪರಿಗಣನೆಗೆ ತೆಗೆದುಕೊಳ್ಳದೆ ಕಠಿಣ ಪರಿಶ್ರಮದಿಂದ ಅಭ್ಯಾಸ ಮಾಡಿ ಉತ್ತಮ ಅಂಕ ಪಡೆದರೂ ಸಹ ಮುಂದಿನ ವೃತ್ತಿಪರ ಶಿಕ್ಷಣ ಮತ್ತು ತರಬೇತಿ ಪಡೆದ ನಂತರ ಉದ್ಯೋಗ ಪಡೆಯುವ ಸಂದರ್ಭದಲ್ಲಿ ಗ್ರಾಮೀಣ ವಿದ್ಯಾರ್ಥಿ ಎಂದು ಕಾರಣ ನೀಡಿ ಕೃಪಾಂಕವನ್ನು ನೀಡುತ್ತಿದೆ. ನಗರದ ವಿದ್ಯಾರ್ಥಿಗಳ ರಕ್ತವನ್ನು ಗ್ರಾಮೀಣ ವಿದ್ಯಾರ್ಥಿಗಳಿಗೆ ಟಾನಿಕ್ ರೂಪದಲ್ಲಿ ನೀಡಿ ನಗರದ ವಿದ್ಯಾರ್ಥಿಗಳನ್ನು ಪ್ರತ್ಯಕ್ಷವಾಗಿ ಶೋಷಣೆ ಮಾಡುತ್ತಿದ್ದಾರೆ.

ಮಂತ್ರಿಮಂಡಲದಲ್ಲಿ ಗ್ರಾಮೀಣ ವಿದ್ಯಾರ್ಥಿಗಳಿಗೆ ಕೃಪಾಂಕವನ್ನು ನೀಡಬೇಕೆಂದು ಪ್ರಸ್ತಾಪಿಸಿದಾಗ ಯಾವ ಮಂತ್ರಿಯೂ ಸಹ ಅದರ ಬಗ್ಗೆ ಪ್ರತಿಕ್ರಿಯೆ ನೀಡದೆ ನಗರದ ವಿದ್ಯಾರ್ಥಿಗಳ ಶೋಷಣೆಗೆ ಸಮ್ಮತಿ ನೀಡಿದರು. ಎಲ್ಲ ವಿದ್ಯಾರ್ಥಿಗಳಿಗೂ ಉಪನ್ಯಾಸ ನೀಡುವ ಉಪನ್ಯಾಸಕರು ಒಂದೇ ರೀತಿಯ ತರಬೇತಿ ಹೊಂದಿರುವುದರಿಂದ ಅವರು ನೀಡುವ ಉಪನ್ಯಾಸ ಗುಣಮಟ್ಟ ಭಾಗಶಃ ಒಂದೇ ರೀತಿ ಇರುತ್ತದೆ.

ಸಾಮಾನ್ಯವಾಗಿ ವಿದ್ಯಾರ್ಥಿಯ ಕುಟುಂಬದಲ್ಲಿ, ಪರಿಸರದಲ್ಲಿ ಭಿನ್ನತೆ ಇರಬಹುದು. ಅವರೆ ಆ ಪರಿಸರವೇ ವಿದ್ಯಾಭ್ಯಾಸದ ಮೇಲೆ ಪರಿಣಾಮ ಬೀರುತ್ತದೆ ಎಂದು ಭಾವಿಸಬಾರದು. ನಗರದಲ್ಲಿರುವ ಎಲ್ಲ ವಿದ್ಯಾರ್ಥಿಗಳಿಗೂ ಎಲ್ಲ ರೀತಿಯ ಸೌಲಭ್ಯ ದೊರೆಯುತ್ತದೆ ಎಂದು ಪರಿಗಣಿಸಬಾರದು. ಏಕೆಂದರೆ ಗ್ರಾಮೀಣ ಪ್ರದೇಶದಲ್ಲಿ ಕಡಿಮೆ ಕೃಷಿ ಭೂಮಿಯಿಂದಾಗಿ ಅಥವಾ ಭೂರಹಿತರು ಜೀವನ ನಡೆಸಲು ಅಸಮರ್ಥರಾದಾಗ ನಗರಕ್ಕೆ ವಲಸೆ ಬಂದು ನಗರದಲ್ಲಿ 'ಕೂಲಿ' ಅಥವಾ ಕಡಿಮೆ ವೇತನ ಪಡೆಯುವ ಉದ್ಯೋಗವನ್ನು ಹೊಂದಿರುತ್ತಾರೆ. ಇಂತಹ ಸನ್ನಿವೇಶದಲ್ಲಿ ಆ ಕುಟುಂಬದ ವಿದ್ಯಾರ್ಥಿಯು ಸಹ ತನ್ನ ವಿದ್ಯಾಭ್ಯಾಸ ಮುಂದುವರಿಸಲು ವಿವಿಧ ರೀತಿಯಲ್ಲಿ ಹಣ ಸಂಪಾದಿಸಬೇಕಾಗುತ್ತದೆ. ಈ ಉದ್ದೇಶಕ್ಕಾಗಿ ವಿದ್ಯಾಭ್ಯಾಸದ ಸಮಯವನ್ನು ಹೊರತುಪಡಿಸಿ ಉಳಿದ ಸಮಯದಲ್ಲಿ ಅಂದರೆ ಬೆಳಗ್ಗೆ ಪತ್ರಿಕೆ, ಡೈರಿಹಾಲನ್ನು ಮನೆಗಳಿಗೆ ಹಂಚುವುದು, ಎಸ್. ಟಿ. ಡಿ., ಐ. ಎಸ್. ಡಿ. ಗಳಲ್ಲಿ ನಿಗದಿತ ಸಮಯವನ್ನು ವಿನಿಯೋಗಿಸಿ ಹಣ ಸಂಪಾದನೆ ಮಾಡಿ ತನ್ನ ವಿದ್ಯಾಭ್ಯಾಸವನ್ನು ಸಂಕಷ್ಟದಿಂದ ಮುಂದುವರಿಸಬೇಕಾಗುತ್ತದೆ. ಸೌಲಭ್ಯಗಳ ಅಲಭ್ಯತೆಯಿಂದಾಗಿ ನಗರದ ಹಲವು ವಿದ್ಯಾರ್ಥಿಗಳು ಸಾರ್ವಜನಿಕ ಉದ್ಯಾನವನ, ಲೈಬ್ರರಿಯಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮಾಡುತ್ತಾರೆ. ತಂದೆ-ತಾಯಿಯಿಂದ ಅಲಕ್ಷ್ಯಕ್ಕೊಳಪಟ್ಟ ವಿದ್ಯಾರ್ಥಿಗಳು, ಮಧ್ಯಮ ವರ್ಗ, ಕೂಲಿ ಕಾರ್ಮಿಕರ ಮಕ್ಕಳು, ಈ ವರ್ಗದ ಎಲ್ಲ ವಿದ್ಯಾರ್ಥಿಗಳು ಸೌಲಭ್ಯದ ಅಲಭ್ಯತೆಯಿದ್ದಾಗ್ಯೂ ತಮ್ಮ ವಿದ್ಯಾಭ್ಯಾಸವನ್ನು ಸಂಕಷ್ಟದಲ್ಲಿ ಮಾಡುತ್ತಾರೆ. ನಗರಗಳಲ್ಲಿ ಅಪಾರ ಅಸಮಾನತೆ ಇದ್ದು ಎಲ್ಲ ವಿದ್ಯಾರ್ಥಿಗಳಿಗೂ ವಿದ್ಯಾಭ್ಯಾಸ ಮಾಡಲು ಅಗತ್ಯವಿರುವ ಸೌಲಭ್ಯಗಳು ದೊರೆಯುವುದಿಲ್ಲ. ಸರ್ಕಾರವು ಇವನ್ನು ಗಣನೆಗೆ ತೆಗೆದುಕೊಳ್ಳದೆ ನಗರದ ಎಲ್ಲ ವಿದ್ಯಾರ್ಥಿಗಳಿಗೆ ಎಲ್ಲ ರೀತಿಯ ಸೌಲಭ್ಯ ದೊರೆಯುತ್ತದೆ ಎಂದು ಪರಿಗಣಿಸುತ್ತಿದೆ. ಇದೇ ರೀತಿ ಗ್ರಾಮೀಣ ವಿದ್ಯಾರ್ಥಿಯೂ ಸಹ ಹೊಲ-ಗದ್ದೆಗಳಲ್ಲಿ ಕಾರ್ಯ ನಿರ್ವಹಿಸಬೇಕಾಗುತ್ತದೆ. ಉತ್ತಮ ಕುಟುಂಬಗಳಲ್ಲಿ ಇರುವ ಗ್ರಾಮೀಣ ವಿದ್ಯಾರ್ಥಿಗಳಿಗೆ ಹೆಚ್ಚು ಪ್ರೋತ್ಸಾಹ ದೊರೆಯುತ್ತದೆ.

ನಗರ, ಗ್ರಾಮೀಣ ಪ್ರದೇಶಗಳ ವಿದ್ಯಾರ್ಥಿಗಳಿಬ್ಬರು ಹಲವು ಸಂಕಷ್ಟದಿಂದ ವಿದ್ಯಾಭ್ಯಾಸ ಮಾಡಿದರೂ ಇವರಿಬ್ಬರ ನಡುವೆ ಸೌಲಭ್ಯಗಳ ಅಸಮಾನತೆ ಏಕೆ ? ಇದರ ಹಿಂದೆ ರಾಜಕೀಯ ಉದ್ದೇಶವಿದೆಯೆ ? ನಗರ ವಿದ್ಯಾರ್ಥಿಗಳು ಹೀಗೆ ಅಸಮಾನತೆಯಿಂದ ಶೋಷಣೆಗೆ ಒಳಪಟ್ಟು ತಮ್ಮ ಮಾನಸಿಕ ಸ್ಥಿರತೆ ಕಳೆದುಕೊಂಡು ದೇಶದ ಭವಿಷ್ಯದ ಬಗ್ಗೆಯಾಗಲಿ ಅಥವಾ ಸುತ್ತಮುತ್ತಲಿನ ಸಮಾಜದ ಸುಧಾರಣೆಗಾಗಲಿ, ಅಥವಾ ಪ್ರಜಾಪ್ರಭುತ್ವದ ಮೇಲಿನ ತನ್ನ ನಂಬಿಕೆಯನ್ನು ಕಳೆದುಕೊಳ್ಳುತ್ತಾನೆ. ತನ್ನ ಭವಿಷ್ಯವೆಲ್ಲ ಶೂನ್ಯವೆಂದು ಭಾವಿಸುತ್ತಾನೆ.

ಭಾರತದ ಭವಿಷ್ಯದಲ್ಲಿ ಮೀಸಲಾತಿ ರಾಷ್ಟ್ರವಾಗಿ ವಿಶ್ವದ ಮುಂದೆ ನಿಲ್ಲುತ್ತದೆ. ಆಗ ದೇಶದ ಅವಿದ್ಯಾವಂತ ಅಪೂರ್ಣ ರಾಜಕಾರಣಿಗಳು ವಿಶ್ವಕ್ಕೆ ಮೀಸಲಾತಿ ನೀತಿಯ ಮೂಲಕ ದೇಶದ ಪ್ರತಿಭಾವಂತರನ್ನು ಹೇಗೆ ತಟಸ್ಥರನ್ನಾಗಿ, ಅವಕಾಶದಿಂದ ವಂಚಿತರನ್ನಾಗಿ, ಮಾನಸಿಕ ನೋವಿನಿಂದ ನರಳುತ್ತಿರುವುದನ್ನು ತೋರಿಸುತ್ತ, ನಮ್ಮ ಸಾಧನೆ ಇದೇ ಎಂದು ತೋರಿಸುತ್ತಾರೆ. ಭಾರತದ ಹಲವು ಪ್ರತಿಭಾವಂತರು ಪ್ರತಿಭೆಗೆ ಉತ್ತಮ ಅವಕಾಶ ಭಾರತದಲ್ಲಿ ದೊರೆಯದೆ ವಿದೇಶಗಳಿಗೆ ವಲಸೆ ಹೋಗುತ್ತಿರಲು ಪ್ರಮುಖ ಕಾರಣ ಸರ್ಕಾರದ ಮೀಸಲಾತಿ ನೀತಿಯಿಂದಲೇ ಹೊರತು, ಕೇವಲ ಹಣ ಸಂಪಾದನೆಗಾಗಿ ಅಲ್ಲ.

ಗ್ರಾಮಾಂತರ ವಿದ್ಯಾರ್ಥಿಗಳಿಗೆ ಉತ್ತಮ ಅವಕಾಶ ನೀಡುವ ಉದ್ದೇಶವನ್ನು ಸರ್ಕಾರ ಹೊಂದಿದ್ದರೆ, ಗ್ರಾಮಾಂತರ ವಿದ್ಯಾರ್ಥಿಗಳಿಗೆ ಪ್ರವೇಶ ಶುಲ್ಕದಲ್ಲಿ ಸಂಪೂರ್ಣ ರಿಯಾಯಿತಿ ನೀಡಲಿ. ಆ ರಿಯಾಯಿತಿಯ ಹಣವನ್ನು ಸರ್ಕಾರ ಅಥವಾ ನಗರ ವಿದ್ಯಾರ್ಥಿಗಳೇ ಭರಿಸುವ ವ್ಯವಸ್ಥೆ ಮಾಡಲಿ. ಏಕೆಂದರೆ ನಗರ ವಿದ್ಯಾರ್ಥಿಗಳಿಗೆ ಆರ್ಥಿಕ ಶೋಷಣೆ ಮಾಡಿದರೂ ಸಹ ಅವರು ಸಹಿಸಬಲ್ಲರು, ಆದರೆ ಅವರಿಗೆ ಅವಕಾಶದಿಂದ ವಂಚಿಸಿದರೆ ಅವರು ಮಾನಸಿಕ ನೋವನ್ನು ತಾಳಲಾರದೆ ನಿಸ್ತೇಜರಾಗುತ್ತಾರೆ; ಮಾನಸಿಕ ರೋಗಿಗಳಾಗಿ ಪರಿವರ್ತಿತರಾಗುತ್ತಾರೆ.

ಪ್ರಾದೇಶಿಕ ಆಧಾರದ ಮೇಲೆ ಮೀಸಲಾತಿ ನೀಡಿದರೆ ಅದರಿಂದ ಯುವ ಜನಾಂಗದಲ್ಲಿ ಅಶಾಂತಿ ಹೆಚ್ಚಿ, ಅವರು ತಮ್ಮ ಮಾನಸಿಕ ನೋವನ್ನು ಮರೆಯಲು ಕೆಟ್ಟ ಅಭ್ಯಾಸ ಬೆಳೆಸಿಕೊಳ್ಳುತ್ತಾರೆ. ಮತ್ತು ರಾಷ್ಟ್ರ ದ್ರೋಹಿ ಚಟುವಟಿಕೆಗಳಲ್ಲಿ ತೊಡಗುತ್ತಾರೆ.

ಸರ್ಕಾರ ತನ್ನ ನೀತಿಯಲ್ಲಿ ಮಾರ್ಪಾಡು ಮಾಡದೆ ತನ್ನ ಪ್ರತಿಗಾಮಿ ನೀತಿ ಅನುಸರಿಸಿ ಪ್ರಗತಿಗಾಮಿ ನೀತಿಗೆ ಅವಕಾಶ ನೀಡದಿದ್ದರೆ ಪ್ರತಿಭಾವಂತರು ವಂಚನೆಗೆ ಒಳಗಾಗುತ್ತಾರೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ಸೂಕ್ತ ಗಮನ ನೀಡದಿದ್ದರೆ ಭವಿಷ್ಯದಲ್ಲಿ ಪ್ರಾದೇಶಿಕ ಮೀಸಲಾತಿಯು ಸಹ ಜಾತಿಯಂತೆಯೇ ಒಂದು ಶಾಶ್ವತ ಅರ್ಹತೆಯ ಮಾಪನವಾಗಿ ಮಾರ್ಪಡುತ್ತದೆ.

ಸರ್ಕಾರದ ಪ್ರಾದೇಶಿಕ ಮೀಸಲಾತಿ ನೀತಿಯ ಬಗ್ಗೆ ನಗರ ವಿದ್ಯಾರ್ಥಿಗಳಲ್ಲಿ ಜಾಗೃತಿ ಉಂಟಾಗದಿದ್ದರೆ ನಿರಂತರವಾಗಿ ಅವಕಾಶದಿಂದ ವಂಚಿತರಾಗುತ್ತಾರೆ. ಏಕೆಂದರೆ ಯಾವ ಪಕ್ಷದ ಸರ್ಕಾರವೂ ಸಹ ಈ ಪ್ರಾದೇಶಿಕ ಮೀಸಲಾತಿ ನೀತಿಯನ್ನು "ರಾಜಕೀಯ ಉದ್ದೇಶ"ದಿಂದ ರದ್ದುಪಡಿಸಲಾರದು. ಏಕೆಂದರೆ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ಜನರು ವಾಸಿಸುತ್ತಿದ್ದು ಅವರ ಮತಗಳನ್ನು ಕಳೆದುಕೊಳ್ಳಲು ಇಚ್ಛಿಸುವುದಿಲ್ಲ.

ಶಿಕ್ಷಣವನ್ನು ಅಗತ್ಯ ಅರ್ಹತೆಯಾಗಿ ಪರಿಗಣಿಸದೆ ಭಾರತದ ಚುನಾವಣಾ ಪದ್ಧತಿಯಲ್ಲಿ ಆಯ್ಕೆಯಾಗುವ ರಾಜಕಾರಣಿಗಳು ತಿಳುವಳಿಕೆಯ ಅಭಾವದಿಂದ ರೂಪಿಸುವ ಕಾನೂನುಗಳು "ರಾಜಕೀಯ ಉದ್ದೇಶ" ಹೊಂದಿದ್ದು ಅವುಗಳಲ್ಲಿನ ದೋಷಗಳನ್ನು ಜನಜಾಗೃತಿ ಮೂಲಕ ಪರಿಹರಿಸುವುದು ಅನಿವಾರ್ಯವಾಗಿದೆ.

೯ನೇ ತರಗತಿಯವರೆಗೂ ಗ್ರಾಮೀಣ ಪ್ರದೇಶದಲ್ಲಿ ಅಧ್ಯಯನ ಮಾಡಿ ೧೦ನೇ ತರಗತಿಯನ್ನು ನಗರ ಪ್ರದೇಶದಲ್ಲಿ ಅಧ್ಯಯನ ಮಾಡಿದರೆ ಆ ವಿದ್ಯಾರ್ಥಿಯನ್ನು ನಗರದ ವಿದ್ಯಾರ್ಥಿ ಎಂದು ಪರಿಗಣಿಸಲಾಗುತ್ತದೆ.

ಟಿ. ಸಿ. ಎಚ್., ಬಿ. ಎಡ್. ಅಥವಾ ಯಾವುದೇ ವೃತ್ತಿಪರ ಶಿಕ್ಷಣದ ಪ್ರವೇಶ ನೇಮಕಾತಿಯನ್ನು ಸರ್ಕಾರ ಪ್ರಕಟಿಸಿದ ಪಟ್ಟಿಯಲ್ಲಿ ಗ್ರಾಮೀಣ ವಿದ್ಯಾರ್ಥಿಗಳೇ ಕೃಪಾಂಕದಿಂದ ಹೆಚ್ಚು ಅವಕಾಶ ಪಡೆಯುತ್ತಾರೆಯೇ ಹೊರತು ನಗರ ವಿದ್ಯಾರ್ಥಿಗಳು ಬೆರಳೆಣಿಕೆಯಷ್ಟೂ ಇರುವುದಿಲ್ಲ.

ಭಾರತದಲ್ಲಿ ಚುನಾವಣೆಗಳು ಪ್ರಜಾಪ್ರಭುತ್ವ ಮಾದರಿ ಹೊಂದಿದ್ದರೂ ಸಹ ಆಡಳಿತವೆಲ್ಲಾ ನಿರಂಕುಶ ಪ್ರಭುತ್ವ ಸ್ವರೂಪ ಹೊಂದಿದೆ. ಸರ್ಕಾರವು ತಾನು ರೂಪಿಸಿದ್ದೇ

ಕಾನೂನಾಗಿ ಜಾರಿಯಾಗುತ್ತಿದೆ. ಭಾರತೀಯರಲ್ಲಿ ಪ್ರತಿಭಟನಾ ಮನೋಭಾವವೆಲ್ಲ ಸ್ವಾತಂತ್ರ್ಯಗಳಿಕೆಯೊಂದಿಗೆ ಅಂತ್ಯಗೊಂಡಂತೆ ಇದೆ. ವಾಸ್ತವಿಕವಾಗಿ ಆಡಳಿತ ಪ್ರಜಾಪ್ರಭುತ್ವಕ್ಕೆ ಬದಲಾಗಿ ನಿರಂಕುಶ ಪ್ರಭುತ್ವ ಸ್ವರೂಪ ಪಡೆಯುತ್ತದೆ.

ಸರ್ಕಾರದ ವಿರುದ್ಧದ ಮೊಕದ್ದಮೆಗೆ ತಗಲುವ ನ್ಯಾಯಾಲಯದ ಅಧಿಕ ವೆಚ್ಚದಿಂದಾಗಿ ಸರ್ಕಾರ ಯಾವುದೇ ಕಾನೂನು ರೂಪಿಸಿದರೂ, ಅದು ದೋಷದಿಂದ ಕೂಡಿದ್ದರೂ ಸಹ ಯಾರೂ ಪ್ರತಿಕ್ರಿಯಿಸದೆ ಅಲಿಪ್ತ ನೀತಿ ಅನುಸರಿಸುತ್ತಿದ್ದಾರೆ. ಪರಿಣಾಮವಾಗಿ ಭಾರತದಲ್ಲಿ ನವನಿರಂಕುಶತ್ವ ರೂಪುಗೊಳ್ಳುತ್ತಿದೆ.

ಕರ್ನಾಟಕ ಸರ್ಕಾರವು ಟಿ. ಸಿ. ಎಚ್., ಬಿ. ಎಡ್. ಇನ್ನಿತರ ವೃತ್ತಿಪರ ಶಿಕ್ಷಣಕ್ಕೆ ಗ್ರಾಮೀಣ ವಿದ್ಯಾರ್ಥಿಯು ಸೇರುವಾಗ ಶೇ. ೫ ಮತ್ತು ಉದ್ಯೋಗ ಪಡೆಯುವಾಗ ಶೇ. ೧೦ ಕೃಪಾಂಕ ನೀಡುತ್ತಿದೆ. ಇದರಿಂದ ನಗರದ ಎಲ್ಲ ವಿದ್ಯಾರ್ಥಿಗಳಿಗೆ, ವಿಶೇಷವಾಗಿ ಪ್ರತಿಭೆಗೆ ದೊರೆಯುವ ಅವಕಾಶದ ವಂಚನೆಯಾಗುತ್ತದೆ. ಈ ವಂಚನಾ ನೀತಿಯನ್ನು ಕರ್ನಾಟಕ ಸರ್ಕಾರವು ಎಷ್ಟು ಅವಧಿಯವರೆಗೆ ಮುಂದುವರಿಸುತ್ತದೆ ಎಂಬುದು ಸಹ ನಿಗದಿಪಡಿಸಿಲ್ಲ. ನಿರಂತರ ಪ್ರತಿಭೆಗೆ ಅವಕಾಶವಂಚನಾ ನೀತಿಯನ್ನು ಪ್ರತಿಭಟನೆ ನಡೆಸಲು ನಗರ ವಿದ್ಯಾರ್ಥಿಗಳಲ್ಲಿ ಸಂಘಟನಾ ಮನೋಭಾವ ರೂಪುಗೊಂಡಿಲ್ಲವಾದ್ದರಿಂದ ಸರ್ಕಾರದ ನಿರಂಕುಶ ಆಡಳಿತ ಮುಂದುವರಿಯುತ್ತಿದೆ.

ಮುಂದಿನ ಶತಮಾನದ ಆಗಮನದ ಪ್ರಾದೇಶಿಕ ಮೀಸಲಾತಿ ನೀತಿಯನ್ನೇ ಅನುಸರಿಸಿದರೆ ನಗರ ವಿದ್ಯಾರ್ಥಿಗಳು ಸರ್ಕಾರದ ದೃಷ್ಟಿಯಲ್ಲಿ ಅಸ್ಪೃಶ್ಯರಾಗಿರುತ್ತಾರೆ. ಆಗ ನಗರ ವಿದ್ಯಾರ್ಥಿಗಳ ಹಿತಾಸಕ್ತಿಗಳನ್ನು ಕಾಪಾಡಲು ಹಿಂದಿನ ಅಂಬೇಡ್ಕರ್‌ರಂತಹವರು ಜನಿಸಬೇಕಾಗುತ್ತದೆ. ಭವಿಷ್ಯದಲ್ಲಾಗಬಹುದಾದ ಈ ಪರಿಣಾಮಗಳನ್ನು ನಗರ ವಿದ್ಯಾರ್ಥಿಗಳು ಈಗಲೇ ಸಂಘಟಿತರಾಗಿ, ಜಾಗ್ರತಗೊಳ್ಳುವ ಮೂಲಕ ಮಾನ್ಯ ಕರ್ನಾಟಕ ಹೈ ಕೋರ್ಟಿನಲ್ಲಿ ಮನವಿ ಸಲ್ಲಿಸದಿದ್ದರೆ ಅಸ್ಪೃಶ್ಯರಾಗಿ ಪರಿವರ್ತಿತರಾಗುತ್ತಾರೆ ಮತ್ತು ಹಲವು ಹೊಸ ಸಮಸ್ಯೆಗಳನ್ನು ಸರ್ಕಾರ ಮುಂದೆ ಎದುರಿಸಬೇಕಾದೀತು.

❋ ❋ ❋

# ಪ್ರಗತಿ ಆಗಿದೆ

• ಎಂ. ಬಿ.ಮೇಟಿ

ಭಾರತದ ಸುಮಾರು ಏಳು ಲಕ್ಷ ಹಳ್ಳಿಗಳಲ್ಲಿ ಸುಮಾರು ೭೦ ಕೋಟಿ ಜನಸಂಖ್ಯೆ ವಾಸಿಸುತ್ತದೆ. ಇತ್ತಿತ್ತಲಾಗಿ ಜನಸಂಖ್ಯೆಯ ಹೆಚ್ಚಳ, ಬಡತನ, ಅನಕ್ಷರತೆ, ಅಜ್ಞಾನ, ಮೂಢ ನಂಬಿಕೆಗಳಿಂದ ಭಾರತದ ಗ್ರಾಮೀಣ ಅಭಿವೃದ್ಧಿ ಶೂನ್ಯತೆಯನ್ನೇ ನಾವು ಸ್ವಾತಂತ್ರ್ಯದ ಚಿಂತನೆಯಲ್ಲಿ ಪ್ರಮುಖವಾಗಿ ಇಟ್ಟುಕೊಂಡರೆ ಆಶ್ಚರ್ಯವಿಲ್ಲ. ಸ್ವಾತಂತ್ರ್ಯದ ನಂತರದ ಹಳ್ಳಿಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಅತ್ಯಂತ ಬಡತನದಲ್ಲಿರುವ ಒಬ್ಬ ಹಳ್ಳಿಗ ೫೦ ವರ್ಷಗಳಲ್ಲಿ ತಲೆಯ ಮೇಲೊಂದು ಸೂರು, ಹೊಟ್ಟೆಗೆ ಹಿಟ್ಟು ದೊರಕಿಸುವಲ್ಲಿ ಸಫಲನಾಗಿದ್ದಾನೆನ್ನುವುದು ಕಂಡುಬರುತ್ತದೆ. ೫೦ ವರ್ಷಗಳ ಹಿಂದೆ ತಲೆಯ ಮೇಲೊಂದು ಸೂರು, ಹೊಟ್ಟೆಗೆ ಹಿಟ್ಟು ದೊರಕದಿದ್ದ ಮನುಷ್ಯ, ಇಂದು ಮಣ್ಣಿನ ಮೇಲ್ಛಾವಣಿಯ ಮನೆ ಹಾಗೂ ತನ್ನ ಮಕ್ಕಳನ್ನು ಪ್ರಾಥಮಿಕ ಶಾಲೆಗೆ ಹಾಕಿದ್ದಾನೆ. ಮಧ್ಯಮ ವರ್ಗದ ಮನುಷ್ಯ -೫೦ ವರ್ಷದ ಹಿಂದಿನವರೊಂದಿಗೆ ಹೋಲಿಸಿದರೆ- ಮಾರುತಿ ಕಾರು, ಮಕ್ಕಳು ಒಳ್ಳೆ ಬಿಜಿನೆಸ್‌ನೊಂದಿಗೆ ಸುಖವಾಗಿದ್ದಾರೆ. ಅಂದರೆ ಜನಸಾಮಾನ್ಯರು ಸಮಸ್ಯೆಗಳೊಂದಿಗೆ ಸೆಣಸುತ್ತಲೇ ಮೆಲ್ಲಗೆ ಪ್ರಗತಿಪಥದಲ್ಲಿ ಸಾಗುತ್ತಿದ್ದಾರೆನ್ನಬಹುದು.

ಆದರೆ ಇಷ್ಟೆಲ್ಲ ಅನೇಕ ಸಮಸ್ಯೆಗಳ ನಡುವೆಯೂ ಭಾರತದ ಸ್ವಾತಂತ್ರ್ಯ ನಂತರದ ದಿನಗಳು ಹರ್ಷದ ದಿನಗಳು ಆಗುತ್ತಿವೆ. ಭಾರತ ವಿಜ್ಞಾನ, ತಂತ್ರಜ್ಞಾನ, ಕೃಷಿ, ವ್ಯಾಪಾರ, ಕೈಗಾರಿಕೆ, ಮೊದಲಾದ ರಂಗಗಳಲ್ಲಿ ಇಡೀ ವಿಶ್ವದಲ್ಲಿಯೇ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರವೆಂದು ಹೆಗ್ಗಳಿಕೆಯನ್ನು ಪಡೆದಿದೆ. ಭಾರತದ ಹಳ್ಳಿಗಳಂತೂ ಆಧುನಿಕ ಕೃಷಿಯೊಂದಿಗೆ ನೀರಾವರಿ, ರಾಸಾಯನಿಕ ಗೊಬ್ಬರ, ಆಧುನಿಕ ಯಂತ್ರಗಳನ್ನು ಉಪಯೋಗಿಸಿ ಕೃಷಿಯಲ್ಲಿ ಸ್ವಾವಲಂಬನೆ ಸಾಧಿಸಿವೆ. ಆಹಾರ ಧಾನ್ಯಗಳು. ಹತ್ತಿ, ಸಾಂಬಾರ ಪದಾರ್ಥಗಳನ್ನು ರಫ್ತು ಮಾಡುವ ಮಟ್ಟಿಗೆ ಪ್ರಗತಿಯಾಗಿದೆ. ಇನ್ನು ಗ್ರಾಮೀಣ ಪ್ರದೇಶಗಳಲ್ಲಿ ಸಾಕ್ಷರತೆಯ ಬಗ್ಗೆ, ಜನಸಂಖ್ಯಾ ಸಮಸ್ಯೆಯ ಬಗ್ಗೆ, ಪರಿಸರದ ಬಗ್ಗೆ ನಿಧಾನವಾಗಿಯಾದರೂ ಕಾಳಜಿ ಮೂಡತೊಡಗಿರುವುದು ಪ್ರಗತಿಯ ದ್ಯೋತಕವೇ ಸರಿ.

✲ ✲ ✲

# ಸ್ವಾತಂತ್ರ್ಯ : ಮಹಾಪ್ರಯತ್ನದ ಉತ್ಕೃಷ್ಟ ಫಲ !

• ತಪೋಮನ್

ವಿಶ್ವದ ಅತಿ ದೊಡ್ಡ ಪ್ರಜಾಸತ್ತಾತ್ಮಕ ರಾಷ್ಟ್ರವೆನ್ನುವ ಹೆಗ್ಗಳಿಕೆಗೆ ಪಾತ್ರವಾಗಿರುವ ಭಾರತ, ತಾನು ಪಡೆದ ಸ್ವಾತಂತ್ರ್ಯದ ಸುವರ್ಣ ಮಹೋತ್ಸವವನ್ನು ಆಚರಿಸಿದ ಗುಂಗು ಇನ್ನೂ ಹಸಿರಾಗಿಯೇ ಇದೆ.

ಅಸಂಖ್ಯಾತ ಜನರ ತ್ಯಾಗ, ಬಲಿದಾನ, ನಿಸ್ವಾರ್ಥ ಮನೋಭಾವ, ರಾಷ್ಟ್ರಪ್ರೇಮದ ಕಾಳಜಿ, ಉದಾತ್ತ ಹೋರಾಟಗಳಿಂದ ದೊರಕಿಸಿಕೊಂಡ ಸ್ವಾತಂತ್ರ್ಯ ಯಾರಿಗಾದರೂ ಹೆಮ್ಮೆಯನ್ನುಂಟು ಮಾಡೀತು.

ಬಹುಶಃ ಬ್ರಿಟಿಷರಿಗಾಗಲಿ, ಭಾರತೀಯರಿಗಾಗಲಿ ತಾವು ಆಳುತ್ತೇವೆ-ತಾವು ಆಳಿಸಿಕೊಳ್ಳುತ್ತೇವೆ ಎನ್ನುವ ಕಲ್ಪನೆ ಇದ್ದಿರಲಿಕ್ಕಿಲ್ಲ. ಬ್ರಿಟಿಷರಂತೂ ಕೇವಲ ವ್ಯಾಪಾರಿ ಉದ್ದೇಶಕ್ಕೆ ಬಂದವರು. ಆದರೆ ಭಾರತೀಯ ರಾಜರುಗಳ ಒಳಜಗಳ, ಮನಸ್ತಾಪ, ಪರಸ್ಪರ ದ್ವೇಷಾಸೂಯೆಗಳ ಲಾಭವನ್ನವರು ಚೆನ್ನಾಗಿಯೇ ಬಳಸಿಕೊಂಡರು. ಭಾರತ ಬ್ರಿಟಿಷರ ದಾಸ್ಯಕ್ಕೊಳಗಾಯಿತು. ಭಾರತೀಯರು ಎಚ್ಚೆತ್ತುಕೊಳ್ಳುವಷ್ಟರಲ್ಲಿ ತಡವಾಗಿತ್ತು. ಆಮೇಲೆ ಅದಕ್ಕಾಗಿ ನಾವು ತೆತ್ತ ಬೆಲೆ ಅಷ್ಟಿಷ್ಟಲ್ಲ.

ಕೊನೆಗೂ ಸ್ವಾತಂತ್ರ್ಯವನ್ನು ಪಡೆದುಕೊಂಡ ನಾವು ಅದನ್ನು ಅರ್ಥವತ್ತಾದ ರೀತಿಯಲ್ಲಿ ಅನುಭವಿಸುತ್ತಿದ್ದೇವೆಯೆ? ಹೋಗಲಿ, ಅದರ ನೈಜ ಅರ್ಥ ನಮಗೆ ತಿಳಿದಿದೆಯೆ ಎಂದು ಸಂದೇಹ ಉಂಟಾಗುವಂತಹ ಪರಿಸ್ಥಿತಿಗಳುಂಟಾದದ್ದು ಸ್ವಾತಂತ್ರ್ಯಾನಂತರದ ಬೆಳವಣಿಗೆ! ಬಹುಶಃ ಸ್ವಾತಂತ್ರ್ಯದ ಬಗೆಗಿನ ನಮ್ಮ ಪರಿಕಲ್ಪನೆ ಪೂರ್ವಗ್ರಹ ಪೀಡಿತವಾದುದಾಗಿರಬೇಕು; ಇಲ್ಲವೆ ಮಿತಿಗೊಳಪಟ್ಟುದಾಗಿರಬೇಕು.

ನಮಗೆ ಸ್ವಾತಂತ್ರ್ಯ ಅನಾಯಾಸವಾಗಿ ದಕ್ಕಲಿಲ್ಲ. ಅದಕ್ಕೆ ಇತಿಹಾಸ ಸಾಕ್ಷಿಯನ್ನೊದಗಿಸುತ್ತದೆ. ಆದರೆ ಆ ಸ್ವಾತಂತ್ರ್ಯ ಅರ್ಥ ಕಳೆದುಕೊಳ್ಳತೊಡಗಿದೆ, ಇಂದಿನ ನಾವು ಸ್ವಾತಂತ್ರ್ಯದ ಪರಿಕಲ್ಪನೆಗೆ ತಕ್ಕ ರೀತಿಯಲ್ಲಿ ತುಡಿಯುತ್ತಿಲ್ಲವೇನೋ ಎಂದೆನಿಸಿದರೆ, ನಮ್ಮ ಹಿಂದಿನವರ ತ್ಯಾಗ, ಬಲಿದಾನಗಳು ನಿರರ್ಥಕವಾದವೆ ಎಂದು ಖೇದ ಮೂಡುತ್ತದೆ. ನಮ್ಮ ಬಗ್ಗೆ ನಮಗೇ ಬೇಸರ ಮೂಡುತ್ತದೆ. ಜೊತೆಗೇ ಸ್ವಾತಂತ್ರ್ಯಾನಂತರದ ನಮ್ಮ ಸಾಧನೆ-ವೈಫಲ್ಯಗಳತ್ತ ಕಣ್ಣು ಹರಿಸಿದಾಗ ಅದಕ್ಕಿಂತ ಹೆಚ್ಚು ಖೇದವಾಗುತ್ತದೆ. ಆಂತರಿಕ ಸಮಸ್ಯೆಗಳನ್ನು ನಿವಾರಿಸಿಕೊಳ್ಳುವಲ್ಲಿ, ನೆರೆಹೊರೆಯ ರಾಷ್ಟ್ರಗಳೊಂದಿಗಿನ ಸಂಬಂಧಗಳನ್ನು

ಸುಧಾರಿಸಿಕೊಳ್ಳುವಲ್ಲಿ ನಾವು ಹೇಳಿಕೊಳ್ಳುವಂಥ ಸಾಧನೆ ಮಾಡಿಲ್ಲ. ಇನ್ನು ಕೆಲವು ಕ್ಷೇತ್ರಗಳಲ್ಲಿ ತಕ್ಕ ಮಟ್ಟಿನ ಸಾಧನೆ ಮಾಡಿರುವುದು ತುಸು ಸಮಾಧಾನಕರ ಅಂಶವೇನೋ ಸರಿ. ಆದರೆ ಅವೆಲ್ಲವುಗಳಿಗೂ ಮಿಗಿಲಾಗಿ ರಾಜಕೀಯ ಭ್ರಷ್ಟಾಚಾರ, ಆಡಳಿತಾತ್ಮಕ ಅವ್ಯವಸ್ಥೆ, ಗಡಿವಿವಾದ, ಭಾಷಾ ವಿವಾದ, ಜಲವಿವಾದ ಮುಂತಾದವುಗಳನ್ನು ನಿವಾರಿಸಿಕೊಳ್ಳಲಾಗದೆ ತೊಳಲಾಡುತ್ತಿರುವುದು, ಜಾರಿಗೆ ಬರದಿರುವ ಸಾವಿರಾರು ಯೋಜನೆಗಳು..... ಇವೆಲ್ಲ ಸ್ವಾತಂತ್ರ್ಯ ಸುವರ್ಣ ಮಹೋತ್ಸವವನ್ನು ಅಣಕಿಸುತ್ತವೆಯೇನೋ ಎಂದು ಭಾಸವಾಗುತ್ತದೆ!

ನಾವು ಸ್ವತಂತ್ರರೆಂದು ಹೇಳಿಕೊಳ್ಳುತ್ತಿದ್ದರೂ ಇತ್ತಿತ್ತಲಾಗಿ ಪಾಶ್ಚಾತ್ಯರ, ಪಾಶ್ಚಾತ್ಯ ಸಂಸ್ಕೃತಿಯ ಅನುಕರಣೆಯಲ್ಲಿ ಬಿದ್ದು ಒದ್ದಾಡುತ್ತಿದ್ದೇವೆ. ಇದು ನಮ್ಮ ಮಾನಸಿಕ ದಾಸ್ಯದ ಸೂಚನೆ.

ಸ್ವಾತಂತ್ರ್ಯ ಬಳುವಳಿಯಲ್ಲ; ಅದೊಂದು ಮಹಾ ಪ್ರಯತ್ನದ ಉತ್ಕೃಷ್ಟ ಫಲ. ಎಲ್ಲರೂ ಬಯಸುವ, ಎಲ್ಲರಿಗೂ ಬೇಕಿರುವ ಫಲ. ಅಂಥ ಉತ್ಕೃಷ್ಟ ಫಲವನ್ನು ಕಳೆದ ಐವತ್ತು ವರ್ಷಗಳಿಂದ ಅನುಭವಿಸುತ್ತಿರುವ ಭಾರತೀಯ ಮನಸ್ಸುಗಳು ಈ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಎಲ್ಲ ಬಗೆಯ ಪೂರ್ವಗ್ರಹ ಪೀಡಿತ ಭಾವನೆಗಳು, ದ್ವೇಷಾಸೂಯೆಯ ಭಾವನೆಗಳ ಬಂಧನದಿಂದ ಮುಕ್ತವಾಗಿ ನಿಜವಾದ ಅರ್ಥದಲ್ಲಿ 'ಸ್ವಾತಂತ್ರ್ಯ' ಪಡೆಯುವಂತಾಗಲಿ!

✽ ✽ ✽

# ಕುಸಿಯುತ್ತಿರುವ ಮೌಲ್ಯಗಳು

• 'ಸುಭುವಿ' ಎಂ. ವಿರೇಶ್

ಇಂದು ಯುವಶಕ್ತಿ ಅಪಾರ ಶಕ್ತಿಯನ್ನೂ ಯುಕ್ತಿಯನ್ನೂ ಭಕ್ತಿಯನ್ನೂ ಹೊಂದಿದ್ದರೂ, ಅವುಗಳ ಬಗ್ಗೆ ಪ್ರಜ್ಞೆಯಿಲ್ಲವಾಗಿದೆ. ಮಾನವೀಯ ಮೌಲ್ಯಗಳೂ ದಿನ-ದಿನಕ್ಕೂ ಬದಲಾಗುತ್ತಿವೆ. ಇಲ್ಲಿ ಯೋಚಿಸುವ ಅಂಶ ಗ್ರಾಹ್ಯವಾಗುತ್ತದೆ. ಚಿಂತೆ ಬೇಡ, ಚಿಂತನ ಬೇಕು ಎಂದು ತಿಳಿದರೂ ಮೌಲ್ಯಗಳ ಆಚರಣೆಯು ತೀರ ಕಡಿಮೆಯಾಗುತ್ತಲಿದೆ. ಎಲ್ಲರಲ್ಲಿಯೂ ಕಡಿಮೆಯಾಗಿದೆಯೆಂದಲ್ಲ. ಆದರೆ, "ಇಂದಿನ ಯುವಕರೇ ನಾಳಿನ ರಾಷ್ಟ್ರದ ಮತ್ತು ಅಂತರ್‌ರಾಷ್ಟ್ರೀಯ ಬೆನ್ನುಮೂಳೆ" ಎಂಬ ವ್ಯಾಖ್ಯೆ ದಿಟವಾಗಬೇಕು. ಇದು ದಿಟವಾದಷ್ಟೂ ನಾವು ಶಕ್ತಿವಂತರು, ಪ್ರಜ್ಞಾವಂತರು ಎಂಬ ಮಾತು ಸತ್ಯ. ಇಲ್ಲದಿರೆ ಎಲ್ಲರೂ ಮಿಥ್ಯ.

ಮೌಲ್ಯ ಎಂಬ ಪದಕ್ಕೆ ನಿರ್ದಿಷ್ಟವಾದ ಅರ್ಥವಿಲ್ಲ. ಇದು ಕಾಲಕಾಲಕ್ಕೂ ತನ್ನ ಅರ್ಥವನ್ನು ಬದಲಿಸಿಕೊಳ್ಳುವುದು ಎಂದು ಡಾ॥ ಬಸವರಾಜ ಸಬರದರ ಅಭಿಮತ. ಹಾಗಾದರೆ ಮೌಲ್ಯ ಮತ್ತು ಅಪಮೌಲ್ಯಗಳನ್ನು ಸ್ಪಷ್ಟವಾಗಿ ತಿಳಿಯಲು ಆಗಿಲ್ಲ. ಆದಾಗ್ಯೂ ಮಾನವೀಯತೆಯ ದೃಷ್ಟಿಯಿಂದ ಅವಲೋಕಿಸಿದರೆ ಕೆಲವಷ್ಟು ಮೌಲ್ಯಗಳು, ಇನ್ನು ಕೆಲವಷ್ಟು ಅಪಮೌಲ್ಯಗಳು, ಭವಿಷ್ಯ ತೀರ್ಪುಗಳು ಎಂದು ಅಭಿಪ್ರಾಯಿಸಬಹುದು.

ಇಡೀ ಮನುಕುಲಕ್ಕೆ ಬೇಕಾದ ಮೌಲ್ಯಗಳೆಂದರೆ ಸಾಮಾನ್ಯವಾಗಿ ಪ್ರೀತಿ, ಪ್ರೇಮ, ಸ್ನೇಹ, ಸಹನೆ, ತ್ಯಾಗ, ಸಹಾಯ, ಸಹಕಾರ, ಸಹೃದಯತೆ, ಸ್ಪಂದನ ಮುಂತಾದವುಗಳು ಎಂದು ತಿಳಿದರೆ ತಪ್ಪಲ್ಲ. ಈ ಮೌಲ್ಯಗಳಿಂದ ಇಡೀ ರಾಷ್ಟ್ರ ಮತ್ತು ಅಂತರ್ ರಾಷ್ಟ್ರೀಯ ಮಟ್ಟದ 'ಏಕತೆ'ಯನ್ನು ಸಾಧಿಸಲು ಸಾಧ್ಯ. ಇಂಥ ಅರ್ಥವತ್ತಾದ ಮಾರ್ಗಗಳೇ ಭವಿಷ್ಯದ ಹೆಜ್ಜೆಗಳಾಗಬೇಕು. ೫೦ನೇ ಸ್ವಾತಂತ್ರ್ಯ ಮಹೋತ್ಸವವನ್ನು ಆಚರಿಸುತ್ತಿರುವ ನಾವು ಏನನ್ನಾದರೂ ಸಾಧಿಸಬೇಕೆಂದರೆ ಮುಂಚೆ ಹೃದಯವಂತರಾಗಬೇಕು. 'ಮಾನವ ಧರ್ಮಕ್ಕೆ ಜಯ' ಎನ್ನಬೇಕು. ಅಂದರೆ ಈ ಆಚರಣೆ ಅರ್ಥಪೂರ್ಣ.

ನಮ್ಮಲ್ಲಿಯೇ ಕೊರತೆಗಳನ್ನು ಇಟ್ಟುಕೊಂಡು ಸುಧಾರಣೆ ಬಗ್ಗೆ ಮಾತನಾಡುವುದು, ಬರಹ ನೀಡುವುದರಲ್ಲಿ ಅರ್ಥವಿಲ್ಲ. ಆದರೂ ವಿಚಾರವಂತರು, ಪ್ರಜ್ಞಾವಂತರು, ಯುವ ಚೇತನರು, ಸಾಹಿತಿಗಳು, ಕವಿಗಳು, ತತ್ವಜ್ಞಾನಿಗಳು ಇವನ್ನು ಸ್ವಲ್ಪ ಆಳವಾಗಿ ಕರಗತ ಮಾಡಿಕೊಂಡು ಬದುಕಿನಾಳಕ್ಕೆ ಇಳಿಸುವ ಸ್ಫೂರ್ತಿಯನ್ನು ಜನಕ್ಕೆ ನೀಡಬೇಕು.

'ಸ್ಫೂರ್ತಿಯಿಂದ ಕೀರ್ತಿ' ಎಂಬಂತೆ ಬರಹಗಾರರ-ಭಾಷಣಕಾರರ ಚೇತನಯುಕ್ತ ವಿಚಾರಗಳಿಂದ ಜನಸ್ತೋಮ ಎಚ್ಚರಗೊಳ್ಳುತ್ತದೆ. ಮೌಲ್ಯಗಳ ಅರಿವು ಉಂಟಾಗುತ್ತದೆ.

ಇಂಥ ಚಿತ್‌ಶಕ್ತಿಯು ಎಲ್ಲರಲ್ಲಿಯೂ ಅಡಗಿದೆ. ಅದರ ಅರಿವು ಅವರಿಗಿಲ್ಲವಾಗಿದೆ. ಅದನ್ನು ಉದ್ರೇಕಿಸುವ ಕಾರ್ಯ ಇಂದು ತುಂಬ ಅಗತ್ಯವಾಗಿದೆ. "ಅರಿವೇ ಗುರು" ಎಂಬ ಸತ್ಯವಾಣಿ ಎಲ್ಲರಲ್ಲೂ ಇಂದು ಜಾಗೃತವಾಗಬೇಕಾಗಿದೆ. ಅಂದರೆ ಮಾತ್ರ ಭಾರತ ಅಥವಾ ಇಡೀ ವಿಶ್ವವೂ ಏಕತೆಯಿಂದ ಶಾಂತಿಯ ಮಹಾಗೀತೆಯನ್ನು ಹಾಡಬಹುದು.

ಇದಾಗುವುದು ಅಷ್ಟು ಸುಲಭವಲ್ಲ. ಶತಶತಮಾನಗಳಿಂದ ಬಂದ ಅರ್ಥಹೀನ ಆಚರಣೆಗಳು ಅಷ್ಟು ಬೇಗ ದೂರ ಹೋಗುವುದಿಲ್ಲ. ಆದರೂ ಪ್ರಯತ್ನ ಮಾಡಬೇಕು. ಫಲಾಫಲ ಭಗವಂತನದು. ಇಂದು ನಮ್ಮ ನಮ್ಮ ಬದುಕಿನ ಮೌಲ್ಯಗಳನ್ನು ನಾವು ಹೊಂದಿದರೆ ಸಾಕು. ಆಗ "ಲೈಫ್" ಎಂಬುದು ಸುವಾಸನೆಯ ಆವರಣವಾಗುತ್ತದೆ. "ಹ್ಯಾಪಿ" ಎಂಬುದು ಸದಾ ಆವೃತವಾಗುತ್ತದೆ. ಮೌಲ್ಯಗಳು ಬದುಕಿನ ಹೆಜ್ಜೆಗಳು: ಇವು ಭವಿಷ್ಯದ ಅಮೂಲ್ಯ ಅಪರಂಜಿಯ ಚಿಹ್ನೆಗಳು ಎಂಬುದು ಗಾಳಿ, ನೀರು, ಬೆಳಕಿನಷ್ಟೇ ಸತ್ಯ.

❋ ❋ ❋

# ಭ್ರಷ್ಟಾಚಾರದಲ್ಲಿ ಪೈಪೋಟಿ

• ರಾಮಚಂದ್ರ ಪಿ. ಶಾಸ್ತ್ರಿ

ನಮ್ಮ ದೇಶ ಪರಕೀಯರಾದ ಇಂಗ್ಲಿಷರಿಂದ ಬಿಡುಗಡೆ ಹೊಂದಿ ಐದು ದಶಕಗಳು ಸಂದಿವೆ. ಸ್ವಾತಂತ್ರ್ಯದ ಸುವರ್ಣ ಮಹೋತ್ಸವವನ್ನಾಚರಿಸುವ ಈ ಸುಸಂದರ್ಭದಲ್ಲಿ ನಾವು ಬಹಳ ಸಂತಸದಿಂದಿರಬೇಕಾಗಿತ್ತು. ಆದರೆ ಇಂದು ನಾವೆಲ್ಲ ಇರುವುದು ಸಮಸ್ಯೆಯ ಸುಳಿಯಲ್ಲಿ; ದುಃಖದ ಕಡಲಲ್ಲಿ; ಅಜ್ಞಾನವೆಂಬ ಅಂಧಕಾರದಲ್ಲಿ; ಅಧಃಪತನದ ಅಂಚಿನಲ್ಲಿ. ಇಂದು ನಮ್ಮ ಮುಂದೆ ಜ್ವಲಂತವಾಗಿ ನಿಂತಿರುವ ಸಮಸ್ಯೆಗಳಿಗೆ ಹಲವಾರು ಕಾರಣಗಳಿವೆ.

**೧) ಮೌಲ್ಯಾಧಾರಿತ ರಾಜಕಾರಣದ ಅರಿವಿಲ್ಲದ ಭ್ರಷ್ಟ ರಾಜಕಾರಣಿಗಳು**

ಒಂದು ಕಾಲದಲ್ಲಿ ಇಡೀ ಪ್ರಪಂಚಕ್ಕೇ ಗುರುವಾದ ಭಾರತವಿಂದು ಅಭಿವೃದ್ಧಿ ಹೊಂದುತ್ತಿರುವ ದಿನಗಳಲ್ಲಿ ಹಲವಾರು ಆಂತರಿಕ ವಿಪರ್ಯಾಸಗಳಿಂದ ತತ್ತರಿಸುತ್ತಿರುವುದು ಖೇದಕರವಾದ ಸಂಗತಿ. ಈಚಿನ ದಿನಗಳಲ್ಲಿ ಧರ್ಮ, ಸತ್ಯ, ನಿಷ್ಠೆ ಮತ್ತು ಸದಾಚಾರಗಳ ಬಗ್ಗೆ ಎಲ್ಲರೂ ಉಪದೇಶಿಸುವವರೇ ವಿನಹ ಯಾರೊಬ್ಬರೂ ಅದನ್ನು ಆಚರಿಸುವವರಿಲ್ಲ. ನಮ್ಮಿಂದ ಚುನಾಯಿತರಾದ ನಮ್ಮ ಪ್ರತಿನಿಧಿಗಳಂತೂ ಒಬ್ಬರಿಗೊಬ್ಬರು ಪ್ರತಿಸ್ಪರ್ಧಿಗಳಂತೆಯೇ ವ್ಯಾಪಕ ಭ್ರಷ್ಟಾಚಾರ ಪ್ರಕರಣಗಳಲ್ಲಿ ಶಾಮೀಲಾಗಿ ದಿನನಿತ್ಯ ನ್ಯಾಯಾಲಯಗಳಿಗೆ ಹಾಜರಾಗುತ್ತಿದ್ದಾರೆ. ಇಂತಹ ರಾಜಕಾರಣಿಗಳಿಂದ ದೇಶವು ದಿವಾಳಿಯೆದ್ದು ಹೋಗಿದೆ ಎಂದರೂ ತಪ್ಪಲ್ಲ. ಸ್ವಾತಂತ್ರ್ಯಪೂರ್ವದಲ್ಲಿ ಪರಕೀಯರಾದ ಬ್ರಿಟಿಷರು ದೇಶದ ಸಂಪತ್ತನ್ನು ಕೊಳ್ಳೆ ಹೊಡೆದರೆ, ಸ್ವಾತಂತ್ರ್ಯಾನಂತರ ನಮ್ಮ ರಾಜಕಾರಣಿಗಳು ಬಡವರ ಉದ್ಧಾರ ಮಾಡುವ ನೆಪದಲ್ಲಿ ಕೋಟಿಗಟ್ಟಲೆ ಹಣವನ್ನು ನುಂಗಿ, ತಮ್ಮ ಮರಿಮಕ್ಕಳವರೆಗೂ ಕುಳಿತು ಉಂಡರೂ ಸಾಕಾಗುವಷ್ಟನ್ನು ಸ್ವಿಸ್ ಬ್ಯಾಂಕಿನಲ್ಲಿಟ್ಟು ಆತ್ಮೋದ್ಧಾರದ ಕಾರ್ಯದಲ್ಲಿ ತೊಡಗಿದ್ದಾರೆ. ನಮ್ಮ ದೇಶ ಉದ್ಧಾರವಾಗಬೇಕಾದರೆ ಮೊದಲು ಇಂತಹ ಸ್ವಾರ್ಥಿ, ಭ್ರಷ್ಟ ರಾಜಕಾರಣಿಗಳ ಕಪಿಮುಷ್ಟಿಯಿಂದ ದೇಶವನ್ನು ರಕ್ಷಿಸಬೇಕು. ಮೌಲ್ಯಾಧಾರಿತ, ನೈತಿಕ ಹೊಣೆಯನ್ನರಿತ, ಬಡವರ ನಾಡಿ ಮಿಡಿತವನ್ನು ಬಲ್ಲ, ನಿಷ್ಠಾವಂತ ಪ್ರತಿನಿಧಿಗಳನ್ನು ಆಯ್ಕೆ ಮಾಡಬೇಕು. ಯೋಚಿಸಿದರೆ ಇಂತಹ ಆಯ್ಕೆಯೂ ಕಷ್ಟಸಾಧ್ಯವಾಗಬಹುದೇನೋ! ಯಾಕೆಂದರೆ ಮಂತ್ರಿ ಪದವಿ, ಸಂಪತ್ತು ಕ್ರೋಢೀಕರಣವಾದ ಮೇಲೆ ಬಡವರ ಸ್ಮರಣೆ ಯಾರಿಗೆ ಬಂದೀತು ? ಅಧಿಕಾರ ಮದ, ಧನ ಮದ ಎಂಥವರನ್ನೂ ದಾರಿ ತಪ್ಪಿಸೀತು, ಅಲ್ಲವೆ ?

ಸಂಪತ್ತು, ಪ್ರಭುತ್ವ ಈ ಮೊದಲಾದವು ಒಂದೊಂದೇ ಇದ್ದರೆ ಅನರ್ಥಕ್ಕೆ ಕಾರಣವಾಗುತ್ತದೆ. ಇನ್ನು ಇವೆಲ್ಲ ಒಗ್ಗೂಡಿದರೆ ಕೇಳಬೇಕೆ ?

**೨) ಕರ್ತವ್ಯದ ಪರಿಜ್ಞಾನವನ್ನು ಮರೆತು ಸುಖಕ್ಕಾಗಿ ಹಾತೊರೆಯುವಿಕೆ**

ಇಂದು ಯಾವೊಬ್ಬನಿಗೂ "ಇದು ನನ್ನ ಕರ್ತವ್ಯ; ಇದು ಆ ದೇವನ ಸೇವೆ" ಎಂಬ ಪವಿತ್ರ ಭಾವನೆಯಿಂದ ಕೆಲಸ ಮಾಡುವ ಪ್ರಾಮಾಣಿಕತೆಯಿಲ್ಲ. ಕೇವಲ ಸುಖ, ನೆಮ್ಮದಿ ಮಾತ್ರ ಬೇಕು. ಮಾಡುವ ಕರ್ತವ್ಯದಲ್ಲಿ ಶ್ರದ್ಧೆ ಇಲ್ಲದ ಮೇಲೆ ಇನ್ನೆಲ್ಲಿಯ ಶಾಂತಿ? ಎಲ್ಲಿಯ ನೆಮ್ಮದಿ? ಪ್ರತಿಯೊಬ್ಬರಿಗೂ ಮನಃಶಾಂತಿಗಾಗಿ ಮಂದಿರಗಳು, ಮಠಗಳು ಇರುತ್ತವೆ. ಆದರೆ ವಿಚಿತ್ರವೆಂದರೆ ಜನಸಾಮಾನ್ಯರಲ್ಲೂ ಇರದಷ್ಟು ಭ್ರಷ್ಟಾಚಾರಗಳು ಇಂದು ಮಠ-ಮಂದಿರಗಳಲ್ಲಿ, ಸಮಾಜವನ್ನು ತಿದ್ದಬೇಕಾದ ಜವಾಬ್ದಾರಿಯುತ ಮುಖಂಡರಲ್ಲಿ ತುಂಬಿ ತುಳುಕುತ್ತಿವೆ. ಹಾಗಾದರೆ ಇಂದಿನ ಈ ದುರ್ಗತಿಗೆ ಕಾರಣವೇನು ಎಂದು ಪ್ರಜ್ಞಾವಂತರು ಸೂಕ್ಷ್ಮವಾಗಿ ಅವಲೋಕಿಸಿದರೆ ಎಲ್ಲರಿಗೂ ತಿಳಿಯುವಂತಹ ವಿಷಯವೇ ಆಗಿದೆ. ಆದರೂ ಯಾಕೆ ಯಾರೂ ಸಹ ಸಮಾಜವನ್ನು ತಿದ್ದುವ ಪ್ರಯತ್ನವನ್ನು ಮಾಡುತ್ತಿಲ್ಲ? ಅಥವಾ ಪ್ರಜ್ಞಾವಂತರೇ ನಮ್ಮ ದೇಶದಲ್ಲಿಲ್ಲವೆ?

**೩) ನಿರ್ದಿಷ್ಟ ಸಿದ್ಧಾಂತ, ನೈತಿಕತೆಯಿಲ್ಲದೆ ಕುಸಿಯುತ್ತಿರುವ ಶೈಕ್ಷಣಿಕ ಗುಣಮಟ್ಟ**

ಇಂದಿನ ಶಿಕ್ಷಣ ಉದ್ದೇಶವೇನು? ಕೇವಲ ಅಕ್ಷರ ಬರೆಯಲು, ಓದಲು ಕಲಿಯುವುದು, ನೌಕರಿ ಮಾಡುವುದು ಎಂಬ ಭಾವನೆ ವ್ಯಾಪಕವಾಗಿ ಎಲ್ಲರಲ್ಲಿಯೂ ಮೂಡಿದೆ. ಕೇವಲ ಸಾಕ್ಷರರಾದವರೆಲ್ಲ ಬುದ್ಧಿವಂತರೂ ಪ್ರಜ್ಞಾವಂತರೂ ಆಗಿರುತ್ತಾರೆ ಎಂಬುದು ಭ್ರಮೆ. ಯಾವುದೇ ಸಿದ್ಧಾಂತ, ರೀತಿ-ನೀತಿ, ಶಿಷ್ಟಾಚಾರ, ಕಟ್ಟುಕಟ್ಟಳೆ ಇವುಗಳ ಗಂಧ-ಗಾಳಿಯಿಲ್ಲದ ಇಂತಹ ಶಿಕ್ಷಣದಿಂದ ಸಮಾಜದ ಸುಧಾರಣೆ ಸಾಧ್ಯವೆ? ಇಂದಿನ ಶಿಕ್ಷಣ ಪದ್ಧತಿಯನ್ನು ತೊಡೆದು ಹಾಕಿ ಸ್ವದೇಶಿ ಶಿಕ್ಷಣ ಪದ್ಧತಿಯನ್ನು ಜಾರಿಯಲ್ಲಿ ತರಬೇಕು. ಸುಸಂಸ್ಕೃತ ಜನತೆಯನ್ನು ನಿರ್ಮಿಸುವ ನೈತಿಕ ಸಮಾಜವನ್ನು ರೂಪಿಸುವ ಶಿಕ್ಷಣವು ಇಂದಿನ ಅಗತ್ಯಗಳಲ್ಲಿ ಒಂದಾಗಿದೆ. ಹಾಗೆಯೇ ಬಡವರು-ಬಲ್ಲಿದರ ನಡುವಿನ ಅಂತರವನ್ನು ಹೋಗಲಾಡಿಸಬೇಕು. ಆರ್ಥಿಕ ಸ್ಥಿತಿಯ ಆಧಾರದ ಮೇಲೆ ಮೀಸಲಾತಿಯನ್ನು ಜಾರಿಗೆ ತಂದು ಸಮಾನತೆಯನ್ನು ಕಾಯ್ದುಕೊಳ್ಳಬೇಕು.

**೪) ಪಾಶ್ಚಿಮಾತ್ಯರ ಅಂಧಾನುಕರಣೆಯಿಂದ ಕೆಡುತ್ತಿರುವ ಸಮಾಜದ ಸ್ವಾಸ್ಥ್ಯ**

ಭಾರತೀಯರ ಆಚಾರ-ವಿಚಾರ, ನಡೆ-ನುಡಿ, ಅಭ್ಯಾಸ-ಹವ್ಯಾಸಗಳು.... ಇವೆಲ್ಲ ಗೌರವಾರ್ಹವಾದವುಗಳು. ಸಮಾಜಕ್ಕೆ ಒಳಿತನ್ನುಂಟುಮಾಡುವ, ಹಾಗೂ ಏನೇ ಕೆಡುಕುಂಟಾಗುವಂತಹ ಸಂದರ್ಭದಲ್ಲೂ ತಪ್ಪನ್ನು ತಿದ್ದಿ ಸನ್ಮಾರ್ಗಕ್ಕೊಯ್ಯುವಂತಹ ಶಿಕ್ಷಣ, ಸಂಸ್ಕೃತಿ ನಮ್ಮದು. ಆದರೆ ಇಂದು ಪಾಶ್ಚಿಮಾತ್ಯರ ಮೂರ್ಖ ಕಲ್ಪನೆಯು, ಸ್ವಾತಂತ್ರ್ಯವೆಂಬ ಹೆಸರಿನ ಸ್ವೇಚ್ಛಾಚಾರ ಪ್ರವೃತ್ತಿ, ಸಾಮಾಜಿಕ ವ್ಯವಸ್ಥೆ, ಹೀಗೆ ಎಲ್ಲದರಲ್ಲೂ ಪಾಶ್ಚಿಮಾತ್ಯರ ಅಂಧಾನುಕರಣೆಗಳಿಗೆ ಮಾರುಹೋಗಿ ನಮ್ಮ ಸಂಸ್ಕೃತಿಯನ್ನೇ ಮರೆತಿದ್ದೇವೆ. ಉಡುಗೆ-ತೊಡುಗೆ, ಆಚಾರ-ವಿಚಾರ ಇತ್ಯಾದಿಗಳಲ್ಲಿ ಪಾಶ್ಚಾತ್ಯರ ಅತಿಯಾದ ಅನುಕರಣೆಯಿಂದ ಸಮಾಜದ ಸ್ವಾಸ್ಥ್ಯವನ್ನೇ ಕೆಡಿಸಿದ್ದೇವೆ. ನಮ್ಮ ದೇಶೀಯ ಸಂಗೀತಕ್ಕಿಂತ 'ಪಾಪ್' ಸಂಗೀತವೇ ಹೆಚ್ಚು ಪ್ರಿಯವಾಗಹತ್ತಿದೆ. 'ಹಿತ್ತಲ ಗಿಡ ಮದ್ದಲ್ಲ' ಎಂಬ ಮಾತಿನಂತೆ ಮಾತೃಭಾಷೆಯಲ್ಲಿ ಶಿಕ್ಷಣವನ್ನು ಕೊಡದೆ ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ನೀಡುವುದು ಇತ್ತೀಚೆಗೆ ಅತಿಯಾಗಿದೆ. ಆಂಗ್ಲ ಮಾಧ್ಯಮದ ಶಾಲೆಗಳಲ್ಲಿ ಅಭ್ಯಾಸ ಮಾಡುವುದು ಪ್ರತಿಷ್ಠೆಯ ಪ್ರಶ್ನೆಯಾಗಿದೆ.

ಆಂಗ್ಲ ಮಾಧ್ಯಮದಲ್ಲಿ ಕಲಿಯುವ ಮಕ್ಕಳು 'ಬುದ್ಧಿವಂತರು' ಎಂಬ ತಿಳಿವಳಿಕೆ ಸರ್ವಸಾಮಾನ್ಯರಲ್ಲೂ ಮೂಡಿದೆ.

ಆದರೆ ಇಂತಹ, ಕೇವಲ 'ಗುಮಾಸ್ತರನ್ನು ತಯಾರಿಸುವ ಕಾರ್ಖಾನೆ'ಯಂತಹ ಶಿಕ್ಷಣ ಪದ್ಧತಿಯನ್ನು ತ್ಯಜಿಸಿ ನಮ್ಮದೇ ಆದ ಸ್ವದೇಶಿ ಶಿಕ್ಷಣ ಪದ್ಧತಿಯನ್ನು ಜಾರಿಗೆ ತಂದು, ದೇಶದ ಸಂಪೂರ್ಣ ಅಭಿವೃದ್ಧಿ ಸಾಧಿಸಲು ಇನ್ನಾದರೂ ಪ್ರಯತ್ನಿಸಲಿ. ಭವಿತವ್ಯದ ದಿನಗಳಲ್ಲಿ ಭಾರತದ ಬಗ್ಗೆ ಗಾಂಧೀಜಿಯವರು ಕಂಡ ಕನಸಿನ ಕಲ್ಯಾಣ ರಾಜ್ಯ ನನಸಾಗಲಿ. ದೇಶದಲ್ಲಿ ಸಮಾನತೆ, ಸ್ವಾತಂತ್ರ್ಯ ಸ್ಥಿರವಾಗಿ ನೆಲೆಗೊಳ್ಳಲಿ. ಪರಸ್ಪರ ಒಬ್ಬರನ್ನೊಬ್ಬರು ಅರಿತು ಸ್ನೇಹ-ಸಹಕಾರದಿಂದ ಬಾಳುವಂತಾಗಲಿ. ಎಲ್ಲರೂ ಸುಶಿಕ್ಷಿತರಾಗಿ ಪ್ರಜ್ಞಾವಂತ ಸಮಾಜದ ನಿರ್ಮಾಣಕ್ಕೆ ಸಹಾಯವಾಗಲಿ ಎಂಬ ಸದಾಶಯ ಹೊಂದೋಣ, ಅಲ್ಲವೆ?

❋ ❋ ❋

# ಗೊತ್ತು ಗುರಿಯಿಲ್ಲದ ರಾಜಕಾರಣ

• ಶರಣಪ್ಪ ಬಾಚಲಾಪುರ

ಸ್ವಾತಂತ್ರ್ಯ ಪೂರ್ವದಲ್ಲಿ ಸ್ವಾತಂತ್ರ್ಯಕ್ಕಾಗಿ ಹಂಬಲಿಸುವ ಒಂದು ಗುರಿ, ಅದಕ್ಕೆ ನಾಯಕತ್ವ ನೀಡುವಂತಹ ನಾಯಕರು ಇದ್ದು ವ್ಯವಸ್ಥಿತ ಹೋರಾಟದಿಂದ ಈ ದೇಶಕ್ಕೆ ರಾಜಕೀಯ ಸ್ವಾತಂತ್ರ್ಯ ಬಂದಿದ್ದು; ಇಂದು ದೇಶದ ಚುಕ್ಕಾಣಿ ಹಿಡಿಯಲು ಹೊರಟಿರುವ ರಾಜಕೀಯ ನಾಯಕರಿಗೆ ಹಾಗೂ ಪಕ್ಷಗಳಿಗೆ ಗೊತ್ತು ಗುರಿ ಇಲ್ಲದೆ ಯದ್ವಾತದ್ವಾ ಬೆಳವಣಿಗೆ ಹೊಂದುತ್ತಿದೆ.

ಸ್ವಾತಂತ್ರ್ಯ ಪೂರ್ವದಲ್ಲಿ, ಅಂದರೆ ಇನ್ನೂ ಈ ದೇಶದಲ್ಲಿ ರಾಜಸತ್ತೆ ಆಡಳಿತ ನಡೆಸುತ್ತಿದ್ದಾಗ, ಇಲ್ಲಿಯ ಮಾಂಡಲೀಕರು ಹಾಗೂ ರಾಜ-ಮಹಾರಾಜರ ತಿಕ್ಕಾಟದಿಂದ ಸಣ್ಣ ಪುಟ್ಟ ಪ್ರದೇಶಗಳು ತಮ್ಮದೇ ಆದ ಆಡಳಿತ ನಡೆಸುತ್ತ ಇರುವಾಗ ವ್ಯಾಪಾರಕ್ಕಾಗಿ ಬಂದ ಯುರೋಪಿಯನ್ನರು ಈ ದೇಶವನ್ನು ತಮ್ಮ ವಶಕ್ಕೆ ತೆಗೆದುಕೊಂಡು ಇಲ್ಲಿ ತಮ್ಮದೇ ಪ್ರಾಬಲ್ಯವನ್ನು ಸ್ಥಾಪಿಸಿದರು.

ಆಗ ರಾಜ್ಯ ಹೇಳಿದ್ದೇ ವೇದವಾಕ್ಯವಾಗಿದ್ದು, ರಾಜಾಜ್ಞೆಯನ್ನು ಮೀರುವಂತಹ ಘಟನೆಗಳು ನಡೆದಿದ್ದು ಈ ದೇಶದ ಇತಿಹಾಸದಲ್ಲಿ ಅತ್ಯಲ್ಪವೆಂದೇ ಹೇಳಬಹುದು. ಆಗಲೂ ಸಹ ರಾಜ ತನ್ನ ಪ್ರಜೆಗಳ ಹಿತಕ್ಕಾಗಿ ತನ್ನದೇ ಆದ ಒಂದು ವ್ಯವಸ್ಥೆಯನ್ನು ಇಟ್ಟುಕೊಂಡು ತನ್ನ ನೈತಿಕ ಜವಾಬ್ದಾರಿಯಾಗಿ ಒಂದು ಸಿದ್ಧಾಂತವನ್ನು ರೂಪಿಸಿಕೊಂಡಿದ್ದ.

ಆ ಸಮಯದಲ್ಲಿ ಸಿದ್ಧಾಂತ, ತತ್ವಗಳನ್ನು ರೂಪಿಸಿದ ಚಾಣಕ್ಯ(ಕೌಟಿಲ್ಯ), ಮನು, ಬೀರಬಲ್ಲರಂತಹವರನ್ನು ನಾವು ಕಾಣುತ್ತೇವೆ. ಅಂದು ರಾಜ ತಾಂತ್ರಿಕತೆಯನ್ನು ರೂಪಿಸಿದವರು ತಮ್ಮ ರಾಜನ ಅಪ್ಪಣೆಯನ್ನು ಪಡೆದು ರೂಪಿಸುತ್ತಿದ್ದರು. ಆದರೆ ಇಂದಿನ ದಿನಗಳಲ್ಲಿ ನಾಥೂರಾಮ ಘೋಡ್ಸೆಯಂತಹ ರಾಷ್ಟ್ರೀಯವಾದಿಗಳ ಅನಿಸಿಕೆಯಂತೆ ಈ ದೇಶ ವಿಭಜನೆಯಾಗಬಾರದಿತ್ತು. ಈ ವಿಭಜನೆಯನ್ನು ಒಪ್ಪಿಕೊಂಡಿರುವ ಗಾಂಧೀಜಿಯವರ ಬಗ್ಗೆ ಉಗ್ರವಾದ ವಿರೋಧ ತಳೆದ ನಾಥೂರಾಮ ಘೋಡ್ಸೆ ಅವರನ್ನು ಕೊಂದಿದ್ದರು. ಗಾಂಧಿಯನ್ನು ಕೊಲ್ಲಲು ನಾಥೂರಾಮ ಘೋಡ್ಸೆ ಹಾಗೂ ಗಾಂಧಿಯ ನಡುವೆ ಯಾವುದೇ ವೈಯಕ್ತಿಕ ದ್ವೇಷ, ಅಸೂಯೆಗಳು ಇರಲಿಲ್ಲ. ಒಂದು ಸಿದ್ಧಾಂತಕ್ಕಾಗಿ ಕಟ್ಟುಬಿದ್ದು ಗಾಂಧಿಯನ್ನು ಕೊಲ್ಲಬೇಕಾಯಿತು ಎಂದು ಘೋಡ್ಸೆ ಅನಿಸಿಕೆಯನ್ನು ಒಂದು ಪುಸ್ತಕದಲ್ಲಿ ದಾಖಲಿಸಿದ್ದಾರೆ.

ಆದರೆ ಇಲ್ಲಿ ಘೋಡ್ಸೆ ಗಾಂಧಿಯನ್ನು ಕೊಲ್ಲುವಂತಹ ಕೆಲಸ ಮಾಡಬೇಕಾದರೆ ಗಾಂಧಿ ಕೆಟ್ಟವರೇ ಎಂಬ ಭಾವನೆ ಬಂದಿದ್ದರೆ ಅದು ತಪ್ಪು. ಗಾಂಧಿ ದೇಶಕ್ಕೆ ಒಂದು ನೈತಿಕ,

ಸಾಮಾಜಿಕ ನೆಲಗಟ್ಟನ್ನು ನೀಡಿ ಅದರಂತೆ ಬಾಳಿ ತೋರಿಸಿ ಒಂದು ಸಿದ್ಧಾಂತವನ್ನು ರೂಪಿಸಿದ ಇವರು ಈ ದೇಶದ ನಡೆದಾಡುವ ಒಂದು ವಿಶ್ವವಿದ್ಯಾಲಯವೆನಿಸಿದ್ದರು.

ಗಾಂಧಿ ಧೀಮಂತ ವ್ಯಕ್ತಿತ್ವವನ್ನು ಹೊಂದಿ, ಹೊಲೆಯ, ಮಾದಿಗ ಎನ್ನುವ ಕೆಳಮಟ್ಟದ ಜನರ ಏಳಿಗೆಗಾಗಿ, ಒಂದು ಬಹಿಷ್ಕೃತ ಜೀವನ ಉತ್ತಮಪಡಿಸುವ ಸಲುವಾಗಿ ಅನೇಕ ಸಿದ್ಧಾಂತ ತತ್ವಗಳನ್ನು ರೂಪಿಸಿದ್ದರು. ಅದೇ ರೀತಿ ರಾಮ ಮನೋಹರ ಲೋಹಿಯಾರವರು ಸಮಾಜವಾದದ ಹಿನ್ನೆಲೆಯಲ್ಲಿ ದೇಶದ ನಿರ್ಮಾಣದ ಕನಸು ಕಂಡಿದ್ದರು. ಇವರುಗಳ ಪ್ರತಿರೂಪವನ್ನು ಜಯಪ್ರಕಾಶ ನಾರಾಯಣರಲ್ಲಿ ಕಾಣಬಹುದಾಗಿತ್ತು.

ಅನೇಕ ರಾಜಕೀಯ ಪಕ್ಷಗಳಿಗೆ ಒಂದು ಸಿದ್ಧಾಂತವಾಗಲಿ, ಬದ್ಧತೆಯಾಗಲಿ ಇಲ್ಲ. ಪ್ರಜೆಗಳ ಹಿತವನ್ನು ಕಾಯುವಂತಹ ಕಾರ್ಯಕ್ರಮಗಳನ್ನು ರೂಪಿಸಿರುವ ರಾಜಕೀಯ ಚಿಂತಕರ ಕೊರತೆಯನ್ನು ಈ ದೇಶ ಎದುರಿಸುತ್ತಿದೆ.

ಮುಂದೆ ಈ ದೇಶದಲ್ಲಿ ಸ್ವಾತಂತ್ರ್ಯಕ್ಕಾಗಿ ಹಂಬಲಿಸುವ ಒಂದೊಂದು ತಂಡಗಳು ಹುಟ್ಟಿಕೊಂಡು ಸ್ವಾತಂತ್ರ್ಯಪೂರ್ವದಲ್ಲಿ ತಮಗೆ ಎಂತಹ ಸ್ವಾತಂತ್ರ್ಯ ಬೇಕು ಎಂಬುದನ್ನು ಚಿಂತಿಸುವ ಚಿಂತಕರು ಹುಟ್ಟಿಕೊಂಡು ಹೋರಾಟ ನಡೆಸಿದರು. ಆದರೆ ಎಲ್ಲ ಧ್ಯೇಯ ಮಾತ್ರ ಈ ದೇಶವನ್ನು ದಾಸ್ಯದ ಸಂಕೋಲೆಯಿಂದ ಬಿಡಿಸಿ, ತಮ್ಮದೇ ಆದ ಪ್ರಜಾಸತ್ತೆಯನ್ನು ಸ್ಥಾಪಿಸಬೇಕೆಂದು ಚಿಂತನೆಯನ್ನು ಕಾಣುತ್ತಿದ್ದರು.

ಆ ಸಮಯದಲ್ಲಿ ಕಮ್ಯೂನಿಸ್ಟರ ಒಂದು ಗುಂಪು, ರಾಮ ಮನೋಹರ ಲೋಹಿಯಾರ ಒಂದು ಗುಂಪು, ಸುಭಾಷ್‌ಚಂದ್ರ ಬೋಸರ ಒಂದು ಗುಂಪುಗಳಿದ್ದವು. ಸಾರ್ವತ್ರಿಕ ಚಿಂತನೆಯಿಂದ ಎಲ್ಲರ ಮನಸ್ಸಿನಲ್ಲಿ ಈ ಅಡಿಪಾಯವನ್ನು ಕಟ್ಟಿದವರಾದ ಮಹಾತ್ಮಾ ಗಾಂಧಿಯವರದೇ ಒಂದು ಗುಂಪಾಗಿತ್ತು.

ಮೇಲಿನ ಎಲ್ಲ ನಾಯಕರ ಚಿಂತನೆಗಳು ಸ್ವಾತಂತ್ರ್ಯ ಹೋರಾಟದಲ್ಲಿ ಬೇರೆ ಬೇರೆಯಾಗಿದ್ದರೂ ಇವರ ಒಟ್ಟಾಭಿಪ್ರಾಯ ಈ ದೇಶವನ್ನು ಆಳುತ್ತಿರುವ ಬ್ರಿಟಿಷರನ್ನು ದೂರ ಸರಿಸುವುದು. ಅದಕ್ಕಾಗಿ ರೂಪಿಸಿರುವ ಹೋರಾಟದ ಹಾದಿಗಳು, ತೊಟ್ಟಿರುವ ದೀಕ್ಷೆಗಳು ಬೇರೆ ಬೇರೆಯಾಗಿದ್ದವು. ಒಬ್ಬರ ಚಿಂತನೆ ಇನ್ನೊಬ್ಬರ ಚಿಂತನೆಗೆ ಎಲ್ಲೋ ಒಂದು ಕಡೆ ಬದಲಾವಣೆಯನ್ನು ಕಾಣುತ್ತಿದ್ದೇವೆ.

ಹೋರಾಟದ ನಂತರ ಸ್ವಾತಂತ್ರ್ಯ ಕಂಡ ಈ ದೇಶಕ್ಕಾಗಿ ಒಂದು ಸಂವಿಧಾನವನ್ನು ರೂಪಿಸಿದ್ದು ಒಂದು ಕಡೆಯಾದರೆ, ಈ ದೇಶದ ವಿಭಜನೆಯನ್ನು ವಿರೋಧಿಸಿದ ಗಾಂಧಿಯನ್ನು ಕೊಂದು ಅವರ ಚಿಂತನೆಯನ್ನು ಅಲ್ಲಿಂದಲೇ ಈ ದೇಶದ ರಾಜಕಾರಣಿಗಳ ಚಿಂತನೆಯ ನಾಯಕತ್ವಕ್ಕೆ ಕಡಿಮೆಯಾಗುತ್ತ ಬಂದು ಇಂದು ಯಾವ ರಾಜಕೀಯ ನಾಯಕ ಈ ದೇಶದ ಏಳಿಗಾಗಿ ರೂಪಿಸಿರುವ ಚಿಂತನೆಗಳಿವೆ ಎಂಬುದನ್ನು ದೀವಟಿಗೆ ತೆಗೆದುಕೊಂಡು ಹಗಲಿನಲ್ಲಿ ಹುಡುಕಬೇಕಾಗಿದೆ.

'ಕಾಂಗ್ರೆಸ್ ಒಂದು ರಾಜಕೀಯೇತರ ಸಂಘಟನೆ; ಸ್ವಾತಂತ್ರ್ಯಾನಂತರ ಈ ಸಂಘಟನೆಯನ್ನು ಕೊನೆಗೊಳಿಸಿ. ಇದು ರಾಜಕೀಯ ಪಕ್ಷವಾಗುವುದು ಬೇಡ' ಎಂದು ಗಾಂಧಿ ಹೇಳಿದ್ದರು. ಇಂದು ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳ ನಂತರ ಈ ದೇಶದಲ್ಲಿ ಕಾಂಗ್ರೆಸ್ ತನ್ನ ಮೂಲೋದ್ದೇಶವನ್ನೇ ಕಡೆಗಣಿಸಿ ವ್ಯಕ್ತಿಗತ ರಾಜಕೀಯ ನಡೆಸುತ್ತಿದೆ.

ಒಂದು ನೂರ ಐವತ್ತು ವರ್ಷಗಳ ಇತಿಹಾಸ ಇರುವ ಕಾಂಗ್ರೆಸ್‌ನವರು ಶಾಸ್ತ್ರಿ, ಪಟೇಲರಂತಹ ಘಟಾನುಘಟಿಗಳ ಸಿದ್ಧಾಂತವನ್ನು ಒಪ್ಪಿಕೊಂಡಿರುವ ಕಾಂಗ್ರೆಸ್‌ನ ಪುನಶ್ಚೇತನಕ್ಕಾಗಿ ನೆಹರೂ ಮನೆತನದ ಒಂದು ಕುಡಿಯೇ ಬೇಕಾಗಿತ್ತೇ ? ಹಾಗಾದರೆ ಸಾಮೂಹಿಕ ನಾಯಕತ್ವದಿಂದ ಈ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಕಾಂಗ್ರೆಸ್ ಸೋನಿಯಾರ ಹಿಂದೆ ಬಿದ್ದದ್ದು ಏಕೆ ಎಂಬುವುದನ್ನು ಇಲ್ಲಿ ಚರ್ಚಿಸಬೇಕಾಗಿದೆ. ಅದೇ ರೀತಿ ಕಾಂಗ್ರೆಸ್‌ನ ಬುದ್ಧಿವಂತ ನಾಯಕರು ಸಹ ಅನೇಕ ಹಗರಣಗಳ ಕೂಪಗಳಾಗಿ ಜೈಲಿನಲ್ಲಿ ಕೆಲವರೂ ನ್ಯಾಯಾಲಯದ ಕಟ್ಟೆಯಲ್ಲಿ ಕೆಲವರು, ಜನರಿಂದ ಉಗಿಸಿಕೊಂಡು ಅವರ ಮಧ್ಯೆಯೇ ಇರುವ ಕೆಲವರು ಕಾಂಗ್ರೆಸ್ಸಿನಷ್ಟು ವಯಸ್ಸಾದ ಮುದುಕರು ಕೆಲವು ಜನರ ಮಧ್ಯೆ ಸಿದ್ಧಾಂತಗಳನ್ನು ಅನುಷ್ಠಾನಕ್ಕೆ ತರುವಲ್ಲಿ ವಿಫಲವಾಗಿ ವ್ಯಕ್ತಿಗತ ರಾಜಕೀಯಕ್ಕೆ ಇಳಿದಿದ್ದು ಈ ದೇಶದ ಒಂದು ದುರಂತವೇ ಸರಿ ಅನ್ನಬೇಕು.

ಸ್ವಾತಂತ್ರ್ಯ ಪೂರ್ವದಿಂದಲೂ ರಾಷ್ಟ್ರೀಯ ಭಾವನೆಯನ್ನು ಪ್ರಚೋದಿಸುತ್ತ ಹಿಂದೂಗಳನ್ನು ಸಂಘಟಿಸಿ ಹಿಂದೂ ರಾಷ್ಟ್ರದ ಮೂಲ ಕಲ್ಪನೆಯನ್ನು ಕೊಡುತ್ತ ಬಂದಿರುವ ಹಿಂದುತ್ವವಾದಿ ಸಂಘಟನೆಗಳ ಮೂಲ ಬೇರಾಗಿರುವ ಬಿ. ಜೆ. ಪಿ. ಇಂದು ಅವಕಾಶವಾದಿ ಧೋರಣೆಯನ್ನು ತಳೆದಿದ್ದು, ಸಿದ್ಧಾಂತಕ್ಕೆ ಅಧಿಕಾರವೇ ಮುಖ್ಯ ಅನ್ನುವ ಮನೋಭಾವನೆಯನ್ನು ತಳೆದಂತೆ ಇದೆ.

ಈ ಹಿಂದೆ ವಾಜಪೇಯಿ ಈ ದೇಶದ ಮುಸ್ಲಿಮರ ಬಗ್ಗೆ ಪರಿಷ್ಕರಿಸಬೇಕೆಂದು ಹೇಳಿದ್ದರು. ಇಂದು ಮುಸ್ಲಿಂರಂತೆ ಉಡುಪುಗಳನ್ನು ತೊಟ್ಟು ಇಫ್ತಾರ ಕೂಟ, ಮುಸ್ಲಿಮರನ್ನು ಭಾಯಿ-ಭಾಯಿ ಅನ್ನುವಂತೆ ಪೋಜು ಕೊಡುತ್ತಿರುವುದು ಅವರು ಅಧಿಕಾರ ಆಸೆಗಾಗಿ ಏನು ಮಾಡಲೂ ಸಿದ್ಧರು ಎಂಬುದನ್ನು ತೋರಿಸಿದಂತೆ. ಅದೇ ರೀತಿ ಬಿ. ಜೆ. ಪಿ. ಅಧ್ಯಕ್ಷರಾದ ಎಲ್. ಕೆ. ಅಡ್ವಾಣಿಯವರು ರಾಮಮಂದಿರಕ್ಕಾಗಿ ಇಟ್ಟಿಗೆಗಳನ್ನು ಸಂಗ್ರಹಿಸಿದವರು, ಕೋಮು ಭಾವನೆ ಕೆರಳಿಸಿದವರು ಇಂದು ಹಿಂದೂಸ್ತಾನ ರಾಷ್ಟ್ರ ಕಟ್ಟುವ ಕೆಲಸವನ್ನು ಬಿಟ್ಟು ಈ ದೇಶದ ಪಟ್ಟವನ್ನು ಪಡೆಯಲು ಅನೇಕ ಸಣ್ಣ ಪುಟ್ಟ ಮೇಲ್ವರ್ಗದ ನಾಯಕರ ಪಕ್ಷಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡಿದ್ದಾರೆ.

ರಾಜಕೀಯದಲ್ಲಿ ಶಾಶ್ವತ ಶತ್ರುಗಳು ಇಲ್ಲ, ಮಿತ್ರರೂ ಇಲ್ಲ ಎಂದು ಹೇಳುತ್ತ ಒಂದು ದಿನ ಒಂದು ಕಡೆ ಕಾಲು ಎತ್ತಿದರೆ ಇನ್ನೊಂದು ದಿನ ಇನ್ನೊಬ್ಬರಿಗೆ ಕಾಲು ಎತ್ತುವ ಹೀನ ಸಂಸ್ಕೃತಿಗೆ ದೇಶ ಬಂದಿದೆ.

ರಾಷ್ಟ್ರದ ಎರಡು ದೊಡ್ಡ ಪಕ್ಷಗಳ ಜೊತೆಗೆ ತಾನು ರಾಷ್ಟ್ರೀಯ ಪಕ್ಷವೆಂದು ಹೇಳಿಕೊಳ್ಳುತ್ತ ಬಂದಿರುವ ಜನತಾದಳದ ಯಾವ ನಾಯಕರಿಗೆ ಸಿದ್ಧಾಂತವಿದೆ? ಶರದ್ ಯಾದವ, ಪಾಸ್ವಾನರಂಥವರು ಒಂದು ಕಡೆಯಾದರೆ, ಮಣ್ಣಿನ ಮಗ ಎಂದು ಹೇಳುವ ದೇವೇಗೌಡರು ಪ್ರಧಾನಿಯಾಗಿ ಈ ದೇಶಕ್ಕೆ ಯಾವ ಸಿದ್ಧಾಂತ ನೀಡಿದರು? ಸಮಾಜವಾದಿ ಹಿನ್ನೆಲೆಯ ಲೋಹಿಯಾರ ಶಿಷ್ಯ ಗೋಪಾಲಗೌಡರ ಶಿಷ್ಯರಾಗಿರುವ ಜೆ. ಹೆಚ್. ಪಟೇಲ ಇಂದು ತನ್ನ ಸಮಾಜವಾದಿ ಚಿಂತನೆಯನ್ನು ಬದಿಗೊತ್ತಿ ಜಾತಿ ನಿಂದನೆ, ಜಾತಿ ವರಸೆ, ಜಾತಿಗೆ ಅನುಗುಣವಾಗಿ ಸ್ಥಾನಮಾನ ನೀಡುತ್ತಿರುವುದು ನೋಡಿದರೆ ಈ ದೇಶದ ಸಮಾಜವಾದಿಗಳ ಮಜಾತನ ಎದ್ದು ಕಾಣುತ್ತಿದೆ.

ಇಂದು ದೇಶದಲ್ಲಿ ಇರುವ ಯಾವ ರಾಜಕೀಯ ಪಕ್ಷದ ನಾಯಕರೂ ತಮ್ಮದೇ ಆದ ಸಿದ್ಧಾಂತ ಇಲ್ಲದ ಕಾರಣ ತಮ್ಮ ಅವಕಾಶಗಳು ಕಡಿಮೆಯಾದಾಗ ಪಕ್ಷಾಂತರ ಮಾಡುತ್ತ ಇಲ್ಲವೆ ಕೆಲವು ಗುಂಪುಗಳನ್ನು ಕಟ್ಟಿಕೊಂಡು ಹೊಸ ಪಕ್ಷವನ್ನು ರಚಿಸುತ್ತ ಪ್ರಜಾಸತ್ತೆಯಲ್ಲಿ ತಮ್ಮದೇ ಆದ ರಾಜಸತ್ತೆಯನ್ನು ಸ್ಥಾಪಿಸಲು ಅಧಿಕಾರದ ಹಪಾಹಪಿತನಕ್ಕಾಗಿ ನಾಚಿಕೆಗೇಡು ಕೆಲಸವನ್ನು ಮಾಡುತ್ತಿರುವುದರಿಂದ ಈ ದೇಶದ ರಾಜಕಾರಣಿಗಳಿಗೆ ಯಾವ ಸಿದ್ಧಾಂತ ಇದೆ ಎಂದು ಚರ್ಚಿಸಬೇಕಾಗಿದೆ.

ಯುವಕರನ್ನು ಸಂಘಟಿಸಿ ಅವರಿಗೆ ರಾಜಕೀಯ ಸಿದ್ಧಾಂತ-ತರಬೇತಿ ನೀಡಿ ಮುಂದಿನ ನಾಯಕರನ್ನಾಗಿ ಮಾಡುವ ಕ್ರಿಯೆ ಯಾವ ಪಕ್ಷದಲ್ಲಿಯೂ ಆಗಿಲ್ಲ. ಇಂದಿನ ಯುವ ರಾಜಕೀಯ ನಾಯಕರು ಶೋಕಿಗಾಗಿ ಹಣದ ಇಲ್ಲವೆ ಯಾವುದೋ ಆಮಿಷಕ್ಕೆ ಒಳಗಾಗಿ ರಾಜಕೀಯಕ್ಕೆ ಧುಮುಕಿದ್ದಾರೆ. ಇಂದಿನ ಯುವಕರಿಗೆ ತಮ್ಮ ಪಕ್ಷದ ನಾಯಕರ ಬಗ್ಗೆ ಸರಿಯಾದ ಮಾಹಿತಿ ಕೂಡ ಇಲ್ಲದಂತೆ ಇರುವುದು ಇಂದಿನ ಯುವಕರು ಎತ್ತ ಸಾಗಿದ್ದಾರೆಂಬುದನ್ನು ನೋಡಬೇಕಾದ ಪರಿಸ್ಥಿತಿ ಒದಗಿದೆ.

ಕೋಟ್ಯಾನುಗಟ್ಟಲೆ ಹಗರಣಗಳ ಸರದಾರ, ಹೊಲಸು ಜಾತಿ ರಾಜಕಾರಣಿಗಳು, ಕಟ್ಟಿಹರುಕ, ವಿಷಯಲಂಪಟ, ಅಧಿಕಾರಿಗಳಿಂದ ಈ ದೇಶದ ಚಿತ್ರಣವೇ ತಲ್ಲಣಗೊಳ್ಳುತ್ತಿದ್ದು, ಈ ದೇಶದ ರಾಜಕಾರಣ ಎಂತಹ ಕೀಳುಮಟ್ಟಕ್ಕೆ ಇಳಿಯುತ್ತಿದೆ ಎಂದರೆ, ಅನೇಕರು ರಾಜಕೀಯವೆಂದರೆ ಹೊಲಸು ರಾಜಕೀಯವೆಂದು, ಗಟಾರವೆಂದು ಭಾವಿಸುತ್ತಿರುವುದು ನಿರೀಕ್ಷಿಸಿದ ಭಾವನೆಯೇ ಆಗಿದೆ. ಈ ದೇಶದ ರಾಜಕಾಣಕ್ಕೆ ಯಾವುದೇ ಗೊತ್ತು ಗುರಿ ಇಲ್ಲದಂತಾಗಿದೆ.

❋ ❋ ❋

# ೫೦ ವರ್ಷದ ಸ್ವಾತಂತ್ರ್ಯದ ನೆನಪುಗಳು

• ಡಿಸೋಜ ಆಲ್ಬರ್ಟ್

ಒಂದಂತೂ ನಿಜ, ನಾವು ಸ್ವತಂತ್ರರಾದೆವು. ದೇಶಭಕ್ತರ-ದೇಶಪ್ರೇಮಿಗಳ ಹೋರಾಟ-ಸತ್ಯಾಗ್ರಹ-ಉಪವಾಸ ಚಟುವಟಿಕೆಗಳಿಂದ, ಚಿತ್ರ ವಿಚಿತ್ರ ಹಿಂಸೆ, ನೋವು, ಸಾವು, ನೇಣುಗಂಬವೇರಿ ತಮ್ಮ ಜೀವತೆತ್ತು ರಕ್ತ ಚೆಲ್ಲಿ ಪ್ರಾಣವನ್ನು ದೇಶಕ್ಕಾಗಿ ಧಾರೆ ಎರೆದು ನಿಸ್ವಾರ್ಥ ಸೇವೆಯ ಫಲ ಆಂಗ್ಲರ ಆಡಳಿತದಿಂದ ಮುಕ್ತರಾಗಿ ಸ್ವತಂತ್ರ ಪಡೆದು ಸ್ವರ್ಣ ಮಹೋತ್ಸವ– ೫೦ ರ ಸ್ವಾತಂತ್ರ್ಯ ಹಬ್ಬವನ್ನು ನಾವು ಮನೆ ಮನೆಗಳಲ್ಲಿ ಆಚರಿಸುತ್ತ, ಇಡೀ ವರ್ಷ ಒಂದಲ್ಲ ಒಂದು ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸ್ವಾತಂತ್ರ್ಯಕ್ಕಾಗಿ ಹೋರಾಡಿದ ನಾಯಕರನ್ನು ಸ್ಮರಿಸಿ, ಹಿರಿಯ ಪಿತಾಮಹರಿಗೆ ಶ್ರದ್ಧಾಂಜಲಿ ಅರ್ಪಿಸಿ, ಅವರ ಸೇವೆಯನ್ನು ಸ್ಮರಿಸಿ ಅವರ ಮಾರ್ಗದರ್ಶನದಲ್ಲಿ ನಡೆಯಲು ಪ್ರಯತ್ನಿಸುತ್ತಿದ್ದೇವೆ. ಆದರೆ, ಸ್ವಾತಂತ್ರ್ಯ ಬಂದ ಕೂಡಲೇ ಎದುರಾದ ಸಮಸ್ಯೆ ಪಾಕಿಸ್ತಾನ-ಭಾರತ ಬೇರೆ ಬೇರೆಯಾಗಿ, ಒಂದಾಗಿ ಬಾಳುತ್ತಿದ್ದ ಹಿಂದು-ಮುಸ್ಲಿಂರಲ್ಲಿ ಭೇದ ಎಸಗಿ ಬೇರ್ಪಡಿಸುವಾಗ ನೂರಾರು-ಸಾವಿರಾರು ಕುಟುಂಬಗಳು ತಮ್ಮ ತಮ್ಮ ಆಸ್ತಿಪಾಸ್ತಿಗಳನ್ನು ಕಳೆದುಕೊಂಡು ವಲಸೆ ಬಂದು ಹೋದ ಆ ಸಮಯ ಎಂಥ ವೈರಿಗೂ ಬರದಿರಲಿ! ನೂರಾರು ಸಾವುನೋವುಗಳ ನಡುವೆ ದೇಶದ ಆಡಳಿತದ ಕಡೆ ಗಮನ ಹರಿಸುವಾಗ ಹಲವಾರು ಸಮಸ್ಯೆಗಳು ನಾಯಕರನ್ನು ಬಾಧಿಸಿದಾಗ ಎಲ್ಲರೂ ಒಟ್ಟುಗೂಡಿ ಸಮಸ್ಯೆಯ ಪರಿಹಾರಕ್ಕಾಗಿ ಮಾರ್ಗವನ್ನು ಸಿದ್ಧಪಡಿಸಿ ಭಾರತದ ಸಂವಿಧಾನವನ್ನು ರಚಿಸಿ ಜನತೆಯ ಮುಂದಿಟ್ಟು ಪ್ರಜಾಪ್ರಭುತ್ವದಲ್ಲಿ ಮಾನವನಿಗಿರಬೇಕಾದ ಹಕ್ಕುಗಳನ್ನು ಎಲ್ಲರ ಮನದಲ್ಲಿ ತುಂಬಿ ಆರ್ಥಿಕ, ಸಾಮಾಜಿಕ, ಬಡತನ ಹೀಗೆ ಹಲವಾರು ವಿಷಯಗಳ ಬಗ್ಗೆ ಯೋಚಿಸಿ ಪಂಚವಾರ್ಷಿಕ ಯೋಜನೆಯನ್ನು ಕಾರ್ಯರೂಪಕ್ಕೆ ತರಲಾಯಿತು. ನಂತರ ಎಲ್ಲೋ ದೇಶದ ಜನತೆ ಸುಧಾರಿಸುತ್ತಿದೆ ಎಂಬ ನಂಬಿಕೆ ಬರುತ್ತಿರುವಾಗಲೇ ನೆರೆ ರಾಷ್ಟ್ರ ಚೀನದ ಸೈನ್ಯ ದೇಶವನ್ನು ಆಕ್ರಮಿಸಲು ಹೊರಟಾಗ ದೇಶದ ನಾಯಕರು ಒಂದುಗೂಡಿ ಕೆಚ್ಚೆದೆಯಿಂದ ಅವರ ಸೈನ್ಯವನ್ನು ಹಿಮ್ಮೆಟ್ಟಿಸಿ ಯುದ್ಧದಲ್ಲಿ ಜಯಶಾಲಿಗಳಾಗಿ ಸಂಧಾನದ ಮೂಲಕ ಸಮಸ್ಯೆಗಳು ಇತ್ಯರ್ಥವಾಗಿ ಎಲ್ಲರೂ ನಿಟ್ಟುಸಿರು ಬಿಟ್ಟಂತಾಯಿತು. ನೆಮ್ಮದಿಯಿಂದ ದೇಶವನ್ನು ಆಳುವಾಗ ಒಬ್ಬೊಬ್ಬರೇ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ನಾಯಕರು ನಮ್ಮನ್ನು ಅಗಲತೊಡಗಿದರು. ಈ ಅಘಾತದಿಂದ ದೇಶ ತತ್ತರಿಸಿತು.

ಈ ನಡುವೆ ದೇಶವನ್ನಾಳುವ ನಾಯಕರುಗಳಲ್ಲಿ ಭಿನ್ನಾಭಿಪ್ರಾಯ-ಭಿನ್ನಮತ, ಜಾತೀಯತೆ, ಶುರುವಾಗಿ ಪಕ್ಷ-ಪಕ್ಷಗಳು ಹುಟ್ಟಿಕೊಂಡು ನಿರ್ಮಲ ಆಡಳಿತದಲ್ಲಿ ಕಲ್ಮಶ

ಚೆಲ್ಲಿ ಜನತೆಯ ಸಮಸ್ಯೆಗಳ ಕಡೆ ಆಡಳಿತದ ಜವಾಬ್ದಾರಿ ಕುಂಠಿತವಾಗುತ್ತ ಬಂತು. ನಿಸ್ವಾರ್ಥ ಸೇವೆ ನಿಂತು ಸ್ವಾರ್ಥ ಸಾಧಕರು ಹುಟ್ಟಿಕೊಂಡು ಆಡಳಿತವನ್ನು ಕುಂಠಿತಗೊಳಿಸಿದರು.

ವರುಷ ವರುಷಗಳು ಉರುಳುತ್ತಿದ್ದಂತೆ ದೇಶದ ಸಮಸ್ಯೆಗಳು ಹೆಚ್ಚಾಗಿ ಬಿಡಿಸಲಾಗದ ಕಗ್ಗಂಟಾಗಿ ಹೋಯಿತು. ಜನತೆ ಯಾವ ಪಕ್ಷವನ್ನು ಆರಿಸಿಕೊಂಡರೂ ಪ್ರಯೋಜನವಾಗದೆ ಎಲ್ಲರಲ್ಲಿ ನಿರಾಶೆ ಬಂದಿತು. ಜನರಲ್ಲಿ "ಯಾಕೆ ಹೀಗೆ" ಎಂಬ ಪ್ರಶ್ನೆಗೆ ನಮ್ಮ ನಮ್ಮಲ್ಲೇ ಉತ್ತರ ಇರಬಹುದೇ ಅಥವಾ ತಾಳ್ಮೆ ದೌರ್ಬಲ್ಯವೇ ಇರಲು ಸಾಕು.

ನೂರು ಕೋಟಿ ಜನಸಂಖ್ಯೆ ದಾಟುತ್ತಿದ್ದಂತೆ ನಮ್ಮಲ್ಲಿ ಬದಲಾವಣೆಗಳು ಮಾತ್ರ ಕಾಣಲಿಲ್ಲ. ಶ್ರೀಮಂತರು ಶ್ರೀಮಂತರಾಗೇ, ಬಡವರು ಬಡವರಾಗೇ ಇರುವುದು ಕಾಣಬರುತ್ತದೆ.

ಈಗಿನ ಹೊಲಸು ರಾಜಕಾರಣ-ರಾಜಕೀಯ ವ್ಯಕ್ತಿಗಳು ಅಂದರೆ ಪ್ರತಿಯೊಬ್ಬರು ತಮ್ಮ ಉಳಿವಿಗಾಗಿ ಏನೆಲ್ಲ ಬೇಕು ಅಷ್ಟು ಮಾಡಿಕೊಳ್ಳುವ ಸಮಯಕ್ಕೆ ತಮ್ಮ ಅವಧಿ ಮುಗಿಯುತ್ತದೆ. ಗದ್ದಿಗೆಗೆ ಆಸೆ ಪಡುವ ಇವರು ಜನತೆಗೆ ಪ್ರಣಾಳಿಕೆಯ ಪ್ರತಿ-ಆಶ್ವಾಸನೆ ಭರವಸೆಗಳನ್ನು ಹೊರತು ಪಡಿಸಿದರೆ ಮತ್ತೇನೂ ಕೊಡಲಾರರು. ಈ ೫೦ ವರ್ಷಗಳಲ್ಲಿ ದೇಶದ ಅಭಿವೃದ್ಧಿಗಳಿಗೆಂದು ನೆರೆಹೊರೆ ಸ್ನೇಹದ ರಾಷ್ಟ್ರಗಳಲ್ಲಿ ಕೈಚಾಚಿ ಸಾಲತಂದಿರುವುದು ಈಗ ಹುಟ್ಟುವ ಮಗುವಿನ ತಲೆಯ ಮೇಲೆ ನಾಲ್ಕು ಸಾವಿರ ರೂಪಾಯಿಗಳಾಗಿದೆ ಎಂದು ಸಮೀಕ್ಷೆ ತಿಳಿಸಿತು. ಮುಂದಿನ ನಮ್ಮ ದೇಶದ ಪರಿಸ್ಥಿತಿ ಏನು, ಯಾಕೆ ಎಂದು ಚಿಂತಿಸುವ ಬುದ್ಧಿಜೀವಿಗಳಂತೂ ನಿಟ್ಟುಸಿರು ಬಿಟ್ಟು ಚಿಂತಕರಾಗಿ ಕೂತಿದ್ದಾರೆ. ಹಿಂದೆ ದೇಶಕ್ಕಾಗಿ ತಮ್ಮ ಪ್ರಾಣವನ್ನೇ ಮುಡುಪಾಗಿಟ್ಟ ಮಹಾತ್ಮಾ ಗಾಂಧೀಜಿ, ವಲ್ಲಭಭಾಯಿ ಪಟೇಲರು, ಗೋಪಾಲಕೃಷ್ಣ ಗೋಖಲೆ, ಚಂದ್ರಶೇಖರ್ ಆಜಾದ್, ಜವಾಹರಲಾಲ್ ನೆಹರೂ, ಸುಭಾಷ್ ಚಂದ್ರಬೋಸ್, ಬಾಬು ರಾಜೇಂದ್ರ ಪ್ರಸಾದ್, ಡಾ. ಬಿ. ಆರ್. ಅಂಬೇಡ್ಕರ್, ಲಾಲ್ ಬಹಾದ್ದೂರ್ ಶಾಸ್ತ್ರಿ ಮುಂತಾದ ಮಹಾನುಭಾವರು ಈಗಿದ್ದಿದ್ದರೆ? ತಮಗೆ ತಾವೇ ಯಾಕಾದರೂ ದೇಶಕ್ಕೆ ಸ್ವಾತಂತ್ರ್ಯ ಕೊಡಿಸಿದೆವೋ ಎಂದು ನೇಣುಗಂಬವೇರುತ್ತಿದ್ದರೇನೋ!

ಇರಲಿ, ನಾವು ಕಂಡ ೫೦ ವರ್ಷದ ಸ್ವಾತಂತ್ರ್ಯದ ನೆನಪುಗಳನ್ನು ಇನ್ನು ಬರೆಯುತ್ತ ಹೋದರೆ ಮುಗಿಯುವುದೆಲ್ಲಿ? ಜನಸಂಖ್ಯೆ, ನಿರುದ್ಯೋಗ, ಆರ್ಥಿಕ, ಸಾಮಾಜಿಕ ಅಸಮಾನತೆ, ನಿರುದ್ಯೋಗಿಗಳು, ಇವುಗಳಲ್ಲದೆ ಭ್ರಷ್ಟಾಚಾರ, ಅತ್ಯಾಚಾರ, ಅನಾಚಾರ, ದರೋಡೆ, ಕಳ್ಳತನ, ಸುಲಿಗೆ, ಲೂಟಿ, ಡಕಾಯಿತಿ, ಕೊಲೆ, ಓ! ಪ್ರತಿ ದಿನ ಎದುರಿಸುತ್ತಿರುವ ಇಂಥ ನೂರಾರು ಸಮಸ್ಯೆಗಳು ನಮ್ಮ ದೇಶದ ಮುಂದಿವೆ. ಅತ್ಯಾಧುನಿಕ ತಂತ್ರಜ್ಞಾನ, ಬಹು ಎತ್ತರಕ್ಕೆ ಬೆಳೆದ ವಿಜ್ಞಾನ ತಂತ್ರಜ್ಞಾನಗಳಿಂದ-ಕೈಗಾರಿಕೆಗಳು ಲಾಭದಾಯಕವಲ್ಲದೆ ಕುಂಠಿತವಾಗುತ್ತಿರುವ ಹಿನ್ನೆಲೆಯಲ್ಲಿ ವಿದ್ಯಾವಂತರು ನಿರುದ್ಯೋಗಿಗಳಾಗಿ ಲಕ್ಷಾಂತರ ವಿದ್ಯಾರ್ಥಿಗಳು-ವಿದ್ಯಾವಂತರು ಕಂಗೆಟ್ಟು ಕೂತಿದ್ದಾರೆ. ರೈತರಂತೂ ಕಂಗಾಲಾಗಿ ಆತ್ಮಹತ್ಯೆಗೆ ತೊಡಗಿರುವುದು ವಿಷಾದನೀಯ.

ಇವೆಲ್ಲದರ ನಡುವೆ ನಾವು ೫೦ರ ಸ್ವತಂತ್ರ ಹಬ್ಬವನ್ನು ಆಚರಿಸುತ್ತಿರುವುದು ಹೆಮ್ಮೆಯ ವಿಷಯವೇ ಸರಿ. ಕಹಿಯನ್ನು ಮರೆತು ಮುಂದೊಂದು ದಿನ ಒಳ್ಳೆಯ ನಾಯಕರು ನಮ್ಮನ್ನು ಆಳಬಲ್ಲರೆ—ಅಂಥವರನ್ನು ಆರಿಸಿ ಕಳಿಸಬಲ್ಲೆವೆ ಎಂದು ನಮ್ಮ-ನಮ್ಮಲ್ಲೇ

ಪ್ರಶ್ನೆಗಳು ಕಾಡುತ್ತಿವೆ. ಮೇಲೆ ಹೇಳಿದ ಎಲ್ಲ ದೇಶದ ಸಮಸ್ಯೆಗಳು, ಅವು ನಮ್ಮವೇ ಆಗಿದ್ದು ಅವೆಲ್ಲ ಪರಿಹಾರವಾದಲ್ಲಿ ನಮ್ಮದು ಅಭಿವೃದ್ಧಿ ಹೊಂದಿದ ದೇಶವೆಂದು ನಮ್ಮನ್ನು ನಾವೇ ಬೆನ್ನು ತಟ್ಟಿಕೊಳ್ಳಬಹುದು. ಆಗ ಮಾತ್ರ ಸ್ವಾತಂತ್ರ್ಯಕ್ಕಾಗಿ ಹೋರಾಡಿದ-ಪ್ರಾಣತೆತ್ತ ಮಹಾನುಭಾವರಿಗೆ ಶ್ರದ್ಧಾಂಜಲಿ ಅರ್ಪಿಸಿದ್ದಕ್ಕೆ ಅರ್ಥ ಸಿಗುತ್ತದೆ.

ಬನ್ನಿ, ನಾವು-ನೀವು ೫೦ ವರ್ಷದ ಸ್ವಾತಂತ್ರ್ಯದ ನಂತರದ ದಿನಗಳನ್ನು ಮೆಲುಕು ಹಾಕಿ ಕೂತರೆ ಮುಗಿಯುವುದಿಲ್ಲ ನಮ್ಮ ಸಮಸ್ಯೆಗಳು. ಜಾತ್ಯತೀತ ರಾಷ್ಟ್ರವಾದ ನಮ್ಮ ದೇಶ ಪ್ರಪಂಚ ಉತ್ತಮ ರಾಷ್ಟ್ರಗಳಲ್ಲಿ ಒಂದು ಎಂಬ ಹೆಗ್ಗಳಿಕೆ ನಮ್ಮದಾಗಿದೆ. ನಾವೆಲ್ಲರೂ ಒಟ್ಟಿಗೆ ಸೇರಿ ಶ್ರಮಿಸೋಣ, ದುಡಿಯೋಣ. ರಾಷ್ಟ್ರಕ್ಕಾಗಿ, ರಾಷ್ಟ್ರದ ಚಿಂತನೆಗಾಗಿ ನಮ್ಮ ಕೈಯಲ್ಲಾದ ಸೇವೆಗೆ ನಮ್ಮನ್ನು ತೊಡಗಿಸಿಕೊಳ್ಳೋಣ, ಏನಂತೀರಿ?

❀ ❀ ❀

# ದೇಶಕ್ಕಾಗಿ ನಾವೇನು ಮಾಡಿದೆವು?

• ಎ. ಬಿ. ಕರಿಶೆಟ್ರು

ಸ್ವಾತಂತ್ರ್ಯವು ದೊರೆತ ಮೇಲೆ ಭಾರತವು ತುಂಬ ಕಷ್ಟಕರ ಜೀವನ ಸಾಗಿಸುತ್ತಿತ್ತು. ಪ್ರಜೆಗಳ ಕಷ್ಟವನ್ನರಿತ ರಾಷ್ಟ್ರ ನಾಯಕರು ಒಂದುಗೂಡಿ ಜವಾಹರಲಾಲ್ ನೆಹರೂರವರ ನೇತೃತ್ವದಲ್ಲಿ ಪಂಚವಾರ್ಷಿಕ ಯೋಜನೆಯೆಂಬ ಯೋಜನೆಯೊಂದನ್ನು ಆರಂಭಿಸಿದರು. ಪ್ರಥಮ ಪಂಚವಾರ್ಷಿಕ ಯೋಜನೆಯಿಂದ ಕೃಷಿಕರಿಗೆ ತುಂಬ ಸಹಾಯವಾಯಿತು. ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ೩,೭೬೦ ಕೋಟಿ ರೂಪಾಯಿಗಳ ಅಂದಾಜು ವೆಚ್ಚ ಇದ್ದದ್ದು, ಇಲ್ಲಿಯವರೆಗೆ ೮ ನೇ ಪಂಚವಾರ್ಷಿಕ ಯೋಜನೆಯಲ್ಲಿ ೭,೯೮,೦೦೦ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗುತ್ತಿದೆ. ಈ ಪಂಚವಾರ್ಷಿಕ ಯೋಜನೆಯ ಫಲವಾಗಿ ಇಂದು ದೇಶದ ಆರ್ಥಿಕ ಸ್ಥಿತಿಯೂ ಒಂದು ಮಟ್ಟಕ್ಕೆ ಬಂದು ನಿಂತಿದೆ. ಹೀಗೆ ಇಂತಹ ಅನೇಕ ಹೊಸ ಹೊಸ ಯೋಜನೆಗಳನ್ನು ಹಮ್ಮಿಕೊಂಡು ಸಮಯವನ್ನು ವ್ಯರ್ಥವಾಗಿ ಪೋಲು ಮಾಡದೆ ಅನವರತ ದುಡಿಯಬೇಕು. ಅಂದಾಗ ಮಾತ್ರ ನಮ್ಮ ರಾಷ್ಟ್ರ ಇನ್ನೂ ಹೆಚ್ಚು "ಪ್ರಗತಿ ಪಥದತ್ತ" ಸಾಗಬಹುದಾಗಿದೆ.

ತಂತ್ರಜ್ಞಾನದ ದೃಷ್ಟಿಯಲ್ಲಿ ಇಣಿಕಿ ನೋಡಿದರೆ ಭಾರತದಲ್ಲಿಯೇ ತಯಾರಿಸಲಾದ ಹಲವಾರು ಉಪಗ್ರಹಗಳು ಇಂದು ಕೆಲಸದಲ್ಲಿ ನಿರತವಾಗಿವೆ. ಇಲ್ಲಿಯವರೆಗೆ ಭಾರತವು ಇನ್ಸಾಟ್ IP, ಇನ್ಸಾಟ್ - 2A, ಇನ್ಸಾಟ್ - 2B ಮತ್ತು ಇನ್ಸಾಟ್ - 2C ಸಂಪರ್ಕ ಉಪಗ್ರಹಗಳನ್ನು ಅಂತರಿಕ್ಷಕ್ಕೆ ಉಡಾಯಿಸಿ ಭೂ ಕಕ್ಷೆಯಲ್ಲಿ ಸ್ಥಿರಗೊಳಿಸಿದೆ. ಹೀಗೆ ಭಾರತವು ತಂತ್ರಜ್ಞಾನದಲ್ಲಿ ಬಹಳ ಮುಂದುವರೆಯುತ್ತಿದೆ.

ಇನ್ನು ಸಾಮಾಜಿಕವಾಗಿ ವಿಚಾರಿಸಿದರೆ ಈಗ ಸ್ತ್ರೀಯು ಅಂದಿನಂತಿಲ್ಲ. ಜೀವನದ ವಿವಿಧ ರಂಗಗಳಲ್ಲಿ ಅವಕಾಶ ಪಡೆದು ಪುರುಷರಿಗೆ ಸಮನಾಗಿ ದುಡಿಯುತ್ತಿದ್ದಾಳೆ. ಬರೀ ಮಕ್ಕಳನ್ನು ಹೆರುವ ಯಂತ್ರವಾಗಿದ್ದ ಸ್ತ್ರೀ ಇಂದು ಯಂತ್ರವನ್ನು ನಡೆಸಬಲ್ಲಳು ಎಂಬುದನ್ನು ಸಿದ್ಧಮಾಡಿ ತೋರಿಸಿದ್ದಾಳೆ.

ನಮ್ಮ ರಾಷ್ಟ್ರ ಪರರಾಷ್ಟ್ರಗಳೊಡನೆ ವಿವಿಧ ರಂಗಗಳಲ್ಲಿ ಸ್ಪರ್ಧಿಸುತ್ತಿದೆ. ಮತ್ತು ವಿಶ್ವದ ಮುಂದುವರೆಯುತ್ತಿರುವ ರಾಷ್ಟ್ರಗಳಲ್ಲಿ ಒಂದಾಗಿದೆ. ಆದರೆ ನಮ್ಮ ದೇಶದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಯನ್ನು ಹತೋಟಿಗೆ ತರಬೇಕಾಗಿದೆ. ಎರಡು ಕೈಗಳಿಂದ ಚಪ್ಪಾಳೆ ತಟ್ಟಿದಾಗ ಶಬ್ದ ಕೇಳಿಸುತ್ತದೆ. ಅಂತೆಯೇ ಜನಸಂಖ್ಯೆಯನ್ನು ಮಿತಿಗೆ ತರಬೇಕಾದರೆ ಪುರುಷರು ಮತ್ತು ಮಹಿಳೆಯರು ಸಮಪಾಲಿನಿಂದ ಯೋಚಿಸಬೇಕಾಗಿದೆ. ಪ್ರತಿಯೊಬ್ಬ

ಪ್ರಜೆ ಅಕ್ಷರಸ್ಥನಾಗಬೇಕು. ಮತ್ತು ಅವನು ಸ್ವಾರ್ಥಿಯಾಗದೆ, "ದೇಶವು ನಮಗೇನು ಮಾಡಿದೆ ?" "ಎನ್ನುವ ಬದಲು ದೇಶಕ್ಕಾಗಿ ನಾವು ಏನು ಮಾಡಿದೆವು ?" ಎಂದು ಯೋಚಿಸಿ ಮುನ್ನುಗ್ಗಿದಾಗ ನಮ್ಮ ದೇಶವು ಈಗಿರುವ ಮಟ್ಟಕ್ಕಿಂತ ಇನ್ನೂ ಹೆಚ್ಚಿನ ಮಟ್ಟಕ್ಕೆ ಹೋಗಬಹುದೆಂದು ನನ್ನ ಅಭಿಪ್ರಾಯ.

ಕೊನೆಗೆ ನಾವು ತಿಳಿದುಕೊಳ್ಳಬೇಕಾದ ವಿಷಯವೇನೆಂದರೆ 'ನಮ್ಮ ದೇಶವೇ ಒಂದು ಕುಟುಂಬ; ಇಲ್ಲಿರುವ ಪ್ರಜೆಗಳೇ ಕುಟುಂಬದ ಸದಸ್ಯರು' ಎಂದು ತಿಳಿದು ದೇಶದ ಗೌರವ ಕಾಪಾಡುವುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯವಾಗಿದೆ. ಇದನ್ನರಿತು ಕಾರ್ಯನಿರತರಾದಾಗ ದೇಶ ಇನ್ನೂ ಮುಂದುವರಿಯಬಹುದು.

❋ ❋ ❋

# "ನೈತಿಕ ಶಿಕ್ಷಣದ ಅವಶ್ಯಕತೆ"

• ಗಣೇಶ ವಿ.

ಇಂದು ಭಾರತ ಸ್ವಾತಂತ್ರ್ಯದ ಸುವರ್ಣ ಮಹೋತ್ಸವವನ್ನು ಆಚರಿಸಿದೆ. ಈ ದೇಶವನ್ನು ರಾಜಕೀಯ, ಸಾಮಾಜಿಕ, ಆರ್ಥಿಕ ಹೀಗೆ ಅನೇಕ ಸಮಸ್ಯೆಗಳು ಮುತ್ತಿಕೊಂಡಿವೆ. ಇವುಗಳನ್ನು ವಿಚಾರಿಸ ಹೊರಟರೆ ಇವುಗಳ ಮೂಲವಾಗಿರುವ ಶಿಕ್ಷಣ ವ್ಯವಸ್ಥೆಯಲ್ಲಿ ಉಂಟಾಗಿರುವ ಅವಸ್ಥೆಗಳ ವಿಶ್ಲೇಷಣೆ ಅತ್ಯಗತ್ಯ ಎಂದೆನಿಸುತ್ತದೆ. ಮಾನವ ಆರ್ಥಿಕವಾಗಿ ಬಲಿಷ್ಠನಾಗಿರಬೇಕು ಎನ್ನುವ ಆಶೆಯನ್ನು ಹೊಂದಿರುವಂಥದ್ದು ತಪ್ಪಲ್ಲ. ಆದರೆ ಅರ್ಥ-ಕಾಮಗಳು ಧರ್ಮದ ಅಡಿಪಾಯದ ಮೇಲಿರಬೇಕು ಎನ್ನುವುದು ಸರ್ವವಿದಿತವಾಗಿರುವ ವಿಷಯವಾಗಿದೆ.

ಯಾವುದೇ ಶಿಕ್ಷಣವಿರಲಿ ಅದು ನೈತಿಕತೆಯನ್ನು ಬೆಳೆಸುವ ನಿಟ್ಟಿನಲ್ಲಿರಬೇಕು. "ಶಿಕ್ಷಣದ ಮೂಲ ಉದ್ದೇಶ ಉದ್ಯಮ." ಧರ್ಮ ನಿಷ್ಠವಾದ ಕಾರ್ಯದಲ್ಲಿ ಸಂಪೂರ್ಣವಾಗಿ ತೊಡಗುವಂತೆ ಮಾಡುವುದು ಎಂದರ್ಥ. ಆದರೆ ಇಂದು ಹಾಗಿದೆಯೆ? ಖಂಡಿತ ಇಲ್ಲ. ಬಹುಮಟ್ಟಿಗೆ ಇಂದಿನ ಶಿಕ್ಷಣ ಕೇವಲ ವ್ಯಾವಹಾರಿಕತೆಯನ್ನೇ ವೈಭವೀಕರಿಸಿ ಆರ್ಥಿಕತೆಯನ್ನು ಹೇಗೋ ಹೊಂದುವುದಕ್ಕಾಗಿ ಮತ್ತು ಯಾವುದೋ ಪದವಿಯನ್ನು ಪಡೆದು ವಿಷಯಾನುಭವವಿಲ್ಲದಿದ್ದರೂ ಉದ್ಯೋಗವನ್ನು ಹೊಂದಲು ಮಾತ್ರ ಸಮರ್ಥವಾಗಿದೆ. ಆದರೂ ನಿರುದ್ಯೋಗ ಸಮಸ್ಯೆ ಹೆಚ್ಚುತ್ತಲೇ ಇದೆ. ಅನೈತಿಕವಾಗಿ ಪಡೆದ ಉದ್ಯೋಗದಲ್ಲಿ ವಿಷಯಜ್ಞಾನವನ್ನೇ ಹೊಂದಿರದ ವ್ಯಕ್ತಿ ಅದೆಷ್ಟು ಸಮರ್ಥನಾಗಿ ಆ ಕಾರ್ಯವನ್ನು ನೆರವೇರಿಸಿಯಾನು? ಹಾಗೇ ತನ್ನ ಜವಾಬ್ದಾರಿಯನ್ನು ಅರಿತು ಕಾರ್ಯವನ್ನು ನಿರ್ವಹಿಸುವ ಮನಃಸ್ಥಿತಿಯು ಅವನಲ್ಲಿ ಇರುವುದಿಲ್ಲ. ಏಕೆಂದರೆ ಅಂಥ ಮೂಲ ಶಿಕ್ಷಣವನ್ನು ಕೊಡುವಲ್ಲಿಯೇ ಇಂದು ಕೊರತೆ ಉಂಟಾಗಿದೆ. ಸಮಾಜ ಅತಿ ವೇಗವಾಗಿ ಸಾಗುವುದು ಹೇಗೆ ಎಂದೇ ಯೋಚಿಸುತ್ತಿದೆ. ಸಾಗುತ್ತಿರುವುದೆತ್ತ ಎನ್ನುವುದೇ ಗೊತ್ತಿಲ್ಲ. ತಾನು ಮುನ್ನಡೆಯುತ್ತಿದ್ದೇನೆ ಎಂಬ ಭ್ರಮೆಯಲ್ಲಿದೆ. ಹಿನ್ನಡೆಯ ಕಲ್ಪನೆಯೇ ಇಲ್ಲ. ಅಂಥ ವಾಸ್ತವಿಕತೆಯನ್ನು ನೆನಪಿಸಿ ಹಿನ್ನಡೆಯನ್ನು ನಿಯಂತ್ರಿಸುವ ಸಾಮರ್ಥ್ಯ ಇರುವುದು ಯೋಗ್ಯವಾದ ಶಿಕ್ಷಣಕ್ಕೆ ಮಾತ್ರ.

ಇಂದು ಯಾವುದೇ ವಿಷಯದ ಜ್ಞಾನವನ್ನು ಪಡೆಯುವ ಕ್ರಿಯೆಯನ್ನು ತಪಸ್ಸಿನಂತೆ ಆಚರಿಸುವ ವ್ಯವಧಾನ ಯಾರಲ್ಲಿಯೂ ಕಂಡುಬರುತ್ತಿಲ್ಲ. ನಿಜವಾದ ಅಧ್ಯಯನದಲ್ಲಿ ಆಸಕ್ತಿಯೇ ಉಂಟಾಗುತ್ತಿಲ್ಲ. ಆಸಕ್ತಿಯುಳ್ಳ ವ್ಯಕ್ತಿಗಳಿಗೆ ಸೂಕ್ತ ಅವಕಾಶವಿಲ್ಲ. ಪ್ರಾಯಶಃ

ಎಲ್ಲರಿಗೂ ತಾವು ಶೀಘ್ರಾತಿಶೀಘ್ರದಲ್ಲಿ ಏನನ್ನಾದರೂ ಓದಿ, ಹೇಗಾದರೂ ಉದ್ಯೋಗ ಸಂಪಾದಿಸಿ ಹಣ ಗಳಿಸುವುದೇ ಗುರಿಯಾಗಿದೆ. ಅಂದರೆ ಶಿಕ್ಷಣದ ಮೂಲ ಉದ್ದೇಶವೇ ಹಣಗಳಿಸುವ ಉದ್ಯೋಗ ಎಂಬಂತಾಗಿದೆ. ತಾನು ಭ್ರಷ್ಟಾಚಾರಿಯಾಗಲು ಈ ಸಮಾಜವೇ ಕಾರಣ ಎಂಬುದಾಗಿ ಎಲ್ಲರೂ ಸಮಾಜವನ್ನೇ ತೋರಿಸಿ, ಅದೇ ಹಾಗಿರುವಾಗ ಅದರಲ್ಲಿ ನಾನು ಬೇರೆಯಾಗಿರಲು ಹೇಗೆ ಸಾಧ್ಯ? ಎಂದು ಪ್ರಶ್ನಿಸುವುದನ್ನು ಬಿಟ್ಟು ಪ್ರತಿಯೊಬ್ಬನೂ ತನ್ನನ್ನು ತಾನು ಸರಿಪಡಿಸಿಕೊಳ್ಳುವ ಕಾರ್ಯದಲ್ಲಿ ಮಗ್ನನಾಗುವಿಕೆ ಕಾಣುವುದಿಲ್ಲ. ಆದರೆ ಇದು ಕೇವಲ ಕೆಲವು ಜನರಿಂದ ಮಾತ್ರ ಸಾಧ್ಯವಿಲ್ಲ ಎಂಬ ಮಾತನ್ನು ಒಪ್ಪಲೇಬೇಕು. ಎಲ್ಲರೂ ಯೋಗ್ಯವಾದ ಬದುಕಿನ ಕುರಿತು ವಿವೇಚಿಸುವಂತೆ ಮಾಡುವ ಶಿಕ್ಷಣ ಹುಟ್ಟಿನಿಂದಲೇ ದೊರೆತರೆ ಸಮಾಜವನ್ನು ಹೊಣೆ ಮಾಡುವ ಬುದ್ಧಿ ಹೋದೀತು.

ಗುರು ಶಿಷ್ಯರಲ್ಲಿ ಆತ್ಮೀಯತೆಯಿಂದ ಕೂಡಿದ ಗೌರವಾದರಗಳು ಕಾಣಸಿಗುವುದೇ ಅಪರೂಪವಾಗಿದೆ. ಅಧ್ಯಾಪಕ ಪಾಠ ಮಾಡುವುದು ತನ್ನ ಅನಿವಾರ್ಯ ಉದ್ಯೋಗವೆಂದು ತಿಳಿದರೆ, ವಿದ್ಯಾರ್ಥಿಗಳು ಅದು ತಮ್ಮ ಮುಂದಿನ ಮುಕ್ಕಾಲು ಜೀವನದ ಸಾರ್ಥಕತೆಗೆ ಸಂಬಂಧಿಸಿದ್ದು ಎಂದು ಭಾವಿಸದೇ ಓದುತ್ತಿದ್ದಾರೆ. ಅಧ್ಯಾಪಕ ಸರಿಯಾಗಿಲ್ಲದ ಕಾರಣದಿಂದ ವಿದ್ಯಾರ್ಥಿ ಸರಿಯಾಗಿಲ್ಲ; ವಿದ್ಯಾರ್ಥಿಯಲ್ಲಿ ಸನ್ನಡತೆಯಿಲ್ಲದ ಕಾರಣದಿಂದ ಅಧ್ಯಾಪಕ ಸರಿಯಾಗಿ ಪಾಠ ಮಾಡುವುದಿಲ್ಲ ಎಂದು ಅನ್ಯೋನ್ಯಾರೋಪ ಮಾಡುವುದು ಯುಕ್ತವಲ್ಲ. ಇಬ್ಬರೂ ತಮ್ಮ ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸುವುದು ಅತ್ಯವಶ್ಯಕವಾಗಿದೆ.

ಧರ್ಮಬುದ್ಧಿ ಜಾಗೃತವಾಗಲು ಶಿಕ್ಷಣ ಏಕೆ ಬೇಕು ಎಂಬ ಪ್ರಶ್ನೆ ಸಹಜವಾಗಿ ಉದ್ಭವಿಸುತ್ತದೆ. ಪ್ರತಿಯೊಬ್ಬನೂ ಒಂದು ವಯಸ್ಸನ್ನು ದಾಟಿದ ನಂತರ ಧರ್ಮ ಎನ್ನುವುದನ್ನು ಜೀವನದಲ್ಲಿ ರೂಢಿಸಿಕೊಳ್ಳಲು ಸಾಧ್ಯವಿಲ್ಲ. ಧರ್ಮ-ಅಧರ್ಮಗಳ ವಿವೇಚನೆಯಿದ್ದರೂ ಪ್ರವೃತ್ತಿ-ನಿವೃತ್ತಿಗಳನ್ನು ಹೊಂದಲು ಸಾಧ್ಯವಿಲ್ಲ ಎಂಬುದಕ್ಕೆ ದುರ್ಯೋಧನ ಉತ್ತಮ ಉದಾಹರಣೆಯಾಗಿದ್ದಾನೆ. ಆದ್ದರಿಂದ ಪ್ರಾಥಮಿಕ ಹಂತದಲ್ಲಿಯೇ ಧರ್ಮಪ್ರಜ್ಞೆಯನ್ನು ಬೆಳೆಸಿದರೆ "ಧರ್ಮ" ಎಂಬ ಪದ ಕೇವಲ ಉಪನ್ಯಾಸದಲ್ಲಿ ಕೇಳಿಬರದೆ, ಜೀವನದಲ್ಲಿ ನಿಜವಾದ ಅರ್ಥವನ್ನು ಕಾಣಬಹುದಾಗಿದೆ. ಇದು ಈ ಹಂತದಲ್ಲಿ ಸಾಧ್ಯವಿಲ್ಲದಿದ್ದರೂ ಮುಂಬರುವ ಪೀಳಿಗೆಯಲ್ಲಿ ಬೆಳೆಸಲು ಸಾಧ್ಯವಿದೆ. ತನ್ನ ಮಕ್ಕಳು ಬದುಕಲು ಹಣವನ್ನು ಕೂಡಿಡುವ ಬದಲು ಅವರು ತಮ್ಮ ಜೀವನದಲ್ಲಿ ಸ್ವಸಾಮರ್ಥ್ಯದಿಂದ, ನೈತಿಕವಾಗಿ ಜೀವಿಸಲು ಸಮರ್ಥರಾಗುವಂಥ ಶಿಕ್ಷಣವನ್ನೇ ನೀಡಬೇಕು. ನಾವು ಧರ್ಮವಂತರಲ್ಲದಿದ್ದರೂ ಕನಿಷ್ಠಪಕ್ಷದಲ್ಲಿ ಧರ್ಮವಂತರನ್ನು ಗೌರವಿಸುವ ಗುಣವನ್ನು ಬೆಳೆಸಿಕೊಂಡು ಮುಂದಿನವರಿಗೆ ನಿಜವಾದ ಸುಖವನ್ನು ನೀಡಲು ಮುಂದಾಗಬೇಕು.

ಸ್ವಾಮಿ ವಿವೇಕಾನಂದರು ಹೇಳುವಂತೆ ಉಕ್ಕಿನ ನರಗಳುಳ್ಳ ವಿವೇಕಶೀಲರಾದ ವಿದ್ಯಾವಂತರು ನಮಗೆ ಇಂದು ಬೇಕು. ಕೇವಲ ಭೌತಿಕ ಸುಖಕ್ಕಾಗಿ, ಸ್ವಾರ್ಥ ಸಂತೋಷಕ್ಕಾಗಿ ಚಿಂತಿಸುವ ಜನರಲ್ಲ. ಹೃದಯ ವೈಶಾಲ್ಯವನ್ನುಂಟುಮಾಡುವ ಸಾಮರ್ಥ್ಯವಿರುವಂಥ ನೈತಿಕ ಶಿಕ್ಷಣದ ಅತೀವ ಅವಶ್ಯಕತೆ ಇದೆ. ಅಂಥ ಶಿಕ್ಷಣದಿಂದ ಮಾತ್ರ ನಿಜವಾದ ಪ್ರಗತಿ ಸಾಧ್ಯವಿದೆ.

❋ ❋ ❋

# ಮಂತ್ರಿಪದವಿ, ಪ್ರತಿಷ್ಠೆಗಳೇ ರಾಜಕಾರಣಿಗಳ ಆಶಯ

• ಡಿ. ಮೆಹಬೂಬ ಅಲಿ

ಸ್ವಾತಂತ್ರ್ಯಾನಂತರ ಪ್ರಧಾನ ಮಂತ್ರಿಗಳಾದ ಪಂಡಿತ ಜವಾಹರಲಾಲ್ ನೆಹರೂ, ಗುಲ್ಜಾರಿಲಾಲ್ ನಂದಾ, ಲಾಲ್ ಬಹಾದ್ದೂರ್ ಶಾಸ್ತ್ರಿ, ಶ್ರೀಮತಿ ಇಂದಿರಾ ಗಾಂಧಿ, ಮೊರಾರ್ಜಿ ದೇಸಾಯಿ, ರಾಷ್ಟ್ರಪತಿಗಳಾದ ಡಾ॥ ರಾಜೇಂದ್ರ ಪ್ರಸಾದ್, ಡಾ॥ ಎಸ್. ರಾಧಾಕೃಷ್ಣನ್, ಡಾ॥ ಜಾಕೀರ್ ಹುಸೇನ್‌ರಂತಹ ರಾಜಕಾರಣಿಗಳು ಮತ್ತು ಮಹಾತ್ಮಾ ಗಾಂಧಿಯವರು ಮಾಡಿದ ಸುಧಾರಣೆಗಳು, ಅಭಿವೃದ್ಧಿ ಹೊಂದುತ್ತಿರುವ ನಮ್ಮ ಭಾರತ ದೇಶದ ಬಗ್ಗೆ ಕಟ್ಟಿದ ಕನಸುಗಳನೇಕ. ಈ ರಾಜಕಾರಣಿಗಳ ಉದ್ದೇಶ ಕೇವಲ ದೇಶೋದ್ಧಾರವಾಗಿತ್ತು. ಈಗಿನ ಸ್ಥಿತಿಯಲ್ಲಿ ಒಂದೆಡೆ ದೇಶೋದ್ಧಾರದ ಆಶಾಕಿರಣವಿದ್ದರೆ ಇನ್ನೊಂದೆಡೆ ದೇಶ ಹಾಳಾಗುವ ಭಯ.

ಈಗಿನ ನಮ್ಮ ರಾಜಕಾರಣಿಗಳಿಗೆ ಮಂತ್ರಿ ಪದವಿಯಿಂದ ತಮ್ಮ ಪ್ರತಿಷ್ಠೆ ಗೌರವ, ಘನತೆ ಸಾಧಿಸುವುದೇ ಮೂಲೋದ್ದೇಶವಾಗಿದೆ. ಪಕ್ಷಪಾತಗಳ ಕಚ್ಚಾಟವು ರಾರಾಜಿಸುತ್ತಿದೆ. ತಾವು ಪ್ರಧಾನಿಯಾಗಿ, ಮುಖ್ಯ ಮಂತ್ರಿಯಾಗಿ ಏನು ಸಾಧಿಸಬೇಕು ಎಂಬ ದೇಶದ ಚಿಂತೆ ಬಿಟ್ಟು ತಾವು ಮಂತ್ರಿ ಪದವಿ ಗಳಿಸುವುದೇ ಚಿಂತೆಯಾಗಿರುತ್ತದೆ. ಇವರ ಭ್ರಷ್ಟಾಚಾರ ಮತ್ತು ಲಂಚಗುಳಿತನವನ್ನು ಧಿಕ್ಕರಿಸುವವರೇ ಇಲ್ಲದಂತಾಗಿದೆ. ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲ ಎನ್ನುವಂತೆ ಸರ್ಕಾರಿ ಉದ್ಯೋಗಿಗಳು ಲಂಚಗುಳಿತನದಲ್ಲಿ ಮೊದಲನೆಯ ಸ್ಥಾನದಲ್ಲಿದ್ದಾರೆ. ಮದ್ಯಪಾನಕ್ಕೆ ಪ್ರೋತ್ಸಾಹಿಸುತ್ತಿರುವ ಈ ರಾಜಕಾರಣಿಗಳಿಗೆ 'ಥೂ'ಕಾರ ಹಾಕುವವರೇ ಇಲ್ಲದಂತಾಗಿದೆ.

ನಮ್ಮ ದೇಶದಲ್ಲಿ ನಿರುದ್ಯೋಗ ತಾಂಡವವಾಡುತ್ತಿದೆ. ಇಂತಹ ಲಂಚಕೋರರು ರಾರಾಜಿಸುತ್ತಿರುವಾಗ ನಿರುದ್ಯೋಗ ಸಮಸ್ಯೆ ಹೇಗೆ ದೂರವಾಗುತ್ತದೆ? ಬಡವರಂತೂ ತಮ್ಮ ಬಡತನದಿಂದ ಸೋತು ಹೋಗಿದ್ದಾರೆ. ಕಷ್ಟಪಟ್ಟು ಓದಿಸುವುದರಿಂದ ಉದ್ಯೋಗ ಸಿಗುವುದಿಲ್ಲವೆಂದು ತಮ್ಮ ಮಕ್ಕಳನ್ನು ನಿರಕ್ಷರಸ್ಥರನ್ನಾಗಿ ಮಾಡುತ್ತಾರೆ. ಇದರಿಂದ ನಮ್ಮ ದೇಶದಲ್ಲಿ ನಿರಕ್ಷರತೆ ಎದ್ದು ನಿಂತಿದೆ.

ಮದ್ಯಪಾನದಿಂದ ಅನೇಕ ಜೀವನಗಳು ಮಣ್ಣು ಪಾಲಾಗುತ್ತಿವೆ. ಅನೇಕ ಹೆಣ್ಣು ಮಕ್ಕಳ ಬಾಳು ಹಾಳಾಗುತ್ತಿದೆ. ಅನೇಕ ಗಂಡಸರು ಈ ಪಿಡುಗಿಗೆ ಬಲಿಯಾಗುತ್ತಿದ್ದಾರೆ.

ಇದಕ್ಕಾಗಿ ಯಾವುದೇ ರೀತಿಯ ಕಾನೂನುಗಳನ್ನು ಜಾರಿಗೆ ತರದೆ ತಮ್ಮದೇ ನಶೆಯಲ್ಲಿ ಮುಳುಗಿರುವ ನಾಚಿಕೆಗೇಡಿ ರಾಜಕಾರಣಿಗಳನ್ನು ನಮ್ಮಂತಹವರೇ ಮತ್ತೆ ಮತ್ತೆ ಚುನಾಯಿಸುತ್ತಾರೆ.

ಚುನಾವಣೆಗಾಗಿ ಕೋಟ್ಯಾಂತರ ಹಣ ನಷ್ಟ ಮಾಡೋದು, ಚುನಾವಣೆ ಬಂದಾಗ ವಿಧೇಯರಾಗಿ, ಚುನಾಯಿತರಾದಾಗ ರಾಕ್ಷಸರಾಗಿ ಮೆರೆಯುವ ನಮ್ಮ ರಾಜಕಾರಣಿಗಳು ನಮ್ಮ ಸ್ವತಂತ್ರ ರಾಷ್ಟ್ರವನ್ನು ಎಷ್ಟು ದುರುಪಯೋಗಿಸಿಕೊಳ್ಳುತ್ತಿದ್ದಾರಲ್ಲ ಅಂತನ್ನೋದು ದೇಶಾಭಿಮಾನಿಗಳ ಸಂಕಟ.

ನಮ್ಮ ಪಿತಾಮಹ ಗಾಂಧೀಜಿಯವರು, ಸ್ತ್ರೀ-ಪುರುಷರ ಸಮಾನತೆಗಾಗಿ ಶ್ರಮಿಸಿದ್ದರು. ಅಂತೆಯೇ ಇಂದಿನ ಈ ದಿನದಲ್ಲಿ ಸಮಾನತೆಯನ್ನು ನಾವು ಹೇರಳವಾಗಿ ಕಾಣಬಹುದು. ಅದಕ್ಕೆ ತಕ್ಕಹಾಗೆ ಸ್ತ್ರೀ ಶೋಷಣೆಯನ್ನೂ ಕಾಣಬಹುದು. ಅನೇಕ ಹೆಣ್ಣುಮಕ್ಕಳು ವರದಕ್ಷಿಣೆ ಪೀಡೆಗೆ ಬಲಿಯಾಗುತ್ತಿದ್ದಾರೆ. ಇದಕ್ಕೆ ಯಾವ ಕಾನೂನನ್ನೂ ಕಡ್ಡಾಯವಾಗಿ ಜಾರಿಗೆ ತಂದಿಲ್ಲ. ಇನ್ನು ಕೆಲವರು ಮಾನಹಾನಿಯಿಂದ ಸಾವಿಗೀಡಾಗುತ್ತಿದ್ದಾರೆ. ಇದಕ್ಕೆ ನಮ್ಮ ಸರ್ಕಾರವು ಯಾವ ಕ್ರಮವನ್ನೂ ತೆಗೆದುಕೊಳ್ಳುತ್ತಿಲ್ಲ. ಹಿಂದಿನ ಕಾಲದಲ್ಲಿ ಸ್ತ್ರೀಯರನ್ನು ದೇವಿಯಂತೆ ಕಾಣುತ್ತಿದ್ದರು. ಆದರೆ ಈಗ ಸ್ತ್ರೀ ಎಂದರೆ ಮನರಂಜನೆಗಾಗಿ ಉಪಯೋಗಿಸುವ ಸಾಧನವಾಗಿದ್ದಾಳೆ.

ಇದೇ ರೀತಿ ನಮ್ಮ ದೇಶದಲ್ಲಿ ಭ್ರಷ್ಟಾಚಾರ ನಡೆಯುತ್ತ ಇದ್ದರೆ ಸ್ವತಂತ್ರಳಾದ ನಮ್ಮ ಭಾರತಾಂಬೆಯು ಎಲ್ಲಿ ಮತ್ತೊಮ್ಮೆ ಪರಕೀಯರಲ್ಲಿ ಬಂಧಿಯಾಗುತ್ತಾಳೋ ಎಂಬ ಭಯ.

❋ ❋ ❋

# ಸರ್ವಾಧಿಕಾರಿಯಾದ ಶಾಸಕ

• ಸಿದ್ದಪ್ಪ ಜಮ್ಮ್ಯಾಳ

ಮಹಾತ್ಮಾ ಗಾಂಧೀಜಿಯವರ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿರುವವರು ದುರ್ಲಭವಾಗಿಯೂ ಇರಬಹುದಾದರೂ ಆ ಬಗ್ಗೆ ಕೇಳಿರದ, ಓದಿರದವರು ನಮ್ಮ ದೇಶದಲ್ಲಿ ಇರಲಿಕ್ಕಿಲ್ಲವೆಂದು ಭಾವಿಸಬಹುದೇನೋ! ಪರಕೀಯರಾದ ಆಂಗ್ಲರು ವ್ಯಾಪಾರಕ್ಕಾಗಿ ನಮ್ಮ ದೇಶಕ್ಕೆ ಬಂದು, ಇಲ್ಲಿ ತಾಂಡವವಾಡುತ್ತಿದ್ದ ಅರಾಜಕತೆ ಮತ್ತು ಬಹುರಾಜಕತೆಗಳ ದುರ್ಲಾಭ ಪಡೆದು, ಸಂಪೂರ್ಣ ದೇಶವನ್ನು ಕಬಳಿಸಿ, ತಮ್ಮ ಹತೋಟಿಯಲ್ಲಿಡಲು ಸಮರ್ಥರಾದುದು ಗತ ಕಾಲದ ಚರಿತ್ರೆ. ಇವರು ದೇಶವನ್ನು ದೋಚಿದರು, ಜನರನ್ನು ದಾಸ್ಯದಲ್ಲಿಟ್ಟರೆಂಬುದು ಸತ್ಯವಾದರೂ, ಜೊತೆಗೆ ಕೆಲವೊಂದು ಸತ್ಕಾರ್ಯಗಳನ್ನು (ಸ್ವಾರ್ಥಕ್ಕಾಗಿ) ಮಾಡಿರುವರೆಂಬುದೂ ಸತ್ಯ. ಆ ಪೈಕಿ ಅವರು ನಮ್ಮ ದೇಶಕ್ಕೊಂದು ಮಾದರಿ ಆಡಳಿತ ವ್ಯವಸ್ಥೆಯನ್ನು ಬಿಟ್ಟು ಹೋಗಿರುವುದು ಯಾರೂ ಅಲ್ಲಗಳೆಯದ ಸತ್ಯ. ಗಾಂಧೀಜಿಯವರು ಆಂಗ್ಲರ ಆಡಳಿತ ವ್ಯವಸ್ಥೆಯ ವಿರುದ್ಧ ಅಸಹಕಾರ ಚಳುವಳಿ ನಡೆಸಿರಲಿಲ್ಲ. ಬದಲಾಗಿ ಅದರ ಮೂಲ ಪುರುಷರಾದ ಪರಕೀಯರು ಆಡಳಿತ ನಡೆಸುವ ವಿರುದ್ಧ ಚಳುವಳಿ ನಡೆಸಿದ್ದರು. ಅಂತೂ ಹಲವು ದಶಕಗಳ ದೀರ್ಘ ಹೋರಾಟದ ಬಳಿಕ ನಮಗೆ ನಮ್ಮನ್ನು ನಾವೇ ಆಳುವ, ನಮ್ಮ ಭವಿಷ್ಯ ನಾವೇ ನಿರ್ಧರಿಸುವ ಸುಯೋಗವೆಂಬಂತೆ ಸ್ವಾತಂತ್ರ್ಯ ಲಭಿಸಿತು.

ಸ್ವಾತಂತ್ರ್ಯ ಪಡೆದ ಬಳಿಕ ನಾವು ಅಂದಿನ ಬ್ರಿಟಿಷರ ಆಡಳಿತ ವ್ಯವಸ್ಥೆಯನ್ನೇ ಸರ್ವೇ ಸಾಧಾರಣವಾಗಿ ಅನುಸರಿಸಿದೆವು. ಇದಾಗಿ ೫೦ ವರ್ಷಗಳು ಸಂದಿತು. ಈ ೫೦ ವರ್ಷಗಳ ಕಾಲಾವಧಿಯ ಆಡಳಿತದ ಮೇಲೆ ಒಂದಾವರ್ತಿ ಹಿನ್ನೋಟ ಹರಿಸಿದರೆ, ಇದು ಏಕೆ ಹೀಗಾಯಿತಪ್ಪಾ ! ಇನ್ನೂ ಏನೆಲ್ಲ ಆಗಲಿಕ್ಕಿದೆಯೋ ! ಎಂಬುದಾಗಿ ತೋಚೀತು. ಅಲ್ಲದೆ ಇಂತಹ ಮಾತನ್ನು ಉದ್ಗರಿಸುವ ಹಳಬರೂ ಆಗಾಗ ಧಾರಾಳವಾಗಿ ಸಿಗುತ್ತಾರೆ.

ಸ್ವಾತಂತ್ರ್ಯಾನಂತರ ನಾವು ಬ್ರಿಟಿಷ್ ಪ್ರಜಾಪ್ರಭುತ್ವ ಕ್ರಮವನ್ನೇ ಅಂಗೀಕರಿಸಿದೆವು. ಅದರಲ್ಲಿ ಆಡಳಿತಾರೂಢ ಪಕ್ಷವೇ ಬೇರೆ, ಆಡಳಿತ ನಡೆಸುವ ಅಧಿಕಾರಿಗಳೇ ಬೇರೆ. ಆಡಳಿತಾರೂಢ ಪಕ್ಷದ ಧ್ಯೇಯ, ಧೋರಣೆ, ಹುಕುಂಗಳನ್ನು ಯಥಾವತ್ ಅನುಷ್ಠಾನಗೊಳಿಸುವುದು ಮಾತ್ರ ಆಡಳಿತ ನಡೆಸುವ ಅಧಿಕಾರಿಗಳ ಕೆಲಸವಾಗಿತ್ತು.

ಕ್ರಮೇಣ ಅರ್ಥವ್ಯವಸ್ಥೆಯ ಸುಧಾರಣೆಗಾಗಿ ನಾವು ಸೋವಿಯೆತ್ ಯೂನಿಯನ್‌ನ ಹಿಂದೆ ಹೋದೆವು. ಅವರ ಕಮ್ಯೂನಿಸ್ಟ್ ಸಿದ್ಧಾಂತಕ್ಕೂ ಬ್ರಿಟಿಷ್ ಮಾದರಿಗೂ ತಾಳಮೇಳ

ಕೂಡಿ ಬರಲಿಲ್ಲ. ಹೆಜ್ಜೆ-ಹೆಜ್ಜೆಗೂ ನಾವೇ ರಚಿಸಿಕೊಂಡ ಸಂವಿಧಾನ ಅಡ್ಡ ಬರತೊಡಗಿತು. ಇದು ನ್ಯಾಯಾಲಯದಲ್ಲಿ ವಿದಿತವಾಗುತ್ತಿತ್ತು. ಈ ಸಮಾಜವಾದದ ಮತ್ತು ಬ್ರಿಟಿಷ್ ಮಾದರಿಯ ಆಡಳಿತ ವ್ಯವಸ್ಥೆಯನ್ನು ಸರಿದೂಗಿಸುವ ಪ್ರಯತ್ನವಾಗಿ ಅಧಿಕಾರಾರೂಢವಾಗಿದ್ದ ಕಾಂಗ್ರೆಸ್ ಪಕ್ಷ ತಮ್ಮ ಸದಸ್ಯ ಬಲದಿಂದ ಮನ ಬಂದಂತೆ ಸಂವಿಧಾನವನ್ನು ತಿದ್ದುಪಡಿಗೊಳಿಸುತ್ತ ಬಂದಿತು. ಆಡಳಿತ ವ್ಯವಸ್ಥೆಯ ಮತ್ತು ಆಡಳಿತ ಪಕ್ಷಗಳ ನಡುವೆ ಇದ್ದ ಅಂತರವನ್ನು ನಿವಾರಿಸಲು ಕಮ್ಯೂನಿಸ್ಟ್ ರಾಜ್ಯಗಳಂತೆಯೇ ಆಡಳಿತ ಪಕ್ಷದ ಪ್ರತಿನಿಧಿಯನ್ನೇ ಆತನ ಕ್ಷೇತ್ರದ ಆಡಳಿತ ವ್ಯವಸ್ಥೆಯ ಸರ್ವಾಧಿಕಾರಿಯಾಗಿಸಿಕೊಂಡಿತು. ಈ ವ್ಯವಸ್ಥೆಯೇ ನಮ್ಮ ಈಗಿನ ಲಂಚಾವತಾರದ ಮೂಲ. ಈ ವ್ಯವಸ್ಥೆಯಲ್ಲಿ ಕ್ಷೇತ್ರದ M. L. A. ಸರ್ವಾಧಿಕಾರಿಯಾದ. ಪ್ರತಿಯೊಂದು ಕೆಲಸಕ್ಕೂ ಆತನ ವಶೀಲಿ ಮುಖ್ಯವಾಯಿತು. ಆತನ ತಾಳಕ್ಕೆ ಕುಣಿಯದವರನ್ನು ವ್ಯಥಾ ಪೀಡಿಸುವುದು ಜಾಯಮಾನವಾಗಿ ಪ್ರಾರಂಭವಾಯಿತು. ದ್ವೇಷ ಸಾಧನೆಯೆಂಬುದು ಆಡಳಿತದ ಮೂಲ ಮಂತ್ರವಾಯಿತು. ಲಂಚ ಸ್ವೀಕಾರ 'ರಾಷ್ಟ್ರೀಕರಣ'ವೆಂಬಂತಾಯಿತು. ಪೋಲೀಸರಿಂದ ಹಿಡಿದು ರೆವಿನ್ಯೂ ಅಧಿಕಾರಿಗಳೇ ಮೊದಲಾದ ಆಡಳಿತದ ಪ್ರತಿಯೊಂದು ಅಂಗವು ಕ್ಷೇತ್ರದ ಪ್ರತಿನಿಧಿಯ ಕೈಗೊಂಬೆಯಂತಾಯ್ತು. ಆತ ತನಗೆ ಬೇಕಾದಂತೆ ಕಾನೂನುಗಳನ್ನು ತಿರುಚಿ ತನಗೆ ಬೇಕಾದವರಿಗೆ ಉಪಕಾರ ಮಾಡಲು ಅಧಿಕಾರಿಗಳಿಗೆ ಮುಖತಃ ಅಥವಾ ಲಿಖಿತ ಆಜ್ಞೆಮಾಡತೊಡಗಿದ. ಇದನ್ನು ಧಿಕ್ಕರಿಸುವ ಧೈರ್ಯ-ಸ್ಥೈರ್ಯ ಯಾವ ಅಧಿಕಾರಿಗೂ ಇಲ್ಲವಾಯಿತು. ಏಕೆಂದರೆ ಪ್ರತಿ ಅಧಿಕಾರಿಯ ಜುಟ್ಟೂ-ಗುಟ್ಟೂ ಆತನ ಕೈಯಲ್ಲಿರುತ್ತಿತ್ತು.

ಇದರ ಪರಿಣಾಮವಾಗಿ ಒಂದೇ ಒಂದು ಪತ್ರದಲ್ಲಿ ಒಬ್ಬ ನಾಗರಿಕನಿಗಾಗಬೇಕಾದ ಅವನ ಹಕ್ಕಿನ ಕೆಲಸಕ್ಕೂ ಆತ ಸರ್ಕಾರಿ ಕಛೇರಿಗಳಲ್ಲಿ ಮೇಜಿನಿಂದ ಮೇಜಿಗೆ ಅಲೆಯುವ ಮಟ್ಟಕ್ಕೆ ಒಯ್ಯಿತು. ಲಂಚಾವತಾರ ಸರ್ವಾಧಿಕಾರಿಯಾಯಿತು! ಪ್ರತಿನಿಧಿಯ ಕೃಪಾಕಟಾಕ್ಷವೇ ಅಂತಿಮವಾಯಿತು. ಅಯ್ಯೋ ದೇವರೇ! ಈ ದೇಶದಲ್ಲಿ, ಈ ರಾಜ್ಯದಲ್ಲಿ ಸರಕಾರವೇ ಇಲ್ಲವೆ? ಎಂದು ಉದ್ಗಾರ ತೆಗೆಯುವ ಮಟ್ಟಕ್ಕೆ ತಲುಪಿತು. ಈ ವ್ಯವಸ್ಥೆಯಲ್ಲಿ ಬಾಯಿ ಮಾತಿನ, ಫೋನು ಆಜ್ಞೆಯ ಅನುಭವ ಯಾವ ಒಬ್ಬ ವ್ಯಕ್ತಿಗೂ ಒಂದಲ್ಲ ಒಂದು ಸಲ ಆಗಿಲ್ಲದೆ ಇರಲಾರದು.

ಮೊತ್ತ ಮೊದಲಿಗೆ ನೀವೊಂದು ಅರ್ಜಿ ಹಿಡಿದು ಯಾವುದಾದರೂ ಸರ್ಕಾರಿ ಕಛೇರಿಗೆ ಹೋದರೆನ್ನಿ. ಅದನ್ನು ಅಲ್ಲಿ ಸಂಬಂಧಿಸಿದವನಿಗೆ ಕೊಟ್ಟು, ಆತನಿಂದ ಸ್ವೀಕೃತಿ ರಶೀದಿ ಕೇಳಿದರೆ ಅದನ್ನು ಕೊಡುವವರೇ ಅಥವಾ ಕೊಡಿಸುವವರೇ ಅದನ್ನು ನಿರಾಕರಿಸುತ್ತಾರೆ. ನಿಮ್ಮ ಅಸಹಾಯಕತೆ, ದುರಾದೃಷ್ಟವನ್ನು ಹಳಿಯುತ್ತ ಮರಳಬೇಕು. ಅಥವಾ ಹೊರಗೆ ಬಂದು ಅರ್ಜಿಯನ್ನು ರಿಜಿಸ್ಟರ್ಡ್ ಅಂಚೆ ಮೂಲಕ ರಶೀದಿ ಬರುವಂತೆ ಸ್ವಲ್ಪ ಖರ್ಚು ಮಾಡಿ ಕಳುಹಿಸಬೇಕು. ಇದು ಬ್ರಿಟಿಷ್ ಆಡಳಿತಕ್ಕೂ ಈಗಿನ ಆಡಳಿತಕ್ಕೂ ಇರುವ ವ್ಯತ್ಯಾಸ. ಇದುವೇ ನಮ್ಮ ಆಡಳಿತದ ಶಿಥಿಲತೆಗೆ ಮುಖ್ಯ ಕಾರಣ. ಅರ್ಜಿ ಪಡೆದು ರಶೀದಿ ಕೊಡುವ ಧೈರ್ಯ ಆ ಅಧಿಕಾರಿಗಿಲ್ಲ. ಒಕೆಂದರೆ ಈ ಅರ್ಜಿಯನ್ನು ಹೇಗೆ ಖುಲಾಸೆಗೊಳಿಸಬೇಕು, ಅರ್ಜಿ ಬಂದದ್ದನ್ನು ಒಪ್ಪಿಕೋಬೇಕೋ, ಒಪ್ಪಿಕೊಳ್ಳ ಬಾರದೋ, ಇದರಿಂದ ತಾನೇನಾದರೂ ಸಿಕ್ಕಿ ಬೀಳುವ ಸಾಧ್ಯತೆ ಇದೆಯೆ, M. L. A. ಗಳು ಇದಕ್ಕೆ ಏನು ಹೇಳುತ್ತಾರೆ, ಪಾರ್ಟಿ ಕೋರ್ಟಿಗೆ ಹೋಗಬಹುದೋ ಇತ್ಯಾದಿ ಅನೇಕಾನೇಕ ಯೋಚನೆಗಳು

ಆತನನ್ನು ಕಾಡುತ್ತವೆ. ರಶೀದಿ ಕೊಡದಿದ್ದರೆ ಅಂತಹ ಸಂದರ್ಭಗಳಲ್ಲಿ ಅದನ್ನು ಹರಿದು ಹಾಕಿ ಕೈ ತೊಳೆದುಕೊಳ್ಳಬಹುದಲ್ಲ ! ಇನ್ನೂ ಕೆಲವು ಕಾಯಿದೆಗಳಲ್ಲಿ ಒಂದು ನಿಯಮವಿರುತ್ತದೆ. ಅರ್ಜಿ ತಲುಪಿ ಇಂತಿಷ್ಟು ದಿನಗಳೊಂದಿಗೆ ಆತನಿಗೆ ಏನೊಂದೂ ಉತ್ತರ ಕೊಡದಿದ್ದಲ್ಲಿ ಕೇಳಿದ್ದಕ್ಕೆ ಸರ್ಕಾರ ಒಪ್ಪಿದೆಯೆಂದೇ ಪರಿಗಣಿಸಬೇಕೆಂದೂ ಇರುತ್ತದೆ. ಇದೂ ರಶೀದಿ ಕೊಡದಿರಲು ಒಂದು ಕಾರಣ.

ಇದು ಈಗಿನ ಸರ್ಕಾರಿ ಕಛೇರಿಗಳಲ್ಲಿ ನಡೆಯುವ ಮಾಮೂಲಿ ವಿಷಯ ಇಲ್ಲಿಂದಲೇ 'ಅ'ಸರಕಾರದ ಆದಿ. ಇದನ್ನು ಸರಿಪಡಿಸದೇ ಯಾರೂ ಏನೂ ಮಾಡುವಂತಿಲ್ಲ.

❊ ❊ ❊

# ಇದು ಭಾರತದಲ್ಲಿ ಮಾತ್ರ ಸಾಧ್ಯ !

• ಆರ್. ವಿ. ಕಟ್ಟಿಮನಿ, ತಡಕಲ್

"ಇಟ್ ಹ್ಯಾಪನ್ಸ್ ಓನ್ಲಿ ಇನ್ ಇಂಡಿಯಾ !"

ಇದು ಇತ್ತೀಚೆಗೆ ಬಿಡುಗಡೆಯಾದ ಹಿಂದಿ ಸಿನಿಮಾ ಹಾಡೊಂದರ ಅನುಪಲ್ಲವಿ. ಭಾರತದ, ಭಾರತೀಯತೆಯ ಗುಣಗಾನ ಮಾಡುವ ಈ ಹಾಡು ಜನಪ್ರಿಯವೂ ಆಯ್ತು.

ಈ ಅನುಪಲ್ಲವಿಯನ್ನು ಅನ್ವರ್ಥಗೊಳಿಸುವಂತಹ ಕೆಲವೊಂದು ವಿಶಿಷ್ಟ ಲಕ್ಷಣಗಳು- ಅಥವಾ ಅವುಗಳನ್ನು ಅವಲಕ್ಷಣಗಳೆಂದರೆ ಹೆಚ್ಚು ಸಮಂಜಸವಾದೀತೋ- ಭಾರತೀಯರಲ್ಲಿವೆ!

ಜಗತ್ತು ಬದಲಾಗಿದೆ. ಆಗುತ್ತಲೇ ಇದೆ. ಆದರೆ ಕಾಲಾನುಗುಣವಾಗಿ ಬದಲಾಗುತ್ತಿರುವ ಜಗತ್ತಿನೊಂದಿಗೆ ಬದಲಾಗಬೇಕೆನ್ನುವ ಭಾವನೆ ಭಾರತೀಯರಲ್ಲಿ ಮಾತ್ರ ಕಂಡುಬರುತ್ತಿಲ್ಲ. ಭಾರತೀಯರಲ್ಲಷ್ಟೇ ಕಂಡುಬರುವ ಕೆಲವು ವಿಶಿಷ್ಟ ಅವಲಕ್ಷಣಗಳು ವಂಶಪರಂಪರೆಯಾಗಿ, 'ರಾಷ್ಟ್ರೀಯ ಸ್ವತ್ತು' ಎನ್ನುವಂತೆ ತಲೆಮಾರಿನಿಂದ ತಲೆಮಾರಿಗೆ ಬಳುವಳಿಯಾಗಿ ಮುಂದುವರಿದುಕೊಂಡು ಬಂದಿವೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಇಲ್ಲಿಯವರೆಗೂ ಎಂಥದೇ ಬದಲಾವಣೆ ಕಂಡುಬಂದಿಲ್ಲ. ಇನ್ನು ಮುಂದಾದರೂ ಕಂಡುಬರುತ್ತದೆನ್ನುವ ಖಾತ್ರಿಯೂ ಇಲ್ಲ.

ಅಂಥ ಕೆಲವು ವಿಶಿಷ್ಟ ಭಾರತೀಯ ಅವಲಕ್ಷಣಗಳ ಬಗ್ಗೆ ಓದಿದ ನಂತರ ನೀವೂ ಒಪ್ಪಿಕೊಳ್ಳುತ್ತೀರಿ, "ಇಟ್ ಹ್ಯಾಪನ್ಸ್ ಓನ್ಲಿ ಇನ್ ಇಂಡಿಯಾ" ಎಂದು !

## ಕಾಲದ ಬೆಲೆ ಗೊತ್ತಿಲ್ಲದವರು

ಸಮಯ ಪಾಲನೆಯ ವಿಷಯದಲ್ಲಿ ಭಾರತೀಯರದೇ ಒಂದು ವೈಶಿಷ್ಟ್ಯ. ಐ.ಎಸ್. ಟಿ. (ಇಂಡಿಯನ್ ಸ್ಟ್ರೆಚಬಲ್ ಟೈಮ್) ಎನ್ನುವ ನುಡಿಗಟ್ಟು ರೂಪುಗೊಳ್ಳುವ ಮಟ್ಟಿಗೆ ಭಾರತೀಯರ ಸಮಯ ಪ್ರಜ್ಞೆ(ಕು)ಖ್ಯಾತಿ ಪಡೆದಿದೆ ! ಇಲ್ಲಿ ಯಾವುದೂ ಅಂದುಕೊಂಡ ಸಮಯಕ್ಕೆ ಆರಂಭವಾಗುವುದೇ ಇಲ್ಲ ಎನ್ನುವುದು ಜಗತ್ತಿನಾದ್ಯಂತ ಹರಡಿಹೋಗಿದೆ. ನಮ್ಮ ಭಾರತೀಯ ಸಮಾಜಕ್ಕೆ ಇದಕ್ಕಿಂತಲೂ ಹೆಚ್ಚಿನ ಕಳಂಕ ಇನ್ನೇನು ಬೇಕು?

ಭಾರತೀಯರ್ಯಾವತ್ತೂ ಅನಂತಕಾಲದ ಬಗ್ಗೆ ಯೋಚಿಸುವಂಥವರು. ಅವರಿಗೆ ತಾಸುಗಳು ಲೆಕ್ಕಕ್ಕಿಲ್ಲವೇ ಇಲ್ಲ. ಒಂದೆರಡು ತಾಸು ಇಂಚು-ಮಿಂಚಾಗುವುದರಲ್ಲಿ ತಪ್ಪೇನೂ ಇಲ್ಲವೆನ್ನುವುದು ಇಲ್ಲಿನವರಿಗೆ ರಕ್ತಗತವಾಗಿಬಿಟ್ಟಿದೆ. ಭಾರತದ ಅಧಿಕೃತ ಆಡಳಿತ ಭಾಷೆ, ರಾಷ್ಟ್ರ ಭಾಷೆ ಎನಿಸಿಕೊಂಡಿರುವ ಹಿಂದಿಯಲ್ಲಿ ನಿನ್ನೆಗೂ ನಾಳೆಗೂ ಒಂದೇ ಪದ

ಬಳಸುತ್ತಿರುವುದು ಎಲ್ಲರಿಗೂ ಗೊತ್ತಿದ್ದದ್ದೇ. ಹೀಗೆ ಎರಡಕ್ಕೂ ಒಂದೇ ಪದ ಬಳಸುವವರಿಗೆ ತಾಸಿನ ಲೆಕ್ಕಾಚಾರ ಅನುಸರಿಸುವುದೆಂದರೆ ಕಷ್ಟವಾಗಲಾರದೆ ಮತ್ತೆ !

ಸಮಯಪ್ರಜ್ಞೆ ಗೊತ್ತಿಲ್ಲದ ಭಾರತೀಯತೆ ವಿದೇಶಿಯಾತ್ರಿಕರಿಗೆ ಬಲು ಕಿರಿಕಿರಿ ಯಾಗಿರುತ್ತದೆ. ವಿಮಾನ, ರೈಲುಗಳು ತಾಸುಗಟ್ಟಲೆ, ದಿನಗಟ್ಟಲೆ ತಡಮಾಡಿ ಹೊರಡುತ್ತವೆ; ಹೊರಟಂಥವು ಸುರಕ್ಷಿತವಾಗಿ ಗುರಿ ತಲುಪುತ್ತವೆನ್ನುವ ಭರವಸೆಯಿಲ್ಲ !

ಹೇಳಿದ ಸಮಯಕ್ಕೆ ಬರುವ ಸ್ವಭಾವವಂತೂ ನಮ್ಮಲ್ಲಿಲ್ಲವೇ ಇಲ್ಲ ! ಇಂಥ ಸಮಯಕ್ಕೆ ಬರುತ್ತೇನೆಂದು ಹೇಳಿ, ಹೋಗದಿರುವುದು ಭಾರತೀಯರಿಗೇ ಮೀಸಲಾದ ಲಕ್ಷಣವೇನೋ !

ಯಾವ ಸಮಯದಲ್ಲಿ ನಮಗೆ ಏನಾಗಬೇಕು, ಹೇಗಾಗಬೇಕು ಎನ್ನುವುದು ಮೊದಲೇ ನಿರ್ಧರಿಸಲ್ಪಟ್ಟಿರುತ್ತದೆ. ಆ ನಿರ್ಧಾರಿತ ಅವಧಿಯ ನಿರ್ಧಾರಿತ ಘಟನೆಗಳಲ್ಲಿ ನಮ್ಮದು ಕೇವಲ ನಿಮಿತ್ತ ಪಾತ್ರ ಎನ್ನುವ ತತ್ವದವರು ನಾವು !

ಅತ್ಯಂತ ಹಾಯಾಗಿ, ಪ್ರಶಾಂತವಾಗಿ ಬದುಕು ಸಾಗಿಸುವುದೇ ಭಾರತೀಯತೆಯ ಗುರಿ ಎನ್ನುವುದು ನಮ್ಮೆಲ್ಲರ ಕಲ್ಪನೆ. ಆದ್ದರಿಂದ, ಇಲ್ಲ ಸಲ್ಲದ ಧಾವಂತ ಯಾಕೆ? ಕಾಲದೊಂದಿಗೆ ಸ್ಪರ್ಧಿಸಿ ನಾವು ಸಾಧಿಸುವುದಾದರೂ ಏನನ್ನು? ನಾವೆಷ್ಟೇ ತಿಪ್ಪರಲಾಗ ಹಾಕಿದರೂ, ಸಮಯುವನ್ನನುಸರಿಸಿ ಎಕ್ಕರಲಾಡಿದರೂ ಗ್ರಹಗತಿಯನ್ನು ತಪ್ಪಿಸಲಾದೀತೆ? ವಿಧಿಯನ್ನು ತಡೆಹಿಡಿಯಲಾದೀತೆ....? ಎನ್ನುವಂತಹ ಭಾರತೀಯ ವಿಚಾರ ಧೋರಣೆಗೆ ಯಾರು ಏನು ಹೇಳಿಯಾರು?

## ಕ್ರಿಕೆಟ್‌ನ ಮಿತಿ ಮೀರಿದ ಹುಚ್ಚು

ಇತ್ತೀಚೆಗೆ ಟಿ. ವಿ. ಯಲ್ಲಿನ ಜಾಹೀರಾತೊಂದರಲ್ಲಿ ತಪಸ್ಸಿಗೆ ಕುಳಿತಿರುವ ಋಷಿಯೊಬ್ಬ "ಸ್ಕೋರ್ ಕ್ಯಾ ಹುವಾ ವತ್ಸ?!" ಎಂದು ಕೇಳುವುದನ್ನು ನೀವು ನೋಡಿರಬಹುದು.

"ಸ್ಕೋರೆಷ್ಟು" ಎನ್ನುವುದು ಕ್ರಿಕೆಟ್ ಸೀಜನ್ನಿನಲ್ಲಿ ಸಾಮಾನ್ಯ ಭಾರತೀಯನ ಬಾಯಲ್ಲಿ ಗಾಯತ್ರಿ ಮಂತ್ರ! ಭಾರತದ ತಂಡ ಜಗತ್ತಿನ ಯಾವುದೇ ಮೈದಾನದಲ್ಲಿ ಕ್ರಿಕೆಟ್ ಆಡುತ್ತಿದ್ದರೂ, ಇಲ್ಲಿನ ಕ್ರಿಕೆಟ್ ಹುಚ್ಚಿರುವವರೆಲ್ಲರೂ ಆ ಆಟದಲ್ಲಿ ಲೀನವಾಗಿ ಬಿಡುತ್ತಾರೆ! ಆ ಸಂದರ್ಭದಲ್ಲಿ ಇಡೀ ದೇಶವೇ ರಜೆಯನ್ನಾಚರಿಸುತ್ತಿದೆಯೆ ಎನ್ನುವಂಥ ವಾತಾವರಣವಿರುತ್ತದೆನ್ನುವುದು ಉತ್ಪ್ರೇಕ್ಷೆಯಾಗಲಾರದು ! ಕ್ರಿಕೆಟ್ ಪಂದ್ಯಗಳಿರುವ ದಿನಗಳಲ್ಲೇ ಇಲ್ಲಿನ ನೌಕರರಿಗೆ ಸಾಮೂಹಿಕ ಜ್ವರ ಕಾಣಿಸಿಕೊಳ್ಳುತ್ತದೆ; ವಿದ್ಯಾರ್ಥಿಗಳಿಗೆ ಓದಲು, ಬೇರೆ ಕೆಲಸ ಮಾಡಲು ಸಮಯ ದೊರಕದು. ಒಟ್ಟಿನಲ್ಲಿ ಅದೊಂದು ರೀತಿಯ ಸಾಮೂಹಿಕ ಸನ್ನಿಯಂಥದು ಕ್ರಿಕೆಟ್ ಸೀಜನ್ನಿನಲ್ಲಿ ಕಾಣಿಸಿಕೊಳ್ಳುತ್ತದೆ.

ಈ ಕ್ರಿಕೆಟ್‌ನಿಂದಾಗಿ ಭಾರತದಲ್ಲಿ ಬೇರೆ ಯಾವ ಕ್ರೀಡೆಗೂ ಪ್ರಾಮುಖ್ಯತೆ ಸಿಗುತ್ತಿಲ್ಲ. ಅದ್ಯಾವುದೋ ತಂಪು ಪಾನೀಯದ ಜಾಹೀರಾತಿನಲ್ಲಿ ಹೇಳುವಂತೆ, "ಈಟ್ ಕ್ರಿಕೆಟ್ ಸ್ಲೀಪ್ ಕ್ರಿಕೆಟ್" ಎನ್ನುವುದು ಮುಂದುವರಿಕೆಯಾಗಿ "ಬ್ರೆಥ್ ಕ್ರಿಕೆಟ್" ಎನ್ನುವುದನ್ನು ಭಾರತೀಯರು ಅಕ್ಷರಶಃ ಮೈಗೂಡಿಸಿಕೊಂಡಿದ್ದಾರೆ ! ಇಲ್ಲಿ ಹೆಚ್ಚುಕಮ್ಮಿ ಎಲ್ಲರೂ ಕ್ರಿಕೆಟ್ ಬಗ್ಗೆ ಪಂಡಿರಂತೆ

ಮಾತಾಡುವವರೇ ! ಯಾರು ಕೇಳಲಿ, ಕೇಳದಿರಲಿ– ಕ್ರಿಕೆಟ್ ಬಗ್ಗೆ ತಮ್ಮ 'ಅಮೂಲ್ಯ' ಸಲಹೆಗಳನ್ನು ಕೊಡುವಂಥವರೇ ಎಲ್ಲರೂ ! ಕ್ರಿಕೆಟ್ ಕ್ರೇಜ್ ಅಥವಾ ಜಾಡ್ಯವೆನ್ನಿ– ಬಹುತೇಕರಿಗೆ ಅಂಟಿಕೊಂಡು ಕಾಡುತ್ತಿದೆ!

## 'ಸಹನೆ' ಎನ್ನುವ (ಅವ) ಗುಣ !

ಭಾರತೀಯರು ಸಹನಶೀಲರು ಎನ್ನುವುದು ಹೆಮ್ಮೆಯಿಂದ ಎದೆಯುಬ್ಬಿಸಿ ಹೇಳುವ ಮಾತಾಗಿತ್ತು. ಅದು ಒಂದೊಮ್ಮೆ ! ಭಾರತೀಯರಲ್ಲಿ ಸಹನೆ ಜಾಸ್ತಿ ಎನ್ನುವುದೇನೋ ನಿಜ. ಆದರೆ ಆ ಗುಣ ಬಹುಮಟ್ಟಿಗೆ ಅರ್ಥರಹಿತವಾಗಿ ಬಳಕೆಯಾಗುತ್ತಿದೆ ಎನ್ನವುದೇ ಖೇದದ ಸಂಗತಿ. ಅಸಾಮರ್ಥ್ಯ, ಅಶ್ರದ್ಧ ಮುಂತಾದ ಅನಗತ್ಯ ಅರಿಷ್ಟ ಅಂಶಗಳೆಲ್ಲವನ್ನೂ ನಾವು ಸಹಿಸಿಕೊಳ್ಳುತ್ತಿದ್ದೇವೆ. 'ಇಲ್ಲಿ ಏನಾದರೂ ಆಗುತ್ತದೆ ಬಿಡು' ಎನ್ನುವ ಭಾವನೆ ಎಲ್ಲರಿಲ್ಲೂ ಬೇರೂರಿಕೊಂಡಿದೆ.

ಈ ಪರಿಸ್ಥಿತಿ ಎಲ್ಲಿಯವರೆಗೆ ಹೇಗಿದೆಯೆಂದರೆ ಗಬ್ಬು ನಾರುವ ರೈಲು ಡಬ್ಬಿಗಳಿಂದ ಹಿಡಿದು, ಸಾವಿರಾರು ಜನರನ್ನು ಬಲಿ ತೆಗೆದುಕೊಳ್ಳುವ ಕಳ್ಳಭಟ್ಟಿ, ಭ್ರಷ್ಟಾತಿಭ್ರಷ್ಟ ರಾಜಕಾರಣಿಗಳವರೆಗೆ, ನಾವು ಪ್ರತಿಯೊಂದನ್ನೂ ಸಹಿಸುತ್ತಿದ್ದೇವೆ. ಏನಾದರೂ ಆದಾಗ ತುಸು ಗೊಣಗಿ, ಮತ್ತೆ ಯಥಾಪ್ರಕಾರ 'ಸಹನಶೀಲ'ರಾಗಿ ಬದುಕು ಸಾಗಿಸುತ್ತೇವೆ.

ನಾವೇಗೆ ಇಷ್ಟು ಸಹನೆಯನ್ನು ತೋರ್ಪಡಿಸುತ್ತಿದ್ದೇವೆ ಎನ್ನುವುದು ಬಹುಶಃ ನಮಗ್ಯಾರಿಗೂ ಗೊತ್ತಿಲ್ಲ. ಅಥವಾ ಕೈಲಾಗದಿರುವಿಕೆಯನ್ನು 'ಸಹನೆ' ಎನ್ನುವ ಸುಂದರ ಮೇಕಪ್ಪಿನೊಂದಿಗೆ ಪ್ರದರ್ಶಿಸುತ್ತಿದ್ದೇವೆಯೆ ?! ಹಾಗೊಂದು ವೇಳೆ ನಾವು ಪ್ರತಿಕ್ರಿಯಿಸಿದರೂ ಪ್ರತಿಭಟಿಸಿದರೂ ಅದು ಅತ್ಯಂತ ಕ್ಷೀಣ ಹಾಗೂ ದುರ್ಬಲವಾಗಿರುತ್ತದಷ್ಟೇ !

ಇದು ನಮಗೆ ಪೂರ್ವಜರಿಂದ ಬಳುವಳಿಯಾಗಿ ಬಂದ ಗುಣವಾಗಿರಬಹುದೇನೋ! ಅಂದಿನವರು, 'ನಮ್ಮಿಂದ ಬಗೆಹರಿಸಿಕೊಳ್ಳಲಾಗದ್ದನ್ನು ಸಹಿಸಿಕೊಳ್ಳಬೇಕಿರುವುದು ಅನಿವಾರ್ಯ; ಅದು ನಮ್ಮ ಕರ್ಮ' ಎನ್ನುವ ಮನೋಭಾವದವರು. ಅದೇ ಮನೋಭಾವನೆ ಮುಂದಿನ ಪೀಳಿಗೆಯವರಲ್ಲೂ ಹರಿದು ಬಂದಿದೆಯೆ ? ಅದು ಇಂದಿನ ಪರಿಸ್ಥಿತಿಗೆ ಸರಿಹೊಂದುತ್ತದೆಯೆ ಎನ್ನುವುದನ್ನು ಯಾರೂ ವಿಚಾರ ಮಾಡುತ್ತಿಲ್ಲವೇಕೆ ?

ಉತ್ತಮವಾದುದು ನಮಗೆ ಎಟುಕದಿರುವಾಗ, ಕೊನೇ ಪಕ್ಷ ಅದರ ನಂತರದ್ದನ್ನಾದರೂ ನಾವು ಪಡೆಯಬೇಕಲ್ಲ. ನಾವು ಅದನ್ನೂ ಆಶಿಸುತ್ತಿಲ್ಲವಲ್ಲ ! 'ಗುಣಮಟ್ಟ' ಎನ್ನುವ ಪದವನ್ನು ಕಂಡರೆ ಭಾರತೀಯರಿಗೆ ಭಯವಾಗುತ್ತಿರಬೇಕು! 'ಯಾವುದೋ ಒಂದು ರೀತಿಯಲ್ಲಿ ಆದರೆ ಸಾಕಪ್ಪ' ಎನ್ನುವಂಥವರೇ ಎಲ್ಲರೂ ! ಈ ತತ್ವ ನಮ್ಮ ದೇಶವನ್ನು ಹಿಂದಕ್ಕೆಳೆಯುತ್ತಿದೆ ಎನ್ನುವ ಸತ್ಯವನ್ನು ಗ್ರಹಿಸಿದ್ದರೂ, ಯಾರೂ ಬದಲಾವಣೆಗೆ ಪ್ರಯತ್ನಿಸುತ್ತಿಲ್ಲ. 'ಆಗಬೇಕಿರುವುದು ಆಗದಿರುವುದಿಲ್ಲವಲ್ಲ' ಎನ್ನುವಂತೆ ಮೌನವಾಗಿರುತ್ತಿದ್ದಾರೆ.

## ಸದ್ದಿನ ಸಮುದ್ರದಲ್ಲಿ

ಇಲ್ಲಿ ಎಲ್ಲಿ ಕೇಳಿದರೂ ಸದ್ದಿನದೇ ಸಾಮ್ರಾಜ್ಯ ! ನಾವು ಬದುಕುತ್ತಿರುವುದೇ ಸದ್ದಿನ ಸಮುದ್ರದ ನಡುವೆ !

ನಾವು ಶಬ್ದ ಮಾಲಿನ್ಯಕ್ಕೆ ಎಷ್ಟರಮಟ್ಟಿಗೆ ರೂಢಿಗೊಂಡಿರುವೆವೆಂದರೆ, ನಿಶ್ಶಬ್ದವನ್ನು ಸಹಿಸುವುದು ಕಷ್ಟವಾಗುವಷ್ಟು ! ಒಂದು ಉದಾಹರಣೆಯನ್ನು ನೋಡಿ-

ಸುತ್ತಮುತ್ತ ಸದ್ದುಗಳೊಂದಿಗೆ ಬದುಕಿದ ಒಂದು ಕುಟುಂಬ, ಆರ್ಥಿಕ ಪರಿಸ್ಥಿತಿ ಸುಧಾರಿಸಿದ್ದರಿಂದಲೋ ಏನೋ, ಪ್ರಶಾಂತ ವಾತಾವರಣವಿರುವ ಪಾಶ್ ಲೊಕ್ಯಾಲಿಟಿಯೊಂದಕ್ಕೆ ಮೊಕ್ಕಾಂ ಬದಲಾಯಿಸಿತು. ವಿಚಿತ್ರ ಏನೆಂದರೆ ಆ ಕುಟುಂಬದ ಯಜಮಾನಿಗೆ, ಆ ಪ್ರಶಾಂತ ವಾತಾವರಣಕ್ಕೆ ಹೊಂದಿಕೊಳ್ಳಲಾಗದೆ, ಮಾನಸಿಕ ಸಂತುಲನೆ ತುಸು ಏರುಪೇರಾಗಿ ಮನೋವೈದ್ಯರ ಬಳಿ ಕರೆಸೊಯ್ಯಬೇಕಾಗಿ ಬಂತು ! ಇದು ನಿಜವಾಗಿಯೂ ನಡೆದದ್ದು.

ಎತ್ತ ನೋಡಿದರೂ ಸದ್ದು. ಇಲ್ಲಿ ಪ್ರತಿಯೊಂದು ಸಣ್ಣ-ಪುಟ್ಟ ವಿಷಯಕ್ಕೂ ಸದ್ದು ಗದ್ದಲವಿರಲೇಬೇಕು ! ಮದುವೆಯಿರಲಿ, ಸಾವಿರಲಿ, ಮೆರವಣಿಗೆಯಿರಲಿ.... ಲೌಡ್‌ಸ್ಪೀಕರಿನ ಭೀಕರ ಸದ್ದಿನಿಂದ ಎಲ್ಲರ ಕಿವಿ ತೂತು ಬೀಳಿಸದಿದ್ದರೆ ನಮಗೆ ಸಮಾಧಾನವಾಗದು. ಲೌಡ್‌ಸ್ಪೀಕರುಗಳನ್ನು ಬಳಸುವುದು ಮೂಲ ಭೂತ ಹಕ್ಕು ಎಂದು ಎಲ್ಲರೂ ಭಾವಿಸಿ ಅದರಂತೆಯೇ ನಡೆದುಕೊಳ್ಳುತ್ತಿದ್ದಾರೆ. ಇತರರ ತೊಂದರೆಯ ಬಗ್ಗೆ ಲೆಕ್ಕಿಸದೆ ಟೆಲಿವಿಶನ್, ರೇಡಿಯೋ, ಟೇಪ್‌ರೆಕಾರ್ಡರ್ ಮುಂತಾದವುಗಳ ವ್ಯಾಲ್ಯೂಮ್ ಜೋರಾಗಿ ಹಾಕಿ ಆನಂದಿಸುವುದು ಅಪ್ಪಟ ಭಾರತೀಯ ಗುಣವೆನಿಸಿಕೊಳ್ಳತೊಡಗಿದೆ. ಆಕಸ್ಮಾತ್ ಯಾರಾದರೂ ಸದ್ದಿಗೆ ವಿರುದ್ಧವಾಗಿ ದನಿಯೆತ್ತಿದರೆ ಅವರು ಮೂರ್ಖರು, ಅಪರಾಧಿಗಳು ಎಂದು ಪರಿಗಣಿಸುವ ಪರಿಸ್ಥಿತಿ ಇಲ್ಲಿನದು....

**ಹಿಪೋಕ್ರಸಿ**

ಮಾಡಿದ ಪ್ರಮಾಣಗಳಿಗೆ ಒಂದಿನಿತೂ ಬೆಲೆ ಕೊಡದ ಸಮಾಜ ನಮ್ಮದು. ಪ್ರತಿ ವರ್ಷ ಸ್ವಾತಂತ್ರ್ಯ ದಿನೋತ್ಸವದಂದು, ಅರ್ಥವಾಗದ, ಯಾರೂ ಅನುಸರಿಸದ ಪ್ರತಿಜ್ಞೆಯನ್ನು ಬಲವಂತವಾಗಿ ಎಲ್ಲರಿಂದಲೂ ಮಾಡಿಸುತ್ತೇವೆ.

ಈಗಂತೂ ಪ್ರತಿಯೊಂದಕ್ಕೂ ಪ್ರತಿಯೊಬ್ಬರು ಪ್ರತಿಜ್ಞೆಮಾಡುವಂಥವರೇ. ಸೌಂದರ್ಯ ಸ್ಪರ್ಧೆಗಳಲ್ಲಿ ಗೆಲ್ಲುವ ಸುಂದರಿಯರೆಲ್ಲ ಜಗತ್ತಿನಲ್ಲಿ ಹಸಿವು, ಬಡತನವನ್ನು ಬೇರು ಸಹಿತ ನಿರ್ಮೂಲಿಸುವುದಾಗಿ ಪ್ರತಿಜ್ಞೆ ಮಾಡುತ್ತಿದ್ದರೆ ಪ್ರೇಕ್ಷಕರು ವೀರಾವೇಶದಿಂದ ಚಪ್ಪಾಳೆ ತಟ್ಟುತ್ತಿರುತ್ತಾರೆ. ಅಣ್ವಸ್ತ್ರರಹಿತ ಜಗತ್ತನ್ನು ನಿರ್ಮಿಸುವುದಾಗಿ ಅವರು ಹೇಳುತ್ತಿದ್ದರೆ 'ಹೇಗೆ' ಎನ್ನುವ ಪ್ರಶ್ನೆ ಯಾರೂ ಕೇಳುತ್ತಿಲ್ಲ.

ಇದೆಲ್ಲವೂ ಭಾರತೀಯರ ಹಿಪೋಕ್ರಸಿಗೆ ಕನ್ನಡಿ ಹಿಡಿಯುತ್ತದೆ. ಸ್ವೀಡಿಷ್ ಲೇಖಕನೊಬ್ಬ ಇಂಥದನ್ನೆಲ್ಲ ಗಮನಿಸಿಯೇ ಏನೋ, 'ಹಿಪೋಕ್ರಸಿ ಎನ್ನುವುದು ಭಾರತೀಯ ಸಂಸ್ಕೃತಿಯಲ್ಲಿ ಅಂತರ್ಭಾಗ' ಎಂದು ವ್ಯಾಖ್ಯಾನಿಸಿದ್ದಾನೆ.

ಒಂದೆಡೆ ಭಾರತೀಯ ಸಂಸ್ಕೃತಿ, ನೈತಿಕ ಮೌಲ್ಯಗಳ ಬಗ್ಗೆ ಉದ್ದುದ್ದನೆ ಭಾಷಣ ಬಿಗಿಯುತ್ತಲೇ ಅದಕ್ಕೆ ಭಿನ್ನವಾಗಿ ವರ್ತಿಸುವುದು ನಮಗಷ್ಟೇ ಮೀಸಲಾದ ಗುಣವಿರಬೇಕು! ಹೆಣ್ಣನ್ನು ದೇವತೆ ಎನ್ನುವ ನಾವು, ಇಲ್ಲಿ ಸ್ತ್ರೀಯರ ಮೇಲೆ ಅತ್ಯಾಚಾರವಾಗುತ್ತಿರುವುದರ ಬಗ್ಗೆ ಹುಚ್ಚಿಕೊಳ್ಳುವುದೇ ಇಲ್ಲ. ಶಿಕ್ಷಕರಿಗೆ ಸಂಬಳ ಸರಿಯಾಗಿ ಕೊಡದಿದ್ದರೂ, ಶಿಕ್ಷಕರ ದಿನಾಚರಣೆಯನ್ನು ಮಾತ್ರ ವಿಜೃಂಭಣೆಯಿಂದ ಆಚರಿಸುತ್ತೇವೆ. ಮಕ್ಕಳ ದಿನಾಚರಣೆಯಂದು

ಮಕ್ಕಳ ಯೋಗಕ್ಷೇಮ, ಕಲ್ಯಾಣಗಳ ಬಗ್ಗೆ ಭಾವುಕವಾಗಿ ಮಾತಾಡುತ್ತಲೇ ಮಕ್ಕಳನ್ನು ದುಡಿಮೆಯ ಗಾಣಕ್ಕೊಡ್ಡುವಂಥ ಮಹನೀಯರು ನಾವು !

ಪಾಶ್ಚಾತ್ಯ ಸಂಸ್ಕೃತಿಯನ್ನು ಈ ನೆಲದ ಮೇಲೆ ಕಾಲಿಡಗೊಡುವುದಿಲ್ಲ, ಅದರಂತೆ; ಪ್ರಾಮಾಣಿಕತೆಯಿಲ್ಲದೆ, ವಿಶ್ರಂಖಲವಾಗಿ ಬದುಕಲಾರೆವು ಎಂದು ಹೇಳುತ್ತಲೇ ಹೊಟ್ಟೆ ಪಾಡನ್ನರಿಸಿಕೊಂಡು ಪರದೇಶಗಳಿಗೆ ಹೋಗಿ ಅವರ ಸಮಾಜ, ಸಂಸ್ಕೃತಿಗಳಲ್ಲೊಂದು ಭಾಗವಾಗುತ್ತಿದ್ದೇವೆ.

ಇದಕ್ಕಿಂತಲೂ ಹೆಚ್ಚಿನ ಹಿಪೋಕ್ರಸಿ ಇನ್ನೇನಿರಲು ಸಾಧ್ಯ ?

## ಕಳ್ಳ ವೋಟುಗಳು

ಅನೇಕ ವರ್ಷಗಳ ಜನಸೇವೆಗೆ ನೀಡಿದ ಮನ್ನಣೆಯಾಗಿ ಪಕ್ಷದ ಟಿಕೆಟ್ ಪಡೆದು ಅಭ್ಯರ್ಥಿಗಳು ಚುನಾವಣೆಗೆ ನಿಲ್ಲುತ್ತಾರೆ. ಆದರೆ ಮುಗ್ಧ ಜನರಿಗೆ ಸರಿಯಾದ ಅಭ್ಯರ್ಥಿಯ ಆಯ್ಕೆ ಗೊತ್ತಿಲ್ಲ ಎನ್ನುವುದು ಚುನಾವಣೆಗೆ ನಿಂತಿರುವವರ ಅಭಿಪ್ರಾಯವಾಗಿರುವುದಕ್ಕೋ ಏನೋ– ಶಾಸನ ಸಭೆಗೆ ಹೋಗಬೇಕಾದವರು ಯಾರು ಎನ್ನುವುದನ್ನು ಅಭ್ಯರ್ಥಿಯೇ ನಿರ್ಧರಿಸಿಕೊಳ್ಳುತ್ತಾನಿಲ್ಲಿ !

ಮತನದಾನದ ಮುನ್ನಾ ರಾತ್ರಿ, ಚುನಾವಣೆಯ ದಿನ ತಮ್ಮ ಹಕ್ಕನ್ನು ವಿನಿಯೋಗಿಸಿಕೊಳ್ಳಬೇಕೆನ್ನುವ 'ಅತಿಯಾಸೆ'ಯನ್ನು ಬಿಟ್ಟುಬಿಡುವಂತೆ ಜನರಿಗೆ 'ತಿಳಿಸಿ ಹೇಳಲು' ಪ್ರಯತ್ನಿಸುವವರು ನಮ್ಮಲ್ಲಿ ಸಾಕಷ್ಟು ಜನ ! ಮತದಾನದ ದಿನ ಅಭ್ಯರ್ಥಿಯ ಬೆಂಬಲಿಗರೇ ಅವನ ಪರವಾಗಿ ತಾವೇ ಎಲ್ಲ ಮತಗಳನ್ನು ಗುದ್ದುತ್ತಾರೆ. ಅದಕ್ಕೆ ಅಗತ್ಯವೆನಿಸಿದರೆ ಚಾಕು, ಚೂರಿ, ಬಾಂಬು ಮುಂತಾದ 'ಉತ್ತಮ' ಕ್ರಮಗಳನ್ನನುಸರಿಸುತ್ತಾರೆ !

ಇದರ ಬಗ್ಗೆ ಪೊಲೀಸರಿಗೆ ದೂರು ಕೊಡುವುದೆಂದರೆ ಹಾದಿಯಲ್ಲಿ ಹೋಗುವ ಮಾರಿಯನ್ನು ಮನೆಗೆ ಕರೆದುಕೊಂಡಂತೆ ಎನ್ನುವುದು ಎಷ್ಟೋ ಜನರಿಗೆ ಅನುಭವಪೂರ್ವಕವಾಗಿ ತಿಳಿದುಬಂದಿದೆ. ಹಾಗಾಗಿಯೇ ದೂರು ಕೊಡುವ 'ದಡ್ಡತನ' ಮಾಡುವವರು ಕಮ್ಮಿ. ಪೊಲೀಸರ ಕಣ್ಣುಗಳಿಗಂತೂ ಅಂಥ ಅನ್ಯಾಯಗಳು ಕಾಣಿಸುವುದಿಲ್ಲ. ಅದೂ ಅಲ್ಲದೆ ಭಾರತೀಯ ಸಂಸ್ಕೃತಿಯಲ್ಲೊಂದು ಭಾಗವಾಗಿರುವ ಮತಗಟ್ಟೆ ಸ್ವಾಧೀನದಲ್ಲಿ ಮೂಗದ್ದುವುದೇಕೆ, ಅಲ್ಲವೆ?

ಈಗ್ಗೆ ಸುಮಾರು ಒಂದು ದಶಕದ ಹಿಂದೆ ಮೇಹೆಮ್‌ನಲ್ಲಿ ಓಂ ಪ್ರಕಾಶ್ ಚೌತಾಲಾ ಮಾಡಿಸಿದ ರಿಗ್ಗಿಂಗ್ ಕುರಿತು ಏರ್ಪಾಡಾದ ವಿಚಾರಣಾ ಆಯೋಗದ ವರದಿ ಧೂಳುತಿನ್ನುತ್ತ ಬಿದ್ದಿದೆ. ಕಳೆದ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಪಾಟ್ನಾದಲ್ಲಾದ ರಿಗ್ಗಿಂಗ್ ಭಾರೀ ಪ್ರಮಾಣದ್ದು. ಇಂಥ ಅಕ್ರಮಗಳನ್ನು ತಡೆಗಟ್ಟಲು ಮುಂದಾಗುವವರು ಯಾರು? ಪ್ರತಿಯೊಬ್ಬ ಅಭ್ಯರ್ಥಿಯೂ ಅವಕಾಶ ದೊರತಲ್ಲಿ ರಿಗ್ಗಿಂಗ್ ಮಾಡಿಯಾದರೂ ಗೆಲ್ಲಬೇಕೆಂದು ಕೊಳ್ಳುತ್ತಿರುವಾಗ 'ಬೆಕ್ಕಿನ ಕೊರಳಿಗೆ ಗಂಟೆ' ಕಟ್ಟುವವರ್‍ಯಾರು ?

## ವರದಕ್ಷಿಣೆ ಸಾವು

ಇತ್ತೀಚೆಗೆ ದೆಹಲಿಯ ಉಚ್ಚನ್ಯಾಯಾಲಯವು ೬೫ ವರ್ಷಗಳ ರಘುವೀರ್‌ದೇವಿಗೆ ಸೊಸೆ ರಜನಿಯನ್ನು ಬೆಂಕಿ ಹಚ್ಚಿ ಕೊಂದದ್ದಕ್ಕೆ ಜೀವಾವಧಿ ಶಿಕ್ಷೆ ವಿಧಿಸಿತು.

ಆ ಪ್ರಕರಣ ಸಂಕ್ಷಿಪ್ತವಾಗಿ ಇಷ್ಟೇ- ರಘುವೀರ್ ದೇವಿಯು ಒಂದು ಮದುವೆಗೆ ಹೋಗುವಾಗ ಸೊಸೆಯ ಆಭರಣಗಳನ್ನು ಹಾಕಿಕೊಂಡು ಹೋಗಿದ್ದಳು. ಮದುವೆಯಿಂದ ತಿರುಗಿ ಬಂದ ನಂತರ ಎಷ್ಟು ದಿನಗಳಾದರೂ ಆಕೆ ಆ ಆಭರಣಗಳನ್ನು ತಿರುಗಿ ಕೊಡಲಿಲ್ಲ. ಕೊನೆಗೊಮ್ಮೆ ರಜನಿ ಧೈರ್ಯಮಾಡಿ, ತನ್ನ ಆಭರಣಗಳನ್ನು ತಿರುಗಿ ಕೊಡೆಂದು ಕೇಳಿದ್ದಕ್ಕೆ ಸಿಟ್ಟಿಗೆದ್ದ ಅತ್ತೆ ಸೊಸೆಗೆ ಎಣ್ಣೆ ಸುರಿದು ಬೆಂಕಿ ಹಚ್ಚಿಬಿಟ್ಟಳು ! ವರದಕ್ಷಿಣೆ ಕಡಿಮೆ ತಂದದ್ದಷ್ಟೇ ಅಲ್ಲದೆ, ತನ್ನೆದುರು ನಿಂತು ಮಾತಾಡುವಷ್ಟು ಧೈರ್ಯ ಬಂತೆ ಎನ್ನುವ ಸಿಟ್ಟಿನಿಂದ ಅವಳು ಆ ರೀತಿ ಮಾಡಿದಳಂತೆ !

ಪತ್ರಿಕೆಗಳಲ್ಲಿ ಈ ಸುದ್ದಿಯನ್ನು ಓದಿದ ಭಾರತೀಯರಿಗೆ ಅಷ್ಟೇನೂ ಆಶ್ಚರ್ಯವಾಗಿರಲಿಕ್ಕಿಲ್ಲ. ಪತ್ರಿಕೆಗಳವರಂತೂ ಇಂಥ ಸುದ್ದಿಗಳಿಗೆ ಅಷ್ಟೇನೂ ಪ್ರಾಮುಖ್ಯತೆ ಕೊಡದೆ ಒಳಗಿನ ಪುಟಗಳಲ್ಲೆಲ್ಲೋ ಪ್ರಕಟಿಸುತ್ತಿರುತ್ತಾರೆ.

ವರದಕ್ಷಿಣೆ ಸಾವಿನ ಪ್ರಕರಣಗಳು ನಮ್ಮಲ್ಲಿ ಹೆದರಿಕೆ ಹುಟ್ಟಿಸುವಷ್ಟು ವೇಗದಲ್ಲಿ ಹೆಚ್ಚುತ್ತಿವೆ. ಅವುಗಳ ಹೆಚ್ಚಳದ ಪ್ರಮಾಣದ ಪ್ರತಿವರ್ಷ ಶೇ. ೮.೩ ರಷ್ಟಿದೆ. ಬಹುಶಃ ನಮ್ಮ ದೇಶದಲ್ಲಿ ಬೇರೆ ಯಾವುದೂ ಈ ಪ್ರಮಾಣದಲ್ಲಿ ಹೆಚ್ಚುತ್ತಿರಲಿಕ್ಕಿಲ್ಲ !

ವರದಕ್ಷಿಣೆ ಸಾವು, ಕಿರುಕುಳ ಪ್ರಕರಣಗಳಿಗೆ ಸಂಬಂಧಿಸಿದಂತೆ ಪೊಲೀಸರ ಬಳಿ ಬರುವ ಮೊಕದ್ದಮೆಗಳ ಸಂಖ್ಯೆ ಕಮ್ಮಿ. ಹಾಗಿದ್ದೂ ೧೯೮೦ ರಲ್ಲಿ ಅಂಥ ಪ್ರಕರಣಗಳು ೪೦೦ ದಾಖಲಾಗಿದ್ದರೆ, ೧೯೯೦ ರ ಹೊತ್ತಿಗೆ ಅವುಗಳ ಸಂಖ್ಯೆ ೫೦೦೦ ದಾಟಿತ್ತು ! ನ್ಯಾಶನಲ್ ಕ್ರೈಮ್‌ರೆಕಾರ್ಡ್ ಬ್ಯೂರೋದವರು ಒದಗಿಸಿದ ಅಂಕಿ-ಸಂಖ್ಯೆಗಳಿವು. ಕೇವಲ ದೆಹಲಿಯೊಂದರಲ್ಲೇ ಕಳೆದ ವರ್ಷ ೧೨೫ ಕ್ಕೂ ಹೆಚ್ಚು ವರದಕ್ಷಿಣೆ ಸಾವಿನ ಪ್ರಕರಣಗಳು ನಡೆದವು. ಭಾರತದಲ್ಲಿ ಅತ್ಯಧಿಕ ವರದಕ್ಷಿಣೆ ಸಾವಿನ ಪ್ರಕರಣಗಳ ತಾಣ ದೆಹಲಿ !

## ಚುನಾವಣೆಗಳೆನ್ನುವ ಜಾತ್ರೆಗಳು

ಚುನಾವಣೆಗಳಂತೂ ಹಬ್ಬದಂತೆ ವರ್ಷಕ್ಕೊಮ್ಮೆ ಬರುತ್ತಲೇ ಇರುತ್ತವೆ. ಚುನಾವಣೆಗಳೆಂದೊಡನೆ ರಾಜಕಾರಣಿಗಳ ಸಡಗರ ಆರಂಭವಾಗುತ್ತದೆ. ಅವರ ಹಿಂದೆಯೇ ವಂದಿಮಾಗಧರು ತಯಾರಾಗಿ ನಿಲ್ಲುತ್ತಾರೆ. ಹೂಮಾಲೆ ಹಾಕಿಸಿಕೊಳ್ಳುತ್ತ, ಹೂಮಾಲೆಗಳನ್ನು ಎಸೆಯುತ್ತ, ಬಡಬಡನೆ ಮಾತಾಡುತ್ತ ಆವೇಶದಿಂದ ಮೈಕು ಹಿಡಿದು ನಾಟಕ ಪ್ರದರ್ಶಿಸಲು ಸಜ್ಜಾಗುತ್ತಾರೆ. ಮಕ್ಕಳನ್ನೆತ್ತಿಕೊಂಡು ಮುದ್ದಾಡುವುದು, ಮುದುಕರಿಗೆ ಪಾದಾಭಿವಂದನೆ ಮಾಡುವುದು ಮುಂತಾದ ವರಸೆಗಳೆಲ್ಲವನ್ನೂ ತೋರ್ಪಡಿಸುವಲ್ಲಂತೂ ಪ್ರತಿಯೊಬ್ಬರೂ ಪರಸ್ಪರ ಪೈಪೋಟಿಗಿಳಿದವರಂತಿರುತ್ತಾರೆ !

ಚುನಾವಣೆಗಳಿಂದ ರಾಷ್ಟ್ರಕ್ಕೆ ಎಷ್ಟು ಹಾನಿಯಾಗುತ್ತದೆನ್ನುವುದನ್ನು ಯಾರೂ ಲೆಕ್ಕಿಸುತ್ತಿಲ್ಲ. ಲೆಕ್ಕಿಸಿದರೂ ಅದರ ಬಗ್ಗೆ ಯಾರಿಗೂ ಕಾಳಜಿಯಿಲ್ಲ. ಬೇಕಾಗಿಯೂ ಇಲ್ಲ. ಚುನಾವಣೆಗಳನ್ನುವವು ಎಲ್ಲರ ಪಾಲಿಗೆ ಜಾತ್ರೆಯಿದ್ದಂತೆ.

೧೯೯೮ ರ ಚುನಾವಣೆಗೆ ೬೨೬,೪೮,೮೬,೦೦೦ ರೂ. ಗಳ ವೆಚ್ಚವಾಯಿತೆಂದು ಅಂಕಿ-ಅಂಶಗಳು ತಿಳಿಸುತ್ತಿವೆ. ೧೯೯೯ ರ ಚನಾವಣೆಯ ವೆಚ್ಚ ರೂ. ೧೦೦೦ ಕೋಟಿಯನ್ನು ಮೀರಿರಬಹುದು !

ಈ ದೇಶದಲ್ಲಿರುವಷ್ಟು ರಾಜಕೀಯ ಪಕ್ಷಗಳು ಬೇರೆಲ್ಲೂ ಇಲ್ಲ. ಏಳು ರಾಷ್ಟ್ರೀಯ ಪಕ್ಷಗಳು, ೪೦ ಪ್ರಾದೇಶಿಕ ಪಕ್ಷಗಳು ! ಇವು ಸಾಲದೆನ್ನುವಂತೆ ನೂರಕ್ಕಿಂತಲೂ ಹೆಚ್ಚು ನೋಂದಾಯಿತವಾಗಿರುವ ಚಿಲ್ಲರೆ ಪಕ್ಷಗಳು ಬೇರೆ !

೫೪೩ ಲೋಕಸಭಾ ಸ್ಥಾನಗಳು, ೪೦೭೧ ಅಸೆಂಬ್ಲಿ ಸ್ಥಾನಗಳು, ಹತ್ತುಲಕ್ಷ ಮತಗಟ್ಟೆಗಳು.... ಇವೆಲ್ಲವೂ ನಮ್ಮದು ಜಗತ್ತಿನಲ್ಲಿ ಅತಿ ದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆಯುಳ್ಳ ರಾಷ್ಟ್ರವೆಂದು ಹೇಳಿಕೊಳ್ಳಲು ಉಪಯೋಗವಾಗಬಹುದಷ್ಟೇ. ಆದರೆ ನಮ್ಮಲ್ಲಿ ನಿಜವಾಗಿಯೂ ಪ್ರಜಾಪ್ರಭುತ್ವವ್ಯವಸ್ಥೆ ಹೇಳಿಕೊಳ್ಳುವಷ್ಟು ಯಶಸ್ಸನ್ನು ಕಂಡಿದೆಯೆ ಎನ್ನುವುದು ಇನ್ನೂ ಪ್ರಶ್ನಾರ್ಹ.

"ಹುಚ್ಚು ಮುಂ.... ಮದುವೆಯಲ್ಲಿ ಉಂಡವನೇ ಜಾಣ" ಎನ್ನುವುದನ್ನು ಚೆನ್ನಾಗಿ ರೂಢಿಸಿಕೊಂಡಿರುವ ರಾಜಕಾರಣಿಗಳಿಗೆ, ರಾಜಕೀಯ ಪಕ್ಷಗಳಿಗೆ ಅವಕಾಶವನ್ನೊದಗಿಸುತ್ತಿರುವ ನಮ್ಮ ಚುನಾವಣಾ ವ್ಯವಸ್ಥೆ ಸಮಂಜಸವಾದುದೆ ಅಲ್ಲವೆ ಎನ್ನುವುದಕ್ಕೆ ಉತ್ತರ ಹುಡುಕಬೇಕಿದೆ.

**ಕುಟಿಲ ರಾಜಕೀಯ**

ಭ್ರಷ್ಟ ರಾಜಕಾರಣಿಗಳಿಗೆ ಜಪಾನ್ ಹೆಸರುವಾಸಿ. ಲ್ಯಾಟಿನ್ ಅಮೆರಿಕದ ರಾಜಕಾರಣಿಗಳು ದೇಶದ ಸಂಪತ್ತನ್ನು ಕೊಳ್ಳೆ ಹೊಡೆಯುವುದರಲ್ಲಿ ನಿಸ್ಸೀಮರು. ಇಟಲಿಯಲ್ಲಿ ರಾಜಕೀಯ ಮಾಫಿಯಾ ಒಂದಕ್ಕೊಂದು ಬೆಸೆದುಕೊಂಡಿವೆ. ಈ ವಿಷಯಗಳು ಎಲ್ಲರಿಗೂ ಗೊತ್ತಿದೆ. ರಾಜಕಾರಣಿಗಳೂ ಒಪ್ಪಿಕೊಳ್ಳುತ್ತಾರೆ. ಆದರೆ ನಮ್ಮ ದೇಶದಲ್ಲಿ ಆ ಲಕ್ಷಣಗಳಿರುವ ನಾಯಕರ್‍ಯಾರೂ ಬಯಲಿಗೆ ಬೀಳುವುದಿಲ್ಲ. ಇಲ್ಲಿನ ವ್ಯವಸ್ಥೆಯೇ ಹಾಗಿದೆ !

ರಾಜಕೀಯ ಅಪರಾಧಮಯವಾಗಲಾರಂಭವಾಗಿದ್ದು ಅರವತ್ತನೆ ದಶಕದಲ್ಲಿ. ಅದಿಷ್ಟು ದೂರ ಮುಂದುವರಿಯುತ್ತದೆಂದು ಬಹುಶಃ ಆಗ ಯಾರೂ ಎಣಿಸಿರಲಿಕ್ಕಿಲ್ಲ ! ಕಾಳಸಂತೆಕೋರರು ಮುಂದೆ ಬಂದು ರಾಜಕಾರಣಿಗಳಿಗೆ ಬೆಂಬಲ ನೀಡುತ್ತಿದ್ದರು. ಈಗಂತೂ ಅವರೇ ನೇರವಾಗಿ ಚುನಾವಣೆಗೆ ಧುಮುಕುತ್ತಿದ್ದಾರೆ. ಮಾಫಿಯಾ ಮುಖಂಡರು ತಮ್ಮದೇ ಆದ ಪಕ್ಷಗಳನ್ನು ಸ್ಥಾಪಿಸಿಕೊಳ್ಳುತ್ತಿದ್ದಾರೆ. ಜೈಲಿನಲ್ಲಿದ್ದುಕೊಂಡೇ ಚುನಾವಣೆಗಳಲ್ಲಿ ಸ್ಪರ್ಧಿಸುವುದೆನ್ನುವುದು ಭಾರತವನ್ನು ಹೊರತುಪಡಿಸಿ ಬೇರೆಲ್ಲೂ ಕಂಡುಬರಲಿಕ್ಕಿಲ್ಲ !

ಇವತ್ತಿನವರೆಗೂ ಯಾವೊಬ್ಬ ರಾಜಕಾರಣಿಯೂ ಕಾನೂನಿನ ಬಲೆಗೆ ಸಿಕ್ಕಿಬಿದ್ದು ಶಿಕ್ಷೆ ಅನುಭವಿಸಿದ ಉದಾಹರಣೆಗಳಿಲ್ಲ. ಅಪರಾಧದಿಂದ ತಪ್ಪಿಸಿಕೊಳ್ಳಬೇಕಾದರೆ ರಾಜಕಾರಣಿಯಾಗಿಬಿಟ್ಟರಾಯ್ತು ಎನ್ನುವ ಪರಿಸ್ಥಿತಿ ನಮ್ಮಲ್ಲಿದೆ ! ಅಂಥವರನ್ನು ಮುಟ್ಟಲೂ ನಮ್ಮ ಪೊಲೀಸ್ ವ್ಯವಸ್ಥೆ, ಕಾನೂನು ವ್ಯವಸ್ಥೆ ಅಳುಕುತ್ತವೆ.

ಇಂದಿಗೂ ಹಲವಾರು ಅಪರಾಧ ಪ್ರಕರಣಗಳಲ್ಲಿ ಪಾಲುದಾರರಾಗಿರುವಂತಹ ಕೇಡಿಗಳು ರಾಜಕೀಯ ಪ್ರವೇಶಿಸಿ, ನಾಯಕರಾಗಿ ದೇಶವನ್ನಾಳುತ್ತಿದ್ದಾರೆ ! ಸ್ವಾತಂತ್ರ್ಯಧ ನಂತರ ಭಾರತ ಸಾಧಿಸಿರುವ 'ಘನತೆ' ಇದು ! ಇದನ್ನೆಲ್ಲ ಓದಿದ ನಂತರ, "ಇಟ್ ಹ್ಯಾಪನ್ಸ್ ಓನ್ಲಿ ಇನ್ ಇಂಡಿಯಾ"! ಎಂದು ನೀವೂ ಅನ್ನುತ್ತೀರಲ್ಲವೆ!

✲ ✲ ✲

# ಕಂದಾಚಾರಕ್ಕೆ ಹೊರತಾದ ಭಾರತೀಯರಾಗಬೇಕು

• ಮೋಹನ ನಾಗಮ್ಮನವರ

ಎಲ್ಲ ಬಲ್ಲ ಪ್ರಕಾಂಡ ಪಂಡಿತನಂತೆ ನಾನಲ್ಲವೆಂಬ ವಿನಮ್ರ ನಂಬುಗೆಯೊಂದಿಗೆ ಕೂದಲು ಸೀಳಿ ಸತ್ಯ ಹುಡುಕುವ ಬೌದ್ಧಿಕ ಕಸರತ್ತನ್ನು ಬದಿಗಿರಿಸಿ ನನಗನ್ನಿಸಿದ್ದು ಹಾಗೂ ನನಗನಿಸಿದಷ್ಟನ್ನು ತಮ್ಮೆದುರಿಗೆ ಮಂಡಿಸುವ ಮೂಲಕ ಹೃದಯಪೂರ್ವಕ ಸಂವಾದವನ್ನೇರ್ಪಡಿಸುವ ಪೂರ್ವ ಪೀಠಿಕೆಯಾಗಿ ಈ ಮಾತುಗಳು.

ಯಾವುದೇ ದೇಶಕ್ಕೂ ಯುದ್ಧ ಎನ್ನುವುದು ಪ್ರಥಮ ಹೊರೆ. ಅದಕ್ಕಿಂತಲೂ ಹೊರೆಯಾದದ್ದು ಆ ದೇಶದೊಳಗಣ ಅಂತರ್ಯುದ್ಧ. ಪ್ರಗತಿಯೆಡೆ ಕೇಂದ್ರೀಕರಿಸಬೇಕಾದ ಲಕ್ಷ್ಯದ ಬಹುಪಾಲು ಭಾಗ ಆಕ್ರಮಿಸಿಬಿಡುವ, ಆ ದೇಶದ ಉನ್ನತಿಯ ಕ್ಷಯಕ್ಕೆ ಕಾರಣವಾಗುವ ಅಂತಃಕಲಹ, ಯಾವುದೇ ದೇಶಕ್ಕೂ ಮಾರಕವಾದದ್ದು. ಅದರಲ್ಲೂ ಭಾರತದಂತಹ ವಿಪುಲ ಜನಸಂಖ್ಯೆಯ, ಕೇವಲ ಐವತ್ತು ವರ್ಷಗಳ ಸ್ವಾತಂತ್ರ್ಯದ ಇತಿಹಾಸವಿರುವ ಪ್ರಜಾಪ್ರಭುತ್ವವಾದಿ ರಾಷ್ಟ್ರಕ್ಕೆ ಧರ್ಮ, ಪ್ರಾಂತ್ಯ, ಗಡಿ ಸಮಸ್ಯೆಗಳು ಭಯಾನಕ ಪಿಡುಗಾಗಿ ಕಾಡುತ್ತವೆ.

ನಮ್ಮ ಹಿಂದಿನ ಮೂರು ತಲೆಮಾರುಗಳ ನಿರಂತರ ಸಂಘರ್ಷದ ಫಲವಾಗಿ ಬ್ರಿಟಿಷ್ ವಸಾಹತುಶಾಹಿ ರಕ್ಕಸತನದಿಂದ ಸ್ವತಂತ್ರವಾದ ಮರುಗಳಿಗೆ ಈ ದೇಶಕ್ಕೆ ತನ್ನದೇ ಆಡಳಿತ, ಅಭಿವೃದ್ಧಿ ಯೋಜನೆಗಳನ್ನು ರೂಢಿಸಿಕೊಳ್ಳುವುದರ ಅಗತ್ಯವಿತ್ತು. ನಾಗರಿಕತೆಯ ಮೊದಲ ದಿನದಿಂದ ಮೊನ್ನೆ, ಮೊನ್ನೆಯವರೆಗೆ ಆಯಾ ಪ್ರಾಂತ್ಯದಲ್ಲಿ ತನ್ನದೇ ಭಿನ್ನ ಶೈಲಿ, ಸಂಪ್ರದಾಯ, ಭಾಷೆ ರೂಢಿಸಿಕೊಂಡಿದ್ದ ಸಮುದಾಯಗಳು ಒಂದೇ ಸೂರಿನಡಿ ನಿಲ್ಲುವ ಭಾವನಾತ್ಮಕ ಏಕೀಕರಣ ಸಾಧ್ಯವಾಗಬೇಕಿತ್ತು. ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿದ್ದ ಸ್ವರಾಜ್ಯ ಸಂಪಾದನೆಯೆಂಬ ನಿರಂತರ ಹೋರಾಟ, ಕೊಂಚ ಮಟ್ಟಿಗೆ ಈ 'ಭಾರತ' ಎಂಬ ಕಲ್ಪನೆ ಏಕೀಕರಣಕ್ಕೆ ಕಾರಣವಾಗಿತ್ತು.

## ನಗೆಪಾಟಲು

ಸ್ವತಂತ್ರವಾದ ಮರುಗಳಿಗೆಯೇ ಸ್ವರಾಜ್ಯದ ಪ್ರಥಮ ಆದ್ಯತೆ ಈಡೇರಿ ಬದುಕು, ಸಮಾನತೆಯ ಅಂಶಗಳೇ ಪ್ರಮುಖವಾದವು. ದೇಶಭಕ್ತಿಯೆನ್ನುವುದೆಲ್ಲ ನಗೆಪಾಟಲಿಗೀಡಾಗುತ್ತ ನಂತರದ ದಿನಗಳಲ್ಲಿ ಭಾರತೀಕರಣವೆಂಬುದೆಲ್ಲ ಸನಾತನಿಗಳ ಗುತ್ತಿಗೆಯಾಯಿತು. ದೇಶಪ್ರೇಮ ಎಂದವರನ್ನೇ ಸಂಶಯದಿಂದ ನೋಡುವ ವಾತಾವರಣ ಸೃಷ್ಟಿಗೊಂಡು ದೇಶವಾಸಿಗಳ ನಡುವೆ ಗತ ಇತಿಹಾಸದ ನೆನಪುಗಳು ಜಾತಿ, ಧರ್ಮ, ಶ್ರೇಣಿಯಾಧಾರಿತ ಅಸಮಾನತೆಯ ವಿರುದ್ಧ ಸಿಡಿದೇಳುವಂತೆ ಮಾಡಿ ರಚನಾತ್ಮಕ ಚಳವಳಿಗಳು ಮೈದಾಳಿದವಾದರೂ ಒಂದೆಡೆ ತೀವ್ರವಾದಿಗಳಿಂದಾಗಿ ಅರಾಜಕ ಸ್ಥಿತಿ ನಿರ್ಮಿಸಿದವು.

ಸ್ವಾತಂತ್ರ್ಯ ಚಳವಳಿಯಲ್ಲಿ ಪಾಲ್ಗೊಂಡ ಪ್ರತಿಯೊಬ್ಬರ ಬೆವರು, ನೆತ್ತರುಗಳಿಂದ ಪಡೆಯಲ್ಪಟ್ಟ ಸ್ವಾತಂತ್ರ್ಯ ಎಂಬುದು ನಂತರದ ತಲೆಮಾರಿನವರಿಂದ, "ಯಾರಿಗೆ ಬಂತು, ಎಲ್ಲಿಗೆ ಬಂತು ನಲವತ್ತೇಳರ ಸ್ವಾತಂತ್ರ್ಯ" ಎನ್ನಿಸಿಕೊಂಡು ಗೇಲಿಗೊಳಗಾಯಿತು, ಅದು ವಾಸ್ತವವೂ ಆಗಿತ್ತು. ಐವತ್ತು ವರ್ಷಗಳ ಪ್ರಥಮ ಹಂತದಲ್ಲಿ ನೆಹರೂ ಪ್ರಣೀತ ಔದ್ಯೋಗಿಕ ವಾದ, ಆಧುನಿಕತೆಯ ಮಾತುಗಳ ನಡುವೆ ಗಾಂಧೀವಾದ ಎಂಬುದು ಸಾಮೂಹಿಕ ಹಾಸ್ಯವೆಂಬಂತಾಗಿ ಸೋತಿತು. ನೆಹರೂ ಯುಗದ ಸಿದ್ಧಾಂತಗಳು ವಿವಾದಕ್ಕೀಡಾದಾಗಲೂ ಅಲ್ಲಿ ಕನಿಷ್ಠಮಟ್ಟದ ಪ್ರಾಮಾಣಿಕತೆಯಾದರೂ ಇತ್ತು.

ನಂತರ ಪ್ರಾಮಾಣಿಕತೆ ಮಾಯವಾಗಿ ಕೇವಲ ಜನಪ್ರಿಯತೆ ಹಾಗೂ ಆ ಕ್ಷಣದ ಸಾಂತ್ವನ ಒದಗಿಸಬಲ್ಲ ತತ್ಕಾಲೀನ ಯೋಜನೆಗಳು ಜಾರಿಗೆ ಬಂದು ಇವತ್ತಿನ ಸ್ಥಿತಿಯಲ್ಲಿ ಸರಕಾರವೆಂಬವುಗಳೇ ದುರ್ಬಲಗೊಂಡು ಅನಿಶ್ಚಿಯತೆ, ಅಸ್ಥಿರತೆಗಳೆಂಬ ತೂಗುಕತ್ತಿಗಳ ಕೆಳಗೆ ಕೊರಳೊಡ್ಡಿ ಶಾಶ್ವತ ಪರಿಹಾರ ಕಂಡುಹಿಡಿಯುವ ಬದಲು ಮುಂದೆ ತಳ್ಳುತ್ತಾ ಕಾಲ ನೂಕುವ ಸ್ಥಿತಿ ಏರ್ಪಟ್ಟ ದೃಶ್ಯ ವರ್ತಮಾನದ ಭಾರತ.

## ದೇಶೀಯ ನೆಲೆಯಲ್ಲಿ ಗುರುತಿಸಬೇಕು

ಪುಸ್ತಕಗಳಿಂದ ಭಾರತೀಯ ಸ್ವಾತಂತ್ರ್ಯ ಹೋರಾಟ ಬಲ್ಲ ಈ ತಲೆಮಾರಿನ ನಾವು ಮಾಡಬೇಕಾದದ್ದು ಈ ದೇಶದ ಸಮಸ್ಯೆಗಳನ್ನು ದೇಶೀಯ ನೆಲೆಯಲ್ಲಿಯೇ ಗುರುತಿಸಬೇಕಾದದ್ದು ಹಾಗೂ ದೇಶೀಯತೆಯ ಜಾಡಿನಲ್ಲಿಯೇ ಪರಿಹಾರಗಳನ್ನು ಹುಡುಕಬೇಕಾದದ್ದು. 'ಇಂಡಿಯಾ' ಎಂಬುದರ ಸಮಸ್ಯೆಗಳು ಪ್ರಮುಖವಾಗಿ 'ಜಾತಿ' ಸಮಸ್ಯೆಯಿಂದಲೇ ಪ್ರಾರಂಭವಾದವುಗಳಾದ್ದರಿಂದ ಇಂಡಿಯಾದ ಆಚೆಗಿನ ಪರಿಹಾರಗಳು ಇಂಡಿಯಾದೊಳಗಿನ ಸಮಸ್ಯೆಗಳಿಗೆ ಸಮಗ್ರ ಪರಿಹಾರವಲ್ಲವೆಂಬುದನ್ನು ಅಂತಿಮವಾಗಿ ಕಂಡುಕೊಂಡಿರುವ ನಾವು ಸನಾತನಿಗಳಿಗಿಂತ, ಅವರು ಹೇಳುವ ಭಾರತೀಕರಣಕ್ಕಿಂತ ಭಿನ್ನವಾದ ಬಗೆಯಲ್ಲಿ 'ಇಂಡಿಯನ್‌ನೆಸ್' ಅಳವಡಿಸಿಕೊಳ್ಳಬೇಕಿದೆ. ಅಂಥ ದೇಶಪ್ರೇಮವೇ ನಮ್ಮನ್ನು ಸಮಸ್ಯೆಗಳಿಂದ ಮುಕ್ತಗೊಳಿಸಬಲ್ಲದೆಂಬ ವ್ಯಾವಹಾರಿಕ ನಿಲುವಿನಿಂದಲೇ ಭಾರತೀಯತೆಯ ಆವಾಹನೆ ಈ ಕಾಲದ ತುರ್ತು ಎಂಬುದನ್ನು ನಾವು ಒಪ್ಪಬೇಕಿದೆ. ಮುಕ್ತ ಪ್ರವೇಶ ಪಡೆದಿರುವ ಬಹುರಾಷ್ಟ್ರೀಯ ಕಂಪನಿಗಳು, ಉದಾರೀಕರಣ, ವಸಹಾತುಶಾಹಿ ಧೋರಣೆಗಳಿಗಿರುವ ಮುಕ್ತ ಬೆಂಬಲಗಳೆಲ್ಲ ಸಮಸ್ಯೆಗಳನ್ನಿನ್ನೂ ಜಟಿಲಗೊಳಿಸುತ್ತಿವೆ.

ಐವತ್ತು ವರ್ಷಗಳಲ್ಲಿ ಮೂರು ಪಟ್ಟು ಹೆಚ್ಚಿದ ಜನಸಂಖ್ಯೆ, ಮೂರು ಯುದ್ಧಗಳು, ನೈಸರ್ಗಿಕ ವಿಕೋಪಗಳು, ಮಾರಕ ಕೋಮುಗಲಭೆ, ದಂಗೆ, ಜಾತಿ, ಪ್ರಾಂತ್ಯ, ಪಂಗಡದ ಹೆಸರಿನ ಸತತ ಅಂತರ್ಯುದ್ಧಗಳೊಂದಿಗೆ ಏಗುತ್ತ ಬಂದಿರುವ ಈ ದೇಶದಲ್ಲಿ ಸ್ವರ್ಗವೇ ಧರೆಗಿಳಿದು ಬಂದಿದೆ ಎಂಬಂತಹ ರೋಮಾಂಚಕ ಬದಲಾವಣೆಗಳು ನಡೆದಿರಲಿಕ್ಕಿಲ್ಲ. ಆದರೆ, ಆಗಿರುವ ಬದಲಾವಣೆಗಳು ತಳ್ಳಿಹಾಕುವಂತಹವಲ್ಲ. ಕೊನೇಪಕ್ಷ ಅಕ್ಷರಗಳಿಂದ ಗಾವುದ ದೂರವಿದ್ದ ನಾನೂ, ನನ್ನಂತಹವರು ಅಕ್ಷರ ಪಡೆದು ಈ ಐದು ದಶಕಗಳ ಭಾರತೀಯ ಬದುಕಿನ ಮೇಲೆ ಭಾಷ್ಯ ಬರೆಯುವಂತಾದ್ದನ್ನಾದರೂ ನಾವು ಒಪ್ಪಿಕೊಳ್ಳಲೇಬೇಕು.

ಸಂಪನ್ಮೂಲ

ಯಾವುದೇ ನಾಡಿನ ಮುಖ್ಯ ಸಂಪನ್ಮೂಲ ಆ ದೇಶದ ಜನಶಕ್ತಿ. ನನ್ನ ದೇಶ, ನನ್ನ ಜನವೆಂಬ ಭಾವವಿಲ್ಲದೇ ಕೇವಲ ವೈಯಕ್ತಿಕ ಉಳಿವಿಗಾಗಿ ಬದುಕಿದವರು ಏನೂ ಮಾಡಲಾರರು. ಭಾವನಾತ್ಮಕ ವಾದವಂತೆನ್ನಿಸಿದರೂ ಪ್ರತಿ ದೇಶ ಬಲಗೊಳ್ಳಬೇಕಾದರೆ ಈ ತಾದಾತ್ಮ್ಯ ಅನಿವಾರ್ಯ. ಸಮಷ್ಟಿ ಕಲ್ಪನೆಯಿಲ್ಲದ ಸಮುದಾಯ ಅಂತರಂಗದಲ್ಲಿ ಸ್ವಾರ್ಥಿಯಾಗುತ್ತ, ದಿನಗಳೆದಂತೆ ಕ್ರೌರ್ಯ ಪ್ರದರ್ಶಿಸುತ್ತ ತನ್ನ ಅವನತಿಗೆ ತಾನೇ ಕಾರಣವಾಗುತ್ತದೆ ಎಂಬುದನ್ನು ನಾಗರಿಕತೆಯ ಇತಿಹಾಸದುದ್ದಕ್ಕೂ ನಾವು ಕಂಡಿರುವ ಚಾರಿತ್ರಿಕ ಸತ್ಯವಾದ ಕಾರಣ ಎಲ್ಲ ದಿಕ್ಕಿನಿಂದಲೂ ಅಪಾಯದ ಗಂಟೆಗಳು ಮೊಳಗುತ್ತಿರುವಾಗ ಈ ನಿರ್ಣಾಯಕ ಸಂದರ್ಭದಲ್ಲಾದರೂ ಈ ದೇಶದ ಹೊಸ ತಲೆಮಾರು ಭಾರತೀಯತೆಯ ಪುನಃ ಶೋಧದತ್ತ ಮುಖ ಮಾಡಿ ನಿಲ್ಲಬೇಕಿದೆ.

ಎಲ್ಲದಿಕ್ಕಿನೆಡೆಯಿಂದಲೂ ಬರುತ್ತಿರುವ ನಿರಾಶಾದಾಯಕ ಫಲಿತಾಂಶಗಳು, ಬುದ್ಧಿಜೀವಿಗಳೆನ್ನಿಸಿಕೊಂಡವರ Nehlistic ವಾದಗಳು, ಪ್ರತಿ ಹಂತದಲ್ಲೂ ಬೇರು ಬಿಟ್ಟಿರುವ ಭ್ರಷ್ಟತೆಯ ನಡುವೆ ದಿಕ್ಕುಗೆಟ್ಟಿರುವಂತೆ ನಿಂತ ಯುವಜನರೊಂದಿಗಿರುವ ನನಗೆ ನೇತಾಜಿ ಸುಭಾಸ್‌ಚಂದ್ರ ಬೋಸರ ಒಂದು ಮಾತು ನೆನಪಾಗುತ್ತದೆ. "ಸ್ವಪ್ರಜ್ಞೆ ಇರುವ ಯುವಜನ ಬರಿದೇ ಕ್ರಿಯಾಶೀಲರಷ್ಟೇ ಅಲ್ಲ, ಕನಸು ಕಾಣುವವರೂ ಹೌದು; ಕೇವಲ ನಾಶ ಮಾಡುವುದಲ್ಲ, ಕಟ್ಟುತ್ತಾರೆ ಕೂಡ."

ಬಹುಶಃ ಇವತ್ತಿಗೂ ನೇತಾಜಿಯವರ ಈ ಮಾತುಗಳೇ ಇವತ್ತಿನ ಯುವ ಪೀಳಿಗೆಯ ಮುಂದಿರಬೇಕಾದ ಪ್ರಣಾಳಿಕೆಯೆಂಬಂತೆ ತೋರುತ್ತಿದೆ. ನಿಖರ 'ಸ್ವಪ್ರಜ್ಞೆ' ಇವತ್ತಿನ ಪ್ರತಿ ಯುವಜನರ ಮೂಲ ಸೂತ್ರವಾಗಬೇಕಿದೆ. ಕೇವಲ ರಾಜಕೀಯ ದಾಸ್ಯದಿಂದ ಬಿಡುಗಡೆ ಪಡೆದಿರುವ ಭಾರತ ಐವತ್ತು ವರ್ಷಗಳ ಅನಂತರವೂ ಸಂಪತ್ತಿನ ಸಮಾನ ಹಂಚಿಕೆ, ಜಾತಿ ಹಾಗೂ ಸಾಮಾಜಿಕ ಅಸಮಾನತೆಯ ನಿರ್ಮೂಲನೆ, ಕೋಮುವಾದ ಹಾಗೂ ಮತೀಯ ಅಸಹನೆಯ ನಾಶಕ್ಕಾಗಿ ಸೆಣಸುತ್ತಲೇ ಇದೆ. ಈ ಸಂಘರ್ಷ ಸಫಲವಾಗಬೇಕಾದಲ್ಲಿ ಮತ್ತೆ, ಮತ್ತೆ ನಾವು ಕಂದಾಚಾರಗಳಿಂದ ಹೊರತಾದ ಭಾರತೀಯತೆಗಾಗಿ ಹಂಬಲಿಸಿ ಹೊಸತು ನಾಡು ಕಟ್ಟುವ ಹಸಿವಿನಿಂದ ಒಂದಾಗಬೇಕಾಗಿದೆ. ಏನೆಲ್ಲ ಏರಿಳಿತ ನೋಡಿರುವ ಈ ದೇಶ ಆಯಾ ಕಾಲದ ಜಡ ಪೀಳಿಗೆಯಿಂದ ಆಯಾ ಸಂದರ್ಭದಲ್ಲಿ ಬಸವಳಿದಂತೆ ಕಂಡರೂ ಮತ್ತೆ ಮತ್ತೆ ಹುಟ್ಟಿ ಬಂದ ಶ್ರದ್ಧಾಳು ಜನರಿಂದಾಗಿ ತಲೆಯೆತ್ತುತ್ತಲೇ ನಿಂತಿದೆ. ದೇಶ ಕೆಟ್ಟಿದೆ, ಕಾಲ ಕೆಟ್ಟಿದೆ ಎನ್ನುವವರು ಯಾವಾಗಲೂ ಇರುತ್ತಾರೆ. ಹಾಗನ್ನುವವರೇ ಕೆಡುವುದಕ್ಕಿನ್ನಷ್ಟು ಕಾಣಿಕೆ ಸಲ್ಲಿಸುತ್ತಿರುತ್ತಾರೆ. ನಾವೀಗ ಎಚ್ಚರವಾಗಬೇಕಾದದ್ದು ಇಂಥವರ ಬಗ್ಗೆ.

* * *

ಕೃಪೆ : 'ಸ್ವಾತಂತ್ರ್ಯ ಸ್ವರ್ಣೋದಯ' ಆಗಸ್ಟ್ ೧೯೯೭, ಉದಯವಾಣಿ, ತುಷಾರ, ರೂಪತಾರಾ, ತರಂಗ ಪತ್ರಿಕೆಗಳ ವಿಶೇಷ ಸಂಚಿಕೆ.

# ಅನುಬಂಧ - ೧

## ಕನ್ನಡದ ಸಾಂಸ್ಕೃತಿಕ ಸಂಸ್ಥೆ ಕರ್ನಾಟಕ ವಿದ್ಯಾವರ್ಧಕ ಸಂಘ

• ಡಾ. ಜಿ. ಎಂ. ಹೆಗಡೆ

ಕರ್ನಾಟಕ ಸಾಂಸ್ಕೃತಿಕ ಇತಿಹಾಸದಲ್ಲಿ ಕನ್ನಡ ನಾಡು-ನುಡಿ, ಸಾಹಿತ್ಯದ ಏಳಿಗೆಯ ಏಕೈಕ ಉದ್ದೇಶದಿಂದ ಹುಟ್ಟಿಕೊಂಡ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ನೂರಾಹತ್ತು ವರ್ಷಗಳ ದೊಡ್ಡ ಪರಂಪರೆಯಿದೆ. ದಕ್ಷಿಣ ಮಹಾರಾಷ್ಟ್ರವಾಗಿದ್ದ ಧಾರವಾಡದಲ್ಲಿ ಮರಾಠಿ ಪ್ರಾಬಲ್ಯದಿಂದ ಕನ್ನಡದ ಸ್ಥಿತಿ ಶೋಚನೀಯವಾಗಿದ್ದ ಸಂದರ್ಭದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ (೨೦ ಜುಲೈ, ೧೮೯೦) ಸ್ಥಾಪಿತವಾದದ್ದು ಒಂದು ಚಾರಿತ್ರಿಕ ಘಟನೆಯಾಗಿದೆ. ಅಖಿಲ ಕರ್ನಾಟಕ ವ್ಯಾಪ್ತಿಯ ಮೊದಲ ಸಾಂಸ್ಕೃತಿಕ ಸಂಸ್ಥೆಯಾದ ಕರ್ನಾಟಕ ವಿದ್ಯಾವರ್ಧಕ ಸಂಘದ ಮೊದಲ ಅಧ್ಯಕ್ಷರು ಶಾಮರಾವ್ ವಿಠ್ಠಲ ಕಾಯ್ಕಿಣಿ. ಕಾರ್ಯದರ್ಶಿ ರಾ. ಹ. ದೇಶಪಾಂಡೆ. ಕರ್ನಾಟಕದ ವಿವಿಧ ಭಾಗಗಳ ಕನ್ನಡಿಗರು ಇದರ ಆಜೀವ ಸದಸ್ಯರು. ಕನ್ನಡಕ್ಕಾಗಿ ದುಡಿದ ರಿಫ್ಗ್ಲರ್, ಕಿಟೆಲ್, ಬಿ. ಎಲ್. ರೈಸ್ ಮೊದಲಾದ ವಿದೇಶಿ ಮಿಶನರಿಗಳು ಗೌರವಸದಸ್ಯರಾಗಿ; ಬಿ. ಎಂ. ಶ್ರೀ, ಮಾಸ್ತಿ, ಆಲೂರು ವೆಂಕಟರಾವ್, ಮೊದಲಾದ ಹಿರಿಯ ಸಾಹಿತಿಗಳು ಪ್ರಧಾತೃಗಳಾಗಿದ್ದ ಕರ್ನಾಟಕ ವಿದ್ಯಾವರ್ಧಕ ಸಂಘ ಕನ್ನಡದ ಏಳಿಗೆಗೆ ಶ್ರಮಿಸಲು ಮುಂದಾಯಿತು. ಕನ್ನಡ ಸಾಹಿತ್ಯ ಪರಿಷತ್ತು ಮತ್ತು ನಾಡಿನ ಬೇರೆ ಬೇರೆ ಕನ್ನಡಪರ ಸಂಘ-ಸಂಸ್ಥೆಗಳಿಗೆ ಕರ್ನಾಟಕ ವಿದ್ಯಾವರ್ಧಕ ಸಂಘ ಮಾತೃಸಂಸ್ಥೆಯಾಗಿದೆ. ಕನ್ನಡದ ಪುನರುಜ್ಜೀವನದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ಅದ್ವಿತೀಯ ಕಾರ್ಯ ಮಾಡಿದೆ. ಮುಂಬಯಿ ಕರ್ನಾಟಕದಲ್ಲಿ ಮರಾಠಿ; ನಿಜಾಮರ ಆಡಳಿತದ ಹೈದರಾಬಾದ್ ಕರ್ನಾಟಕದಲ್ಲಿ ಉರ್ದು, ತೆಲುಗು; ಮದ್ರಾಸ್ ಪ್ರಾಂತದಲ್ಲಿ ತಮಿಳು ಭಾಷಾ ಪ್ರಾಬಲ್ಯ ಪಡೆದು ಕನ್ನಡ ನಿರ್ಲಕ್ಷ್ಯಕ್ಕೆ ಗುರಿಯಾದಾಗ ಕನ್ನಡಕ್ಕೆ ಶಿಕ್ಷಣದಲ್ಲಿ ಸಾಹಿತ್ಯಿಕ, ಸಾಂಸ್ಕೃತಿಕ ಜೀವನದಲ್ಲಿ ಗಣ್ಯಸ್ಥಾನವನ್ನು ತಂದುಕೊಡಲು ಕರ್ನಾಟಕ ವಿದ್ಯಾವರ್ಧಕ ಸಂಘ ಮುಂದಾಯಿತು. ಆರಂಭದಲ್ಲಿ ಕನ್ನಡದಲ್ಲಿ ಮಾತನಾಡಲು, ಉಪನ್ಯಾಸ ಮಾಡಲು ಹುರಿದುಂಬಿಸಿ, ಕನ್ನಡ ಉಪನ್ಯಾಸಮಾಲೆ, ಕನ್ನಡ ವಾಕ್‌ಸ್ಪರ್ಧೆಗಳನ್ನು ಅದು ನಡೆಸಿತು. ಸಾಹಿತ್ಯಿಕ ಪರೀಕ್ಷೆಯನ್ನು ನಡೆಸುವ ಮೂಲಕ ಕನ್ನಡದ ಅಭ್ಯಾಸಕ್ಕೆ ಬುನಾದಿ ಹಾಕಿತು. ಧಾರವಾಡದಲ್ಲಿ ಗ್ರಂಥಕರ್ತರ ಸಮ್ಮೇಳನ ಜರುಗಿಸಿ ಕನ್ನಡ ಲೇಖಕರ ಗ್ರಂಥ ಪ್ರಕಾಶನಕ್ಕೆ ಉತ್ತೇಜನ ನೀಡಿತು. ಜಿಲ್ಲಾ ಸಾಹಿತ್ಯ ಸಮ್ಮೇಳನ ಪರಂಪರೆಯನ್ನು ಮೊದಲು ಆರಂಭಿಸಿದ್ದು

ಕರ್ನಾಟಕ ವಿದ್ಯಾವರ್ಧಕ ಸಂಘ. ಕನ್ನಡ ವಾಙ್ಮಯ ಪ್ರಸಾರಕ್ಕಾಗಿ 'ವಾಗ್ಭೂಷಣ ಪಂಡಿತ' ಪತ್ರಿಕೆಯನ್ನು ೧೮೯೬ ರಲ್ಲಿ ಆರಂಭಿಸಿ ೨೩ ವರ್ಷಗಳ ಕಾಲ ನಡೆಸಿ ಕನ್ನಡ ವಿದ್ವತ್ತಿನ ಬೆಳವಣಿಗೆಗೆ ಕಾರಣವಾಯಿತು.

ಧಾರವಾಡದ ಕಲೆಕ್ಟರಾಗಿದ್ದ ಗಿಬ್ಸ್ ಅವರಿಂದ ನಿವೇಶನ ಪಡೆದುಕೊಂಡು ೧೯೦೫ ರಲ್ಲಿ ಆರಂಭಗೊಂಡ ಕರ್ನಾಟಕ ವಿದ್ಯಾವರ್ಧಕ ಸಂಘದ ಕಟ್ಟಡ ಮೈಸೂರು ಮಹಾರಾಜರು ಹಾಗೂ ಸಾರ್ವಜನಿಕರು, ಕನ್ನಡಾಭಿಮಾನಿಗಳ ಆರ್ಥಿಕ ಸಹಾಯದಿಂದ ನಗರದ ಹೃದಯಸ್ಥಾನದಲ್ಲಿ ಸಾಂಸ್ಕೃತಿಕ ಕೇಂದ್ರವಾಗಿ ಬೆಳೆದು ನಿಂತಿದೆ. ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಬಹು ಹಿಂದೆಯೇ ಆರಂಭಗೊಂಡ ಗ್ರಂಥಾಲಯ ಮತ್ತು ಶಾಂತೇಶ ವಾಚನಾಲಯ ಇಂದಿಗೂ ಅಪೂರ್ವ ಭಂಡಾರವಾಗಿದೆ. ಸಾಹಿತ್ಯ ಪ್ರೇಮಿ ಕನ್ನಡ ಓದುಗರಿಗೆ ಪ್ರಿಯವಾದ ತಾಣವಾಗಿದೆ.

ಕರ್ನಾಟಕ ವಿದ್ಯಾವರ್ಧಕ ಸಂಘ ತನ್ನ ನೂರಾಹತ್ತು ವರ್ಷಗಳ ಇತಿಹಾಸದಲ್ಲಿ ನೂರಕ್ಕೂ ಹೆಚ್ಚು ಗ್ರಂಥಗಳನ್ನು ಪ್ರಕಟಿಸಿದೆ. ಗಳಗನಾಥರಂತಹ ಕಾದಂಬರಿಕಾರರ ಮೊದಲ ಪುಸ್ತಕ ಪ್ರಕಟಿಸಿ ಸಾಹಿತ್ಯಕ್ಷೇತ್ರದಲ್ಲಿ ಅವರು ಬೆಳಗುವಂತೆ ಮಾಡಿದೆ. ೧೮೯೨ ರಲ್ಲಿ ಭವಭೂತಿಯ ಉತ್ತರರಾಮಚರಿತದ ಕಾವ್ಯಾವಲೋಕನ, ಶಬ್ದಾನುಶಾಸನ, ಕನ್ನಡದ ನೆಲೆ, ಕರ್ನಾಟಕ ಜನಜೀವನ, ಜೈನಧರ್ಮ ಪರಿಭಾಷೆ, ಸರ್ವಜ್ಞನ ವಚನಗಳು, ಕರ್ನಾಟಕದ ಹರಿದಾಸರು, ಅಸಂಗತನಾಟಕಗಳು, ಚೆನ್ನವೀರ ಕಣವಿ ಕಾವ್ಯದೃಷ್ಟಿ, ರುಚಿ, ಮೊದಲಾದ ಮೌಲಿಕ ಸಾಹಿತ್ಯ ಕೃತಿಗಳನ್ನು ಪ್ರಕಟಿಸಿದೆ. ದಕ್ಷಿಣ ಕರ್ನಾಟಕ – ಉತ್ತರ ಕರ್ನಾಟಕದ ಸಾಂಸ್ಕೃತಿಕ ಬಾಂಧವ್ಯವನ್ನು ಬೆಳೆಸಲು ಕರ್ನಾಟಕ ವಿದ್ಯಾವರ್ಧಕ ಸಂಘ ಮೊದಲಿನಿಂದಲೂ ಯತ್ನಿಸುತ್ತ ಬಂದಿದೆ. ನಾ. ವೆಂ. ಕುರಿಡಿಯವರು 'ಆರ್. ನರಸಿಂಹಾಚಾರ್ಯರ ಜೀವನಚರಿತ್ರೆ'ಯನ್ನು, ಬಿ. ವೆಂಕಟಾಚಾರ್ಯರ 'ಅಮೃತಪುಲಿನಗಳು' ಪುಸ್ತಕಗಳನ್ನು ಸಂಘ ಪ್ರಕಟಿಸಿದೆ. ೧೯೦೦ ರಿಂದ ೧೯೪೦ ರ ವರೆಗೆ ೧೭೫ ಗ್ರಂಥಕಾರರಿಗೆ ೧೮,೯೯೦ ರೂಪಾಯಿಗಳ ಸಂಭಾವನೆ ನೀಡಿ ಅವರ ಸಾಹಿತ್ಯ ವ್ಯವಸಾಯಕ್ಕೆ ಸಂಘ ಪ್ರೋತ್ಸಾಹ ನೀಡಿದೆ. ಬೇಂದ್ರೆ, ಬೆಟಗೇರಿಯವರು ೧೯೦೬ ರಲ್ಲಿ ಆರಂಭಿಸಿದ ನಾಡಹಬ್ಬದ ಉತ್ಸವವನ್ನು ನಿರಂತರವಾಗಿ ಸಂಘ ನಡೆಸಿಕೊಂಡು ಬಂದಿದೆ.

ಕನ್ನಡಿಗರಲ್ಲಿ ಭಾಷಾಭಿಮಾನ, ಕನ್ನಡ ಸಂಸ್ಕೃತಿಯ ಅಭಿಮಾನ ಬೆಳೆಸಿದ ಕರ್ನಾಟಕ ವಿದ್ಯಾವರ್ಧಕ ಸಂಘವು ಕರ್ನಾಟಕ ಏಕೀಕರಣಕ್ಕಾಗಿ ದೊಡ್ಡ ಹೋರಾಟ ಮಾಡಿದೆ. ಭಾರತ ಸ್ವಾತಂತ್ರ್ಯ ಮತ್ತು ಕನ್ನಡತ್ವದ ವಿಕಾಸ ಸಂಘದ ಧ್ಯೇಯವಾಗಿತ್ತು. ಧಾರವಾಡದಲ್ಲಿ ಕನ್ನಡ ಸಂಶೋಧನ ಕೇಂದ್ರ ಹಾಗೂ ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆ, ಆಕಾಶವಾಣಿಯ ಕೇಂದ್ರದ ಹುಟ್ಟು – ಇವೆಲ್ಲದರಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ಅಪಾರವಾಗಿ ಶ್ರಮಿಸಿದೆ. ೧೯೧೧ ರಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಬಿ. ಎಂ. ಶ್ರೀಕಂಠಯ್ಯನವರು 'ಕನ್ನಡಮಾತು ತಲೆ ಎತ್ತುವ ಬಗೆ' ವಿಷಯವಾಗಿ ಉದ್ಬೋಧಕ ಉಪನ್ಯಾಸ ಮಾಡಿದ್ದನ್ನು ಇಲ್ಲಿ ಉಲ್ಲೇಖಿಸಬೇಕು. ಕನ್ನಡ ನಾಡು-ನುಡಿಯ ಹೋರಾಟಕ್ಕಾಗಿ ಕರ್ನಾಟಕ ವಿದ್ಯಾವರ್ಧಕ ಸಂಘ ತನ್ನ ಹೃದಯವನ್ನು ತೆರೆದುಕೊಂಡು ಕಾರ್ಯಮಾಡಿದೆ. ಗೋಕಾಕ ಚಳುವಳಿಯ ಕೇಂದ್ರಸ್ಥಾನ ಧಾರವಾಡದ ವಿದ್ಯಾವರ್ಧಕ ಸಂಘ ಎಂಬುದು ಸರ್ವವಿದಿತ. ಕನ್ನಡ ಚಳುವಳಿಯ ಇತಿಹಾಸದಲ್ಲಿ ವಿದ್ಯಾವರ್ಧಕ ಸಂಘ ಮಹತ್ವದ ಪಾತ್ರ ವಹಿಸಿದೆ.

ಕನ್ನಡ ಸಾಹಿತಿಗಳ ಉಪನ್ಯಾಸ, ಸನ್ಮಾನ, ಸಾಹಿತ್ಯ ವಿಚಾರಸಂಕಿರಣ, ಕವಿಗೋಷ್ಠಿಗಳನ್ನು ಎಡಬಿಡದೆ ನಡೆಸುತ್ತ ಬಂದ ವಿದ್ಯಾವರ್ಧಕ ಸಂಘವು ಹಲವು ವೇದಿಕೆಗಳ ಮೂಲಕ ಕಾರ್ಯಕ್ರಮ ನಡೆಸುತ್ತಲಿದೆ. ಸಾಸನೂರ ವ್ಯಾಖ್ಯಾನಮಾಲೆ, ಕಿತ್ತೂರರಾಣಿ ಚೆನ್ನಮ್ಮ ದಿನಾಚರಣೆ, ಬಸವಜಯಂತಿ ಆಚರಣೆ, ಕಾನೂನು ಪರಿಣತರಿಗೆ ಪಾರಿತೋಷಕ, ಕೊಟ್ರಶೆಟ್ಟಿ ದತ್ತಿ ಉಪನ್ಯಾಸ, ಆರ್. ಸಿ. ಹಿರೇಮಠ ಸ್ಮಾರಕ ಭಾಷಣ, ಹೀಗೆ ಹಲವು ದತ್ತಿ ಉಪನ್ಯಾಸಗಳ ಜೊತೆಗೆ 'ಮಾತೋಶ್ರೀ ರತ್ನಮ್ಮ ಹೆಗ್ಗಡೆ ಮಹಿಳಾ ಗ್ರಂಥ ಬಹುಮಾನ'ದ ಯೋಜನೆಯಲ್ಲಿ ಐವತ್ತಕ್ಕೂ ಹೆಚ್ಚು ಲೇಖಕಿಯರಿಗೆ ಗ್ರಂಥ ಬಹುಮಾನ ನೀಡಿ ಸನ್ಮಾನಿಸಿದ ಕೀರ್ತಿ ವಿದ್ಯಾವರ್ಧಕ ಸಂಘಕ್ಕಿದೆ. ಸಾಹಿತಿಗಳ ಭಾವಚಿತ್ರಗಳ ದೊಡ್ಡ ಭಂಡಾರವನ್ನು ಇದು ಹೊಂದಿದೆ.

ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ಕನ್ನಡದ ಧೀಮಂತ ಹೋರಾಟಗಾರ ಪತ್ರಕರ್ತ, ಅಂಕಣಕಾರ ನಾಡೋಜ ಡಾ. ಪಾಟೀಲ ಪುಟ್ಟಪ್ಪನವರು ಮೂರು ದಶಕಗಳಿಂದ ಅಧ್ಯಕ್ಷರಾಗಿದ್ದು, ಸಾಹಿತಿ, ಸಂಶೋಧಕ, ಕನ್ನಡಾಭಿಮಾನಿಗಳಿಂದ ಕೂಡಿದ ಕಾರ್ಯಕಾರಿ ಸದಸ್ಯಮಂಡಳಿಯು ಸಂಘದ ಬೆಳವಣಿಗೆಗೆ ಶ್ರಮಿಸುತ್ತಿದೆ. ವ್ಯಾಪಾರ ಮಳಿಗೆಗಳ ಮೂಲಕ ಸಂಘಕ್ಕೆ ಶಾಶ್ವತ ಆದಾಯ, ಆರ್ಥಿಕ ಸಂಪನ್ಮೂಲ ಬರುವಂತೆ ಮಾಡಿದೆ. ಈಗ ಸುಸಜ್ಜಿತವಾದ ದೊಡ್ಡ ಸಭಾಭವನದ ನಿರ್ಮಾಣಕಾರ್ಯ ನಡೆದಿದೆ.

ಕರ್ನಾಟಕ ವಿದ್ಯಾವರ್ಧಕ ಸಂಘವು ಕನ್ನಡದ ಕೇಂದ್ರಸ್ಥಾನವಾಗಿ, ಧಾರವಾಡದ ಸಾಂಸ್ಕೃತಿಕ ಪ್ರಪಂಚದ ಹೃದಯಮಂದಿರವಾಗಿ, ಸಾಹಿತ್ಯಿಕ ಚಟುವಟಿಕೆಯ ನೆಲೆಯಾಗಿ ಕನ್ನಡದ ಸೇವೆಯನ್ನು ನಿರಂತರವಾಗಿ ನಡೆಸುತ್ತಿದೆ. ಗೋವೆಯಲ್ಲಿ ಕನ್ನಡ ಸಮ್ಮೇಳನ ಜರುಗಿಸಿ ಹೊರನಾಡಿನಲ್ಲಿರುವ ಕನ್ನಡಿಗರಲ್ಲಿ ಕನ್ನಡ ಸಂಸ್ಕೃತಿಯ ಅಭಿಮಾನ ಬೆಳೆಸಿದೆ. ದೇಶೀಯತೆ, ಭಾರತೀಯತೆಯ ಚಿಂತನೆಗೆ ಮಹತ್ವ ಹೆಚ್ಚುತ್ತಿರುವ ಸಮಕಾಲೀನ ಸಂದರ್ಭದಲ್ಲಿ ಸ್ವಾತಂತ್ರ್ಯಪೂರ್ವ ದಿನಗಳಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ನಾಡು-ನುಡಿ-ಸಾಹಿತ್ಯ, ಸಂಸ್ಕೃತಿಯ ಅಭಿಮಾನ ಬೆಳೆಸಿದ್ದು ನಿಜಕ್ಕೂ ಅನನ್ಯಕಾರ್ಯವೆನಿಸುತ್ತದೆ. ವಸಾಹತುಶಾಹಿ ಅನುಭವದಿಂದ ಬಿಡುಗಡೆಗೊಂಡು ಕನ್ನಡದ ಜನ ಸಾಂಸ್ಕೃತಿಕವಾಗಿ ಬೆಳೆಯಬೇಕೆಂಬ ಆಶಯವನ್ನು ವಿದ್ಯಾವರ್ಧಕ ಸಂಘ ಮೊದಲಿನಿಂದಲೂ ಸಾರುತ್ತ ಬಂದಿದೆ. 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ', 'ವಿಶ್ವಭಾರತಿಗೆ ಕನ್ನಡದಾರತಿ' ಯೆಂಬ ಕವಿವಾಣಿಯನ್ನು ಸಾಕಾರಗೊಳಿಸಲು ಸಂಘವು ತನ್ನನ್ನು ತೆರೆದುಕೊಂಡಿದೆ. ಕನ್ನಡ ನಾಡಿನ ಹಿರಿಯ ಸಾಂಸ್ಕೃತಿಕ ಸಂಸ್ಥೆಯಾದ ಕರ್ನಾಟಕ ವಿದ್ಯಾವರ್ಧಕ ಸಂಘವು ರಾಷ್ಟ್ರೀಯ ಸ್ವಾತಂತ್ರ್ಯದ ಹೋರಾಟ, ಆದರ್ಶವಾಸ್ತವಿಕತೆಯ ನುಡಿಚಿಂತನವನ್ನು ಗ್ರಂಥದ ಮೂಲಕ ಅನಾವರಣಗೊಳಿಸುತ್ತಿರುವದು ಚರಿತ್ರಾರ್ಹ ಸಂದರ್ಭವಾಗಿದೆ.

✻ ✻ ✻

# ಅನುಬಂಧ - ೨

## ನಮ್ಮ ಲೇಖಕರು

೧. ನರಸಿಂಹ ದಾಬಡೆ
ಸ್ವಾತಂತ್ರ್ಯಯೋಧರು
ತೇಜಸ್ವಿನಗರ, ಧಾರವಾಡ-೫೮೦ ೦೦೨

೨. ಎನ್ಕೆ ಕುಲಕರ್ಣಿ
ಸಾಹಿತಿಗಳು, 'ಪರಿಮಳ'
ಕಲ್ಯಾಣನಗರ, ಧಾರವಾಡ-೫೮೦ ೦೦೭

೩. ಪ್ರೊ. ಆರ್. ವ್ಹಿ. ಹೊರಡಿ
೧೧೮, 'ಸಂಪ್ರಿಯಾ' ೧ನೇ ಕ್ರಾಸ್,
ಭಾರತಿನಗರ, ಧಾರವಾಡ

೪. ಜಿ. ಎಂ. ಪಾಟೀಲ
ನ್ಯಾಯವಾದಿಗಳು, ಸದಸ್ಯರು, ಲೋಕಶಿಕ್ಷಣ ಟ್ರಸ್ಟ್
ಶಿವಾನಂದ ನಗರ, ಧಾರವಾಡ

೫. ಡಾ. ಚೆನ್ನಕ್ಕ ಪಾವಟೆ
'ಚೈತ್ರ ಗಂಗೋತ್ರಿ', ನಂ. ೨೨ಎ/೧೨/೧
ಎರಡನೇ ಅಡ್ಡರಸ್ತೆ, ಸಾಧನಕೇರಿ
ಧಾರವಾಡ-೫೮೦ ೦೦೮

೬. ರಜಿಯಾ ಡಿ. ಬಿ.
ಸದಸ್ಯರು, ಕರ್ನಾಟಕ ಸಾಹಿತ್ಯ ಅಕಾಡೆಮಿ
ಕೆ. ಆರ್. ಇ. ಸಿ.
ಸುರತ್ಕಲ್ (ದ. ಕ.)

೭. ಡಾ. ಎಸ್. ವ್ಹಿ. ಪ್ರಭಾವತಿ
ಬಿ. ಎಸ್. ವಿ. ಪಿ. ಮಹಿಳಾ ಕಾಲೇಜು,
ವಿಜಯನಗರ, ಬೆಂಗಳೂರು-೪೦

೮. ವೈ. ಕೆ. ತಿಮ್ಮರಸಯ್ಯ
ಸ್ವಾತಂತ್ರ್ಯಯೋಧ, ಪತ್ರಕರ್ತ
ತೀರ್ಥಹಳ್ಳಿ-೫೭೭ ೪೩೨

೯. ಬಿ. ಎಂ. ಬಡಿಗೇರ
ಸ್ವಾತಂತ್ರ್ಯಯೋಧರು
ಚಿದಂಬರನಗರ, ಸವದತ್ತಿ

೧೦. ಡಾ. ಮಹಾದೇವ ಮುರಕಟ್ಟಿ
ಸ್ವಾತಂತ್ರ್ಯಯೋಧರು
ನೇಕಾರನಗರ, ಮಾರುತಿ ಗುಡಿ ಹಿಂದೆ
ತಿಮ್ಮಸಾಗರ ರೋಡ್, ಹುಬ್ಬಳ್ಳಿ-೨೪

೧೧. ಲಿಂಗರಾಜು
ಕಾಗೇಪುರ ಬಿಲ್ಡಿಂಗ್, ಎನ್.ಎಮ್. ಹಳ್ಳಿ-೫೭೧ ೪೩೦
(ಮಳವಳ್ಳಿ ತಾಲೂಕ, ಮಂಡ್ಯ ಜಿಲ್ಲೆ)

೧೨. ಬಸವರಾಜ ಲಕ್ಷ್ಮೇಶ್ವರ
ಸ್ಟಾಲ್ ನಂ. ೫, ಎಂ. ಜಿ. ಮಾರ್ಕೆಟ್
ಹುಬ್ಬಳ್ಳಿ

೧೩. ಆನಂದತೀರ್ಥ ಪ್ಯಾಟಿ
ಟ್ರಿನಿಟಿ ಸ್ಕೂಲ್ ಹತ್ತಿರ
ಡಾ. ಸಿಂಪಿ ಲಿಂಗಣ್ಣ ರಸ್ತೆ, ಕೊಪ್ಪಳ-೫೮೩ ೨೩೧

೧೪. ರವಿ ತುಂಬರಗುದ್ದಿ
ಸರ್ಕೋಜಿ ಡ್ರೆಸ್ ಹತ್ತಿರ
ಹಳೆಪೇಟೆ, ಬಾಗಲಕೋಟೆ

೧೫. ಟಿ. ಪಿ. ರವಿಕುಮಾರ
ಡೋರ್ ನಂ. ಬಿ. ಕ್ಯೂ. ೫೨೬
ಗೋರೂರು, ಹಾಸನ ಜಿಲ್ಲೆ-೫೭೩ ೧೨೦

೧೬. ಎಂ. ಭಾರತಿ ರಘುಪತಿ
ಎಲ್. ಐ. ಜಿ. ೬೩, 'ಗುರುಕೃಪ'
ಕೆ. ಎಚ್. ಬಿ. ಕಾಲನಿ, ಕುವೆಂಪುನಗರ
೨ ನೇ ಹಂತ, ಮಂಡ್ಯ

೧೭. ಅನಂತ ಚಿಂತಾಮಣಿ ಜ್ಯೋತಿಷಿ
ಅಂಚೆ : ಬಿಣಗಾ-೫೮೧೩೬೪
ಕಾರವಾರ (ಉ. ಕ.)

೧೮. ಇಮಾಮಸಾಬ ಖಾ. ಮುಲ್ಲಾ
ಮು. ಪೋ. : ಹೆಬಸೂರ-೫೮೧೨೦೯
ತಾ. ಹುಬ್ಬಳ್ಳಿ, ಜಿಲ್ಲೆ —ಧಾರವಾಡ

೧೯. ಎಸ್. ಆನಂದ ಆಡಾನ್
ನಂ. ೪೬೨/೧, ಕೊಟ್ಟಿಗೆ ಪಾಳ್ಯ, ಮಾಗಡಿ ರಸ್ತೆ
ಬೆಂಗಳೂರು-೫೬೦೦೯೧

೨೦. ಚಂಚಲಾ ಶ್ರೀಕಂಠಯ್ಯ
ಪಿ-೯, ಕೆ. ಆರ್. ಇ. ಸಿ.
ಶ್ರೀನಿವಾಸ ನಗರ, ಸುರತ್ಕಲ್-೫೭೪೧೫೭ (ದ. ಕ.)

೨೧. ಪ್ರಕಾಶ ಎಸ್. ಪತ್ತಾರ
ಸರಾಫ ಬಜಾರ, ಮುದ್ದೇಬಿಹಾಳ-೫೮೬೨೪೫
(ಬಿಜಾಪುರ ಜಿಲ್ಲೆ)

೨೨. ಎ. ಆರ್. ರಶ್ಮಿ
೧೧೩೫, ೨ ನೇ ಮಹಡಿ, ನಾರಾಯಣಶಾಸ್ತ್ರಿ ರಸ್ತೆ
ಎಲ್. ಎಸ್. ಎರ್. ಎಸ್. ಪ್ರಿಂಟರ್ಸ್ ಮೇಲ್ಬಾಗ
ಮೈಸೂರು

೨೩. ವೈ. ಆರ್. ಪಂಕಜ
ಯಳನಾಡು, ಚಿ. ನಾ. ಹಳ್ಳಿ ತಾಲೂಕು-೫೭೨ ೨೧೮
ತುಮಕೂರು ಜಿಲ್ಲೆ

೨೪. ಕೆ. ಜಿ. ಹತ್ತಳ್ಳಿ
ಮು. ಪೋ. : ಅಹೀರಸಂಗ, ತಾ. : ಇಂಡಿ
ಜಿ. ವಿಜಾಪುರ-೫೮೬ ೨೧೧

೨೫. ಮಹಾಂತೇಶ ಈ. ಕರಿಂಡಿ
ಜೆ. ಎಂ. ಎಫ್. ಸಿ. ೧೧೧ನೇ ಕೋರ್ಟ್
ಬೆಳಗಾವಿ

೨೬. ನಾ. ಕು. ಗಣೇಶ
ಸಾಹಿತ್ಯಪ್ರಿಯ ನಿಲಯ, ಗಣೇಶ ಗುಡಿಯ ಬಳಿ
ರಾಮಮೂರ್ತಿ ನಗರ, ಬೆಂಗಳೂರು-೫೬೦ ೦೧೬

೨೭. ಎಸ್. ಸಿದ್ಧೇಶ ಕುರ್ಕಿ
ಐ. ಟಿ. ವಿಭಾಗ, ಬಿ.ಇ.ಐ.ಟಿ
ದಾವಣಗೆರೆ-೫೭೭ ೦೦೪

೨೮. ಲೀಲಾ
ನಂ. ೪೧೧೦, ಮೇನ್‌ರೋಡ್, ಜೆ. ಪಿ. ನಗರ
೬ ನೇ ಘಟ್ಟ, ಬೆಂಗಳೂರು-೭೮

೨೯. ಓ. ಶೀನಪ್ಪ
ಎಚ್.ಪಿ.ಪಿ.ಸಿ. ಸರಕಾರಿ ಕಾಲೇಜು, ಮನೆ : ಗೌರಮ್ಮನ ಗುಡಿ ಹಿಂಭಾಗ
ಚಿತ್ರಯ್ಯನ ಹಟ್ಟಿ, ಚಳ್ಳಕೆರೆ-೫೭೭೫೨೨

೩೦. ಪ್ರವೀಣ ಅಕ್ಕಿಶೆಟ್ಟಿ
ಮು. ಪೋ. : ಮುರಗೋಡ (ಕೆಂಗೇರಿ ರೋಡ್)
ತಾ. ಸವದತ್ತಿ

೩೧. ಬಿ. ಎಸ್. ಗೋಪಾಲಕೃಷ್ಣ
ಚೇತನ ಬ್ಯಾಗ್ಸ್ ತಯಾರಕರು
ಹುಳಿಯಾರು ರಸ್ತೆ, ಮೊದಲನೇ ಅಡ್ಡರಸ್ತೆ, ಅರಸಿಕೆರೆ

೩೨. ಗುರುಪ್ರಸಾದ ಈ.
ರಾಮೇಶ್ವರ ಕೃಪಾ, ಕೆ.ಎಸ್.ಆರ್.ಟಿ.ಸಿ. ಡಿಪೋ ಎದುರು
ಜಯನಗರ, ಚಿಕ್ಕಮಗಳೂರು-೫೭೭ ೧೦೧

೩೩. ಎಂ. ಬಿ. ಮೇಟಿ
ಟಿ.ಸಿ.ಎಚ್. ಕಾಲೇಜ್ ಎದುರು, ಹುನಗುಂದ
ಜಿಲ್ಲೆ : ಬಾಗಲಕೋಟೆ

೩೪. ತಪೋಮನ್
ಜಗದಂಬಾ ರಸ್ತೆ, ವಿದ್ಯಾನಗರ ಅಂಚೆ
ಶಿವಮೊಗ್ಗ

೩೫. 'ಸುಭುವಿ' ಎಂ. ವೀರೇಶ್
ಶ್ರೀ ಬಸವ ನಿಲಯ ಕೋನಾಪೂರ ಪೇಟೆ
ಮಾನವಿ-೫೮೪ ೧೨೩ ಜಿಲ್ಲೆ : ರಾಯಚೂರು

೩೬. ರಾಮಚಂದ್ರ ಪಿ. ಶಾಸ್ತ್ರಿ
ಮು. ಬೇಳ್ಕಚ್ಚೆ, ಪೋ. : ಹೊಸಾಕುಳಿ
ತಾ. ಹೊನ್ನಾವರ (ಉ. ಕ.)

೩೭. ಶರಣಪ್ಪ ಬಾಚಲಾಪುರ
ಹನಮಸಾಗರ, ಜಿ. ಕೊಪ್ಪಳ

೩೮. ಡಿಸೋಜ ಆಲ್ಬರ್ಟ್
ನಿರ್ದೇಶಕ, ಡ್ಯಾನಿ ಪ್ರೊಡಕ್ಷನ್ಸ್, ಬೊಮ್ಮನಕಟ್ಟೆ
ಹಿರಿಯೂರು ಅಂಚೆ, ಭದ್ರಾವತಿ ತಾ.

೩೯. ವ್ಹಿ. ಬಿ. ಕರಿಶೆಟ್ರು
೯ ನೇ ತರಗತಿ, ಸರಕಾರಿ ಹೈಸ್ಕೂಲ್, ಕಣವಿ
ತಾ. : ಜಿ. ಗದಗ-೫೮೨ ೧೦೧

೪೦. ಗಣೇಶ ವಿ.
ಶ್ರೀ ಮಹಾಗಣಪತಿ ದೇವಾಲಯ
ಮಂಚಿಕೇರಿ-೫೮೧ ೩೪೭
ತಾ. ಯಲ್ಲಾಪೂರ (ಉ. ಕ.)

೪೧. ಡಿ. ಮೆಹಬೂಬ ಅಲಿ
ನರಸರಾಜ ಪೇಟೆ, ೪ ನೇ ಕ್ರಾಸ್
ಡೋರ್ ನಂ. ೪/೩೪೬, ನೀರಿನ ಟ್ಯಾಂಕ್ ಹತ್ತಿರ
ದಾವಣಗೆರೆ-೫೭೭ ೦೦೧

೪೨. ಸಿದ್ದಪ್ಪ ಜಮ್ಮ್ಯಾಳ
ಕರಡಿಕೊಪ್ಪ, ತಾ. ಹುಬ್ಬಳ್ಳಿ (ಧಾರವಾಡ ಜಿಲ್ಲೆ)

೪೩. ಆರ್. ವಿ. ಕಟ್ಟೀಮನಿ, ತಡಕಲ್
ಅಂಚೆ : ಕವಿತಾಳ-೫೮೪ ೧೨೦ (ರಾಯಚೂರು)

೪೪. ಮೋಹನ ನಾಗಮ್ಮನವರ
ಸದಸ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ
ನವೋದಯ ನಗರ, ಧಾರವಾಡ-೫೮೦ ೦೦೩

೪೫. ಡಾ. ಜಿ. ಎಂ. ಹೆಗಡೆ
ಕಲ್ಯಾಣನಗರ, ಧಾರವಾಡ-೫೮೦ ೦೦೩

❋ ❋ ❋

# ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಕಟಣೆಗಳು

| ಅ. ಸಂ. | ಪುಸ್ತಕದ ಹೆಸರು | ಲೇಖಕರು | ಬೆಲೆ | ಪ್ರಕಟಣ ವರ್ಷ |
|---|---|---|---|---|
| *೧. | ಉತ್ತರರಾಮ ಚರಿತ್ರೆ | ಧೋಂಡೋ ನರಸಿಂಹ ಮುಳಬಾಗಲ | ೯ ಆಣೆ | ೧೮೯೨ |
| ೨. | ವೇಣೀ ಸಂಹಾರ | " " " | | ೧೮೯೨ |
| ೩. | ಆರ್ಯ ಕುಲಾಂಗನಾ | ಎಚ್. ತಿಮ್ಮ ಕೃಷ್ಣರಾವ್ | | ೧೮೯೬ |
| ೪. | ಕಂತ, ತಗಾಯಿ, ಇಳಿವತ್ತಿ | ಆರ್. ಎಸ್. ಕುಲಕರ್ಣಿ | ೧ಆ ೬ಪೈ | ೧೮೯೬ |
| ೫. | ಮಾಳವಿಕಾಗ್ನಿಮಿತ್ರ | ಧೋಂಡೋ ನರಸಿಂಹ ಮುಳಬಾಗಲ | ೪ಪೈ | ೧೮೯೭ |
| ೬. | ಕನ್ನಡ ಸುಶೀಲಾ ಪರಿಣಯಂ (ನಾಟಕ) | ಎಚ್. ಚಿದಂಬರಯ್ಯ | ೪ ಆಣೆ | ೧೮೯೯ |
| ೭. | ಕನ್ನಡಿಗರ ಜನ್ಮಸಾರ್ಥಕತೆ | ವಲ್ಲಭ ಮಹಾಲಿಂಗ ತಟ್ಟಿ | ೩ ಆಣೆ | ೧೮೯೯ |
| ೮. | ಹಿತೋಪದೇಶ ಭಾಗ - ೩ | ಶಿವರುದ್ರಪ್ಪ ಸೋಮಪ್ಪಾ ಕುಲಕರ್ಣಿ | ೫ ಆಣೆ | ೧೯೦೦ |
| ೯. | ಹಿತೋಪದೇಶ ಭಾಗ - ೪ | " " " | ೫ ಆಣೆ | ೧೯೦೦ |
| ೧೦. | ಬಾಲವಿವಾಹಶಾಸ್ತ್ರ ನಿಷೇಧ | ತಿಮ್ಮಾಜಿ ಅನಂತ ಕಾಳಿ | ೫ ಆಣೆ | ೧೯೦೦ |
| ೧೧. | ನಿದ್ದೆಯಲ್ಲಿಬ್ಬಿಸಲ್ಪಟ್ಟ ಚುದನದಾಸನು (ನಾಟಕ) | ಗಂಗಾಧರರಾವ ಹುಯಿಲಗೋಳ | ೪ ಆಣೆ | ೧೯೦೧ |
| ೧೨. | ಕರ್ಣಾಟಕ ನರಕಾಸುರ ವಿಜಯ ವ್ಯಾಯೋಗಂ | ಸಿದ್ಧಾಂತಿ ಶಿವಶಂಕರ ಶಾಸ್ತ್ರಿ | ೩ ಆಣೆ | ೧೯೦೧ |
| ೧೩. | ವೀರಮಣಿ | ತೋಂಟೇಶ ಅನ್ನದಾನಿ ಮಂಗಳೂರು | ೨ ಆಣೆ | ೧೯೦೨ |
| ೧೪. | ಸತ್ಯರಾಜಾಪೂರ್ವದೇಶ ಯಾತ್ರೆಗಳು | ಅನು : ರಾಮರಾವ್ ಬೆನಗಲ್ | ೮ ಆಣೆ | ೧೯೦೩ |
| ೧೫. | ಸುಭದ್ರಾ ಹರಣಂ | | ೨ ಆಣೆ | ೧೯೦೩ |
| ೧೬. | ಅಭಿನವ ಕಾದಂಬರಿ | ಸಿದ್ಧಾಂತಿ ಶಿವಶಂಕರಶಾಸ್ತ್ರಿ | ೫ ಆಣೆ | ೧೯೦೩ |
| ೧೭. | ಆರ್ಥರ್ ಡ್ಯೂಕ್ ಆಫ್ ವೆಲಿಂಗ್ಟನ್ ಚರಿತ್ರೆಯು | ಗುರುಬಸಪ್ಪಾ ಫಕೀರಪ್ಪಾ ಹಳಕಟ್ಟಿ | ೧ ರೂ. | ೧೯೦೪ |
| ೧೮. | ಆರ್ಯವಿದ್ಯಾದರ್ಶನವು | ಗುರುನಾಥ ವೆಂಕಟೇಶ ಕಿತ್ತೂರ | ೮ ಆಣೆ | ೧೯೦೪ |
| ೧೯. | ಚಿತ್ತೂರಿನ ಮುತ್ತಿಗೆ | ಕೃಷ್ಣಾಜಿ ಹ. ಮುದವೇಡಕರ | ೬ ಆಣೆ | ೧೯೦೫ |
| ೨೦. | ಸುಭದ್ರಾವಿಜಯ ನಾಟಕಂ | ಬಿ. ರಾಮರಾವ್ | ೧೨ ಆಣೆ | ೧೯೦೬ |
| ೨೧. | ಕರ್ನಾಟಕ ಕಥಾಸರಿತ್ಸಾಗರ | ಸೋಮದೇವ ಮಹಾಕವಿ | ೬ ಆಣೆ | ೧೯೦೬ |
| ೨೨. | ಕೃಷಿಕರ್ಮ ಶಾಸ್ತ್ರವು | ರಾಮಚಂದ್ರ ಮದ್ವ ಮಹಿಷಿ | ೧೨ ಆಣೆ | ೧೯೦೬ |
| ೨೩. | ದಕ್ಷಿಣ ಮುಸಲ್ಮಾನ ರಾಜ್ಯಗಳ ಇತಿಹಾಸವು | ರಾಘವೇಂದ್ರ ಕೃ. ಇನಾಮತಿ | ೬ ಆಣೆ | ೧೯೦೭ |
| ೨೪. | ವಿಜಯನಗರದ ಸಾಮ್ರಾಜ್ಯವು | ವೀರಭದ್ರ ಬಸಪ್ಪಾ | ೧ ರೂ. | ೧೯೦೮ |

| | | | |
|---|---|---|---|
| ೨೫. ಮಾನವಶಾಸ್ತ್ರವು | ಗುಡ್ಡೋ ಮುಕುಂದ ಉದಕಟ್ಟಿ | ೮ ಆಣೆ | ೧೯೦೮ |
| ೨೬. ಎಂಟು ಸ್ತ್ರೀ ರತ್ನಗಳು | ಗದಿಗೆವ್ವ ಕುರಹಟ್ಟಿ | ೬ ಆಣೆ | ೧೯೦೯ |
| ೨೭. ನಾಮದಾರ ವಿಲಿಯಮ್ ಎವರ್ಟ್ ಗ್ಲಾಡಸ್ಟನ್ ದೊರೆಗಳ ಚರಿತ್ರೆಯು | ಗುರುಬಸಪ್ಪ ಫಕ್ಕೀರಪ್ಪ ಹಳಕಟ್ಟಿ | ೧ ರೂ. | ೧೯೦೯ |
| ೨೮. ವಿಶ್ವ | ಜೀವಾಜಿ ವಿಷ್ಣು ಗೋಠೆ | ೪ ಆಣೆ | ೧೯೧೧ |
| ೨೯. ಮೋಹಿನಿ ಅಥವಾ ನಿಂದಕರ ನಡವಳಿ | ಗದಿಗೆಯ್ಯಾ ಹು. ಹೊನ್ನಾಪುರಮಠ | ೮ ಆಣೆ | ೧೯೧೧ |
| ೩೦. ಕನ್ನಡ ಮಾತು ತಲೆ ಎತ್ತುವ ಬಗೆ | ಬಿ. ಎಂ. ಶ್ರೀಕಂಠಯ್ಯ | - - | ೧೯೧೧ |
| ೩೧. ಶಿಕ್ಷಣ ಮೀಮಾಂಸೆ | ವೆಂಕಟೇಶ ಬಿ. ಆಲೂರ<br>ವೆಂಕಟೇಶ ನ. ಮಗದಾಳ | ೨ರೂ.೪ ಆಣೆ | ೧೯೧೧ |
| ೩೨. ಕೌಸಲ್ಯಾಪರಿಣಯಂ | ಕೆ. ರಾಮಸ್ವಾಮಯ್ಯಂಗಾರ | ೩ ಆಣೆ | ೧೯೧೨ |
| ೩೩. ಕಾಲಿದಾಸ ಚರಿತ್ರ | ಗುರುನಾಥ ವೆಂಕಟೇಶ ಕಿತ್ತೂರ | ೬ ಆಣೆ | ೧೯೧೨ |
| ೩೪. ಕರ್ನಾಟಕ ಯಯಾತಿ ನಾಟಕಂ | ಶಾ. ವೆಂಕಟರಮಣಯ್ಯ | ೪ ಆಣೆ | ೧೯೧೩ |
| ೩೫. ಕವಿಕಾರ್ಯ ಪ್ರಶಂಸೆ | ಮ. ಅ. ರಾಮಾನುಜಯ್ಯಂಗಾರ | ೩ ಆಣೆ | ೧೯೧೩ |
| ೩೬. ಸರಸ್ವತೀ | ಅನು: ಲಿಂಗೋ ರಾಮಚಂದ್ರ ಅಕ್ಕೂರ | ೧೨ ಆಣೆ | ೧೯೧೩ |
| ೩೭. ಭಾರತೀಯ ವಿದುಷಿಯರು | ಮ. ಪ್ರ. ಪೂಜಾರ | ೫ ಆಣೆ | ೧೯೧೪ |
| ೩೮. ಪ್ರಾಚೀನ ಹಿಂದೂಸ್ಥಾನ | ವೆಂಕಟೇಶ ಮಗದಾಳ | ೧ ರೂ. | ೧೯೧೪ |
| ೩೯. ಪಂ. ಈಶ್ವರಚಂದ್ರ ವಿದ್ಯಾಸಾಗರ ಇವರ ಚರಿತ್ರವು | ಕೆ. ರಾಮಾಸ್ವಾಮಯ್ಯಂಗಾರ | ೧ ರೂ. | ೧೯೧೭ |
| ೪೦. ಅಶೋಕ ಅಥವಾ ಪ್ರಿಯದರ್ಶಿನಿ | ಎಂ. ಪಿ. ಪೂಜಾರ | ೧ರೂ.೬ಆ. | ೧೯೧೯ |
| ೪೧. ಬೇಗಮ ಸಮದ್ | ಎಸ್. ಎ. ಕುಲಕರ್ಣಿ | ೬ ಆಣೆ | ೧೯೨೦ |
| ೪೨. ಹಜರತ ಮಹಮ್ಮದ ಪೈಗಂಬರರು | ಎಮ್. ಪಿ. ಪೂಜಾರ | ೬ ಆಣೆ | ೧೯೨೦ |
| ೪೩. ಅಮೇರಿಕೆಯೊಳಗಿನ ಬಡ ವಿದ್ಯಾರ್ಥಿಗಳು | ಶ್ರೀನಿವಾಸ ಪಾಂಡುರಂಗ ಕೋಟಿ | ೫ ಆಣೆ | ೧೯೨೦ |
| *೪೪. ಮದುವೆ | ಮ. ಪ್ರ. ಪೂಜಾರ | ೨ ಆಣೆ | ೧೯೨೦ |
| *೪೫. ಹರಿಶನ ಪ್ರೇಮ | | ೪ ಆಣೆ | ೧೯೨೦ |
| ೪೬. ಇಸೋಪನ ಚರಿತ್ರ | ತ. ನಾ. ಅಮ್ಮಿನಭಾವಿ | ೩ ಆಣೆ | ೧೯೨೦ |
| ೪೭. ಪಂಡಿತರಾಜ | ಕೇಶವ ರಂಗಭಟ್ಟ ಜೋಶಿ | ೪ ಆಣೆ | ೧೯೨೦ |
| ೪೮. ವಿದ್ಯಾರಣ್ಯ ಸ್ವಾಮಿಗಳು | ಭೀ. ಜೀ. ಹುಲಿಕವಿ | ೧ ರೂ. | ೧೯೨೨ |
| ೪೯. ಅಭಿಷೇಕ ನಾಟಕ | ಪಾನ್ಯಂ ಸುಂದರಶಾಸ್ತ್ರಿ | ೬ ಆಣೆ | ೧೯೨೪ |
| ೫೦. ಕರ್ನಾಟಕ ಸ್ವಪ್ನವಾಸವದತ್ತಂ | ಅನು: ಭೀ. ಜೀ. ಹುಲಿಕವಿ | ೬ ಆಣೆ | ೧೯೨೫ |
| ೫೧. ಸತ್ಕಥಾ ಕುಸುಮಮಂಜರಿ | ನಾರಾಯಣ ವೆಂಕಟೇಶ ಕುರಡಿ | ೧೦ ಆಣೆ | ೧೯೨೫ |
| ೫೨. ದಿವಾಣ ಬಹಾದ್ದೂರ ರೊದ್ದ ಶ್ರೀನಿವಾಸರಾಯರ ಚರಿತ್ರೆಯು | | - - | ೧೯೨೫ |
| ೫೩. ಭಾಸಕವಿ ಅಭಿಷೇಕ ನಾಟಕ | ಅನು: ಪಾನ್ಯ ಸುಂದರಶಾಸ್ತ್ರಿ | ೬ ಆಣೆ | ೧೯೨೬ |
| ೫೪. ರಘುವಂಶ (ಕಾಳಿದಾಸ ವಿರಚಿತ) | ಅನು: ಕಲಮಡಿ ನರಹರಿರಾಯರು | ೨ ರೂ. | ೧೯೨೮ |
| ೫೫. ಆರ್ಯರ ಶಿಕ್ಷಣ ಪದ್ಧತಿ | ಎಸ್. ಎನ್. ನರಹರಯ್ಯ | ೪ ಆಣೆ | ೧೯೨೮ |
| ೫೬. ಭೀಷ್ಮಾಚಾರ್ಯ | ಮ. ಪ್ರ. ಪೂಜಾರ | ೫ ಆಣೆ | ೧೯೨೮ |
| ೫೭. ಜೈನಧರ್ಮ ಪರಿಭಾಷೆ | ಮಹಾದೇವ ಪ್ರಭಾಕರ ಪೂಜಾರ | ೧ರೂ.೪ಆ. | ೧೯೩೦ |
| ೫೮. ನರಗುಂದ ಬಂಡಾಯ | ಪಂ. ಭೀ. ಜೀ. ಹುಲಿಕವಿ | ೧ ರೂ. | ೧೯೩೦ |
| ೫೯. ವೇಣೀಬಂಧನ | ತಮ್ಮಾಜಿ ನಾ. ಅಮ್ಮಿನಭಾವಿ | ೪ ಆಣೆ | ೧೯೩೭ |

| | | | |
|---|---|---|---|
| ೬೦. ಕರ್ನಾಟಕ ಜನಜೀವನ | ಬೆಟಗೇರಿ ಕೃಷ್ಣಶರ್ಮ | ೨ ರೂ. | ೧೯೩೯ |
| ೬೧. ಕರ್ನಾಟಕ ಸಾಹಿತ್ಯ ಸಂಸ್ಕೃತಿ ದರ್ಶನ | ಪ್ರೊ. ಸ. ಸ. ಮಾಳವಾಡ | ೨ ರೂ. | ೧೯೩೯ |
| ೬೨. ಕಾವ್ಯಾವಲೋಕನ | ಪ್ರೊ. ಎಸ್. ಎಸ್. ಬಸವನಾಳ | | ೧೯೩೯ |
| ೬೩. ಶಬ್ದಾನುಶಾಸನ ಭಾಗ - ೧ | ಕುಂಡಲಗಿರಿ ಆಚಾರ್ಯ | | ೧೯೪೧ |
| " ಭಾಗ - ೨ | ಕುಂಡಲಗಿರಿ ಆಚಾರ್ಯ | | ೧೯೪೧ |
| ೬೪. ಕರ್ನಾಟಕ ಶಬ್ದಾನುಶಾಸನ ಪ್ರಕಾಶಿಕೆ ಭಾಗ - ೨ | ಶಿ. ಶಿ. ಬಸವನಾಳ | ೨ ರೂ. | ೧೯೪೧ |
| ೬೫. ಕರ್ನಾಟಕ ವಿದ್ಯಾವರ್ಧಕ ಸಂಘ – ಐವತ್ತು ವರ್ಷ | | | ೧೯೪೧ |
| ೬೬. ಗಳಗನಾಥ | ಜೀವನ ವಾಙ್ಮಯ ವಿಮರ್ಶೆ | ೧ರೂ.೮ಆ. | ೧೯೪೧ |
| *೬೭. A CULTURAL HISTORY OF KARNATAK | ಕರಮರಕರ ಎ. ಪಿ. ಹಾಗೂ ಕಲಮದಾನಿ | ೫ ರೂ. | ೧೯೪೬ |
| *೬೮. ನಾನು ಓದುವುದೇನು ? | ವಿವಿಧ ಲೇಖಕರು | ೧ ರೂ. | ೧೯೬೮ |
| ೬೯. ಕಾರ್ಯಾಲಯ ದೀಪಿಕೆ | | ೨೦ರೂ. | ೧೯೭೬ |
| ೭೦. ಅಸಂಗತ ನಾಟಕಗಳು | ಕೀತಿನಾಥ ಕುರ್ತಕೋಟಿ | ೧ರೂ. | ೧೯೭೬ |
| ೭೧. ಲಾವಣಿ ಸಾಹಿತ್ಯ | ಶಿಂಪಿ ಲಿಂಗಣ್ಣ | ೧ ರೂ. | ೧೯೭೬ |
| ೭೨. ಚೆನ್ನವೀರ ಕಣವಿ ಕಾವ್ಯದೃಷ್ಟಿ | ಗೌರೀಶ ಕಾಯ್ಕಿಣಿ | ೪ ರೂ. | ೧೯೭೭ |
| *೭೩. ಆಲ್ಬರ್ಟ್ ಐನ್‌ಸ್ಟೀನ್ | ಡಾ. ಎಂ. ಆಯ್. ಸವದತ್ತಿ<br>ಡಾ. ವಿ. ಎಂ. ಪೂಜಾ | ೩ ರೂ. | ೧೯೮೧ |
| ೭೪. ರುಚಿ | ಡಾ. ಕೆ. ಕೃಷ್ಣಮೂರ್ತಿ | ೧-೮೦ | ೧೯೮೧ |
| ೭೫. ಜಾನಪದ | ಡಾ. ಜಿ. ಶಂ. ಪರಮಶಿವಯ್ಯ | ೧-೮೦ | ೧೯೮೧ |
| *೭೬. ಬಾಣ ಕಾದಂಬರಿ | ಗಂಗಾಧರ ಮಡಿವಾಳೇಶ್ವರ ತುರಮರಿ | ೩೫ ರೂ. | ೧೯೯೫ (೧೦ನೇ ಮುದ್ರಣ) |
| *೭೭. ಕನ್ನಡ ಕರ್ನಾಟಕ ಏನು ಮಾಡಬೇಕು ? | ಡಾ. ಪಾಟೀಲ ಪುಟ್ಟಪ್ಪ | - - | ೧೯೯೫ |
| *೭೭. ಕಾವ್ಯಯಾನ | ಡಾ. ಬಸವರಾಜ ಸಾದರ | | ೨೦೦೦ |
| *೭೮. ಸ್ವಾತಂತ್ರ್ಯ ಚಿಂತನೆ | ಮೋಹನ ನಾಗಮ್ಮನವರ | | ೨೦೦೦ |

## ೧೯೮೫ ರಲ್ಲಿ ಮರುಮುದ್ರಣಗೊಂಡ ಈ ಕೆಳಗಿನ ಪುಸ್ತಕಗಳು ಸಂಘದಲ್ಲಿ ಮಾರಾಟಕ್ಕೆ ಲಭ್ಯವಿವೆ

| ಅ. ಸಂ. | ಪುಸ್ತಕದ ಹೆಸರು | ಲೇಖಕರು | ಬೆಲೆ |
|---|---|---|---|
| ೧. | ಪಂಡಿತರಾಜ ಜಗನ್ನಾಥ | ಕೇಶವ ರಂಗಭಟ್ಟ ಜೋಶಿ | ೫-೦೦ |
| ೨. | ಕನ್ನಡಿಗರ ಜನ್ಮಸಾರ್ಥಕತೆ | ವಲ್ಲಭ ಮಹಾಲಿಂಗ ತಟ್ಟಿ | ೫-೦೦ |
| ೩. | ಕರ್ಣಾಟಕ ನರಕಾಸುರ ವಿಜಯ ವ್ಯಾಯೋಗಂ | ಸಿದ್ಧಾಂತಿ ಶಿವಶಂಕರ ಶಾಸ್ತ್ರಿ | ೪-೦೦ |
| ೪. | ಕನ್ನಡ ಶೌರ್ಯಸಾಗರ | ಗೂಳಪ್ಪಾ ಕೊಟ್ರಪ್ಪ ಅರಳಿ | ೬-೦೦ |
| ೫. | ಕರ್ನಾಟಕ ಕಥಾಸರಿತ್ಸಾಗರ | ಸಿದ್ಧಾಂತಿ ಶಿವಶಂಕರ ಶಾಸ್ತ್ರಿ | ೬-೦೦ |
| ೬. | ಕನ್ನಡ ಮಾತು ತಲೆಯೆತ್ತುವ ಬಗೆ | ಬಿ. ಎಂ. ಶ್ರೀಕಂಠಯ್ಯ | ೩-೦೦ |
| ೭. | ಕಾಳಿದಾಸ ಚರಿತ್ರ | ಗುರುನಾಥ ವೆಂಕಟೇಶ ಕಿತ್ತೂರ | ೬-೦೦ |
| ೮. | ಕರ್ಣಾಟಕ ಯಯಾತಿ ನಾಟಕಂ | ಶಾ. ವೆಂಕಟರಮಣಯ್ಯ | ೮-೦೦ |
| ೯. | ಮೋಹಿನಿ ಅಥವಾ ನಿಂದಕರ ನಡವಳಿ | ಗದಿಗೆಯ್ಯಾ ಹುಚ್ಚಯ್ಯಾ ಹೊನ್ನಾಪುರಮಠ | ೧೦೦೦ |
| ೧೦. | ಭಾರತೀಯ ವಿದುಷಿಯರು | ಮ. ಪ್ರ. ಪೂಜಾರ | ೮-೦೦ |
| ೧೧. | ಶ್ರೇಯ : ಸಾಧನ | ಪಂ. ಭೀಮಾಜಿ ಜೀವಾಜಿ ಹುಲಿಕವಿ | ೮-೦೦ |
| ೧೨. | ಗೃಹವೈದ್ಯಕವು | ನರಸಿಂಹಾಚಾರ್ಯ ಪುಣೇಕರ (ಕಾವ್ಯಾನಂದ) | ೮-೦೦ |
| ೧೩. | ಇಸೋಪನ ಚರಿತ್ರ | ತ. ನಾ. ಅಮ್ಮಿನಭಾವಿ | ೩-೦೦ |
| ೧೪. | ಶ್ರೀ ವಿದ್ಯಾರಣ್ಯ ಸ್ವಾಮಿಗಳು | ಪಂ. ಭೀಮಾಜಿ ಜೀವಾಜಿ ಹುಲಿಕವಿ | ೧೦-೦೦ |
| ೧೫. | ನರಗುಂದದ ಬಂಡಾಯ | ” ” ” | ೧೦-೦೦ |

## ಕರ್ನಾಟಕ ವಿದ್ಯಾವರ್ಧಕ ಸಂಘದ ಪದಾಧಿಕಾರಿಗಳು

| | | |
|---|---|---|
| ಅಧ್ಯಕ್ಷರು | : | ಡಾ. ಪಾಟೀಲ ಪುಟ್ಟಪ್ಪ |
| ಉಪಾಧ್ಯಕ್ಷರು | : | ಶ್ರೀ ಎಂ. ಆರ್. ಟೆಂಗಿನಕಾಯಿ |
| ಗೌರವ ಉಪಾಧ್ಯಕ್ಷರು | : | ಶ್ರೀ ಕೆ. ಶಾಮರಾವ, ಬೆಂಗಳೂರು |
| | | ಶ್ರೀ ಎನ್ಕೆ ಕುಲಕರ್ಣಿ |
| | | ಶ್ರೀ ಬಿ. ಎ. ಸನದಿ, ಮುಂಬಯಿ |
| | | ಪ್ರಾ. ನ. ವಜ್ರಕುಮಾರ |
| | | ಡಾ. ನಿತಿನಚಂದ್ರ ಹತ್ತಿಕಾಳ |
| ಕಾರ್ಯಾಧ್ಯಕ್ಷರು | : | ಶ್ರೀ ಎಚ್. ಸಿ. ಮೊಗಲಿ |
| ಕೋಶಾಧ್ಯಕ್ಷರು | : | ಶ್ರೀ ಎಸ್. ಎಂ. ಹೊಳೆಯಣ್ಣವರ |
| ಪ್ರಧಾನ ಕಾರ್ಯದರ್ಶಿ | : | ಪ್ರೊ. ಬಿ. ವ್ಹಿ. ಗುಂಜೆಟ್ಟಿ |
| ಸಹ ಕಾರ್ಯದರ್ಶಿ | : | ಡಾ. ಶಿವಾನಂದ ಗಾಳಿ |

ಕಾರ್ಯಕಾರಿ ಸಮಿತಿ ಸದಸ್ಯರು :

ಶ್ರೀಮತಿ ಜಯಶ್ರೀ ಗುತ್ತಲ
ಶ್ರೀ ಸಿದ್ಧಲಿಂಗ ದೇಸಾಯಿ
ಶ್ರೀಮತಿ ವಿಜಯಾ ಸಂ. ಲಿಂಬಣ್ಣದೇವರಮಠ
ಡಾ. ಆರ್. ಸಿ. ಅಗಡಿ
ಪ್ರೊ. ಸಿ. ಪಿ. ಹೇಮಗಿರಿಮಠ
ಪ್ರೊ. ಎಸ್. ಸಿ. ಹಿರೇಮಠ
ಶ್ರೀ ಕೃಷ್ಣ ಜೋಶಿ
ಶ್ರೀ ಮೋಹನ ನಾಗಮ್ಮನವರ
ಶ್ರೀ ಶಿವಾನಂದ ಭಾವಿಕಟ್ಟಿ
ಹಾಗೂ ನಿರ್ದೇಶಕರು,
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಬೆಂಗಳೂರು (ಸರ್ಕಾರದ ಪ್ರತಿನಿಧಿ)

ಕರ್ನಾಟಕ ವಿದ್ಯಾವರ್ಧಕ ಸಂಘ ನಮ್ಮ ನಾಡಿನ ಅತ್ಯಂತ ಹಳೆಯದಾದ ಸಾಹಿತ್ಯಿಕ -ಸಾಂಸ್ಕೃತಿಕ ಸಂಸ್ಥೆ. ಶತಮಾನದಿಂದಲೂ ನಾಡಿನ ಉತ್ತರೋತ್ತರ ಉನ್ನತಿಗಾಗಿ ಶ್ರಮಿಸುತ್ತ ಬಂದಿರುವ ಸಂಸ್ಥೆ. ಕನ್ನಡ-ಕನ್ನಡಿಗ-ಕರ್ನಾಟಕ ಎನ್ನುವ ಮಂತ್ರವನ್ನು ತನ್ನ ಉಸಿರಾಗಿಸಿಕೊಂಡು ಅವ್ಯಾಹತವಾಗಿ ಇಂದಿಗೂ ಕಾರ್ಯ ನಿರ್ವಹಿಸುತ್ತಲಿರುವುದು ಅಭಿಮಾನದ ಸಂಗತಿ. ಸಂಘ ಕೇವಲ ಸಾಹಿತ್ಯಿಕ - ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾತ್ರ ಆಯೋಜಿಸದೆ ಸಾಹಿತಿಗಳನ್ನೂ ಬೆಳೆಸಿದೆ. ಸಾಹಿತ್ಯಿಕ ಸ್ಪರ್ಧೆಗಳನ್ನು ಏರ್ಪಡಿಸುವುದರ ಮೂಲಕ ಕನ್ನಡ ಸಾಹಿತ್ಯ ವಿವಿಧ ಪ್ರಕಾರಗಳಲ್ಲಿ ಪ್ರಕಟಗೊಳ್ಳಲೂ ಕಾರಣವಾಗಿದೆ. ಹೀಗೆ ಕನ್ನಡದ ವಾತಾವರಣವನ್ನು ನಾಡಿನಾದ್ಯಂತ ಹರಡುವಲ್ಲಿ ಶ್ರಮಿಸಿದೆ. ವಿವಿಧ ಮಂಟಪಗಳ ಮುಖಾಂತರ ಬದುಕಿನ ವೈವಿಧ್ಯಮಯ ವಿಷಯ-ವಿಚಾರಗಳ ಚಿಂತನ ಮಂಥನ ಮಾಡುತ್ತ ನಡೆದಿದೆ.

ನಮ್ಮ ಸಂಘ ಇದೀಗ 'ಸ್ವಾತಂತ್ರ್ಯ ಚಿಂತನೆ' ಗ್ರಂಥವನ್ನು ಪ್ರಕಟಿಸುತ್ತಲಿದೆ. ಸ್ವಾತಂತ್ರ್ಯದ ಸ್ವರ್ಣ ಮಹೋತ್ಸವದ ಸಂದರ್ಭದಲ್ಲಿ ಹೊಳಹು ಹಾಕಿದ ವೈವಿಧ್ಯಪೂರ್ಣ ಲೇಖನಗಳ ಸಂಗ್ರಹ 'ಸ್ವಾತಂತ್ರ್ಯ ಚಿಂತನೆ'. ತರುಣ ಮಿತ್ರರು, ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರು, ರಾಜ್ಯ ಸಾಹಿತ್ಯ ಅಕಾಡೆಮಿ ಸದಸ್ಯರು ಹಾಗೂ ಹಲವು ಪ್ರಶಸ್ತಿ ಭೂಷಿತರೂ ಆದ ಶ್ರೀ ಮೋಹನ ನಾಗಮ್ಮನವರ ಅವರು ಈ ಗ್ರಂಥವನ್ನು ಅತ್ಯಂತ ಅಚ್ಚುಕಟ್ಟಾಗಿ ಸಂಪಾದಿಸಿ ಸಂಘದ ಪ್ರಕಟಣೆಯಾಗಿ ಹೊರತರುತ್ತಿರುವುದು ಹೆಮ್ಮೆ ಎಂದು ಹೇಳದಿರಲಾರೆ. ಈ ಕೃತಿ ಸಂಘದ ಕೀರ್ತಿಗೆ ಇನ್ನೊಂದು ಗರಿ.

ಪ್ರೊ. ಬಿ. ವ್ಹಿ. ಗುಂಜೆಟ್ಟಿ
ಪ್ರಧಾನ ಕಾರ್ಯದರ್ಶಿ
ಕರ್ನಾಟಕ ವಿದ್ಯಾವರ್ಧಕ ಸಂಘ